ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಗುರುವಾರ, 4 ಜೂನ್ 2026
ಸಂಪುಟ 16, ಸಂಚಿಕೆ 71, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital



ಚಿನ್ನ ಮಾರಾಟ ಕೇವಲ ವದಂತಿ | 0೭
ನಾಲ್ಕನೇ ಎಸ್-400 ತುಕಡಿ ಸುದರ್ಶನ ಚಕ್ರಕ್ಕೆ ಬಲ | 0೭
ಜೆಟ್ ತೈಲ ಹೊರೆ ತಗ್ಗಿಸಲು ನಿಧಿ | 0೭

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಉತ್ತರಾಷಾಢ

ದಿನದ ಮಾತು

ದೇಹ ಚಿಕ್ಕದಾದ ಮಾತ್ರಕ್ಕೆ ತಿಳುವಳಿಕೆಯೂ ಹಾಗೆಯೇ ಎಂದು ವಿವೇಕಿಗಳು ತಿಳಿಯುವುದಿಲ್ಲ. ಸೂರ್ಯಬಿಂಬ ಚಿಕ್ಕದಾಗಿದ್ದರೂ ಅದು ಭೂಮ್ಯಾಕಾಶ ಬೆಳಗುವುದಿಲ್ಲವೇ?


▲ ನೀತಿ ಮಂಜರಿ



ಪ್ರಮಾಣವಚನಕ್ಕೂ ಮುನ್ನ ತಾಯಿ ಆಶೀರ್ವಾದ ಪಡೆದ ಡಿಕೆಶಿ.



ಜೆಡಿಎಸ್ ವರಿಷ್ಠ ದೇವೇಗೌಡರ ಭೇಟಿ, ಆಶೀರ್ವಾದ.



ಮಾಜಿ ಸಿಎಂ ಯಡಿಯೂರಪ್ಪ ಮನೆಗೆ ಭೇಟಿ.

ಕಿರುಸುದ್ದಿ

ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಹೆಚ್ಚಳ

• ಪುಟ ೭

ಭಾರತ-ಬಾಂಗ್ಲಾ ಆಂತರಿಕ ಭದ್ರತೆ ಕುರಿತ ಚರ್ಚೆ ಶೀಘ್ರ

• ಪುಟ ೭

ಟಿಟಿಡಿ ತುಪ್ಪ ಕಲಬೆರಕೆ: ಡೇರಿಗಳಲ್ಲಿ ಇಡಿ ಶೋಧ


• ಪುಟ ೭

ಅಜ್ಜಯ್ಯನ ಹೆಸರಲ್ಲಿ ಡಿಕೆಶಿ ಪ್ರಮಾಣ | ಡಿಸಿಎಂ ಪರಂ ಸೇರಿ 12 ಮಂದಿ ಸಚಿವರಾಗಿ ಪ್ರತಿಜ್ಞೆ

ಮೊದಲ ಸಂಪುಟದಲ್ಲೇ ಭರ್ಜರಿ ಕೊಡುಗೆ | ಬಿ ಖಾತಾದಿಂದ ಎ ಖಾತೆ ರಾಜ್ಯವ್ಯಾಪಿ

ಭರಪೂರ ಬಳುವಳಿ





• **ಬೆಂಗಳೂರು:** ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಪ್ರಮಾಣ ವಚನ ಸ್ವೀಕರಿಸಿದ ನಂತರ ನಡೆದ ಮೊದಲ ಸಂಪುಟದಲ್ಲಿಯೇ ರಾಜ್ಯದ ಜನರಿಗೆ ಭರ್ಜರಿ ಕೊಡುಗೆ ಘೋಷಣೆ ಮಾಡಿದ್ದಾರೆ.

ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್, ಸರ್ಕಾರಿ ಹುದ್ದೆ ಭರ್ತಿ ಜೊತೆಗೆ ಖಾಸಗಿ ಉದ್ಯೋಗ ವಿನಿಮಯ ವ್ಯವಸ್ಥೆ, ಪಂಚಾಯಿತಿಗೆ ಒಂದರಂತೆ ರಾಜ್ಯದಲ್ಲಿ 10 ಸಾವಿರ ಯುವಕರ



ಸಂಘ ಸ್ಥಾಪನೆ ಹಾಗೂ 10 ಲಕ್ಷ ಅನುದಾನ, ಒಸಿ ಸಿಸಿ ಸಮಸ್ಯೆಗೆ ಪರಿಹಾರ, ರಾಜ್ಯದೆಲ್ಲೆಡೆ ಬಿ ಖಾತಾದಿಂದ ಎ ಖಾತಾ ಪರಿವರ್ತನೆ, ಬೆಂಗಳೂರು ನಗರದ ರಸ್ತೆಗಳ ಡಾಂಬರೀಕರಣಕ್ಕೆ 2 ಸಾವಿರ ಕೋಟಿ ಅನುದಾನ... ಇವಿಷ್ಟು ಕರ್ನಾಟಕ ರಾಜ್ಯದಲ್ಲಿಯುವ ಯುಗ ಆರಂಭಕ್ಕೆ ಸಿಎಂ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ನೂತನ ಸರ್ಕಾರ ಕೈಗೊಂಡಿರುವ ಷಟ್ಪದಿಗಳು. ವಿಧಾನಸೌಧದಲ್ಲಿ ಬುಧವಾರ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿ ಮೊದಲ ಸಚಿವ ಸಂಪುಟ ಸಭೆ ನಡೆಸಿದ ಬಳಿಕ ಮುಖ್ಯಮಂತ್ರಿ ಶಿವಕುಮಾರ್ ಅವರು, 6 ಮಹತ್ವದ ಘೋಷಣೆಗಳನ್ನು ಮಾಡಿದ್ದಾರೆ.

ಅಜ್ಜಯ್ಯನ ಹೆಸರಿನಲ್ಲಿ ಪ್ರಮಾಣ: ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಭಾರತದ ಸಂವಿಧಾನ ಪ್ರತಿ ಹಿಡಿದು ನೊಣವಿನಕೆರೆ ವೀರ ಗಂಗಾಧರ ಅಜ್ಜಯ್ಯನ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸಿದ್ದಾರೆ. ಲೋಕಭವನದ ಗಾಜಿನ ಮನೆಯಲ್ಲಿ ಬುಧವಾರ ನಡೆದ ಸರಳ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಬೋಧಿಸಿದ ಗೌಪ್ಯತಾ ಪ್ರಮಾಣವಚನವನ್ನು ಶಿವಕುಮಾರ್ ಅವರು ಸ್ವೀಕರಿಸಿದರು. ಸಂಜೆ 4.07ಕ್ಕೆ ಪ್ರಮಾಣವಚನ ಸಮಾರಂಭ ಪ್ರಾರಂಭವಾಯಿತು. ಶಿವಕುಮಾರ್ ಅವರು 4.14ರ ಶುಭ ಮುಹೂರ್ತದಲ್ಲಿ ಪ್ರಮಾಣವಚನ ಸ್ವೀಕರಿಸಿದರು.

➡ ಪುಟ ೪

- ಕರ್ನಾಟಕದ ಧ್ವಜದ ಬಣ್ಣಗಳನ್ನು ಪ್ರತಿಬಿಂಬಿಸುವ ಕೆಂಪು ಮತ್ತು ಹಳದಿ ಬಣ್ಣಗಳಲ್ಲಿ ಲೋಕಭವನದ ಗಾಜಿನ ಮನೆಯನ್ನು ಅಲಂಕರಿಸಲಾಗಿತ್ತು,
- ಜ್ಯೋತಿಷಿಯ ಸಲಹೆಯಂತೆ ವೇದಿಕೆಯನ್ನು ಪೂರ್ವಕ್ಕೆ ಮುಖ ಮಾಡಿ ನಿರ್ಮಿಸಲಾಗಿತ್ತು.
- ವೇದಿಕೆಗೆ ಹೋಗುವ ಮೊದಲು, ಶಿವಕುಮಾರ್ ಪ್ರಮಾಣವಚನ ಸಮಾರಂಭಕ್ಕಾಗಿ ಆಗಮಿಸಿದ್ದ ವಿವಿಧ ಧಾರ್ಮಿಕ ನಾಯಕರ ಆಶೀರ್ವಾದ ಪಡೆದರು.
- ಕೆಲ ಧಾರ್ಮಿಕ ನಾಯಕರು ಡಿ.ಕೆ. ಶಿವಕುಮಾರ್ ಅವರ ಮೇಲೆ ಹೂದಳಗಳನ್ನು ಸುರಿಸಿದರೆ, ಇತರರು ಆಶೀರ್ವಾದ ಮತ್ತು ರುದ್ರಾಕ್ಷ ಮಾಲೆ ನೀಡಿದರು.
- ಶಿವಕುಮಾರ್ ಅವರು ಕಂದು ಬಣ್ಣದ ರೇಷ್ಮೆ ಜುಬ್ಬಾ ಮತ್ತು ಕಾಂಗ್ರೆಸ್ ಪಕ್ಷದ ತ್ರಿವರ್ಣ ಧ್ವಜ ಹೊಂದಿರುವ ಶಾಲು ಧರಿಸಿದ್ದರು.
- ಪ್ರಮಾಣವಚನ ಸ್ವೀಕರಿಸುವ ಮೊದಲು ಶಿವಕುಮಾರ್ ಗಣ್ಯರನ್ನು ಸ್ವಾಗತಿಸಿದರು.

ಪೀಠಾಧಿಪತಿಗಳಿಂದ ಡಿಕೆಶಿಗೆ ಆಶೀರ್ವಾದ

ಡಿ.ಕೆ. ಶಿವಕುಮಾರ್ ಅವರು ಮಧ್ಯಾಹ್ನ 3.30ಕ್ಕೆ ಲೋಕಭವನದ ಗಾಜಿನಮನೆ ಪ್ರವೇಶಿಸಿದರು. ಅವರು ನೇರವಾಗಿ ಧರ್ಮಗುರುಗಳು, ವಿವಿಧ ಮಠಗಳ ಸ್ವಾಮೀಜಿಗಳು ಆಸೀನರಾಗಿದ್ದ ಕಡೆ ತೆರಳಿ ಆಶೀರ್ವಾದ ಪಡೆದರು. ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರು ರುದ್ರಾಕ್ಷಿ ಮಾಲೆ ಹಾಕಿ ಅಭಿನಂದಿಸಿದರು. ಪೇಜಾವರ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ರೇಷ್ಮೆ ಶಾಲು ಮತ್ತು ಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು. ಕನಕಪೀಠದ ಸ್ವಾಮೀಜಿ ನಿರಂಜನಾನಂದಪುರಿ ಕರಿ ಕಂಬಳಿ ಹೊದೆಸಿ ನಿಮ್ಮ ಹಾದಿ ಸುಗಮವಾಗಿರಲಿ ಎಂದು ಶುಭ ಕೋರಿದರು. ಇತರ ಸ್ವಾಮೀಜಿಗಳು ರುದ್ರಾಕ್ಷಿ ಸರ, ಕ್ರೈಸ್ತ ಧರ್ಮಗುರುಗಳು ಶಿಲುಬೆಯ ದಾರವನ್ನು ಕೊರಳಿಗೆ ಹಾಕಿ ಆಡಳಿತ ಅವಧಿಯಲ್ಲಿ ಕರ್ನಾಟಕದ ಅಭಿವೃದ್ಧಿ ಇನ್ನೂ ಉತ್ತುಂಗಕ್ಕೆ ಏರಲಿ ಎಂದು ಹಾರೈಸಿದರು. ಸಂತ ಸೇವಾಲಾಲ್ ಸ್ವಾಮೀಜಿ ಲಂಬಾಣಿ ಕುಸುರಿ ಕಲೆ ಹೊಂದಿರುವ ಶಲ್ಯ ನೀಡಿದರು.

> ಕರ್ನಾಟಕದ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಿದ ಡಿ.ಕೆ. ಶಿವಕುಮಾರ್ ಅವರಿಗೆ ಅಭಿನಂದನೆಗಳು. ಕೇಂದ್ರವು ಕರ್ನಾಟಕ ಸರ್ಕಾರದೊಂದಿಗೆ ಜನರ ಕಲ್ಯಾಣಕ್ಕಾಗಿ ನಿಕಟವಾಗಿ ಕಾರ್ಯನಿರ್ವಹಿಸಲಿದೆ.
>
> ■ **ನರೇಂದ್ರ ಮೋದಿ,** ಪ್ರಧಾನಿ

- ವಿಧಾನಸೌಧ ಉತ್ತರ ಗೇಟ್ ಮೂಲಕ ವಿಧಾನಸೌಧ ಪ್ರವೇಶ
- ವಿಧಾನಸೌಧದ ಆವರಣದಲ್ಲಿರುವ ಮುನೇಶ್ವರಸ್ವಾಮಿಗೆ ಪೂಜೆ
- ಪಶ್ಚಿಮ ದ್ವಾರದ ಮೂಲಕ ವಿಧಾನಸೌಧ ಮೆಟ್ಟಿಲಿಗೆ ನಮಸ್ಕರಿಸಿ ಪ್ರವೇಶ
- ಒಳ ಪ್ರವೇಶಿಸುವ ಮುನ್ನ ಮುಖ್ಯಮಂತ್ರಿ ಕಚೇರಿಯ ಹೊಸ್ತಿಲಿಗೆ ನಮಸ್ಕಾರ
- ನೊಣವಿನಕೆರೆ ಸ್ವಾಮಿಗಳಿಂದ ವಿಧಾನಸೌಧ ಮೆಟ್ಟಿಲುಗಳಿಗೆ ನೀರು ಪ್ರೋಕ್ಷಣೆ
- ವಿಧಾನಸೌಧದ ಆವರಣದಲ್ಲಿರುವ ಬಸವಣ್ಣ, ಕೆಂಪೇಗೌಡರು, ಮಹಾತ್ಮ ಗಾಂಧಿ, ಬಿ.ಆರ್.ಅಂಬೇಡ್ಕರ್, ಪ್ರತಿಮೆಗಳಿಗೆ ಪುಷ್ಪಾರ್ಚನೆ

ಡಿ.ಕೆ.ಶಿವಕುಮಾರ್ ಶಕೆ... • ಪುಟ ೫

ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್

• **ಬೆಂಗಳೂರು:** ಎಲ್ಲ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡುವಮಹತ್ವದತೀರ್ಮಾನವನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಮೊದಲ ಸಚಿವ ಸಂಪುಟದಲ್ಲಿ ಕೈಗೊಂಡಿದೆ. ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ನಂತರ ವಿಧಾನಸೌಧದಲ್ಲಿ ನಡೆದ ಮೊದಲ ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ವಿಷಯ ಪ್ರಕಟಿಸಿದ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು, ಬುಧವಾರ ಸಚಿವ ಸಂಪುಟ ಸಭೆಯಲ್ಲಿ 6 ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

➡ ಪುಟ ೪



- ರಾಜ್ಯಾದ್ಯಂತ ಬಿ ನಿಂದ ಎ ಖಾತೆಗೆ ಪರಿವರ್ತನೆ
- 2,500 ಚ.ಅಡಿ ವಿಸ್ತೀರ್ಣದ ಕಟ್ಟಡಗಳಿಗೆ ವಿದ್ಯುತ್, ನೀರು ಸಂಪರ್ಕ
- ಖಾಸಗಿ ಉದ್ಯೋಗ ವಿನಿಮಯ ಕೇಂದ್ರ
- ಭಾರತ್ ಜೋಡೋ ಯುವಕರ ಸಂಘ

ಬಿ.ಕೆ.ಹರಿಪ್ರಸಾದ್‌ಗೆ ಕೆಪಿಸಿಸಿ ಅಧ್ಯಕ್ಷ ಪಟ್ಟ

• **ಬೆಂಗಳೂರು:** ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಹಿರಿಯ ಕಾಂಗ್ರೆಸ್ ಮುಖಂಡ, ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ನೇಮಕಗೊಂಡಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಹಲವು ಆಕಾಂಕ್ಷಿಗಳಿದ್ದರು. ಸತೀಶ್ ಜಾರಕಿಹೊಳಿ, ಈಶ್ವರ ಖಂಡ್ರೆ, ಜಿ.ಪರಮೇಶ್ವರ್ ಆಕಾಂಕ್ಷಿಗಳ ಪಟ್ಟಿಯಲ್ಲಿ ಹೆಸರುಗಳು ಕೇಳಿಬಂದಿದ್ದವು. ಕೊನೆಯದಾಗಿ ಮೂಲ ಕಾಂಗ್ರೆಸಿಗ, ಹಿಂದುಳಿದ ವರ್ಗದ ನಾಯಕ ಎಂಬ ಪ್ರಮುಖ ಅಂಶಗಳನ್ನು ಪರಿಗಣಿಸಿ 71 ವರ್ಷದ ಬಿ.ಕೆ. ಹರಿಪ್ರಸಾದ್‌ಗೆ ಕೆಪಿಸಿಸಿ ಪಟ್ಟ ನೀಡಿದೆ.

ಡಿ.ಕೆ.ಶಿವಕುಮಾರ್ ಸಿಎಂ ಆಗಿ ಅಧಿಕಾರ ಸ್ವೀಕರಿಸಿದ ಹಿನ್ನೆಲೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಪೈಪೋಟಿ ಆರಂಭವಾಗಿತ್ತು. ಸತೀಶ್ ಜಾರಕಿಹೊಳಿ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ತೀವ್ರ ಲಾಬಿ ನಡೆಸಿದ್ದರು. ಸಿದ್ದರಾಮಯ್ಯ ಬಳಿಕ ಅಹಿಂದ ಜವಾಬ್ದಾರಿಯನ್ನು ತಾನು ವಹಿಸಿಕೊಳ್ಳಲಿದ್ದೇನೆ ಎಂದು ಬಹಿರಂಗವಾಗಿಯೇ ಹೇಳುತ್ತಿದ್ದರು.

ಆದರೆ, ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಹೈಕಮಾಂಡ್ ವಲಸೆ ಕಾಂಗ್ರೆಸಿಗ ಎಂಬ ಕಾರಣಕ್ಕಾಗಿಯೋ ಏನೋ ಸತೀಶ್ ಜಾರಕಿಹೊಳಿಗೆ ಕೆಪಿಸಿಸಿ ಪಟ್ಟ ನೀಡಲು ಒಲವು ತೋರಲಿಲ್ಲ. ಹೀಗಾಗಿ, ಸತೀಶ್ ಜಾರಕಿಹೊಳಿ ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ.

➡ ಪುಟ ೪



3 ಕಾರ್ಯಾಧ್ಯಕ್ಷರ ನೇಮಕಕ್ಕೆ ಚಿಂತನೆ

ಟಿಎಂಸಿಯಲ್ಲಿ ಮೊದಲನೇ ಬಂಡಾಯ

ಮಮತಾ ಪಕ್ಷದಲ್ಲಿ ಐತಿಹಾಸಿಕ ವಿಭಜನೆ

- ಟಿಎಂಸಿಯ 58 ಬಂಡಾಯ ಶಾಸಕರ ಬೆಂಬಲ
- ವಿಪಕ್ಷ ನಾಯಕನಾಗಿ ರಿತಬ್ರತಾ ಬ್ಯಾನರ್ಜಿ ಆಯ್ಕೆ

• **ಕೋಲ್ಕತ್ತಾ:** ಪಶ್ಚಿಮ ಬಂಗಾಳದ ರಾಜಕೀಯದಲ್ಲಿ ನಡೆದ ಮಹತ್ವದ ಬೆಳವಣಿಗೆಯೊಂದರಲ್ಲಿ, 28 ವರ್ಷಗಳ ಇತಿಹಾಸ ಹೊಂದಿರುವ ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದಲ್ಲಿ ಮೊದಲ ಬಾರಿಗೆ ಬಿರುಕು ಮೂಡಿದೆ. ಪಕ್ಷದಿಂದ



ಉಚ್ಚಾಟನೆಗೊಂಡಿದ್ದ ರಿತಬ್ರತಾ ಬ್ಯಾನರ್ಜಿ ಅವರಿಗೆ 58 ಬಂಡಾಯ ಶಾಸಕರ ಬೆಂಬಲ ದೊರೆತಿದ್ದು, ಅವರನ್ನು ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿ (ಎಲ್‌ಒಪಿ) ಆಯ್ಕೆ ಮಾಡಲಾಗಿದೆ. ಈ ಆಯ್ಕೆಯನ್ನು ವಿಧಾನಸಭಾಧ್ಯಕ್ಷ ರಥೀಂದ್ರ ಬೋಸ್ ಅಂಗೀಕರಿಸಿದ್ದು, ಮಮತಾ ಬ್ಯಾನರ್ಜಿ ನೇತೃತ್ವದ ಪಕ್ಷ ಗಂಭೀರ ಆಂತರಿಕ ಸಂಕಷ್ಟಕ್ಕೆ ಸಿಲುಕಿದೆ.

ಇತ್ತೀಚಿನ ವಿಧಾನಸಭಾ ಚುನಾವಣೆಯಲ್ಲಿ ಭಾರೀ ಸೋಲು ಕಂಡ ಬಳಿಕ ಪಕ್ಷದೊಳಗಿನ ಅಸಮಾಧಾನ ಸ್ಫೋಟಗೊಂಡಿದೆ. ರಿತಬ್ರತಾ ಬ್ಯಾನರ್ಜಿ ಮತ್ತು ಸಂದೀಪನ್ ಸಾಹಾ ನೇತೃತ್ವದ ಬಂಡಾಯ ಗುಂಪು 58 ಶಾಸಕರ ಬೆಂಬಲ ಪತ್ರಗಳನ್ನು ಸ್ಪೀಕರ್‌ಗೆ ಸಲ್ಲಿಸಿತ್ತು. ಇದು ಪಕ್ಷ ವಿಭಜನೆಗೆ ಅಗತ್ಯವಿರುವ ಮೂರರಲ್ಲಿ ಎರಡು ಭಾಗದ ಸಂಖ್ಯಾಬಲವನ್ನು ಮೀರಿದೆ.

➡ ಪುಟ ೪

ದಿಲ್ಲಿಯ ಹೋಟೆಲ್‌ನಲ್ಲಿ ಅಗ್ನಿ ಅವಘಡ

10 ವಿದೇಶಿಯರು ಸೇರಿ 21 ಜನ ಸಜೀವ ದಹನ



• **ಹೊಸದಿಲ್ಲಿ:** ದಕ್ಷಿಣ ದಿಲ್ಲಿಯ ಮಾಳವೀಯ ನಗರ ಪ್ರದೇಶದಲ್ಲಿ ಬುಧವಾರ ಅಗ್ನಿಶಾಮಕ ದಳದ ಸುರಕ್ಷತಾ ಅನುಮತಿ ಪತ್ರ (ಎನ್‌ಒಸಿ) ಇಲ್ಲದೆ ಕಾರ್ಯನಿರ್ವಹಿಸುತ್ತಿದ್ದ ಹೋಟೆಲ್‌ನಲ್ಲಿ ಸಂಭವಿಸಿದ ಭೀಕರ ಅಗ್ನಿ ಅನಾಹುತದಲ್ಲಿ ಕನಿಷ್ಠ 21 ಜನರು ಸಜೀವ ದಹನವಾಗಿದ್ದಾರೆ. ಹೌಜ್ ರಾಣಿಯಲ್ಲಿರುವ ಫ್ಲೋರಿಶ್ ಸ್ಟೇ ಬಿ ಅಂಡ್ ಬಿ ಹೋಟೆಲ್‌ನ ಐದು ಅಂತಸ್ತಿನ ಕಟ್ಟಡದಲ್ಲಿ ಬೆಳಗ್ಗೆ 8.30ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿದೆ. ಈ ಕಟ್ಟಡ ಕೇವಲ ಒಂದೇ ಪ್ರವೇಶ ಮತ್ತು ನಿರ್ಗಮನ ದ್ವಾರ, ಶಾಶ್ವತವಾಗಿ ಮುಚ್ಚಿದ ಕಿಟಕಿಗಳು, ಸೆನ್ಸರ್ ಚಾಲಿತ ಮುಖ್ಯ ಬಾಗಿಲನ್ನು ಹೊಂದಿತ್ತು. ಕನಿಷ್ಠ 58 ಜನರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರಲ್ಲಿ 11 ವಿದೇಶಿಯರು, 10 ಭಾರತೀಯರು ಸೇರಿದಂತೆ ಒಟ್ಟು 21 ಮಂದಿ ಮೃತಪಟ್ಟಿದ್ದಾರೆ ಎಂದು ಘೋಷಿಸಲಾಗಿದೆ.

➡ ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,80,000** (2,75,000) ಅಪರಂಜಿ ಚಿನ್ನ: **1,56,220** (1,51,520) ಆಭರಣ ಚಿನ್ನ: **1,43,200** (1,44,300) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **74,346** (303↓) ಎನ್‌ಎಸ್‌ಇ **23,405** (77↓)

$1 = ₹95.05

ಕಿರುಸುದ್ದಿ

ಚುಟುಕು ಚೇತನ ಗೌರವಕ್ಕೆ ಡಾ. ರಮೇಶ ಆಯ್ಕೆ



ಹುಬ್ಬಳ್ಳಿ: ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತು ನೀಡುವ ಚುಟುಕು ಚೇತನ ಗೌರವಕ್ಕೆ ಡಾ. ರಮೇಶ ಮಹಾದೇವಪ್ಪ ಆಯ್ಕೆಯಾಗಿದ್ದಾರೆ ಎಂದು ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ತಿಳಿಸಿದ್ದಾರೆ.

ಜೂನ್ 7ರ ಮಧ್ಯಾಹ್ನ 3 ಗಂಟೆಗೆ ಧಾರವಾಡ ರಂಗಾಯಣದಲ್ಲಿ ಜರುಗಲಿರುವ ಅವಳಿ ಮಹಾನಗರ ವ್ಯಾಪ್ತಿಯ 8ನೇ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ. ಇದೇ ಸಂದರ್ಭದಲ್ಲಿ ಅಧಿಕಮಾಸದ ಅಂಗವಾಗಿ ಅರ್ಹ ದಂಪತಿಗಳಿಗೆ ಪುಸ್ತಕ ದಾನ ಮಾಡಲಾಗುವುದು. ಮಕ್ಕಳ ಸಾಹಿತಿ ನಿಂಗಣ್ಣ ಕುಂಟಿ ಸಮ್ಮೇಳನ ಉದ್ಘಾಟಿಸುವರು. ಸರ್ವಾಧ್ಯಕ್ಷ ಪಂಪಾಪತಿ ಹಿರೇಮಠ ಅಧ್ಯಕ್ಷತೆಯಲ್ಲಿ ಜಿಲ್ಲಾ ಘಟಕದ ಶಾಂತಣ್ಣ ಕಡಿವಾಲ, ವಿ.ಜಿ.ಪಾಟೀಲ, ಎಸ್.ಐ.ನೇಕಾರ , ಮಹಿಳಾ ಘಟಕದ ಸುಧಾ ಕಬ್ಬೂರ, ವಂದನಾ ರಮೇಶ ಪಾಲ್ಗೊಳ್ಳುವರು. ನಂತರ ಬಿ.ಕೆ.ಹೊಂಗಲ ಅಧ್ಯಕ್ಷತೆಯಲ್ಲಿ ಚುಟುಕು ವಾಚನ ಗೋಷ್ಠಿ, ಗುರು ಕಲ್ಮಠ ಆಶಯ ನುಡಿಯುವರು. ಶಂಕರ ಕುಂಬಿ ಸಮಾರೋಪ ಭಾಷಣ ಮಾಡುವರು. ಮೃತ್ಯುಂಜಯ ಮಟ್ಟಿ ನಿರ್ಣಯ ಮಂಡಿಸುವರು ಎಂದು ಪ್ರಸಾರಾಂಗ ನಿರ್ದೇಶಕ ಚನ್ನಬಸಪ್ಪ ಧಾರವಾಡಶೆಟ್ರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಅಣಕು ಪ್ರದರ್ಶನ ಇಂದು


ಹುಬ್ಬಳ್ಳಿ: ಭಾರತೀಯ ಹವಾಮಾನ ಇಲಾಖೆಯು 2026ರ ನೈಋತ್ಯ ಮುಂಗಾರು ಹಂಗಾಮಿಗೆ (ಜೂನ್ 1 ರಿಂದ ಸೆಪ್ಟೆಂಬರ್ 30) ಹೊರಡಿಸಿರುವ ದೀರ್ಘಾವಧಿ ಮುನ್ಸೂಚನೆಯ ಪ್ರಕಾರ ಪ್ರವಾಹದ ಕುರಿತು ಸಿದ್ಧತೆ ಕೈಗೊಳ್ಳಲು ಹಾಗೂ ಪ್ರವಾಹ ಸಂದರ್ಭದಲ್ಲಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಸ್ಥಳೀಯವಾಗಿ ಅಣಕು ಪ್ರದರ್ಶನ ಕೈಗೊಳ್ಳಲು ನಿರ್ದೇಶನವನ್ನು ನೀಡಿದೆ. ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು ಧಾರವಾಡ ಜಿಲ್ಲೆಯಲ್ಲಿ ಪ್ರವಾಹ ಪೀಡಿತ ಗ್ರಾಮಗಳಲ್ಲಿ ರಕ್ಷಣಾ ಸಾಮಾಗ್ರಿಗಳನ್ನು ಸುಸ್ಥಿತಿಯಲ್ಲಿ ಇರುವ ಕುರಿತು ಪರಿಶೀಲನೆ ಮಾಡುವುದು ಹಾಗೂ ಪ್ರವಾಹದ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸುವುದು ಅವಶ್ಯವಾಗಿರುವುದರಿಂದ ಪ್ರವಾಹದ ಮುನ್ನೆಚ್ಚರಿಕೆ ಅಣಕು ಪ್ರದರ್ಶನವನ್ನು ಜೂನ್ 4 ರಂದು ಬೆಳಗ್ಗೆ 10.30ಕ್ಕೆ ಹುಬ್ಬಳ್ಳಿಯ ಉಣಕಲ್ ಕೆರೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಧಾರವಾಡ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷ ಹಾಗೂ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಹುಬ್ಬಳ್ಳಿ: 2026 – 27 ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಹುಬ್ಬಳ್ಳಿ ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕ, ಬಾಲಕಿಯರ ವಸತಿ ನಿಲಯಗಳಲ್ಲಿನ ಖಾಲಿ ಇರುವ ಸ್ಥಳಗಳಿಗೆ 5ನೇ ತರಗತಿಯಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಮತ್ತು ಕಾಲೇಜು ಮಟ್ಟದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರವೇಶಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಇಲಾಖೆ ವಸತಿ ನಿಲಯಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟ, ವಸತಿ, ಸಮವಸ್ತ್ರ, ಪಠ್ಯಪುಸ್ತಕ ಹಾಗೂ ಇತರೆ ಸಾಮಗ್ರಿಗಳನ್ನು ಸರ್ಕಾರದಿಂದ ಒದಗಿಸಲಾಗುವುದು. ನಿಲಯಗಳಿಗೆ ಪ್ರವೇಶ ನೀಡುವಾಗ ಪರಿಶಿಷ್ಟ ಜಾತಿ ವಸತಿ ನಿಲಯಕ್ಕೆ ಶೇ.75 ರಷ್ಟು ಪ.ಜಾತಿ ಹಾಗೂ ಪರಿಶಿಷ್ಟ ವರ್ಗಕ್ಕೆ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶೇ.25 ರಷ್ಟು ಅನುಪಾತದಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುವುದು. ಡಾ. ಬಿ.ಆರ್‌ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ, ನಂತರದ ಬಾಲಕ, ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ ಪಡೆಯಲು ಇಚ್ಚಿಸುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಇಲಾಖಾ ವೆಬ್‌ಸೈಟ್ www.sw.kar.nic.in ನ HMIS PORTAL ನಲ್ಲಿ ಅವಶ್ಯಕ ದಾಖಲೆಗಳೊಂದಿಗೆ ಸಲ್ಲಿಸಬಹುದು. ಮೆಟ್ರಿಕ್ ಪೂರ್ವ ಜೂನ್ 30 ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಜುಲೈ 31 ಕೊನೆಯ ದಿನಾಂಕವಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಎಂ.ಬಿ.ಸಣ್ಣೇರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿವಪ್ರಸಾದ ಹಲಗಿ ನಿಧನ



ಧಾರವಾಡ: ಸ್ಥಳೀಯ ಬಾವಿಕಟ್ಟಿ ಪ್ಲಾಟ್ ನಿವಾಸಿ ಹಾಗೂ ಧಾರವಾಡ ಜಿಲ್ಲಾ ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಶಿವಪ್ರಸಾದ ಹಲಗಿ(55) ಬುಧವಾರ ನಿಧನ ಹೊಂದಿದರು. ಇವರಿಗೆ ಪತ್ನಿ, ಪುತ್ರ ಹಾಗೂ ಅಪಾರ ಬಳಗವಿದೆ.



ಹುಬ್ಬಳ್ಳಿ: ನಗರದ ಸಿದ್ಧಾರೂಢ ಫೌಂಡೇಶನ್ 2ನೇ ವಾರ್ಷಿಕೋತ್ಸವ ಅಂಗವಾಗಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನ 604 ಜಯಂತ್ಯುತ್ಸವ ಸಮಾರಂಭ ಇತ್ತೀಚೆಗೆ ಮೂರು ಸಾವಿರ ಮಠದ ಸಭಾ ಸಭವನದಲ್ಲಿ ಜರುಗಿತು. ಉದ್ಘಾಟಕರಾಗಿ ಭಾರತೀಶ್ ಆಚಾರ್ಯ ವೇದ ಪುರೋಹಿತರು, ಅಧ್ಯಕ್ಷತೆಯನ್ನು ವಿ.ಜಿ. ಪಾಟೀಲ್, ಗೀತಾ ಹೊಸಮನಿ , ವೆಂಕಟೇಶ್ ಭಂಡಾರಿ , ಮಂಜುಳಾ ಮಜೂತಿ, ಶಾಂತಣ್ಣ ಕಡಿವಾಳ, ಡಿ.ಟಿ. ಪಾಟೀಲ್, ರಮೇಶ್ ಮಹದೇವಪ್ಪನವರ, ಹನುಮಂತರೆಡ್ಡಿ ರಂಗರೆಡ್ಡಿ, ಅಮಿತ್ ಮಹಾಜನ್, ರೇಣುಕಾಸ್ವಾಮಿ ಕಮತರ ಇದ್ದರು.

ರಾಜ್ಯದ ಸಮಗ್ರ ಅಭಿವೃದ್ಧಿಗೆ ಸಿಕ್ಕ ಜಯ

ಹುಬ್ಬಳ್ಳಿ: ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಐತಿಹಾಸಿಕ ಕ್ಷಣವನ್ನು ಹುಬ್ಬಳ್ಳಿಯ ಗಾಂಧಿವಾಡದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ವೀಕ್ಷಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಕಾಂಗ್ರೆಸ್ ಮುಖಂಡರು, ಕಾರ್ಪೊರೇಟರ್‌ಗಳು ಮತ್ತು ಸಾವಿರಾರು ಸಂಖ್ಯೆಯ ಕಾರ್ಯಕರ್ತರು ಭಾಗವಹಿಸಿ, ಪಟಾಕಿ ಸಿಡಿಸಿ, ಸಿಹಿ ಹಂಚಿ ಹಾಗೂ ಬಣ್ಣದೋಕುಳಿ ಆಡುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು. ವಿದ್ಯಾನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಜತ್ ಉಳ್ಳಾಗಡ್ಡಿಮಠ ಮಾತನಾಡಿ, ಇಂದು ಕರ್ನಾಟಕದ ಪಾಲಿಗೆ ಒಂದು ಐತಿಹಾಸಿಕ ದಿನ. ಜನಪರ ಕಾಳಜಿ, ಸಂಘಟನಾ ಚತುರತೆ ಮತ್ತು ಅಚಲವಾದ ಬದ್ಧತೆ ಹೊಂದಿರುವ ನಮ್ಮ ನಾಯಕ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ. ಇದು ಕೇವಲ ಒಬ್ಬ ವ್ಯಕ್ತಿಯ ಜಯವಲ್ಲ, ಬದಲಾಗಿ ಕಾಂಗ್ರೆಸ್ ಸಿದ್ಧಾಂತಕ್ಕೆ ಮತ್ತು ರಾಜ್ಯದ ಸಮಗ್ರ ಅಭಿವೃದ್ಧಿಗೆ ಸಿಕ್ಕ ಜಯವಾಗಿದೆ. ಅವರ ನಾಯಕತ್ವದಲ್ಲಿ ಕರ್ನಾಟಕ ರಾಜ್ಯವು ಸರ್ವಾಂಗೀಣ ಅಭಿವೃದ್ಧಿಯತ್ತ ಸಾಗಲಿದೆ ಎಂಬ ನಂಬಿಕೆ ನಮಗಿದೆ. ಇಂದಿನ ಈ ಸಂಭ್ರಮವು ಪಕ್ಷದ ಕಾರ್ಯಕರ್ತರ ಕಠಿಣ ಪರಿಶ್ರಮಕ್ಕೆ ಸಿಕ್ಕ ಫಲವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಪಾಲಿಕೆ ಸದಸ್ಯೆ ಸುವರ್ಣ ಕಲ್ಲಕುಂಟ್ಲ, ಇಕ್ಬಾಲ್ ನವಲೂರು, ಸಾದಿಕ್ ಯಕ್ಕುಂಡಿ, ಸ್ನೇಹ ಜಾಧವ,ಬಾಳಮ್ಮ ಜಂಗನವರ, ಮೇಘನಾ ಹಿರೇಮಠ, ಅಶೋಕ್ ಕಾಲದಾಗಿ, ಪರ್ವೇಜ್ ಕಟ್ಟಿಮನಿ, ಆಸಿಫ್ ಚಳ್ಳಮರದ, ಬಸವರಾಜ್ ಮ್ಯಾಗಡಿ, ಮಂಜುನಾಥ್ ಉಪ್ಪಾರ, ಬಸವರಾಜ್ ರಾಯಪುರ, ಡೇವಿಡ್ ಲಂಜಲ, ಸಿಂಗಾರಪ್ಪ ಶೃಂಗೇರಿ ಇದ್ದರು.



ಹುಬ್ಬಳ್ಳಿ: ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಐತಿಹಾಸಿಕ ಕ್ಷಣವನ್ನು ಹುಬ್ಬಳ್ಳಿಯ ಗಾಂಧಿವಾಡದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಅತ್ಯಂತ ಸಂಭ್ರಮ ಮತ್ತು ಸಡಗರದಿಂದ ವೀಕ್ಷಿಸಿದರು. ನಗರದ ಗಾಂಧಿವಾಡದಲ್ಲಿ ಬೃಹತ್ ಎಲ್‌ಇಡಿ ಪರದೆಯನ್ನು ಅಳವಡಿಸಲಾಗಿತ್ತು.

20ನೇ ದಿನ ಮುಂದುವರಿದ ಹೋರಾಟ | ಸಂಘ–ಸಂಸ್ಥೆಗಳಿಂದ ಬೆಂಬಲ

ಅಧಿಸೂಚನೆಗಾಗಿ ನಿಲ್ಲದ ಸತ್ಯಾಗ್ರಹ



ನಿರ್ವಹಣೆ ಅಸಮರ್ಪಕ

ಧಾರವಾಡ ಶಿಕ್ಷಣ, ಸಾಹಿತ್ಯ, ಸಂಸ್ಕೃತಿ ಹಾಗೂ ಆಡಳಿತಾತ್ಮಕವಾಗಿ ಬಹಳ ವಿಶಿಷ್ಟ ಸ್ಥಾನಮಾನ ಹೊಂದಿದ ನಗರ. ಆದರೆ ಮೂಲಭೂತ ಸೌಲಭ್ಯಗಳಾದ ಸ್ವಚ್ಛತೆ, ನೀರು, ರಸ್ತೆ, ಬೀದಿ ದೀಪಗಳು, ನಾಗರಿಕರಿಗೆ ಇತರೆ ಸೌಕರ್ಯ ಸಮರ್ಪಕ ನಿರ್ವಹಣೆ ತುಸು ಕಷ್ಟಕರವಾಗಿದ್ದಾಗಿ ಜನತಾ ಶಿಕ್ಷಣ ಸಮಿತಿ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಹೇಳಿದರು.

- ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ರಚನೆಗೆ ಸರಣಿ ಉಪವಾಸ ಧರಣಿ ಮುಂದುವರಿಕೆ
- ಬುಧವಾರ ಆನಂದ ಹೂಗಾರ, ಶಾಂತಾ ಪವಾರ, ಶಕುಂತಲಾ ಕಟ್ಟಿ ಹಾಗೂ ಪುಷ್ಪಾ ನವಲಗುಂದ, ಭಾರತಿ ದಳವಾಯಿ ಸೇರಿದಂತೆ ಅನೇಕರಿಂದ ಉಪವಾಸ ಧರಣಿ

ಧಾರವಾಡ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಿಭಜಿಸಿ, ಧಾರವಾಡ ಪ್ರತ್ಯೇಕ ಪಾಲಿಕೆ ರಚನೆಗೆ ಸ್ವಾಭಿಮಾನಿ ಹೋರಾಟ ಸಮಿತಿ ಕೈಗೊಂಡಿರುವ ಸತ್ಯಪ್ರತಿಪಾದನೆ ಸತ್ಯಾಗ್ರಹವು 20ನೇ ದಿನಕ್ಕೆ ಕಾಲಿಟಿದ್ದು, ಬುಧವಾರ ಜನತಾ ಶಿಕ್ಷಣ ಸಮಿತಿ, ಜಿಲ್ಲಾ ಕದಳಿ ವೇದಿಕೆ ಬೆಂಬಲಿಸಿವೆ.

ನಗರದ ಪ್ರಮುಖ ರಸ್ತೆಗಳಲ್ಲಿ ಭವ್ಯ ಮೆರವಣಿಗೆ ನಡೆಸಿದ ಉಭಯ ಸಂಘ–ಸಂಸ್ಥೆಗಳ ಹೋರಾಟಗಾರರು, ವಿವಿಧ ಘೋಷಣೆಗಳು ಕೂಗುತ್ತ ಸತ್ಯಾಗ್ರಹದ ವೇದಿಕೆಗೆ ಆಗಮಿಸಿ ಸತ್ಯಾಗ್ರಹದ ಪ್ರಮುಖ ರೂವಾರಿ ಬಿ.ಡಿ.ಹಿರೇಮಠ ಅವರಿಗೆ ಸತ್ಯಾಗ್ರಹ ಬೆಂಬಲಿಸಿದ ಮನವಿ ಪತ್ರ ಸಲ್ಲಿಸಿದರು.

ಜನತಾ ಶಿಕ್ಷಣ ಸಮಿತಿ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಮಾತನಾಡಿ, ಧಾರವಾಡ ಮೊದಲಿಂದಲೂ ಅಸಡ್ಡೆಗೆ ಒಳಗಾಗಿದೆ. ಹುಬ್ಬಳ್ಳಿಗೆ ಹೋಲಿಸಿದರೆ, ಅಭಿವೃದ್ಧಿಯಿಂದ ಬಹಳಷ್ಟು ಹಿಂದೆ ಉಳಿದಿದೆ. ಅಭಿವೃದ್ಧಿ ದೃಷ್ಟಿಯಿಂದ ಧಾರವಾಡ ಪ್ರತ್ಯೇಕ ಪಾಲಿಕೆ ರಚನೆಗೆ ಅಗತ್ಯವಿದೆ ಎಂದರು.

ಇದೇ ವೇಳೆಯಲ್ಲಿ ತನ್ನ ನೈತಿಕ ಬೆಂಬಲ ಘೋಷಿಸಿದ ಜಿಲ್ಲಾ ಕದಳಿ ವೇದಿಕೆ ಕೂಡ ಪ್ರತ್ಯೇಕ ಪಾಲಿಕೆ ರಚನೆ ಆದರೆ ಮಾತ್ರವೇ ಧಾರವಾಡ ನಗರದ ಸಮಗ್ರ ಅಭಿವೃದ್ಧಿಗೆ ವೇಗ ದೊರೆಯಲಿದೆ. ಸ್ಥಳೀಯ ಆಡಳಿತ ಪರಿಣಾಮಕಾರಿ ನಿರ್ವಹಿಸಲು ಸಾಧ್ಯವಿದೆ ಎಂದು ಅಭಿಪ್ರಾಯಪಟ್ಟಿದೆ. ಬಿ.ಡಿ.ಹಿರೇಮಠ, ಗುರುರಾಜ ಹುಣಸಿಮರದ, ಮನೋಜ ಪಾಟೀಲ, ಸುರೇಶ ಬೆದರೆ, ಶಂಕರ ಶೇಳಕೆ, ಮೋಹನ ರಾಮದುರ್ಗ, ವೆಂಕಟೇಶ ಮಾಚಕನೂರ, ಮಹಾವೀರ ಉಪಾದ್ಯೆ, ಶಿವಾನಂದ ಕವಳಿ, ಮೇಘಾ ಹುಕ್ಕೇರಿ, ಪ್ರಮೀಳಾ ಜಕ್ಕಣ್ಣವರ, ಸಂತೋಷ ವಿಠ್ಠಲ ಕಮ್ಮಾರ ಇದ್ದರು.

> ಧಾರವಾಡ ನಾಗರಿಕರ ಆಶಯದಂತೆ ರಾಜ್ಯಪಾಲರು ಪ್ರತ್ಯೇಕ ಪಾಲಿಕೆ ಕಡತಕ್ಕೆ ಅನುಮೋದನೆ ನೀಡಿದ ಪ್ರಸ್ತಾವನೆ ರಾಜ್ಯ ಸರ್ಕಾರಕ್ಕೆ ಕಳುಹಿಸಿದ್ದಾರೆ. ಆದರೆ ರಾಜ್ಯ ಸರ್ಕಾರದ ವಿಳಂಬ ಸಲ್ಲ. ಹೋರಾಟ ತೀವ್ರ ಸ್ವರೂಪ ತಾಳುವ ಮೊದಲೇ ಅಧಿಸೂಚನೆ ಹೊರಡಿಸಬೇಕು.
>
> ■ ಡಾ.ಅಜಿತ ಪ್ರಸಾದ, ಜನತಾ ಶಿಕ್ಷಣ ಸಮಿತಿ ಕಾರ್ಯದರ್ಶಿ

ಸರ್ಕಾರದ ವಿರುದ್ಧ ಹೋರಾಟದ ಎಚ್ಚರಿಕೆ

ಧಾರವಾಡ ಜನರ ಭಾವನೆಗಳಿಗೆ ಸ್ಪಂದಿಸಿ ರಾಜ್ಯ ಸರ್ಕಾರ ತತಕ್ಷಣವೇ ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ರಚನೆಗೆ ಅಧಿಸೂಚನೆ ಹೊರಡಿಸಬೇಕು. ಇಲ್ಲದಿದ್ದರೆ ಮುಂಬರುವ ದಿನಗಳಲ್ಲಿ ಸರ್ಕಾರದ ವಿರುದ್ಧ ಹೋರಾಟ ರೂಪಿಸುವುದಾಗಿಯೂ ಜಿಲ್ಲಾ ಕದಳಿ ವೇದಿಕೆ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ಜೀವನದ ಪಾಠ ಕಲಿಸುವ ನಾಟಕ

ಧಾರವಾಡ: ನೂಲಗೇರಿಯ ಶ್ರೀ ಕೊಟ್ಟುರೇಶ್ವರ ನಾಟಕ ಮಂಡಳಿ ಸಹಯೋಗದಲ್ಲಿ ಧಾರವಾಡದ ಅಂತರಂಗ ಪ್ರಸ್ತುಪಡಿಸಿದ ಪೇಯಿಂಗ್ ಗೆಸ್ಟ್ ನಾಟಪ ಪ್ರದರ್ಶನ ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ.ದೇಶಪಾಂಡೆ ಸಭಾಭವನದಲ್ಲಿ ನಡೆಯಿತು.

ಉದ್ಘಾಟಿಸಿದ ರಂಗನಿರ್ದೇಶಕಿ ವಿಶ್ವೇಶ್ವರಿ ಹಿರೇಮಠ ಮಾತನಾಡಿ, ನಾಟಕ ಸಂಸ್ಕೃತಿ ಸಮಾಜ ತಿದ್ದುವ ಕೆಲಸ ಮಾಡಲಿದೆ. ಎಲ್ಲಕ್ಕಿಂತ ಮುಖ್ಯವಾಗಿ ಜೀವನದ ಪಾಠವನ್ನು ಕಲಿಸುತ್ತದೆ. ಮನುಷ್ಯನನ್ನು ಸಂಸ್ಕಾರವಂತನನ್ನಾಗಿ ಮಾಡುವ ಶಕ್ತಿ ನಾಟಕಕ್ಕೆ ಇದೆ ಎಂದರು.

ಒಂದಾನೊಂದು ಕಾಲದಲ್ಲಿ ಜನಪ್ರೀಯ ಮಾಧ್ಯಮವಾಗಿದ್ದ ರಂಗಭೂಮಿ, ಇತ್ತೀಚೆಗೆ ಅವನತಿ ಹಾದಿ ಹಿಡಿದಿದೆ. ಹೀಗಾಗಿ ಯುವ ಪೀಳಿಗೆಗಳು ಉತ್ತಮ ನಾಟಕಗಳಲ್ಲಿ ಅಭಿನಯಿಸುವ ಮೂಲಕ ರಂಗಭೂಮಿ ಉಳುವಿಗೆ ಶ್ರಮಿಸಬೇಕಿದೆ ಎಂದು ಹೇಳಿದರು.

ಲೇಖಕ ಡಿ.ಎಸ್.ಚೌಗಲೆ ಮಾತನಾಡಿ, ಸಾಹಿತಿಗಳು, ಕಾದಂಬರಿಕಾರರು ತಮ್ಮದಾದ ಕಥೆ ಅಲ್ಲದೆ, ಮರಾಠಿ ಮೂಲಗಳು ಹಿಡಿದು ಕಾದಂಬರಿ ಆಧಾರಿತ ನಾಟಕ ಬರೆದಿದ್ದಾರೆ. ತಾವೂ ಸಹ ಮರಾಠಿ ಕಥೆಯಾದರಿಸಿಯೇ ಪೇಯಿಂಗ್ ಗೆಸ್ಟ್ ನಾಟಕ ಬರೆದಿದ್ದಾಗಿ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕವಿಸಂ ಕಾರ್ಯದರ್ಶಿ ಶಂಕರ ಹಲಗತ್ತಿ ಮಾತನಾಡಿ, ಸನ್ಮತಿ ಅವರಂತಹ ಯುವ ಪ್ರತಿಭೆಗಳು ತಮ್ಮ ವ್ಯಕ್ತಿತ್ವ ರೂಪಿಸಿಕೊಂಡು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆಯುತ್ತಿರುವುದು ರಂಗಭೂಮಿಗೆ ಇರುವ ತಾಕತ್ತು ಎಂದರು.

ಮನಸ್ಸು ಏಕಾಗ್ರತೆ, ವ್ಯಕ್ತಿತ್ವ ವಿಕಸನಕ್ಕೆ ರಂಗಭೂಮಿ ಬಹಳಷ್ಟು ಸಹಕಾರಿ. ರಂಗಭೂಮಿ ಸಂಸ್ಕೃತಿ ಉಳಿಸಿ, ಬೆಳೆಸಬೇಕು. ಈ ನಿಟ್ಟಿನಲ್ಲಿ ಯುವ ಕಲಾವಿದರ ಜವಾಬ್ದಾರಿ ದೊಡ್ಡದಿದೆ. ಸಮಾಜಕ್ಕೆ ಸಂದೇಶ ನೀಡುವ ನಾಟಕಗಳು ಹೆಚ್ಚೆಚ್ಚು ಪ್ರದರ್ಶನ ನೀಡಲು ಹೇಳಿದರು.

ಯುವ ನಿರ್ದೇಶಕಿ ಸನ್ಮತಿ ಅಂಗಡಿ, ಶಿವಾನಂದ ತಾರಿಹಾಳ, ವಿಷಯಾ ಜೇವೂರ, ಗೋಪಾಲ ಉಣಕಲ್, ವೀರಣ್ಣ ಹೊಸಮನಿ, ಪವನ ದೇಶಪಾಂಡೆ, ಮಹಾಂತೇಶ ಹವಳಣ್ಣವರ, ಪೂರ್ಣಿಮಾ ಎಸ್.ಕೆ. ಪಾಲ್ಗೊಂಡಿದ್ದರು. ರವಿ ಕುಲಕರ್ಣಿ ನಿರೂಪಿಸಿ, ವಂದಿಸಿದರು.



ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿ

ಹುಬ್ಬಳ್ಳಿ: ಕೆಎಲ್‌ಇ ಸಂಸ್ಥೆ ಗುರುಸಿದ್ದಪ್ಪ ಕೋತಂಬ್ರಿ ಕಾನೂನು ಮಹಾವಿದ್ಯಾಲಯ ವತಿಯಿಂದ ಕಾಲೇಜ್‌ನಲ್ಲಿ ವೃತ್ತಿ ಮಾರ್ಗದರ್ಶನದ ಕುರಿತು ಒಂದು ದಿನದ ಕಾರ್ಯಾಗಾರ ಯಶಸ್ವಿಯಾಗಿ ಜರಗಿತು. ಪ್ರಧಾನ ಕುಟುಂಬ ನ್ಯಾಯಾಲಯದ ನ್ಯಾಯಾಧಿಶೀ ಹಾಗೂ ಕಾನೂನು ಸೇವೆಗಳ ಸಮಿತಿ ಅಧ್ಯಕ್ಷ ವೀಣಾ ನಾಯಕರ್ ಅವರು ಕಾರ್ಯಾಗಾರಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ವಿದ್ಯಾರ್ಥಿಗಳು ಶ್ರದ್ಧೆ, ಬದ್ಧತೆ ಹಾಗೂ ಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಿಸಬೇಕು. ಮುಂದಿನ ಭವಿಷ್ಯದಲ್ಲಿರುವ ಅವಕಾಶಗಳ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು. ಅಧ್ಯಕ್ಷತೆ ಕಾಲೇಜಿನ ಪ್ರಾಚಾರ್ಯ ಜ್ಞಾನೇಶ್ವರ ಚೌರಿ ವಹಿಸಿದ್ದರು. ಕಾಲೇಜ್ ಒಕ್ಕೂಟದ ಕಾರ್ಯಾಧ್ಯಕ್ಷ ಜೈಹನುಮಾನ ಎಚ್.ಕೆ., ಡಾ. ಶಾರದಾ ಪಾಟೀಲ ಇದ್ದರು.





ಹುಬ್ಬಳ್ಳಿ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಗೆ ನೂತನವಾಗಿ ಅಧ್ಯಕ್ಷರಾದ ಬಿ.ಕೆ. ಹರಿಪ್ರಸಾದ ಅವರಿಗೆ ಧಾರವಾಡ ಜಿಲ್ಲಾ ಘಟಕದಿಂದ ಸನ್ಮಾನಿಸಲಾಯಿತು. ಅಧ್ಯಕ್ಷ ಅನಿಲ್ ಕುಮಾರ ಪಾಟೀಲ್, ಚಂದ್ರಶೇಖರ ಜುಟ್ಟಲ್ , ವಿಜಯ ಕುಲಕರ್ಣಿ , ಅರ್ಜುನ್ ಪಾಟೀಲ್, ಪ್ರೇಮನಾಥ ಚಿಕ್ಕತುಂಬಳ , ರೇಹಾನ ಹೈನಾಪೂರಿ, ಪ್ರಣವ ಗಾಯಕವಾಡ , ಬಂಗಾರೇಶ ಹಿರೆಮಠ, ಶಶಿ ದೇಸಾಯಿ ಮೋಹನ ಹೊಸಮನಿ ಇದ್ದರು.

ಸಸಿ ನೆಡಲು ಸ್ಥಳ ಪರಿಶೀಲನೆ



ಧಾರವಾಡ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಧಾರವಾಡ ಗಾಂಧಿ ನಗರದ 5ನೇ ನಂಬರ್ ಸ್ಕೂಲ್ ಆವರಣದಲ್ಲಿ ಸಸಿ ನೆಡಲು ಕರ್ನಾಟಕ ಬಾಲವಿಕಾಸ ಅಕ್ಯಾಡೆಮಿಯ ಅಧ್ಯಕ್ಷ ಅಡಿವೇಶ ಇಟಗಿ ಸ್ಥಳ ಪರಿಶೀಲಿಸಿದರು.

ಅಧ್ಯಕ್ಷ ಅಡಿವೇಶ ಇಟಗಿ ಮಾತನಾಡಿ, ಪರಿಸರ ಸಂರಕ್ಷಣೆಗೆ ಉತ್ತೇಜನ ನೀಡುವ ಬಗ್ಗೆ ಚರ್ಚಿಸಿದ ಅವರು, ಪರಿಸರದ ಸಮತೋಲನ ಕಾಪಾಡಲು ಹಾಗೂ ಮುಂದಿನ ಪೀಳಿಗೆಗೆ ಹಸಿರು ವಾತಾವರಣ ನಿರ್ಮಿಸಲು ಹೇಳಿದರು. ಈ ಸಂದರ್ಭದಲ್ಲಿ ಶಾಲಾ ಸಿಬ್ಬಂದಿ ಇದ್ದರು.

ದಾಸವಾಣಿ ಕಾರ್ಯಕ್ರಮ ಇಂದು



ಹುಬ್ಬಳ್ಳಿ: ಇಲ್ಲಿಯ ಸಂತೋಷ ನಗರದ ಶಕ್ತಿ ಕಾಲೋನಿ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಜೂ. 4ರಂದು ಸಂಜೆ 6 ಗಂಟೆಯಿಂದ 7.30 ರ ವರೆಗೆ ದಾಸವಾಣಿ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮವನ್ನು ರಾಮಚಂದ್ರ ಇಬ್ರಾಹಿಂಪುರ ನಡೆಸಿಕೊಡಲಿದ್ದು, ಹಾರ್ಮೋನಿಯಂ ಮಂಜು ಗೋಕುಲ್ ಮತ್ತು ತಬಲಾದಲ್ಲಿ ಮನುಕುಮಾರ್ ಹಿರೇಮಠ್ ಸಾಥ್ ನೀಡಲಿದ್ದಾರೆ ಎಂದು ರಾಘವೇಂದ್ರ ಸ್ವಾಮಿ ಮಠದ ಅಧ್ಯಕ್ಷ ಗೋವಿಂದಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆರೋಗ್ಯ ತಪಾಸಣೆ ಶಿಬಿರ ನಾಳೆ

ಧಾರವಾಡ: ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಆರೋಗ್ಯ ತಪಾಸಣೆ ಉಚಿತ ಶಿಬಿರ ಜೂ.5ರ ಬೆಳಗ್ಗೆ 11ಕ್ಕೆ ಕೆಲಗೇರಿ ಸಾಯಿನಗರದ ಶಿರಡಿ ಸಾಯಿ ಮಂದಿರದಲ್ಲಿ ಹಮ್ಮಿಕೊಂಡಿದ್ದಾಗಿ ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ ಅಧ್ಯಕ್ಷ ಸುನಿಲ ಬಾಗೇವಾಡಿ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ನವನಗರ ಕ್ಯಾನ್ಸರ್ ಆಸ್ಪತ್ರೆ, ರೋಟರಿ ಕ್ಲಬ್ ಧಾರವಾಡ ಸೆಂಟ್ರಲ್, ಶ್ರೇಯಾ ಕಾಲೇಜು ಮತ್ತು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಶಿರಡಿ ಸಾಯಿ ಬಾಬಾ ಸಂಸ್ಥೆ ಹಾಗೂ ಎಸ್ಡಿಎಂ ಸಂಸ್ಥೆಗಳ ಸಹಯೋಗದಲ್ಲಿ ಈ ಶಿಬಿರ ಆಯೋಜಿಲಾಗಿದೆ ಎಂದರು.

ಶಾಸಕ ಅರವಿಂದ ಬೆಲ್ಲದ ಅವರು ಚಾಲನೆ ನೀಡಲಿದ್ದು, ಪಾಲಿಕೆ ಸದಸ್ಯ ವಿಜಯಾನಂದ ಶೆಟ್ಟಿ, ಶಿರಡಿ ಸಾಯಿ ಬಾಬಾ ಸಂಸ್ಥೆಯ ಅಧ್ಯಕ್ಷ ಮಹೇಶ ಶೆಟ್ಟಿ ಪಾಲ್ಗೊಳ್ಳುವರು. ಅಂದು ಬೆಳಗ್ಗೆ 10ಕ್ಕೆ ಗಣೇಶ ಗುಡಿ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ ನೆರವೇರುವುದಾಗಿ ತಿಳಿಸಿದರು.

ನಿವೃತ್ತ ಎಂಜಿನಿಯರ್ ಆರ್. ಎಂ.ಕುಲಕರ್ಣಿ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ನೇಚರ್ ಫಸ್ಟ್ ಇಕೋ ವಿಲೇಜ್ ಸಂಸ್ಥಾಪಕರಾದ ಪಿ.ವಿ.ಹಿರೇಮಠ, ಪ್ರೊ. ವಾಸುದೇವ ಪರ್ವತಿ ಪಾಲ್ಗೊಳ್ಳಲಿದ್ದು, ರಾಣಿಚನ್ನಮ್ಮ ನಿವಾಸಿಗಳ ಸಂಘದ ಅಧ್ಯಕ್ಷ ರುದ್ರಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಶ್ರೀಯಾ ಆಸ್ಪತ್ರೆಯ ಡಾ.ಸತೀಶ ಇರಕಲ್ ಮಾತನಾಡಿ, ಆರೋಗ್ಯ ಶಿಬಿರದಲ್ಲಿ ಮಹಿಳೆಯರಿಗೆ ವಿಶೇಷವಾಗಿ ಕ್ಯಾನ್ಸರ್ ಪರೀಕ್ಷೆ, ಮಧುಮೇಹ ತಪಾಸಣೆ, ಎಲಬು-ಕೀಲು ಪರೀಕ್ಷೆ, ರಕ್ತ ಪರೀಕ್ಷೆ, ದಂತ ಚಿಕಿತ್ಸೆಯ ಜೊತೆಗೆ ಮಕ್ಕಳ ಆರೋಗ್ಯ ತಪಾಸಣೆ ಕೂಡ ನಡೆಯಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಿದ್ದನಗೌಡ ಪಾಟೀಲ, ಜಯಂತಿಲಾಲ್ ಜೈನ, ಮಾರ್ತಾಂಡಪ್ಪ ಕತ್ತಿ ಇದ್ದರು.



ಬೀದಿಬದಿ ವ್ಯಾಪಾರಿಗಳಿಗಾಗಿ ವಿಶೇಷ ಅಭಿಯಾನ

ಕಲಘಟಗಿ: ಪಟ್ಟಣ ಪಂಚಾಯತ್ ಕಲಘಟಗಿಯ ಡೇನಲ್ಮ ವಿಭಾಗದಿಂದ ಪ್ರಧಾನ ಮಂತ್ರಿಗಳ ಆತ್ಮನಿರ್ಭರ ನಿಧಿ ಯೋಜನೆಯಡಿ (ಪಿಎಂಸ್ವನಿಧಿ) ಬೀದಿಬದಿ ವ್ಯಾಪಾರಿಗಳು ತಮ್ಮ ವ್ಯಾಪಾರವನ್ನು ವಿಸ್ತರಿಸಿಕೊಳ್ಳಲು ಬ್ಯಾಂಕುಗಳ ಮೂಲಕ ಶೇ.7ರ ಬಡ್ಡಿದರದಲ್ಲಿ ಕಿರು ಸಾಲ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಬ್ಯಾಂಕಿನ ಹೆಚ್ಚಿನ ಬಡ್ಡಿಯನ್ನು ಸರಕಾರದ ಮಟ್ಟದಲ್ಲಿ ಪಾವತಿಸಲಾಗುವುದು.

ಕಲಘಟಗಿ ಪಟ್ಟಣ ಪಂಚಾಯತ್ ವ್ಯಾಪ್ತಿಯ ರಹವಾಸಿಗಳು ಹಾಗೂ ಕಲಘಟಗಿ ಪಟ್ಟಣ ವ್ಯಾಪ್ತಿಯಲ್ಲಿ ವ್ಯಾಪಾರ ಮಾಡುವ ಎಲ್ಲ ಬೀದಿಬದಿಯ ಸ್ಥಿರ / ಸಂಚಾರಿ ವ್ಯಾಪಾರಿಗಳು ಹಾಗೂ ಹಾಲು ಮಾರಾಟಗಾರರು, ಟೇಲರ್‌ಗಳು, ಪತ್ರಿಕೆ ವಿತರಕರಿಗೂ ಆರ್ಥಿಕ ಬದ್ರತೆಗಾಗಿ, 1ನೇ ಹಂತದಲ್ಲಿ ರೂ. 15 ಸಾವಿರ ರೂ. ಸಾಲ ನೀಡಿ 12 ಕಂತುಗಳಲ್ಲಿ ಮರುಪಾವತಿಸಿದ ನಂತರ 2ನೇ ಹಂತದಲ್ಲಿ ರೂ.25 ಸಾವಿರ ಸಾಲ ನೀಡಿ ಸದರ ಸಾಲವನ್ನು 18 ಕಂತುಗಳಲ್ಲಿ ಮರುಪಾವತಿಸಿದಲ್ಲಿ 3ನೇ ಹಂತದಲ್ಲಿ ರೂ. 50 ಸಾವಿರ ಸಾಲವನ್ನು 36 ಕಂತುಗಳಲ್ಲಿ ಮರುಪಾವತಿಸಲು ಅವಕಾಶವಿದೆ.

ವ್ಯಾಪಾರದಅನುಕೂಲಕ್ಕಾಗಿಕ್ಯೂಆರ್ ಕೋಡ್ ಬಳಕೆ ಮೂಲಕ ಕ್ಯಾಶ್ ಬ್ಯಾಕ್ ಪಡೆದುಕೊಳ್ಳುವುದು. ಕ್ರೇಡಿಟ್ ಕಾರ್ಡ್, ಸಾಮಾಜಿಕ ಭದ್ರತಾ ಯೋಜನೆಗಳ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು. ಬೀದಿ ಬದಿ ವ್ಯಾಪಾರಸ್ಥರು ಆಧಾರ್ ಕಾರ್ಡ್ ರೇಷನ್ ಕಾರ್ಡ್, ಮತದಾರರ ಗುರುತಿನ ಚೀಟಿ, ಪಾನ್ ಕಾರ್ಡ್, ರಾಷ್ಟ್ರೀಕೃತ ಬ್ಯಾಂಕ್ ಪಾಸ್‌ಬುಕ್, ಆಯುಷ್ಮಾನ ಭಾರತ ಕಾರ್ಡ್, ಈ-ಶ್ರಮ ಕಾರ್ಡ, ಪಿಎಂಜೆಜೆಬಿವೈ ಪಿಎಂಎಸ್ ಬಿವೈ ವಿಮೆ ದಾಖಲಾತಿ ಮಾಹಿತಿ, ವಿಶಿಷ್ಟಚೇತನರಿದ್ದರೆ ಯುಡಿಐಡಿ ಕಾರ್ಡ್, ಆಧಾರ್ ಕಾಡ್‌ನಲ್ಲಿ ಇರುವ ಸಂಖ್ಯೆಯ ಮೊಬೈಲ್ ಈ ಎಲ್ಲ ದಾಖಲಾತಿಗಳೊಂದಿಗೆ ಜೂನ್ 1 ರಿಂದ 30 ರೊಳಗಾಗಿ ಕಲಘಟಗಿ ಪಟ್ಟಣ ಪಂಚಾಯತಿಯ ಡೇನಲ್ಮ ಶಾಖೆಗೆ ಭೇಟಿ ನೀಡಿ ಮಾಹಿತಿ ಪಡೆದು ಸೌಲಭ್ಯವನ್ನು ಪಡೆದುಕೊಳ್ಳಲು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬದುಕು ಬರಹ ಪೂರಕವಾಗಿರಲಿ: ಕುಲಕರ್ಣಿ



ಹುಬ್ಬಳ್ಳಿ: ಜಿಡ್ಡುಗಟ್ಟಿದ ಸಂಪ್ರದಾಯಗಳೊಂದಿಗೆ ಸದಾ ಸೆಣಸಾಡುವ ಮೂಲಕ ಸಾಹಿತ್ಯ ನಿರಂತರ ಹರಿಯುವ ಝರಿಯಾಗಬೇಕು ಎಂದು ಚಿಂತಕ ಕೃಷ್ಣಮೂರ್ತಿ ಕುಲಕರ್ಣಿ ಹೇಳಿದರು.

ಉಣಕಲ್ಲ ಕ್ರಾಸ್ ಕನಕ ನಿಲಯದಲ್ಲಿ (ಶಾಂತಣ್ಣ ಕಡಿವಾಲ ಅವರ ನಿವಾಸ) ಸೋಮವಾರ ಬೆಳಿಗ್ಗೆ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ ಹಮ್ಮಿಕೊಂಡಿದ್ದ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಡಾ.ಶಾಂತಣ್ಣ ಕಡಿವಾಲ ಅವರ 64 ಜನ್ಮದಿನದ ಸಂಭ್ರಮ ಸಮಾರಂಭದಲ್ಲಿ ಮಾತನಾಡಿದರು.

ಹಿರಿಯ ಆರ್. ಎಂ.ಹಿರೇಮಠ ಅಧ್ಯಕ್ಷತೆ ವಹಿಸಿದ್ದರು. ಕಸಾಪ ಜಿಲ್ಲಾಧ್ಯಕ್ಷ ಲಿಂಗರಾಜ ಅಂಗಡಿ, ಚನ್ನಬಸಪ್ಪ ಧಾರವಾಡಶೆಟ್ರು, ನಿವೃತ್ತ ಸೈನಿಕಎಂ.ಎಚ್. ಚಳ್ಳಮರದ, ಕೌಜಲಗಿ, ವಿ.ಎಂ.ಹಿರೇಮಠ ಮಾತನಾಡಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿ.ಜಿ.ಪಾಟೀಲ ಸ್ವಾಗತಿಸಿದರು. ತಾಲೂಕು ಘಟಕದ ಅಧ್ಯಕ್ಷ ಮೃತ್ಯುಂಜಯ ಮಟ್ಟಿ ವಂದಿಸಿದರು.

ದೇವಸ್ಥಾನದ ಜೀರ್ಣೋದ್ಧಾರಕ್ಕೆ ಸಹಾಯ

ಕಲಘಟಗಿ: ಶ್ರೀ ಕ್ಷೇತ್ರ ಧರ್ಮಸ್ಥಳ ಸಂಸ್ಥೆ ಕಲಘಟಗಿ ವತಿಯಿಂದ ಅಂಚಟಗೇರಿ ವಲಯದ ಗಿರಿಯಾಳ ಗ್ರಾಮದ ಶಬರಿ ಗಿರಿ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಕ್ಷೇತ್ರದಿಂದ ಮಂಜೂರಾತಿ ಆದ 1 ಲಕ್ಷ ರೂ.ನ ಡಿಡಿ ವಿತರಣೆಯನ್ನು ತಾಲೂಕಿನ ಯೋಜನಾಧಿಕಾರಿ ಚಂದ್ರಹಾಸ ನಾಯಿಕ ದೇವಸ್ಥಾನದ ಕಮಿಟಿಯವರಿಗೆ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಯೋಜನಾಧಿಕಾರಿಗಳು ಕ್ಷೇತ್ರದ ವತಿಯಿಂದ ಸಿಗುವ ಸೌಲಭ್ಯಗಳು ಹಾಗೂ ಯೋಜನೆಯ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ದೇವಸ್ಥಾನದ ಅಧ್ಯಕ್ಷ ನಾರಾಯಣ ಸ್ವಾಮಿಗಳು ಹಾಗೂ ಕಮಿಟಿಯವರು, ಊರಿನಗಣ್ಯರು, ಒಕ್ಕೂಟದ ಪದಾಧಿಕಾರಿಗಳು, ವಲಯದ ಮೇಲ್ವಿಚಾರಕ ನವೀನ ಹಿರೇಮಠ, ಸೇವಾ ಪ್ರತಿನಿಧಿ ಅನ್ನಪೂರ್ಣ ರೇಖಾ, ಸಿಎಸ್‌ಇ ಸೇವಾದಾರಾಧಾ ನಂದಾ ಪಾಟೀಲ ಉಪಸ್ಥಿತರಿದ್ದರು.



ಸಚಿವ ಸ್ಥಾನ ನೀಡಲು ಆಗ್ರಹಿಸಿ ಪ್ರತಿಭಟನೆ



ಹುಬ್ಬಳ್ಳಿ: ಮೂರು ಬಾರಿ ಶಾಸಕರಾಗಿ ಆಯ್ಕೆಯಾದ ಪ್ರಸಾದ ಅಬ್ಬಯ್ಯ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿ, ನಗರದ ವಿವಿಧ ದಲಿತ ಸಂಘ ಸಂಸ್ಥೆಗಳ ಮಹಾಮಂಡಳ, ಸಮತಾ ಸೇನಾ ಹಾಗೂ ಯೂತ್ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಇಲ್ಲಿಯ ಹಳೇ ಹುಬ್ಬಳ್ಳಿ ಇಂಡಿ ಪಂಪ್ ವೃತ್ತದಲ್ಲಿ ಸಮಾವೇಶಗೊಂಡ ನೂರಾರು ಪ್ರತಿಭಟನಾಕಾರರು, ರಸ್ತೆ ತಡೆದು ಪ್ರಸಾದ ಅಬ್ಬಯ್ಯ ಅವರಿಗೆ ಸಚಿವ ಸ್ಥಾನ ನೀಡಲೇ ಬೇಕು ಎಂದು ಆಗ್ರಹಿಸಿದರು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ನೇತೃತ್ವದ ನೂತನ ಸಚಿವ ಸಂಪುಟದ ಮೊದಲ ಪಟ್ಟಿಯಲ್ಲಿ ಮುಂಬೈ ಕರ್ನಾಟಕದ ಭಾಗಕ್ಕೆ ಪರಿಶಿಷ್ಟ ಜಾತಿಯ (ಚಲವಾದಿ) ಸಮುದಾಯಕ್ಕೆ ಯಾವುದೇ ಸಚಿವ ಸ್ಥಾನ ದೊರೆತಿಲ್ಲ, 2ನೇ ಪಟ್ಟಿಯಲ್ಲಿಯಾದರೂ ಪ್ರಸಾದ ಅಬ್ಬಯ್ಯ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು. ವಿವಿಧ ಸಂಘಟನೆಗಳ ಪ್ರಮುಖರಾದ ಗುರುನಾಥ ಉಳ್ಳಿಕಾಶಿ, ಇಮ್ರಾನ್ ಎಲಿಗಾರ್, ಸಂತೋಷ ಪೂಜಾರ್, ಶ್ರೀನಿವಾಸ ಬೆಳದಡಿ, ದೊರೆರಾಜ ಮಣಿಕುಂಟ್ಲ, ಇಕ್ಬಾಲ್, ಇಮ್ತಿಯಾಜ್ ಬಿಜಾಪುರ, ಇಮಾಮ್ ಕೊಳೂರು ಇತರರಿದ್ದರು.

ಕಿರುಸುದ್ದಿ

ರಾಜ್ಯದ ಅಭಿವೃದ್ಧಿಗೆ ಕೇಂದ್ರ ಬೆಂಬಲ: ಜೋಶಿ

ನವದೆಹಲಿ: ಕರ್ನಾಟಕದ ಸಮಗ್ರ ಅಭಿವೃದ್ಧಿ, ಜನಕಲ್ಯಾಣ ಕಾರ್ಯಗಳಿಗೆ ಕೇಂದ್ರ ಸರ್ಕಾರದ ಬೆಂಬಲ, ಸಹಕಾರ ಸದಾ ಇರಲಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಹ್ಲಾದ ಜೋಶಿ, ನೂತನ ಸಿಎಂ-ಡಿಸಿಎಂ ಗೆ ಅಭಯ ನೀಡಿದ್ದಾರೆ.

ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಡಿ.ಕೆ.ಶಿವಕುಮಾರ ಮತ್ತು ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ ಅವರಿಗೆ ಅಭಿನಂದನೆ ಸಲ್ಲಿಸಿ ಈರ್ವರಿಗೂ ಶುಭ ಕೋರಿದ್ದಾರೆ ಸಚಿವ ಜೋಶಿ, ಕೇಂದ್ರ ಸರ್ಕಾರದಿಂದ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಎಂದಿನಂತೆ ಒತ್ತು ನೀಡಲಾಗುವುದು ಮತ್ತು ಜನಕಲ್ಯಾಣದ ಕಾರ್ಯಗಳಿಗೆ ಸಂಪೂರ್ಣ ಸಹಕಾರ ಇರಲಿದೆ. ಈರ್ವರೂ ನಾಯಕರು ದೂರದೃಷ್ಟಿ ಉಳ್ಳವರಾಗಿ ರಾಜ್ಯವನ್ನು ಅಭಿವೃದ್ಧಿ ಪಥದತ್ತ ಮುನ್ನಡೆಸಲಿ ಎಂದು ಶುಭ ಹಾರೈಸಿದ್ದಾರೆ.

ಡಿವೈಡರ್‌ಗೆ ಕಾರು ಡಿಕ್ಕಿ: ಯುವತಿ ಸಾವು

ಅಂಕೋಲಾ: ರಾಷ್ಟ್ರೀಯ ಹೆದ್ದಾರಿಯ ನಡುವಿನ ಡಿವೈಡರ್‌ಗೆ ಕಾರು ಡಿಕ್ಕಿ ಹೊಡೆದು ಪಲ್ಟಿಯಾಗಿ ಓರ್ವ ಯುವತಿ ಮೃತಪಟ್ಟು ನಾಲ್ಕು ಜನ ಯುವಕರು ತೀವ್ರ ಗಾಯಗೊಂಡ ಘಟನೆ ತಾಲೂಕಿನ ಬೆಳಸೆ ಬಳಿ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಸಂಭವಿಸಿದೆ.

ತಮಿಳುನಾಡಿನ ರುಜುಲಾ ಮಥ್ಯೈಲಗಮ್ (26) ಮೃತ ಯುವತಿಯಾಗಿದ್ದು ತಮಿಳುನಾಡಿನ ಹರಿಹರನ್ ಸುಂದರ್ ಪಾಂಡ್ಯನ್ (23) ಅಕ್ಷಯ ಮಥ್ಯೈಲಗಮ್ (23) ವಿಘ್ನೇಶ ಅಣ್ಣಾದೊರೈ (23) ಮತ್ತು ಕಾರು ಚಾಲಕ ಶರಣ ಪಾಂಡ್ಯನ್ (26) ತೀವ್ರವಾಗಿ ಗಾಯಗೊಂಡಿದ್ದಾರೆ.

ಕೆ.ಎ51 ಎನ್5679 ನೋಂದಣಿ ಸಂಖ್ಯೆಯ ಕಾರಿನಲ್ಲಿ ಅಂಕೋಲಾ ಕಡೆಯಿಂದ ಕುಮಟಾ ರಾಷ್ಟ್ರೀಯ ಹೆದ್ದಾರಿಯಲ್ಲಿ ಅತಿವೇಗ ಮತ್ತು ನಿರ್ಲಕ್ಷ್ಯದಿಂದ ಕಾರು ಚಲಾಯಿಸಿ ನಿಯಂತ್ರಣ ಕಳೆದುಕೊಂಡು ಡಿವೈಡರಿಗೆ ಡಿಕ್ಕಿ ಹೊಡೆದು ಕಾರು ಪಲ್ಟಿಯಾಗಿ ಅಪಘಾತ ಸಂಭವಿಸಿದೆ.

ಮೃತ ಯುವತಿ ಅಮೇರಿಕಾದಲ್ಲಿ ಐಟಿ ಕಂಪನಿಯೊಂದರ ಉದ್ಯೋಗಿ ಎಂದು ತಿಳಿದು ಬಂದಿದೆ. ಅಂಕೋಲಾ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿದ್ದಾರೆ.

ಲಾರಿ ಡಿಕ್ಕಿ: ಚಾಲಕ ಸಾವು

ಹುಬ್ಬಳ್ಳಿ: ಲಾರಿ ಡಿಕ್ಕಿ ಹೊಡೆದ ಪರಿಣಾಮ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಕಾಕ್ಕೇರಾದ ನಿವಾಸಿ, ಚಾಲಕ ಅಂಬರಯ್ಯ ಸ್ವಾಮಿ ಹಿರೇಮಠ(30) ಮೃತಪಟ್ಟಿರುವ ಘಟನೆ ಗೋಕುಲ ರಸ್ತೆ ಕೈಗಾರಿಕಾ ಪ್ರದೇಶದ ರಿಲಾನ್ಸ್ ಸ್ಮಾರ್ಟ್ ಹತ್ತಿರ ನಡೆದಿದೆ.

ಭಾನುವಾರ ಮಧ್ಯೆ ರಾತ್ರಿ ಅಂಬರಯ್ಯಸ್ವಾಮಿ ಅವರು ರಿಲಾನ್ಸ್ ಸ್ಮಾರ್ಟ್ ಎದುರಿನ ರಸ್ತೆಯ ಪಕ್ಕದ ಇಳಿಜಾರಿನಲ್ಲಿ ನಿಲ್ಲಿಸಿದ್ದರು. ಮರುದಿನ ಸೋಮವಾರ ಲಾರಿ ಸ್ಟಾರ್ಟ್ ಮಾಡಲು ಅದರ ಮುಂದೆ ನಿಂತಾಗ ಏಕಾಏಕಿ ಲಾರಿ ಉರುಳಿದ ಪರಿಣಾಮ ಮರ ಹಾಗೂ ಲಾರಿ ಮಧ್ಯೆ ಸಿಲುಕಿಕೊಂಡು ಮೃತಪಟ್ಟಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಗೋಕುಲ ರಸ್ತೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮಹಿಳೆ ಮೇಲೆ ಹಲ್ಲೆ

ಮಹಿಳೆಯೊಬ್ಬರು ವೃದ್ಧಾಶ್ರಮ ನಿರ್ಮಿಸುತ್ತಿರುವ ಕಾರಣ ಸಹಿಸದ 10-12 ಜನರ ಗುಂಪುವೊಂದು ಮಾನಭಂಗ ಮಾಡಿದ್ದಲ್ಲದೇ ಹಲ್ಲೆ ನಡೆಸಿ ಕೊಲೆ ಮಾಡಲು ಯತ್ನಿಸಿದ ಪ್ರಕರಣ ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ರಾಯನಾಳ ಗ್ರಾಮದ ನಿವಾಸಿ ಜಯಶ್ರೀ ಕಮ್ಮಾರ ಎಂಬುವರ ಮೇಲೆ ಹಲ್ಲೆ ಮಾಡಲಾಗಿದ್ದು, ಹಳೇ ಹುಬ್ಬಳ್ಳಿ ಅಬ್ದುಲ್ ಮಕಾನದಾರ ಹಾಗೂ ಆತನ ಪತ್ನಿ, ಮುನ್ನಾ ಹಾಗೂ ಮುನ್ನಾ ಪತ್ನಿ ಸೇರಿ 10-12 ಜನರ ವಿರುದ್ಧ ದೂರು ದಾಖಲಾಗಿದೆ.

ಹಳೇ ಹುಬ್ಬಳ್ಳಿಯ ಆಕಾಶ ಕಾಲೋನಿಯಲ್ಲಿ ನಿರ್ಮಿಸುತ್ತಿರುವ ವೃದ್ಧಾಶ್ರಮಕ್ಕೆ ಅಕ್ರಮವಾಗಿ ಪ್ರವೇಶ ಮಾಡಿ, ಕುತ್ತಿಗೆ ಹಿಸುಕಿ ಹಲ್ಲೆ ನಡೆಸಿ ಕೊಲೆ ಮಾಡಲು ಯತ್ನಿಸಿದಲ್ಲದೇ, ಮಾನಭಂಗ ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಸಂಸದ ಜಗದೀಶ ಶೆಟ್ಟರ ಅಭಿಪ್ರಾಯ

ಬಿಜೆಪಿ ತತ್ವಾಧಾರಿತ ಪಕ್ಷ



ವಿಜಯಪುರ: ಬಿಜೆಪಿ ತತ್ವಾಧಾರಿತ, ದೇಶಭಕ್ತಿಯ ಚಿಂತನೆಯುಳ್ಳ ಏಕೈಕ ರಾಜಕೀಯ ಪಕ್ಷ ಬಿಜೆಪಿ ಎಂದು ಬೆಳಗಾವಿ ಸಂಸದ ಜಗದೀಶ ಶೆಟ್ಟರ ಹೇಳಿದರು.

ಕೊಲ್ಹಾಪೂರಕನೇರಿಮಠದ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಮಠದ ಸನ್ನಿಧಿಯಲ್ಲಿ ನಡೆದ ವಿಜಯಪುರ ಜಿಲ್ಲಾ ಬಿಜೆಪಿ ಪ್ರಶಿಕ್ಷಣ ಶಿಬಿರವನ್ನು ವಿಧ್ಯುಕ್ತವಾಗಿ ಚಾಲನೆ ನೀಡಿ ಮಾತನಾಡಿದ ಅವರು, ಬಿಜೆಪಿ ಎಂಬುದು ತತ್ವಾಧಾರಿತ ಸಿದ್ಧಾಂತವುಳ್ಳ ಪಕ್ಷ. ಆದರೆ, ಕಾಂಗ್ರೆಸ್ ಕೇವಲ ಕುಟುಂಬ ಹಾಗೂ ವೋಟ್ ಬ್ಯಾಂಕ್ ಆಧಾರಿತ ರಾಜಕಾರಣವನ್ನು ಮೈಗೂಡಿಸಿಕೊಂಡಿದೆ. ಕೋಟ್ಯಂತರ ಕಾರ್ಯಕರ್ತರನ್ನು ಹೊಂದಿ ಸಿದ್ಧಾಂತದೊಂದಿಗೆ ಬದ್ಧವಾಗಿ ನಡೆಯುವ ಏಕೈಕ ರಾಜಕೀಯ ಪಕ್ಷ ಬಿಜೆಪಿ ಎಂದರು.

ಮುಂಬರುವ ಚುನಾವಣೆಗೆ ಬಿಜೆಪಿ ಕಾರ್ಯಕರ್ತರು ಸಿದ್ಧರಾಗಬೇಕು. ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆ ಜೋರಾಗಿದೆ. ಅಧಿಕಾರ ಕಚ್ಚಾಟದಲ್ಲಿಯೇ ಕಾಂಗ್ರೆಸ್ ತೊಡಗಿದೆ. ಹೀಗಾಗಿ ಬಿಜೆಪಿ ಬಗ್ಗೆ ಜನತೆಯಲ್ಲಿ ಒಲವಿದೆ. ಹೀಗಾಗಿ ಒಗ್ಗಟ್ಟು ಮಂತ್ರ ಜಪಿಸುವ ಮೂಲಕ ಬಿಜೆಪಿ ಕಾರ್ಯಕರ್ತರು ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎಂದರು.

ಬಿಜೆಪಿಕಾರ್ಯಕರ್ತರಲ್ಲಿಸಂಘಟನಾತ್ಮಕ ಶಕ್ತಿ, ಪ್ರಚಾರ ಕಾರ್ಯವೈಖರಿ ವೃದ್ಧಿಗಾಗಿ ಈ ಪ್ರಶಿಕ್ಷಣಗಳು ಸಹಕಾರಿ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ಮಾತನಾಡಿ, ಕನ್ಹೇರಿ ಕಾಡಸಿದ್ದೇಶ್ವರ ಮಠ ಆಧ್ಯಾತ್ಮಿಕತೆಯ ದಿವ್ಯತೆಯ ಪಾವನ ನೆಲ. ಈ ನೆಲದಲ್ಲಿ ಅದ್ಭುತ ಶಕ್ತಿ ಇದೆ. ಕಾರ್ಯಕರ್ತರು ಈ ಅದ್ಭುತ ಅಧ್ಯಾತ್ಮಿಕತೆಯ ದಿವ್ಯಾನುಭವದಲ್ಲಿ ಪಕ್ಷ ಸಂಘಟನೆಯ ವಿಷಯಗಳನ್ನು ತಿಳಿದುಕೊಳ್ಳಲಿ ಎಂಬ ಆಶಯದಿಂದ ಈ ಬಾರಿ ಈ ಪ್ರಶಿಕ್ಷಣ ಶಿಬಿರವನ್ನು ಮಠದಲ್ಲಿ ಆಯೋಜಿಸಲಾಗಿದೆ ಎಂದರು.

ಮಾಜಿ ಶಾಸಕ ಹಾಗೂ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್, ವಿಭಾಗ ಸಹ ಪ್ರಭಾರಿ ಬಸವರಾಜ ಯಂಕಂಚಿ, ಮಾಜಿ ಸಚಿವರಾದ ಎಸ್.ಕೆ.ಬೆಳ್ಳುಬ್ಬಿ, ರಮೇಶ ಭೂಸನೂರ, ಸಾವಯವ ಬೀಜ ಪ್ರಮಾಣನ ಸಂಸ್ಥೆ ಮಾಜಿ ಅಧ್ಯಕ್ಷ ವಿಜುಗೌಡ ಪಾಟೀಲ, ಮೇಯರ್ ಎಂ.ಎಸ್ ಕರಡಿ, ಕಾಸುಗೌಡ ಬಿರಾದಾರ, ಸಂಜೀವ ಐಹೊಳಿ, ಚಿದಾನಂದ ಚಲವಾದಿ, ಅನೀಲ್ ಜಮಾದಾರ, ಮಳುಗೌಡ ಪಾಟಲ, ವೆಂಕಟೇಶ ರಂಗಣ್ಣವರ, ಸಾಬು ಮಾಶ್ಯಾಳ, ಈರಣ್ಣ ರಾವೂರ ವೇದಿಕೆ ಮೇಲೆ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಶಿಬಿರಾರ್ಥಿಗಳು ಪಾಲಿಗೆ ಸದಸ್ಯರು ಬಿಜೆಪಿ ಮುಖಂಡರು ಪಾಲ್ಗೊಂಡಿದ್ದರು.

ಜಿಲ್ಲೆಗೆ ಇನ್ನೊಂದು ಸಚಿವ ಸ್ಥಾನ ಬೇಡಿಕೆ ಇದೆ: ಎಂಬಿಪಾ

ವಿಜಯಪುರ: ಜಿಲ್ಲೆಗೆ ಇನ್ನೊಂದು ಸಚಿವ ಸ್ಥಾನ ಬೇಡಿಕೆ ಇದ್ದು, ಜಿಲ್ಲೆಗೆ ಇನ್ನೊಂದು ಸಚಿವ ಸ್ಥಾನ ನೀಡುವಂತೆ ಹೈಕಮಾಂಡ್ ಮುಖಂಡರಿಗೆ ವಿನಂತಿಸಿದ್ದೇನೆ ಎಂದು ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.



ಸಚಿವರಾಗಿ ಪ್ರಮಾಣ ಸ್ವೀಕರಿಸುವ ಮುಂಚೆ ಬೆಂಗಳೂರಿನ ತಮ್ಮ ನಿವಾಸದಲ್ಲಿ ಅಭಿನಂದನೆ ಸಲ್ಲಿಸಿದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಮತ್ತು ಅಭಿಮಾನಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ವಿಜಯಪುರ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದಿಂದ 6 ಜನ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಜಿಲ್ಲೆಯ ಅಭಿವೃದ್ಧಿಯ ದೃಷ್ಟಿಯಿಂದ ಇನ್ನೊಂದು ಸಚಿವ ಸ್ಥಾನ ನೀಡುವಂತೆ ಹೈಕಮಾಂಡ್ ಮುಖಂಡರಿಗೆ ವೈಯಕ್ತಿಕವಾಗಿ ವಿನಂತಿಸಿದ್ದೇನೆ. ಮುಂದಿನ ಸಚಿವ ಸಂಪುಟದಲ್ಲಿ ಅದು ಈಡೇರಲಿದೆ ಎಂದರು.

ಈ ಹಿಂದೆ 5 ವರ್ಷ ಜಲಸಂಪನ್ಮೂಲ ಸಚಿವನಾಗಿ, ಅಲ್ಪ ಅವಧಿಗೆ ಗೃಹ ಸಚಿವನಾಗಿ ಮತ್ತು ಮೂರು ವರ್ಷ ಕೈಗಾರಿಕೆ ಸಚಿವನಾಗಿ ಮಾಡಿದ ಕಾರ್ಯ ನನಗೆ ತೃಪ್ತಿ ತಂದಿದೆ. ಸಿದ್ದೇಶ್ವರ ಮಹಾಸ್ವಾಮೀಜಿಯವರ ಆಶೀರ್ವಾದದಿಂದ ಸಿಕ್ಕ ಅವಕಾಶವನ್ನು ಸದುಪಯೋಗ ಪಡಿಸಿಕೊಂಡಿದ್ದೇನೆ. ವಿಜಯಪುರ ಜಿಲ್ಲೆಯ ಜನತೆಯ ಆಶೀರ್ವಾದದಿಂದ ಇದೀಗ ಮತ್ತೆ ಸಚಿವನಾಗಿದ್ದೇನೆ. ಖಾತೆ ಯಾವುದು ಸಣ್ಣದಲ್ಲ, ದೊಡ್ಡದಲ್ಲ. ಗ್ರಂಥಾಲಯ ಸಚಿವನಾದರೂ ಪ್ರತಿ ಹಳ್ಳಿಗಳಲ್ಲಿ ಗ್ರಂಥಾಲಯ ತೆರೆದು ಜ್ಞಾನದ ಪ್ರಸಾರ ಮಾಡಿ, ಆ ಇಲಾಖೆಯ ಘನತೆಯನ್ನು ಹೆಚ್ಚಿಸಬಹುದು ಎಂದರು.

ವಿಜಯಪುರ ಜಿಲ್ಲೆಯಲ್ಲಿ 8 ಮತಕ್ಷೇತ್ರಗಳು ಇದ್ದು, ಮುಂದಿನ ಬಾರಿ ಎಲ್ಲ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷದಿಂದ ಶಾಸಕರ ಆಯ್ಕೆಯಾಗಲು ನಾವೆಲ್ಲರೂ ಶ್ರಮಿಸಬೇಕಿದೆ ಎಂದರು.

ಈ ಸಂದರ್ಭದಲ್ಲಿ ಪಕ್ಷದ ಮುಖಂಡರಾದ ಎಸ್.ಎಂ.ಪಾಟೀಲ ಗಣಿಯಾರ, ಮಾಜಿ ಶಾಸಕ ರಾಜು ಆಲಗೂರ, ಹಿರಿಯ ನ್ಯಾಯವಾದಿ ಎಸ್.ಎಸ್.ಛಾಯಾಗೋಳ, ಅಹಿಂದ ಮುಖಂಡ ಸೋಮನಾಥ ಕಳ್ಳಿಮನಿ ಮಾತನಾಡಿ, ಎಂ.ಬಿ.ಪಾಟೀಲರಿಗೆ ಅಭಿನಂದಿಸಿದರು.

ತಿಕೋಟಾ-ಬಬಲೇಶ್ವರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಸಿದ್ದು ಗೌಡನವರ, ಈರಗೊಂಡ ಬಿರಾದಾರ, ಮುಖಂಡರಾದ ಜಿ.ಪಂ.ಮಾಜಿ ಅಧ್ಯಕ್ಷರಾದ ಸೋಮನಾಥ ಬಾಗಲಕೋಟ, ಬಸವರಾಜ ದೇಸಾಯಿ ಜೈನಾಪುರ, ವಿ.ಎಸ್. ಪಾಟೀಲ, ವಿಡಿಎ ಅಧ್ಯಕ್ಷ ಗಂಗಾಧರ ಸಂಬಣ್ಣಿ, ಸಂತೋಷ ಹೊಕ್ರಾಣಿ, ಚೆನ್ನು ವಾರದ, ಆರ್.ಜೆ.ಯರನಾಳ, ಜಕ್ಕಪ್ಪ ಯಡವೆ ಸೇರಿದಂತೆ ವಿಜಯಪುರ, ಬಾಗಲಕೋಟ, ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳಿಂದ ಆಗಮಿಸಿದ ನೂರಾರು ಹಿರಿಯರು, ಕಾರ್ಯಕರ್ತರು, ಅಭಿಮಾನಿಗಳು ಇದ್ದರು.

ಗಣೇಶ ಚಿತ್ರಗಾರರ ಹಳೆಯ ಭವಿಷ್ಯವಾಣಿ ಚರ್ಚೆ



ಕಮತಗಿ: ನೂತನ ರಾಜ್ಯದ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ ಪ್ರಮಾಣವಚನ ಸ್ವೀಕರಿಸುತ್ತಿರುವ ಕಮತಗಿ, ಪಟ್ಟಣಕ್ಕೆ ಭೇಟಿ ಹಿನ್ನೆಲೆಯಲ್ಲಿ ಬಾಗಲಕೋಟ ಜಿಲ್ಲೆಯ ಕಮತಗಿ ಪಟ್ಟಣದ ನಿಮಿಷಾಂಬ ಜ್ಯೋತಿಷ್ಯಾಲಯದ ಜ್ಯೋತಿಷಿ ಡಾ.ಗಣೇಶ ಚಿತ್ರಗಾರ ಅವರು ತಮ್ಮ ಹಿಂದಿನ ಭೇಟಿಗಳು ಮತ್ತು ಪತ್ರವ್ಯವಹಾರದ ಕುರಿತು ಮಾಹಿತಿ ಹಂಚಿಕೊಂಡಿದ್ದಾರೆ.

ಪತ್ರಿಕಾ ಪ್ರಕಟಣೆ ಮೂಲಕ ಮಾಹಿತಿ ಹಂಚಿಕೊಂಡ ಅವರು, ಅವರ ಸಹೋದರ ಅಶೋಕ ಚಿತ್ರಗಾರ ಅವರ ವಿವಾಹ ನಡೆದ ಸಂದರ್ಭದಲ್ಲಿ ಶುಭಾಶಯ ಕೋರಲು ಡಿ.ಕೆ.ಶಿವಕುಮಾರ ಅವರು 2013 ರ ನವೆಂಬರ್ 13ರಂದು ಪ್ರಥಮ ಬಾರಿಗೆ ಕಮತಗಿ ಪಟ್ಟಣಕ್ಕೆ ಭೇಟಿ ನೀಡಿದ್ದರು. ಈ ವೇಳೆ ಅವರು ಸುಮಾರು ಮೂರು ಗಂಟೆಗಳ ಕಾಲ ಡಾ. ಗಣೇಶ ಚಿತ್ರಗಾರ ಅವರೊಂದಿಗೆ ವೈಯಕ್ತಿಕ ಬದುಕು, ರಾಜ್ಯ ರಾಜಕೀಯದ ಬೆಳವಣಿಗೆಗಳು ಹಾಗೂ ಕಾಂಗ್ರೆಸ್ ಪಕ್ಷದ ಭವಿಷ್ಯದ ಕುರಿತು ಚರ್ಚೆ ನಡೆಸಿ ಸಲಹೆ-ಸೂಚನೆಗಳನ್ನು ಪಡೆದಿದ್ದರು ಎಂದು ತಿಳಿಸಲಾಗಿದೆ.

ಇದೇ ವೇಳೆ, 2023 ಏಪ್ರಿಲ್ 3ರಂದು ಡಿ.ಕೆ.ಶಿವಕುಮಾರ ಅವರಿಗೆ ಬರೆದಿದ್ದ ಪತ್ರದಲ್ಲಿ, ಕಾಂಗ್ರೆಸ್ ಪಕ್ಷ ಅವರ ನೇತೃತ್ವದಲ್ಲಿ ನಡೆಯುವ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಪಡೆಯಲಿದೆ ಎಂದು ಉಲ್ಲೇಖಿಸಲಾಗಿತ್ತು ಎಂದು ಗಣೇಶ ಚಿತ್ರಗಾರ ತಿಳಿಸಿದ್ದಾರೆ.

ಅಲ್ಲದೆ, 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ 117 ರಿಂದ 127 ಸ್ಥಾನಗಳು ಲಭಿಸುವ ಸಾಧ್ಯತೆಯಿದೆ ಎಂದು ಅಭಿಪ್ರಾಯವನ್ನು ಪತ್ರದಲ್ಲಿ ವ್ಯಕ್ತಪಡಿಸಲಾಗಿತ್ತು ಎಂದು ಅವರು ತಿಳಿಸಿದ್ದಾರೆ.

ಜೊತೆಗೆ ಡಿ.ಕೆ.ಶಿವಕುಮಾರ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಬಳಿಕ ಬಾಗಲಕೋಟೆ ಜಿಲ್ಲೆಯ ಶಕ್ತಿಪೀಠವಾದ ಬಾದಾಮಿ ಬನಶಂಕರಿ ದೇವಿಯ ದರ್ಶನ ಪಡೆಯಬೇಕು ಆಶೀರ್ವಾದ ಎಂಬ ಸಲಹೆಯನ್ನೂ ಪತ್ರದಲ್ಲಿ ಉಲ್ಲೇಖಿಸಲಾಗಿತ್ತು ಎಂದು ಗಣೇಶ ಚಿತ್ರಗಾರ ತಿಳಿಸಿದ್ದಾರೆ.

ಜನಸೇವೆಗೆ ಅವಕಾಶ ನೀಡಿದ್ದಕ್ಕಾಗಿ ಪಕ್ಷಕ್ಕೆ ಧನ್ಯವಾದ ಅರ್ಪಿಸಿದ ಪ್ರಿಯಾಂಕ್ ಖರ್ಗೆ



ಬೆಂಗಳೂರು/ಕಲಬುರಗಿ: ಕರ್ನಾಟಕ ಸರ್ಕಾರದ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಅವರ ನೂತನ ಸಚಿವ ಸಂಪುಟದಲ್ಲಿ ಮತ್ತೊಮ್ಮೆ ಜನಸೇವೆ ಮಾಡಲು ಅವಕಾಶ ಕಲ್ಪಿಸಿದ ಕಾಂಗ್ರೆಸ್ ಪಕ್ಷಕ್ಕೆ ಹೃದಯಪೂರ್ವಕ ಧನ್ಯವಾದಗಳು ಎಂದು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ನಿಕಟಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಕಳೆದ ಮೂರು ವರ್ಷಗಳಿಂದ ನೀಡಿದ ಜವಾಬ್ದಾರಿಯನ್ನು ಶ್ರದ್ಧೆ ಮತ್ತು ಪ್ರಾಮಾಣಿಕವಾಗಿ ಪೂರೈಸಿದ್ದೇನೆ. ಅದಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಐಟಿಬಿಟಿ ಇಲಾಖೆಯ ಪ್ರಗತಿಯೇ ಸಾಕ್ಷಿ ಎಂದು ತಮ್ಮ ಫೇಸ್ ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ಇದೀಗ ನೂತನ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ನೇತೃತ್ವದ ಸಚಿವ ಸಂಪುಟದ ಭಾಗವಾಗಿರುವುದು ನಿಜಕ್ಕೂ ಸಂತಸ ನೀಡಿದೆ. ಪಕ್ಷ ಹಾಗೂ ಮುಖ್ಯಮಂತ್ರಿಗಳು ವಹಿಸುವ ಯಾವುದೇ ಹೊಣೆಗಾರಿಕೆಯನ್ನು ನಿಭಾಯಿಸಲು ನಾನು ಬದ್ಧನಾಗಿರುತ್ತೇನೆ. ಇದಕ್ಕೆ ಕಾರಣೀಭೂತರಾದ ಕಾಂಗ್ರೆಸ್ ನಾಯಕರಿಗೆ ಹಾಗೂ ಕಾರ್ಯಕರ್ತರಿಗೆ, ಕರ್ನಾಟಕದ ಜನತೆಗೆ, ವಿಶೇಷವಾಗಿ ಕಲಬುರಗಿ ಮತ್ತು ಚಿತ್ತಾಪುರದ ಜನತೆಗೆ ಕೃತಜ್ಞತೆಗಳು ಎಂದ ಅವರು, ಇದು ಆಳುವ ಸರ್ಕಾರವಲ್ಲ, ಆಲಿಸುವ ಸರ್ಕಾರ ಎನ್ನುವ ತತ್ವವನ್ನು ಪರಿಪಾಲಿಸುತ್ತೇನೆ ಎಂದು ಹೇಳಿದ್ದಾರೆ.

ಎಐಗಿಂತ ಜಿಐ ಮೇಲು: ಪರ್ತಗಾಳಿ ಶ್ರೀ



ಭಟ್ಕಳ: ಮಾನವನ ಸೃಷ್ಟಿಗೆ ಕಾರಣೀಕರ್ತನಾದ ದೇವರು ಒಬ್ಬನೇ. ಅಲ್ಲಿ ಅಂತರ್ಜಾಲವೂ ಇಲ್ಲ, ತಂತ್ರಜ್ಞಾನವೂ ಇಲ್ಲ, ಆದ್ದರಿಂದ ಎಐಗಿಂತ ಜಿಐ (ಗಾಡ್ಸ್ ಇಂಟೆಲಿಜೆನ್ಸ್) ಅತ್ಯುನ್ನತವಾದುದು ಎಂದು ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠದ ಶ್ರೀಮದ್ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿ ಹೇಳಿದರು.

ಅವರು ಪಟ್ಟಣದ ವಡೇರ ಮಠದಲ್ಲಿ ಭಕ್ತರನ್ನುದ್ದೇಶಿಸಿ ಆಶೀರ್ವಚನ ನೀಡಿದರು. ಇಂದಿನ ಯುಗದಲ್ಲಿ ಕೃತಕ ಬುದ್ಧಿಮತ್ತೆ (ಎಐ) ನಿರ್ಮಾಣಕ್ಕೆ ಹಲವು ದೇಶಗಳ ವಿಜ್ಞಾನಿಗಳು, ಎಂಜಿನಿಯರ್‌ಗಳು ಮತ್ತು ತಂತ್ರಜ್ಞರ ಪರಿಶ್ರಮ ಅಗತ್ಯವಾಗುತ್ತದೆ. ಡೇಟಾ ಸಂಗ್ರಹ, ಬ್ಯಾಕ್‌ಅಪ್, ಕೂಲಿಂಗ್ ವ್ಯವಸ್ಥೆ ಸೇರಿದಂತೆ ಅನೇಕ ಹಂತಗಳಲ್ಲಿ ಪರಿಣಿತರ ಸೇವೆ ಬೇಕಾಗುತ್ತದೆ. ಆದರೆ, ದೇವರು ಕೇವಲ ಮಾನವನಷ್ಟೇ ಅಲ್ಲ, ಸಕಲ ಜೀವಜಾಲಗಳ ಉಗಮಕ್ಕೂ ಕಾರಣನಾಗಿದ್ದಾನೆ ಎಂದರು.

ಅಧಿಕ ಮಾಸದಲ್ಲಿ ಕಾಮ್ಯ ವ್ರತಗಳನ್ನು ಆಚರಿಸುವುದಿಲ್ಲ. ಈ ಮಾಸಕ್ಕೆ ದೇವರೇ ಅಧಿಪತಿಯಾಗಿರುವುದರಿಂದ ಈ ಅವಧಿಯಲ್ಲಿ ಮಾಡುವ ದೇವ ಕಾರ್ಯಗಳು ಮತ್ತು ಆರಾಧನೆಗಳಿಗೆ ಬಹುಪಟ್ಟು ಫಲ ದೊರೆಯುತ್ತದೆ. ಮಾನವ ಜನ್ಮವನ್ನು ದೇವರು ಕರುಣಿಸಿದ್ದಾನೆ. ಆದ್ದರಿಂದ ದೇವರ ನಾಮಸ್ಮರಣೆ ಮಾಡಿ, ಆತನ ಉಪಕಾರವನ್ನು ಸದಾ ಸ್ಮರಿಸಬೇಕು ಎಂದು ತಿಳಿಸಿದರು.

ಆತನ ಆರಾಧನೆ ಮತ್ತು ಉಪಾಸನೆಯ ಮೂಲಕ ಕೃತಜ್ಞತೆ ಸಲ್ಲಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಇಂತಹ ಆರಾಧನೆಗೆ ಅಧಿಕ ಮಾಸವು ಅತ್ಯುತ್ತಮ ಅವಕಾಶ ಒದಗಿಸಿದೆ ಎಂದು ಅವರು ಅಭಿಪ್ರಾಯಪಟ್ಟರು.

ಮಠದ 1475ನೇ ವರ್ಷದ ಹಿಂದೆ ಸಂಸ್ಥಾಪಕರಾದ ನಾರಾಯಣ ತೀರ್ಥರು ಭಟ್ಕಳಕ್ಕೆ ತಂದು ಪೂಜಿಸಿದ ರಾಮವೀರ ವಿಠಲ ದೇವರನ್ನು ಮತ್ತೆ ಪೂಜಿಸುವ ಅವಕಾಶ ದೊರೆತಿರುವುದು ಎಲ್ಲರಿಗೂ ಭಾಗ್ಯವಾಗಿದೆ. ದೇವರ ಅಸ್ತಿತ್ವವನ್ನು ಅರಿತು ಭಕ್ತಿಭಾವದಿಂದ ಆರಾಧಿಸಿದಾಗ ಆತನ ಕೃಪೆ ಮತ್ತು ರಕ್ಷಣೆ ಲಭಿಸುತ್ತದೆ ಎಂದು ಹೇಳಿದರು.

ಇತ್ತೀಚೆಗೆ ಭಟ್ಕಳದಲ್ಲಿ ಸಂಭವಿಸಿದ ಕಪ್ಪೆಚಿಪ್ಪು ದುರಂತದಲ್ಲಿ ಮೃತಪಟ್ಟವರಿಗೆ ಸದ್ಗತಿ ದೊರೆಯಲೆಂದು ರಾಮವೀರ ವಿಠಲ ದೇವರಲ್ಲಿ ಪ್ರಾರ್ಥಿಸುತ್ತೇವೆ. ತಾಯಂದಿರನ್ನು ಕಳೆದುಕೊಂಡ ದುಃಖ ಕುಟುಂಬದ ಬದುಕನ್ನೇ ಅಸ್ಥಿರಗೊಳಿಸುತ್ತದೆ. ದೇವರು ಕುಟುಂಬಗಳನ್ನು ರಕ್ಷಿಸಲಿ ಎಂದರು.

ಸದಾ ದೇವರ ಸಾನ್ನಿಧ್ಯದಲ್ಲಿ ಇದ್ದರೆ ಭಯ, ಆತಂಕಗಳು ದೂರವಾಗುತ್ತವೆ ಎಂದು ಶ್ರೀಗಳು ಭಕ್ತರಿಗೆ ಆಶೀರ್ವದಿಸಿದರು.

ಮಂತ್ರಿಸ್ಥಾನದ ಲಾಬಿ ಬಿಟ್ಟು ರೈತರ ಸಮಸ್ಯೆಗೆ ಸ್ಪಂದಿಸಿ

ಕಲಬುರಗಿ: ಮುಂಗಾರು ಆರಂಭವಾಗಿ ಬಿತ್ತನೆ ಕಾಲ ಬಂದರೂ ಜಿಲ್ಲೆಯ ರೈತರಿಗೆ ರಸಗೊಬ್ಬರವೂ ಇಲ್ಲ, ಬಿತ್ತನೆ ಬೀಜವೂ ಇಲ್ಲ. ರೈತ ಸಂಪರ್ಕ ಕೇಂದ್ರಗಳಿಗೆ ದಿನಗಟ್ಟಲೆ ಅಲೆದಾಡಿದರೂ ಖಾಲಿ ಕೈಯಲ್ಲಿ ವಾಪಸ್ ಹೋಗುವ ದುಸ್ಥಿತಿ ನಿರ್ಮಾಣವಾಗಿದೆ ಎಂದು ಮಾಜಿ ಶಾಸಕ ರಾಜಕುಮಾರ ಪಾಟೀಲ್ ತೇಲ್ಕೂರ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಪತ್ರಿಕ ಪ್ರಕಟಣೆ ಹೊರಡಿಸಿದ ಅವರು, ಕೇಂದ್ರದ ಎಂಆರ್ಪಿ ದರಕ್ಕಿಂತ ಹೆಚ್ಚಿನ ದರ ಬ್ಲ್ಯಾಕ್‌ನಲ್ಲಿ ಮಾರಾಟ ಮಾಡಿ ಪ್ರತಿ ಚೀಲಕ್ಕೆ ರೂ.400ದಿಂದ ರೂ.800ರ ವರೆಗೆ ಸುಲಿಗೆ ಮಾಡುತಿದ್ದಾರೆ. ರೈತ ಸಂಪರ್ಕ ಕೇಂದ್ರಗಳಲ್ಲಿ ತೊಗರಿ, ಹೆಸರು, ಉದ್ದು, ಸೋಯಾ ಬಿತ್ತನೆ ಬೀಜ ಸಿಗುತ್ತಿಲ್ಲ. ಸ್ಟಾಕ್ ಬಂದಿಲ್ಲ ಅಂತ ಸಬೂಬು ಹೇಳಿ ವಾಪಸ್ ಕಳಿಸುತ್ತಿದ್ದಾರೆ.

ಬಿಜೆಪಿಯ 5 ತುರ್ತು ಬೇಡಿಕೆ

3 ದಿನದೊಳಗೆ ಎಲ್ಲ ರೈತ ಸಂಪರ್ಕ ಕೇಂದ್ರಗಳಲ್ಲಿ ಸಾಕಷ್ಟು ಬಿತ್ತನೆ ಬೀಜ ಮತ್ತು ಗೊಬ್ಬರ ದಾಸ್ತಾನು ಇಡಬೇಕು. ಜಿಲ್ಲಾಧಿಕಾರಿಗಳ ವಿಶೇಷ ತಂಡ ಎಲ್ಲಾ ಖಾಸಗಿ ಆಗ್ರೋ ಶಾಪ್ ಮೇಲೆ ದಾಳಿ ಮಾಡಿ, ನಕಲಿ ಬೀಜ, ಹೆಚ್ಚಿನ ದರದ ಗೊಬ್ಬರ ಜಪ್ತಿ ಮಾಡಬೇಕು. ಎಂಆರ್‌ಪಿಗಿಂತ ಜಾಸ್ತಿ ದರಕ್ಕೆ ಮಾರಿದವರು, ನಕಲಿ ಬೀಜ ಮಾರಿದವರ ಲೈಸೆನ್ಸ್ ಶಾಶ್ವತ ರದ್ದು ಮಾಡಿ ಜೈಲಿಗೆ ಹಾಕಬೇಕು.

ಯಾವ ಕೇಂದ್ರದಲ್ಲಿ ಯಾವ ಬೀಜ-ಗೊಬ್ಬರ ಎಷ್ಟು ಸ್ಟಾಕ್ ಇದೆ ಎಂದು ಪ್ರತಿ ಗಂಟೆಗೆ ಅಪ್‌ಡೇಟ್ ಮಾಡಿ ವೆಬ್‌ಸೈಟ್‌ನಲ್ಲಿ ಹಾಕಬೇಕು. 247 ಟೋಲ್ ಫ್ರೀ ನಂಬರ್ 1800 ತೆರೆದು, ದೂರು ಬಂದ 6 ಗಂಟೆಯೊಳಗೆ ಕ್ರಮ ಕೈಗೊಳ್ಳಬೇಕು. ಜಿಲ್ಲಾಡಳಿತ ವಾರದೊಳಗೆ ರೈತರಿಗೆ ಗೊಬ್ಬರ-ಬೀಜ ಸಿಗುವಂತೆ ಮಾಡದಿದ್ದರೆ, ಮುಂದಿನ ದಿನಗಳಲ್ಲಿ ಸಾವಿರಾರು ರೈತರೊಂದಿಗೆ ಡಿಸಿ ಕಚೇರಿಗೆ ಮುತ್ತಿಗೆ ಹಾಕುತ್ತೇವೆ ಎಂದು ಎಚ್ಚರಿಸಿದರು.

ಸರ್ಕಾರಿ ಕೇಂದ್ರದಲ್ಲಿ ಬೀಜ ಸಿಗದೆ ಅನಿವಾರ್ಯವಾಗಿ ಖಾಸಗಿ ಅಂಗಡಿಗೆ ಹೋದರೆ ನಕಲಿ ಬೀಜ, ಕಳಪೆ ಬೀಜವನ್ನು ಎಂಆರ್‌ಪಿಗಿಂತ ಡಬಲ್ ರೇಟ್‌ಗೆ ಮಾರುತ್ತಿದ್ದಾರೆಂದು ಆರೋಪಿಸಿದರು.

ಕೃಷಿ ಇಲಾಖೆ ಅಧಿಕಾರಿಗಳು ಫೋನ್ ಎತ್ತಲ್ಲ. ರೈತ ಕೇಂದ್ರಕ್ಕೆ ಹೋದರೆ ಸಾಹೇಬ್ರು ಮೀಟಿಂಗ್‌ನಲ್ಲಿದ್ದಾರೆ ಅಂತ ಸಬೂಬು ಹೇಳುತ್ತಿದ್ದಾರೆ. ಪ್ರಧಾನಿ ಮೋದಿ ರೈತರಿಗಾಗಿ ಸಬ್ಸಿಡಿ ಗೊಬ್ಬರ, ಉಚಿತ ಬೀಜ ವಿತರಣೆ ಯೋಜನೆ ಕೊಟ್ಟಿದ್ದಾರೆ. ಆದರೆ, ಕಲಬುರಗಿ ಜಿಲ್ಲೆಯಲ್ಲಿ ಅಧಿಕಾರಿಗಳು ಮತ್ತು ದಲ್ಲಾಳಿಗಳು ಸೇರಿ ರೈತರನ್ನು ಲೂಟಿ ಮಾಡುತ್ತಿದ್ದಾರೆ. ಬಿತ್ತನೆ ಸಮಯ ಮೀರಿದರೆ ಒಂದು ವರ್ಷದ ಬೆಳೆ ಹಾಳು. ಇದಕ್ಕೆ ಯಾರು ಹೊಣೆ? ಎಂದು ಪ್ರಶ್ನಿಸಿದರು.

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಪ್ರವಾಸ

ವಿಜಯನಗರ: ಕೇಂದ್ರ ಹಣಕಾಸು ಮತ್ತು ಸಾಂಸ್ಥಿಕ ವ್ಯವಹಾರಗಳ ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಜೂನ್ 4ರಂದು ಆಗಮಿಸಿ ಜೂನ್ 5ರಂದು ಜಿಲ್ಲೆಯ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು.

ಜೂನ್ 4ರಂದು ರಾತ್ರಿ 8:30 ಹೊಸಪೇಟೆಗೆ ಆಗಮಿಸಿ ವೈಕುಂಠ ಅತಿಥಿಗೃಹದಲ್ಲಿ ವಾಸ್ತವ್ಯ ಹೂಡುವರು. ಜೂನ್ 5ರಂದು ಬೆಳಗ್ಗೆ 8.30ರಿಂದ 9.30ರವರೆಗೆ ಜಿಲ್ಲಾಧಿಕಾರಿ ಕಚೇರಿ ಹತ್ತಿರದ ಟಿ.ಬಿ. ಡ್ಯಾಂ ರಸ್ತೆಯಲ್ಲಿ ನಿರ್ಮಾಣವಾಗಲಿರುವ ನೂತನ ರಂಗಮಂದಿರದ ಶಂಕುಸ್ಥಾಪನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಬೆಳಗ್ಗೆ 11 ಗಂಟೆಗೆ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಚಿಕ್ಕಜೋಗಿಹಳ್ಳಿಯಲ್ಲಿ ಪ್ರಧಾನಮಂತ್ರಿಯವರ ಕರೆ ನೀಡಿರುವ 'ಏಕ್ ಪೇಡ್ ಮಾ ಕೆ ನಾಮ್' ಅಭಿಯಾನದಡಿ ಸಾವಯವ ತೋಟಗಾರಿಕಾ ಹಣ್ಣಿನ ಗಿಡಗಳ ನೆಡುವಿಕೆ ಕಾರ್ಯಕ್ರಮಕ್ಕೆ ಚಾಲನೆ ನೀಡುವರು. ನಂತರ ಮಧ್ಯಾಹ್ನ 1.30ಕ್ಕೆ ಬೆಂಗಳೂರಿಗೆ ಪ್ರಯಾಣಿಸುವರು ಎಂದು ಪ್ರಕಟಣೆ ತಿಳಿಸಿದೆ.

10.30 ಲಕ್ಷ ರೂ. ಮೌಲ್ಯದ ಸ್ವತ್ತು ವಶ

- 7 ಪ್ರಕರಣಗಳ ಪತ್ತೆ
- ಕುಖ್ಯಾತ ಮನೆಗಳ್ಳನ ಬಂಧನ



ಕಲಬುರಗಿ: ಅಶೋಕ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಸರಣಿ ಮನೆ ಕಳ್ಳತನ ಪ್ರಕರಣಗಳನ್ನು ಭೇದಿಸಿರುವ ಪೊಲೀಸರು ಕುಖ್ಯಾತ ಮನೆಗಳ್ಳನನ್ನು ಬಂಧಿಸಿ, 7 ಕಳ್ಳತನ ಪ್ರಕರಣಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ಆರೋಪಿತನಿಂದ 10.30 ಲಕ್ಷ ಮೌಲ್ಯದ ಬಂಗಾರದ ಆಭರಣಗಳು ಹಾಗೂ ನಗದು ಹಣವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ. ತಿಳಿಸಿದರು.

ನಗರದ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದ ಅವರು, ಕಾಂತಾ ಕಾಲೋನಿಯ ನಿವಾಸಿ ಜಗನ್ನಾಥ ಸೂರನ್ ನೀಡಿದ ದೂರಿನ ಮೇರೆಗೆ ಪ್ರಕರಣ ಬೆಳಕಿಗೆ ಬಂದಿತ್ತು. ಫೆ.28ರಂದು ರಾತ್ರಿ ಮನೆಗೆ ಬೀಗ ಹಾಕಿ ತೆರಳಿದ್ದ ಅವರು, ಮಾ.1ರಂದು ಮರಳಿದಾಗ ಮನೆಯ ಬೀಗ ಮುರಿದು ಒಳನುಗ್ಗಿದ್ದ ಕಳ್ಳರು ಬಂಗಾರದ ಮಂಗಳಸೂತ್ರ, ಲಾಕೇಟ್, ಉಂಗುರ, ಬೆಳ್ಳಿ ಆಭರಣಗಳು ಹಾಗೂ ನಗದು ಹಣ ಸೇರಿದಂತೆ ಒಟ್ಟು 2.65 ಲಕ್ಷ ಮೌಲ್ಯದ ವಸ್ತುಗಳನ್ನು ಕಳವು ಮಾಡಿರುವುದು ಪತ್ತೆಯಾಗಿತ್ತು.


ಈ ಸಂಬಂಧ ಅಶೋಕ ನಗರ ಪೊಲೀಸ್ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆ-2023ರ ಕಲಂ 331(4) ಹಾಗೂ 305ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿತ್ತು. ಪೊಲೀಸ್ ಆಯಉಕ್ತ ಡಾ. ಶರಣಪ್ಪ ಎಸ್.ಡಿ. ಅವರ ಮಾರ್ಗದರ್ಶನದಲ್ಲಿ ಉಪ ಪೊಲೀಸ್ ಆಯುಕ್ತರಾದ ಶಾಲೂ ಐಪಿಎಸ್, ಪ್ರವೀಣ ಎಚ್. ನಾಯಕ್ ಹಾಗೂ ದಕ್ಷಿಣ ಉಪವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಶರಣಬಸಪ್ಪ ಸುಬೇದಾರ ಅವರ ಮೇಲ್ವಿಚಾರಣೆಯಲ್ಲಿ ವಿಶೇಷ ತಂಡವನ್ನು ರಚಿಸಲಾಗಿತ್ತು.

ತನಿಖೆ ವೇಳೆ ಬಿದ್ದಾಪೂರ ಕಾಲೋನಿ ಸಮೀಪ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಮಲ್ಲಿಕಾರ್ಜುನ ದೇವಿಂದ್ರಪ್ಪ ತಳವಾರ (33) ಎಂಬಾತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದು, ಚಿತ್ತಾಪುರ ತಾಲೂಕಿನ ಯರಗಲ್ ಮೂಲದ ಈತ ಪ್ರಸ್ತುತ ಕಲಬುರಗಿಯ ಸಂತೋಷ ಕಾಲೋನಿಯಲ್ಲಿ ವಾಸವಾಗಿದ್ದು, ಚಾಲಕನಾಗಿ ಕೆಲಸ ಮಾಡುತ್ತಿದ್ದ. ವಿಚಾರಣೆ ವೇಳೆ ಆರೋಪಿ ಒಟ್ಟು 7 ಮನೆ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿರುವುದನ್ನು ಒಪ್ಪಿಕೊಂಡಿದ್ದಾನೆ ಎಂದರು.

ಆರೋಪಿತನಿಂದ 63 ಗ್ರಾಂ ಬಂಗಾರದ ಆಭರಣಗಳು (ಅಂದಾಜು ಮೌಲ್ಯ ರೂ.10 ಲಕ್ಷ) ಹಾಗೂ ರೂ.30 ಸಾವಿರ ನಗದು ಸೇರಿದಂತೆ ಒಟ್ಟು ರೂ.10.30 ಲಕ್ಷ ಮೌಲ್ಯದ ಸ್ವತ್ತನ್ನು ಪೊಲೀಸರು ವಶಪಡಿಸಿಕೊಂಡು ಆರೋಪಿಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

> **ರಾಜ್ಯ ಪೋಲಿಸ್ ಇಲಾಖೆ ಲಾಕ್ ಹೌಸ್ ಬೀಟ್ ಸಿಸ್ಟಮ್ ಜಾರಿಗೆ ತಂದಿದ್ದು ಮನೆಯವರು ಪ್ರವಾಸಕ್ಕಾಗಿ ತೆರಳಿದರೇ, 9480805500ಗೆ ಸಂಪೂರ್ಣ ವಿಳಾಸ ಮೆಸೇಜ್ ಮಾಡಿದರೇ ಮನೆ ಬಳಿ ಹೆಚ್ಚಿನ ಗಸ್ತು ನಿಯೋಜಿಸಲಾಗುವುದು.**
> ■ **ಡಾ.ಶರಣಪ್ಪ ಎಸ್.ಡಿ. ನಗರ ಪೊಲೀಸ್ ಆಯುಕ್ತ**

ವಿಡಿಐಟಿಗೆ ಪ್ಲಾಟಿನಂ ಸುಸ್ಥಿರ ಕ್ಯಾಂಪಸ್ ಪ್ರಶಸ್ತಿ



ಹಳಿಯಾಳ: ಪರಿಸರ ಸ್ನೇಹಿ, ಹಸಿರು ಶಕ್ತಿ, ಜಲ ಸಂರಕ್ಷಣೆ ಮತ್ತು ತ್ಯಾಜ್ಯ ನಿರ್ವಹಣೆಯಲ್ಲಿ ಅತ್ಯುತ್ತಮ ಸಾಧನೆಗೈದ ಪಟ್ಟಣದ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯಕ್ಕೆ ಪ್ಲಾಟಿನಂ ಸುಸ್ಥಿರ ಕ್ಯಾಂಪಸ್ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ರಿಸರ್ಚ್ ಹೈಟ್ ಫೌಂಡೇಶನ್ (ಆರ್‌ಹೆಚ್‌ಎಫ್) ಮತ್ತು ಪರಿಸರ ಸಂರಕ್ಷಣಾ ತರಬೇತಿ ಮತ್ತು ಸಂಶೋಧನಾ ಸಂಸ್ಥೆ (ಇಪಿಟಿಆರ್‌ಐ) ಜೂನ್ ಒಂದರಂದು ಹೈದರಾಬಾದ್‌ನಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಮಹಾವಿದ್ಯಾಲಯದ ಪರವಾಗಿ ಪ್ರೊ.ರಾಕೇಶ ಪಾಟೀಲ ಈ ಪುರಸ್ಕಾರವನ್ನು ಸ್ವೀಕರಿಸಿದರು. ಭಾರತ ಸಸ್ಟೇನೇಬಲ್ ಕ್ಯಾಂಪಸ್ ಮಿಷನ್ 2026 ಅಡಿಯಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಮಹಾವಿದ್ಯಾಲಯವು ಪರಿಸರ ಸಂರಕ್ಷಣೆಗೆ ಕೈಗೊಂಡಿರುವ ಉಪಕ್ರಮಗಳಾದ ವನಮಹೋತ್ಸವ, ಪ್ಲಾಸ್ಟಿಕ್ ಮುಕ್ತ ಕ್ಯಾಂಪಸ್, ತ್ಯಾಜ್ಯ ನಿರ್ವಹಣೆ, ಹಸಿರು ಪರಿಸರ ನಿರ್ಮಾಣ, ಮಳೆ ಕೊಯ್ಲು ಮುಂತಾದವುಗಳನ್ನು ಗುರುತಿಸಿ ಈ ಪುರಸ್ಕಾರವನ್ನು ನೀಡಲಾಗಿದೆ. ವಿವಿಧ ರಾಜ್ಯಗಳ 321 ಕಾಲೇಜು ಗಳಿಗೆ ಪ್ರಶಸ್ತಿ ನೀಡಲಾಗಿದೆ. ಕರ್ನಾಟಕ ದಿಂದ ಪ್ರಶಸ್ತಿ ಪಡೆದ 28 ಕಾಲೇಜುಗಳಲ್ಲಿ ಕೇವಲ 14 ಕಾಲೇಜುಗಳು 7 ಕ್ಕೂ ಅಧಿಕ ಚಟುವಟಿಕೆ ಹಮ್ಮಿಕೊಂಡಿದ್ದು ಇದರಲ್ಲಿ ವಿಡಿಐಟಿ ಒಂದಾಗಿದೆ.

ಮಹಾವಿದ್ಯಾಲಯಕ್ಕೆ ರಾಷ್ಟ್ರೀಯ ಪುರಸ್ಕಾರ ದೊರೆತಿರುವುದಕ್ಕೆ ಆಡಳಿತ ಮಂಡಳಿಯ ಅಧ್ಯಕ್ಷ ಪ್ರಶಾಂತ್ ಕುಲಕರ್ಣಿ ಮತ್ತು ಪ್ರಾಚಾರ್ಯ ಡಾ.ವಿ.ಎ.ಕುಲಕರ್ಣಿ ಸಂತಸ ವ್ಯಕ್ತಪಡಿಸಿದ್ದಾರೆ.

ಶಕ್ತಿ ಸಂರಕ್ಷಣೆ ಹಾಗೂ ಪರಿಸರ ಸಂರಕ್ಷಣೆಯ ಕುರಿತಾಗಿ ಇಕೋ ಕ್ಲಬ್ ವತಿಯಿಂದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು, ಇದರ ಫಲವಾಗಿ ಮಹಾವಿದ್ಯಾಲಯ ಪುರಸ್ಕಾರಕ್ಕೆ ಭಾಜನವಾಗಿರುವುದು ಹರ್ಷ ತಂದಿದೆ ಎಂದು ಇಕೋ ಕ್ಲಬ್ ಸದಸ್ಯರಾದ ಡಾ ಸ್ನೇಹಾ ಕುಲಕರ್ಣಿ, ಪ್ರೊ ರೋಹಿಣಿ ಕಲ್ಲೂರ್, ಪ್ರೊ ಸುನೀತಾ ಕಲ್ಲು, ಪ್ರೊ ನವೀನ ಹಿರೇಮಠ, ಪ್ರೊ ಅಮರನಾಥ ಸ್ವಾಮಿ, ಜೆ ಎಸ್ ಯಳ್ಳೂರ ತಿಳಿಸಿದ್ದಾರೆ.

ಸಿಎಂ ಕುರ್ಚಿ ನನ್ನದಲ್ಲ, ಜನರದ್ದು: ಸಿಎಂ ಡಿಕೆಶಿ

ಬೆಂಗಳೂರು: ಸಿಎಂ ಕುರ್ಚಿ ಈ ಡಿ.ಕೆ. ಶಿವಕುಮಾರದ್ದಲ್ಲ, ಇದು ಜನರ ಕುರ್ಚಿ. ಜನರು ಕೊಟ್ಟಿರುವ ಅಧಿಕಾರವನ್ನು ಜನರ ಸೇವೆಗೆ ಮುಡಿಪಾಗಿಡುತ್ತೇನೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ವಿಧಾನಸೌಧದಲ್ಲಿ ಬುಧವಾರ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ಮೊದಲ ಸಚಿವ ಸಂಪುಟ ಸಭೆ ಬಳಿಕ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದರು. ನನ್ನ ವೈಯಕ್ತಿಕ ವಿಚಾರ ಬದಿಗೊತ್ತಿ, ರಾಜ್ಯದ ಜನರ ಸೇವೆಗೆ ಸಂಕಲ್ಪ ಮಾಡಿ ಈ ಅಧಿಕಾರ ಸ್ವೀಕರಿಸಿದ್ದೇನೆ. ಹಿಂದಿನ ಹೆಜ್ಜೆಗಳನ್ನು ಮರೆತವನು ಮುಂದಿನ ಹೆಜ್ಜೆ ಇಡಲಾರ ಎಂಬ ಮಾತನ್ನು ನಂಬಿರುವವನು ನಾನು. ನಾವು ನಮ್ಮ ಬೇರು ಮರೆತರೆ ಫಲ ಸಿಗುವುದಿಲ್ಲ ಎಂದು ಹೇಳುತ್ತಿರುತ್ತೇನೆ. ಇಂದು ಹೊಸ ದಿನ. ಹೊಸ ಕೆಲಸ ಮಾಡಿ, ಹೊಸ ಅವಕಾಶಗಳನ್ನು ಕಾಂಗ್ರೆಸ್ ಪಕ್ಷ ಹಾಗೂ ರಾಜ್ಯದ ಜನತೆ ನೀಡಿದ್ದಾರೆ. ಬಾಕಿ ಇರುವ 2 ವರ್ಷಗಳಲ್ಲಿ ರಾಜ್ಯದ ಜನರ ಸೇವೆ ಮಾಡಲು ಏನೆಲ್ಲಾ ಸೇವೆ ಮಾಡಬಹುದು, ರಾಜ್ಯದ ಕಲ್ಯಾಣಕ್ಕೆ ನಾನು ಹೊಸ ಅವಕಾಶಗಳನ್ನು ಹುಡುಕುತ್ತಿದ್ದೇನೆ ಎಂದು ತಿಳಿಸಿದರು.


ಎಲ್ಲಾ ಗೊಂದಲಗಳಿಗೆ ಹೈಕಮಾಂಡ್ ನಾಯಕರು ತೆರೆ ಎಳೆದಿದ್ದಾರೆ: ಮಾಧ್ಯಮಗಳು ಇಷ್ಟು ದಿನ ಅಧಿಕಾರ ಹಸ್ತಾಂತರ, ನಾಯಕತ್ವ ಬದಲಾವಣೆ ವಿಚಾರವಾಗಿ ಅನೇಕ ಸುದ್ದಿ, ಹೇಳಿಕೆಗಳನ್ನು ಪ್ರಸಾರ ಮಾಡುತ್ತಿದ್ದವು. ಮಲಗಿದ್ದವರನ್ನು ಎಬ್ಬಿಸಿ, ಎದ್ದಿದ್ದವರನ್ನು ಮಲಗಿಸುತ್ತಿದ್ದರು. ನಮ್ಮ ಪಕ್ಷದ ವರಿಷ್ಠರು ಇದಕ್ಕೆಲ್ಲ ಈಗ ತೆರೆ ಎಳೆದಿದ್ದಾರೆ. ಶುಭ ಗಳಿಗೆ, ಶುಭ ಮುಹೂರ್ತ ಬರುತ್ತದೆ. ಸ್ವಲ್ಪ ತಾಳ್ಮೆಯಿಂದ ಕಾಯಿರಿ ಎಂದು ಹೇಳುತ್ತಲೇ ಇದ್ದೆ. ಇಂದು ಸಂಜೆ 4.15ಕ್ಕೆ ಶುಭ ಗಳಿಗೆ, ಶುಭ ಮುಹೂರ್ತಕ್ಕೆ ಮಾಧ್ಯಮಗಳು ಹಾಗೂ ರಾಜ್ಯದ ಜನತೆ ಸಾಕ್ಷಿಯಾಗಿದ್ದಾರೆ ಎಂದು ತಿಳಿಸಿದರು.

ಟೀಕೆಗಳು ಸಾಯುತ್ತವೆ ಕೆಲಸಗಳು ಉಳಿಯುತ್ತವೆ: ರಾಜ್ಯದ ಜನತೆಗೆ ನನ್ನ ಮೇಲೆ ಅಪಾರ ವಿಶ್ವಾಸ ಇದೆ. ಹಿಂದೆ ಅನೇಕ ಟೀಕೆ, ಹೊಗಳಿಕೆ ವ್ಯಕ್ತವಾಗಿರಬಹುದು. ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ ಎಂದು ನಾನು ಹೇಳಿದ್ದೆ. ರಾಜ್ಯದ ಆಡಳಿತದಲ್ಲಿ ಹೊಸ ಬೆಳಕು ಮೂಡಿಸಲು ನನ್ನ 40 ವರ್ಷಗಳ ರಾಜಕೀಯ ಅನುಭವದಲ್ಲಿ ಪ್ರಯತ್ನ ಮಾಡುತ್ತೇನೆ. ಇದೇ ವಿಶ್ವಾಸ ಮತ್ತೆ ರಾಜ್ಯದ ಜನರ ಸೇವೆ ಮಾಡಿ, ಸಾಕ್ಷಿಗುಡ್ಡೆ ಬಿಟ್ಟು ಹೋಗಲು ಅವಕಾಶ ಸಿಕ್ಕಿದೆ ಎಂದು ತಿಳಿಸಿದರು.

ಸಿದ್ದರಾಮಯ್ಯ ಅವರು ಕೊಟ್ಟ ಮಾತಿನಂತೆ ನಡೆದಿದ್ದಾರೆ: ಕಾಂಗ್ರೆಸ್ ಕಾರ್ಯಕರ್ತರು, ಜನರು ಬಹಳ ನಂಬಿಕೆಯಿಂದ ಕೊಟ್ಟಿರುವ ಅವಕಾಶ. ಮಲ್ಲಿಕಾರ್ಜುನ ಖರ್ಗೆ ಅವರ ನಾಯಕತ್ವದಲ್ಲಿ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರು ಈ ತೀರ್ಮಾನ ಮಾಡಿದ್ದಾರೆ. ಇದು ಸ್ವಲ್ಪ ತಡವಾಗಿದೆ. ಆದರೂ ನಮ್ಮ ನಾಯಕರಾದ ಸಿದ್ದರಾಮಯ್ಯ ಅವರು ಕೊಟ್ಟ ಮಾತಿನಂತೆ ನಡೆದಿದ್ದಾರೆ. ನಮ್ಮ ವರಿಷ್ಠರು ನಮ್ಮಿಬ್ಬರನ್ನು ಕರೆಸಿ ಈ ತೀರ್ಮಾನ ಮಾಡಿದಾಗ, ಸಿದ್ದರಾಮಯ್ಯ ಅವರು ಬಹಳ ಸಂತೋಷದಿಂದ ನನಗೆ ಜಾಗ ಮಾಡಿಕೊಟ್ಟಿದ್ದಾರೆ ಎಂದರು.

ಮಾನವಧರ್ಮದಮೇಲೆನಂಬಿಕೆಇಟ್ಟುಕೊಂಡಿದ್ದೇನೆ: ಗ್ರಾಮೀಣ ಭಾಗದ ರೈತರ ಪರಿಸ್ಥಿತಿ ಹಾಗೂ ನಗರ ಪ್ರದೇಶ ಜನರ ಸಮಸ್ಯೆ ನಾನು ಅರಿತಿದ್ದೇನೆ. 42% ಜನ ನಗರದಲ್ಲಿದ್ದಾರೆ. ಜನ ಉದ್ಯೋಗಕ್ಕಾಗಿ ನಗರಗಳತ್ತ ವಲಸೆ ಬರುತ್ತಿದ್ದಾರೆ. ಬೀದಿ ವ್ಯಾಪಾರ ಮಾಡಿಕೊಂಡಾದರೂ ಒಳ್ಳೆಯ ಬದುಕು, ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಲು ವ್ಯವಸಾಯ ತೊರೆದು ನಗರಗಳತ್ತ ಬರುತ್ತಿದ್ದಾರೆ. ಈ ಸರ್ಕಾರದ ಪ್ರತಿ ತೀರ್ಮಾನ ಕೇವಲ ಶಿವಕುಮಾರ್ ತೀರ್ಮಾನ ಮಾತ್ರವಲ್ಲ, ಸಾಮೂಹಿಕ ತೀರ್ಮಾನವಾಗಿರುತ್ತದೆ. ನನಗೆ ಜಾತಿ ಮೇಲೆ, ಧರ್ಮದ ಮೇಲೆ ನಂಬಿಕೆ ಇಲ್ಲ, ನನಗೆ ನಮ್ಮದೇ ಆದ ನಂಬಿಕೆ ಇರಬಹುದು. ಆದರೆ ಮಾನವ ಧರ್ಮದ ಮೇಲೆ ನಂಬಿಕೆ ಇಟ್ಟುಕೊಂಡಿರುವವನು ಎಂದು ತಿಳಿಸಿದರು.

ರಾಮ ಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಶಿವ ಬೇರೆಯವರ ದೋಷವನ್ನು ಕಂಠದಲ್ಲಿ, ಬೇರೆಯವರ ಒಳ್ಳೆಯ ಗುಣಗಳನ್ನು ಚಂದಿರನಂತೆ ತಲೆಯ ಮೇಲೆ ಹೊತ್ತಂತೆ ನಾವು ಇನ್ನೊಬ್ಬರ ದೋಷಗಳನ್ನು ಹೇಳದೆ ಸದ್ಗುಣಗಳನ್ನು ಪ್ರಚಾರ ಮಾಡಬೇಕು
- ಪುತ್ತಿಗೆ ಶ್ರೀಗಳು

- ನಾವು ಇನ್ನೊಬ್ಬರ ಸಣ್ಣ ದೋಷವನ್ನು ದೊಡ್ಡದಾಗಿ ಹೇಳುತ್ತೇವೆ, ದೋಷವಿಲ್ಲದಿದ್ದಲ್ಲಿ ಇಲ್ಲದ ಸಲ್ಲದ ಕಥೆಯನ್ನು ಕಟ್ಟಿ ದೋಷಾರೋಪಣೆಯನ್ನು ಮಾಡಿ ಕೃತಾರ್ಥರಾಗಿ ಬಾಳುತ್ತೇವೆ!

ದಿನ ಭವಿಷ್ಯ

ಮೇಷ
ನಿಮ್ಮ ಪಾಲಿಗೆ ಶುಭದಿನ. ಗುರಿ ಸಾಧನೆ. ವೃತ್ತಿಯಲ್ಲಿ ಉನ್ನತಿಯ ಸಂಕೇತ. ಭಾವನಾತ್ಮಕ ನೋವು ಉಪಶಮನ. ಮನಸ್ಸು ನಿರಾಳ.

ವೃಷಭ
ಉಳಿದವರ ಮುಂದೆ ತಲೆಬಾಗಿ ವರ್ತಿಸಿ. ದುಡುಕು, ಅಹಂ ಪ್ರತಿಕೂಲ ಪರಿಣಾಮ ತಂದೀತು. ಮನೆಯಲ್ಲಿ ಅಸಹಕಾರ.

ಮಿಥುನ
ಮನೆಯವರ ಜತೆ ಮನಸ್ಸು ಬಿಚ್ಚಿ ಮಾತನಾಡಿ. ಮುಚ್ಚುಮರೆ ಮಾಡದಿರಿ. ಕೆಲಸದಲ್ಲಿ ಸಣ್ಣ ತಪ್ಪು ದೊಡ್ಡ ಪರಿಣಾಮ ಉಂಟು ಮಾಡಬಹುದು.

ಕಟಕ
ಸಹೋದ್ಯೋಗಿ ಜತೆ ಸೌಜನ್ಯದ ವರ್ತನೆ ಇರಲಿ. ಸಂಬಂಧ ಕೆಟ್ಟರೆ ಬೇಗ ಸರಿಯಾಗದು. ಆಪ್ತ ವ್ಯಕ್ತಿಯೊಬ್ಬರು ನೋವು ಉಂಟು ಮಾಡಬಹುದು.

ಸಿಂಹ
ಆತ್ಮೀಯರ ಮನಸ್ಸಿನ ನೋವು ಶಮನಕ್ಕೆ ಗಮನ ಕೊಡಿ. ಹಣದ ಒತ್ತಡ. ವೃತ್ತಿ ಕಾರ್ಯದಲ್ಲಿ ಸಣ್ಣಪುಟ್ಟ ವಿಘ್ನಗಳು ಬರಬಹುದು.

ಕನ್ಯಾ
ಗ್ರಹಗತಿ ಅಷ್ಟೇನೂ ಪೂರಕವಾಗಿಲ್ಲ. ಕಾರ್ಯ ವಿಳಂಬ. ಇತರರು ನಿಮ್ಮ ಮನ ನೋಯಿಸುತ್ತಾರೆ. ಆತ್ಮೀಯರ ಜತೆ ಜಗಳ ಸಂಭವ. ತಾಳ್ಮೆ ಅವಶ್ಯ.

ತುಲಾ
ಕುಟುಂಬಸ್ಥರ ಜತೆ ಆತ್ಮೀಯವಾಗಿ ಕಳೆಯಿರಿ. ನಿಮ್ಮದೇ ವೃತ್ತಿ ಕಾರ್ಯದಲ್ಲಿ ಕೌಟುಂಬಿಕ ಹಿತಾಸಕ್ತಿ ಮರೆಯದಿರಿ. ಆರ್ಥಿಕ ಒತ್ತಡ.

ವೃಶ್ಚಿಕ
ವೃತ್ತಿ ಕ್ಷೇತ್ರದಲ್ಲಿ ಜಗಳದಲ್ಲಿ ತೊಡಗದಿರಿ. ಹೆಚ್ಚು ತಾಳ್ಮೆ, ಶಿಸ್ತು ಅವಶ್ಯ. ಮನೆಯವರ ಆರೋಗ್ಯ ಚಿಂತೆಗೆ ಕಾರಣವಾದೀತು. ಆರ್ಥಿಕ ಬಿಕ್ಕಟ್ಟು.

ಧನು
ಗುರಿ ಸಾಧನೆ ತುಸು ಕಷ್ಟಕರವಾದೀತು. ಹೊಸ ವ್ಯವಹಾರದಲ್ಲಿ ತಕ್ಷಣ ಹಣ ಹೂಡಬೇಡಿ. ಪರಿಚಿತರೇ ನಿಮಗೆ ವಂಚನೆ ಮಾಡಬಹುದು, ಎಚ್ಚರ.

ಮಕರ
ಆಪ್ತರ ಸಲಹೆ ನಿಮಗೆ ಅಪಥ್ಯವಾದೀತು. ಆದರೆ ಅದಕ್ಕೆ ಕಿವಿಗೊಡಿ. ತೀರ್ಥಕ್ಷೇತ್ರ ಭೇಟಿ ಸಾಧ್ಯತೆ ಕಾಣುತ್ತಿದೆ. ಮಾನಸಿಕ ನೆಮ್ಮದಿಗೆ ಇದು ದಾರಿ.

ಕುಂಭ
ನಿಮ್ಮ ಆದರ್ಶ ಪಾಲಿಸಲು ಕೆಲವರು ಯತ್ನಿಸುವರು. ಇದು ನಿಮಗೆ ಸಲ್ಲುವ ಗೌರವ. ಇತರರ ನೋವಿಗೆ ಪರಿಹಾರ ತೋರುವಿರಿ.

ಮೀನ
ಕೆಲವರ ಜತೆ ಭಿನ್ನಾಭಿಪ್ರಾಯ ಮೂಡಿದರೆ ಅತಿರೇಕದ ವರ್ತನೆ ತೋರದಿರಿ. ಶಾಂತವಾಗಿ ವರ್ತಿಸಿ. ಮನೆಯಲ್ಲಿ ಹರುಷ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ : 9,5,0,2

ನಾಗೇಂದ್ರ ವಿರುದ್ಧ ಚಾರ್ಜ್ ಶೀಟ್ ಸಲ್ಲಿಕೆ

ಬಳ್ಳಾರಿ: ರಾಜ್ಯ, ದೇಶದಲ್ಲೇ ಸದ್ದು ಮಾಡಿದ್ದ ವಾಲ್ಮೀಕಿ ಅಭಿವೃದ್ಧಿ ನಿಗಮದ ಬಹುಕೋಟಿ ಹಗರಣದ ತನಿಖೆ ಬಹುತೇಕ ಪೂರ್ಣಗೊಳಿಸಿದ ಸಿಬಿಐ ಅಧಿಕಾರಿಗಳು, ಮಾಜಿ ಸಚಿವ, ಗ್ರಾಮೀಣ ಶಾಸಕ ಬಿ.ನಾಗೇಂದ್ರ ಹಾಗೂ ಅವರ ಸಹಚರರ ವಿರುದ್ಧ ಸಿಬಿಐ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದೆ. ಹಗರಣದ ತನಿಖೆ ಬೆನ್ನು ಬಿದ್ದ ಸಿಬಿಐ ಅಧಿಕಾರಿಗಳು, ಹಗರಣದಲ್ಲಿ ನಾಗೇಂದ್ರ, ಅವರ ಆಪ್ತಸಹಾಯಕ ನೆಕ್ಕಂಟಿ ನಾಗರಾಜ್, ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿಗಳು ಸೇರಿದಂತೆ ಇತರೆ ಸರ್ಕಾರಿ ಇಲಾಖೆ ಅಧಿಕಾರಿಗಳು, ಯುನಿಯನ್ ಬ್ಯಾಂಕ್, ಇಂಡಿಯನ್ ಓವರ್ ಸಿಸ್ ಬ್ಯಾಂಕ್, ಹೈದ್ರಾಬಾದನ ಕುಕ್ಕಟಪಲ್ಲಿ ಶಾಖೆ ಸಿಬ್ಬಂದಿಗಳು ಹಾಗೂ ಮಧ್ಯವರ್ತಿಗಳು ಸೇರಿದಂತೆ ಒಟ್ಟು 30 ಜನರ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿದ್ದಾರೆ. ಸಹೋದರ, ಮಾಜಿ ಸಚಿವ ನಾಗೇಂದ್ರ ಅವರ ರಾಜಕೀಯ ಕ್ಷೇತ್ರದಲ್ಲಿ ದೊಡ್ಡ ಮಟ್ಟದಲ್ಲಿ ಬೆಳೆದಿದ್ದಾರೆ. ಇದನ್ನು ಸಹಿಸದ ಸಹಿಸದ ಕೆಲವರು, ವಾಲ್ಮೀಕಿ ಹಗರಣದಲ್ಲಿ ಉದ್ದೇಶ ಪೂರ್ವಕವಾಗಿ ಸುಳ್ಳು ಆರೋಪಗಳನ್ನು ಹೊರೆಸಿ, ಸಿಲುಕಿಸಿದ್ದಾರೆ. ಈ ಎಲ್ಲ ಆರೋಪಗಳಿಂದ ನಮ್ಮ ಸಹೋದರ ಮುಕ್ತರಾಗಿ ಹೊರ ಬರಲಿದ್ದಾರೆ ಎಂದು ನಾಗೇಂದ್ರ ಅವರ ಸಹೋದರ ವೆಂಕಟೇಶ ಪ್ರಸಾದ್ ಹೇಳಿದ್ದಾರೆ.

ಭರಪೂರ ಬಳುವಳಿ

ಪುಟ ೧ ➡ ಅದಕ್ಕೂ ಮುನ್ನ ಅವರು ವೇದಿಕೆಯಲ್ಲಿದ್ದ ವೀರಗಂಗಾಧರ ಅಜ್ಜಯ್ಯನ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಬಳಿಕ ವೇದಿಕೆಯತ್ತ ಮುಖಮಾಡಿ ಅಡ್ಡ ಬಿದ್ದು ಸಭೆಯಲ್ಲಿದ್ದವರಿಗೆ ನಮಿಸಿದರು. ಬಳಿಕ ರಾಜ್ಯಪಾಲರಿಂದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ಈ ವೇಳೆ ಶಿವಕುಮಾರ್ ಅವರ ಕೈಯಲ್ಲಿ ಸಂವಿಧಾನದ ಪುಸ್ತಕವಿತ್ತು. ಅವರು ವೀರ ಗಂಗಾರಧರ ಅಜ್ಜಯ್ಯ ಅವರ ಹೆಸರಿನಲ್ಲಿ ಪ್ರಮಾಣ ಮಾಡಿದರು.

ಅಂಬೇಡ್ಕರ್, ಸಂವಿಧಾನದ ಹೆಸರಲ್ಲಿ ಪ್ರಮಾಣ: ಡಿ.ಕೆ. ಶಿವಕುಮಾರ್ ಅವರೊಂದಿಗೆ ಉಪ ಮುಖ್ಯಮಂತ್ರಿಯಾಗಿ ಡಾ. ಜಿ. ಪರಮೇಶ್ವರ ಮತ್ತು 12 ಜನ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ಡಾ. ಜಿ ಪರಮೇಶ್ವರ್ ಅವರು ಡಾ. ಅಂಬೇಡ್ಕರ್ ಅವರ ಹೆಸರಿನಲ್ಲಿ ಪ್ರಮಾಣ ಮಾಡಿದರೆ, ಯತೀಂದ್ರ ಸಿದ್ದರಾಮಯ್ಯ ಅವರು ಸಂವಿಧಾನದ ಹೆಸರಿನಲ್ಲಿ ಪ್ರಮಾಣ ಮಾಡಿದರು.

ಕೆ.ಎಚ್. ಮುನಿಯಪ್ಪ, ಕೆ.ಜೆ. ಜಾರ್ಜ್, ಯು.ಟಿ. ಖಾದರ್, ಬೈರತಿ ಸುರೇಶ್ ಮತ್ತು ಡಾ. ಶರಣ ಪ್ರಕಾಶ್ ಪಾಟೀಲ್ ಅವರು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿದರು. ಎಂ.ಬಿ. ಪಾಟೀಲ್ ಅವರು ವಿಶ್ವಗುರು ಅಣ್ಣ ಬಸವಣ್ಣ, ಬಸವಾದಿ ಶರಣರು ಮತ್ತು ಸಿದ್ದೇಶ್ವರ ಮಹಾ ಸ್ವಾಮಿ ಹೆಸರಿನಲ್ಲಿ, ಈಶ್ವರ ಖಂಡ್ರೆ ದೇವರ ಮತ್ತು ಚೆನ್ನಬಸಪ್ಪ ಪಟ್ಟದೇವರ ಹೆಸರಿನಲ್ಲಿ ಪ್ರಮಾಣ ಮಾಡಿದರು. ಉಳಿದಂತೆ ರಾಮಲಿಂಗಾರೆಡ್ಡಿ, ಸತೀಶ್ ಜಾರಕಿಹೊಳಿ, ಕೃಷ್ಣ ಬೈರೇಗೌಡ ಮತ್ತು ಪ್ರಿಯಾಂಕ್ ಖರ್ಗೆ ಶ್ರದ್ಧಾ ಪೂರ್ವಕವಾಗಿ ಪ್ರಮಾಣ ಕೈಗೊಂಡರು.

ವೇದಿಕೆಯಲ್ಲಿ ಎಐಸಿಸಿ ಅಧ್ಯಕ್ಷ ಮತ್ತು ರಾಜ್ಯಸಭೆ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೆವಾಲ, ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯ ಸಿದ್ದರಾಮಯ್ಯ, ತೆಲಂಗಾಣ ಮುಖ್ಯ ಮಂತ್ರಿ ರೇವಂತ್ ರೆಡ್ಡಿ, ಕೇರಳಂ ಮುಖ್ಯಮಂತ್ರಿ ವಿ.ಡಿ. ಸತೀಶನ್, ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಉಪಸ್ಥಿತರಿದ್ದರು.

ರೇಷ್ಮೆ ಪಂಚೆ ಶರ್ಟ್‌ನಲ್ಲಿ ಮಿಂಚಿದ ಡಿಕೆಶಿ

ತಮ್ಮ ಜೀವನದ ವಿಶೇಷ ಕ್ಷಣದಲ್ಲಿ ಡಿ.ಕೆ. ಶಿವಕುಮಾರ್ ಅವರು ರೇಷ್ಮೆ ಪಂಚೆ, ಶರ್ಟ್ ಧರಿಸಿ ಮಿಂಚಿದರು. ಶಿವಕುಮಾರ್ ಅವರು ಧರಿಸಿದ್ದ ಶಲ್ಯದಲ್ಲಿ ಕಾಂಗ್ರೆಸ್‌ನ ಧ್ವಜ, ಕೈಯಲ್ಲಿ ಭಾರತದ ಸಂವಿಧಾನ ಪುಸ್ತಕ ಹಿಡಿಯುವ ಮೂಲಕ ತಾನೊಬ್ಬ ಭಾರತೀಯ ಅದರಲ್ಲೂ ಕಟ್ಟಾ ಕಾಂಗ್ರೆಸಿಗ ಎಂಬುದನ್ನು ಸಾರಿದರು.

ಕಾರ್ಯಕ್ರಮಕ್ಕೆ ಸಾಕ್ಷಿಯಾದ ಗಣ್ಯರು

ನೂತನ ಮುಖ್ಯಮಂತ್ರಿಗಳ ಪ್ರಮಾಣವಚನ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಕನಕಪೀಠದ ಸ್ವಾಮೀಜಿ ನಿರಂಜನಾನಂದಪುರಿ, ಸಂತ ಸೇವಾಲಾಲ್ ಸ್ವಾಮೀಜಿ, ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಮಹಾಸ್ವಾಮಿ, ಪೇಜಾವರ ಮಠದ ಶ್ರೀವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಭೋವಿ ಮಠದ ಇಮ್ಮಡಿ ಸಿದ್ದೇಶ್ವರ ಸ್ವಾಮೀಜಿ, ದ್ವಾರಕಾನಾಥ ಗುರೂಜಿ, ವಾಲ್ಮೀಕಿ ಗುರು ಪೀಠದ ಪ್ರಸನ್ನಾನಂದ ಸ್ವಾಮೀಜಿ, ಗದುಗಿನ ತೋಂಟದಾರ್ಯ ಸ್ವಾಮೀಜಿ, ಕುಕ್ಕೆ ಸುಬ್ರಹ್ಮಣ್ಯ ಮಠದ ಶ್ರೀವಿದ್ಯಾಪ್ರಸನ್ನತೀರ್ಥ ಸ್ವಾಮೀಜಿ ಸಹಿತ 55ಕ್ಕೂ ಅಧಿಕ ಮಠಾಧೀಶರು ಉಪಸ್ಥಿತರಿದ್ದರು. ಕ್ರೈಸ್ತ ಸಮುದಾಯದ ಧರ್ಮಗುರು ಆರ್ಚ್ ಬಿಷಪ್ ಡಾ. ಪೀಟರ್ ಮಚಾದೋ, ಮುಸ್ಲಿಂ ಸಮುದಾಯ ಧರ್ಮಗುರು ಕಲಬುರಗಿಯ ದರ್ಗಾ ಹಜರತ್ ಖ್ವಾಜಾ ಬಂದೆನವಾಜ್ ನ ಹಜರತ್ ಹಫೀಜ್ ಡಾ.ಸೈಯದ್ ಮೊಹಮ್ಮದ್ ಅಲಿ ಅಲ್ ಹುಸೈನ್, ಶಿವಕುಮಾರ್ ಅವರ ಧರ್ಮಪತ್ನಿ ಉಷಾ ಶಿವಕುಮಾರ್, ಪುತ್ರಿ ಐಶ್ವರ್ಯ ಡಿ.ಕೆ.ಎಸ್. ಹೆಗ್ಡೆ, ಬಮುಲ್ ಅಧ್ಯಕ್ಷ ಡಿ.ಕೆ. ಸುರೇಶ್ ಭಾಗವಹಿಸಿದ್ದರು. ಕನಕಪುರ ದೊಡ್ಡಾಲಹಳ್ಳಿ ಸರಕಾರಿ ಶಾಲೆ ವಿದ್ಯಾರ್ಥಿಗಳು, ಕೂಲಿ ಕಾರ್ಮಿಕರು, ಪೌರ ಕಾರ್ಮಿಕರು, ರೈತ ಮುಖಂಡರು, ದಲಿತ ಸಂಘಟನೆ ಮುಖಂಡರು, ಹಿಂದುಳಿದ ವರ್ಗಗಳ ಮುಖಂಡರು, ಸ್ತ್ರೀ ಶಕ್ತಿ ಸಂಘಗಳ ಪ್ರತಿನಿಧಿಗಳು, ಮಹಿಳಾ ಮುಖಂಡರು, ಸಿನಿಮಾರಂಗ, ನ್ಯಾಯಾಂಗ, ಕ್ರೀಡಾಕ್ಷೇತ್ರ, ರಂಗಭೂಮಿ, ಸಾಹಿತಿಗಳು, ಕಲಾವಿದರು, ಕೈಗರಿಕೋದ್ಯಮಿಗಳು, ವಾಣಿಜ್ಯೋದ್ಯಮಿಗಳು, ಹೋಟೆಲ್ ಉದ್ಯಮಿಗಳು, ಯುವ ಮುಖಂಡರು ಮುತ್ತಿತರರು ಈ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಸಿದ್ದರಾಮಯ್ಯ ಸಂಪುಟದ 16 ಸಚಿವರಿಗೆ ಕೊಕ್

ಮೊದಲ ಹಂತದಲ್ಲಿ 13 ಶಾಸಕರು ಮಾತ್ರ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದು, ಸಿದ್ದರಾಮಯ್ಯ ಸಂಪುಟದಲ್ಲಿದ್ದ 16 ಶಾಸಕರನ್ನು ಸಂಪುಟದಿಂದ ಕೈಬಿಡಲಾಗಿದೆ.

1. ಜಮೀರ್ ಅಹಮದ್ ಖಾನ್
2. ಎಚ್.ಸಿ.ಮಹದೇವಪ್ಪ
3. ಕೆ.ವೆಂಕಟೇಶ್
4. ಶಿವರಾಜ್ ಎಸ್. ತಂಗಡಗಿ
5. ಆರ್.ಬಿ.ತಿಮ್ಮಾಪುರ್
6. ಶಿವಾನಂದ ಪಾಟೀಲ್
7. ಎಚ್.ಕೆ.ಪಾಟೀಲ್
8. ಎನ್.ಎಸ್.ಬೋಸರಾಜು
9. ದಿನೇಶ್ ಗುಂಡುರಾವ್
10. ಲಕ್ಷ್ಮೀ ಹೆಬ್ಬಾಳ್ಕರ್
11. ಮಧು ಬಂಗಾರಪ್ಪ
12. ಎಂ.ಸಿ.ಸುಧಾಕರ್
13. ಶರಣಬಸಪ್ಪ ದರ್ಶಾನಪುರ
14. ಎಸ್.ಎಸ್. ಮಲ್ಲಿಕಾರ್ಜುನ
15. ಸಂತೋಷ್ ಲಾಡ್
16. ಎನ್.ಚೆಲುವರಾಯಸ್ವಾಮಿ

ರಾಜೀನಾಮೆ ಹಾಗೂ ನಿಧನದಿಂದ ತೆರವಾದವರು:

17. ಬಿ.ನಾಗೇಂದ್ರ
18. ಕೆ.ಎನ್.ರಾಜಣ್ಣ,
19. ದಿವಂಗತ ಡಿ.ಸುಧಾಕರ್

- ಶಿವಕುಮಾರ್ ಅವರ ಪತ್ನಿ ಉಷಾ, ಮಗಳು ಐಶ್ವರ್ಯ ಡಿಕೆಎಸ್ ಹೆಗ್ಡೆ ಮತ್ತು ಇತರ ಕುಟುಂಬ ಸದಸ್ಯರು ಉಪಸ್ಥಿತರಿದ್ದರು.
- ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಿರ್ಗಮಿತ ಸಿಎಂ ಸಿದ್ದರಾಮಯ್ಯ, ಮಾಜಿ ಸಿಎಂ ವೀರಪ್ಪ ಮೊಯ್ಲಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಮತ್ತು ರಾಜ್ಯಸಭಾ ಸದಸ್ಯ ಕೆ.ಸಿ. ವೇಣುಗೋಪಾಲ್, ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ, ಕೇರಳ ಸಿಎಂ ವಿ.ಡಿ. ಸತೀಶನ್, ಹಿಮಾಚಲ ಪ್ರದೇಶ ಸಿಎಂ ಸುಖವಿಂದರ್ ಸಿಂಗ್ ಸುಖು ಭಾಗಿ.
- ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಉಪಸ್ಥಿತರಿದ್ದರು.
- ಇನ್ಫೋಸಿಸ್ ಸಹ-ಸಂಸ್ಥಾಪಕ ನಾರಾಯಣ ಮೂರ್ತಿ, ರಾಜ್ಯಸಭಾ ಸದಸ್ಯೆ ಸುಧಾ ಮೂರ್ತಿ ಉಪಸ್ಥಿತರಿದ್ದರು.
- ಆದಿಚುಂಚನಗಿರಿ ಸಂಸ್ಥಾನದ ನಿರ್ಮಲಾನಂದನಾಥ ಸ್ವಾಮೀಜಿ ಉಪಸ್ಥಿತಿ
- ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಅಧ್ಯಕ್ಷ ವೆಂಕಟೇಶ್ ಪ್ರಸಾದ್, ಮಾಜಿ ಭಾರತೀಯ ಕ್ರಿಕೆಟಿಗರಾದ ಮೊಹಮ್ಮದ್ ಅಜರುದ್ದೀನ್, ಅನಿಲ್ ಕುಂಬ್ಳೆ ಉಪಸ್ಥಿತರಿದ್ದರು.
- ನಟ ಧನಂಜಯ, ಸಂಗೀತ ನಿರ್ದೇಶಕರಾದ ಅರ್ಜುನ್ ಜನ್ಯ ಮತ್ತು ಗುರುಕಿರಣ್ ಮತ್ತು ನಟಿ-ರಾಜಕಾರಣಿ ರಮ್ಯಾ ಭಾಗಿ
- ಪ್ರಮಾಣವಚನ ಕಾರ್ಯಕ್ರಮ ಬಳಿಕ ಶಿವಕುಮಾರ್ ಅವರು ವಿಧಾನಸೌಧ ಪ್ರವೇಶಿಸುವ ಮುನ್ನ
- ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು.
- ಜಗಜ್ಯೋತಿ ಬಸವಣ್ಣ, ನಾಡಪ್ರಭು ಕೆಂಪೇಗೌಡ, ರಾಷ್ಟ್ರಪಿತ ಮಹಾತ್ಮಾ ಗಾಂಧಿ, ದೇಶದ ಪ್ರಥಮ ಪ್ರಧಾನಿ ಪಂಡಿತ್ ಜವಾಹರ್ ಲಾಲ್ ನೆಹರು ಅವರ ಪ್ರತಿಮೆಗೂ ಪುಷ್ಪ ನಮನ ಸಲ್ಲಿಸಿದರು.
- ವಿಧಾನಸೌಧದ ಉತ್ತರ ದ್ವಾರದ ಮೆಟ್ಟಿಲುಗಳಿಗೆ ನಮಿಸಿ ವಿಧಾನಸೌಧ ಪ್ರವೇಶಿಸಿದರು.
- ವಿಧಾನಸೌಧದ ಮೂರನೇ ಮಹಡಿಯಲ್ಲಿ ಮುಖ್ಯಮಂತ್ರಿ ಕಚೇರಿಗೆ ಪ್ರವೇಶಿಸಿದ ಡಿ.ಕೆ ಶಿವಕುಮಾರ್ ಅವರು ಪುರೋಹಿತರ ವೇದಘೋಷಗಳ ಮಧ್ಯೆ, ಮುಖ್ಯಮಂತ್ರಿ ಕುರ್ಚಿಗೆ ನಮಿಸಿ, ಆಸೀನರಾದರು.
- ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ರಾಜ್ಯದ 230 ಬಸ್ ನಿಲ್ದಾಣಗಳಲ್ಲಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಕಾರ್ಯಕ್ರಮವನ್ನು ನೇರ ಪ್ರಸಾರ ಮಾಡಲಾಯಿತು.

ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್: ಘೋಷಣೆ



ಪುಟ ೧ ➡ ರಾಜ್ಯದಲ್ಲಿ ಉದ್ಯೋಗ ಸಮಸ್ಯೆಯಿದ್ದು, 56 ಸಾವಿರ ಹುದ್ದೆಗಳು ಖಾಲಿ ಇವೆ. ಇವುಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಖಾಸಗಿ ಉದ್ಯೋಗ ವಿನಿಮಯ ಕೇಂದ್ರ ಸ್ಥಾಪನೆ: ಸರ್ಕಾರದ ವತಿಯಿಂದ ಖಾಸಗಿ ಉದ್ಯೋಗ ವಿನಿಮಯ ಕೇಂದ್ರ ಸ್ಥಾಪಿಸಿ, ಖಾಸಗಿ ಕಂಪನಿಗಳಿಗೆ ಬೇಕಾದ ಹುದ್ದೆಗಳ ಅನುಗುಣವಾಗಿ ತರಬೇತಿ ನೀಡಲಾಗುವುದು ಎಂದರು. ಅಲ್ಲದೆ, ಖಾಸಗಿ ಕಂಪನಿಗಳು ಕರ್ನಾಟಕದ ಉದ್ಯೋಗಿಗಳಿಗೆ ಹೆಚ್ಚಿನ ಪಾಲನ್ನು ನೀಡಬೇಕಾಗುತ್ತದೆ ಎಂದು ಹೇಳಿದರು. ಕಂಪನಿ ಅಥವಾ ಸಂಸ್ಥೆಗಳಿಗೆ ಯಾವ ರೀತಿಯ ಉದ್ಯೋಗಿಗಳ ಅಗತ್ಯವಿದೆಯೋ, ಅದಕ್ಕೆ ತಕ್ಕಂತೆ ಯುವಕರಿಗೆ ಉದ್ಯೋಗ ಆಧಾರಿತ ತರಬೇತಿ ನೀಡಲಾಗುವುದು. ತರಬೇತಿಯ ನಂತರ ಆಯಾ ಸಂಸ್ಥೆಗಳೇ ತಮಗೆ ಬೇಕಾದವರನ್ನು ಆಯ್ಕೆ ಮಾಡಿಕೊಳ್ಳಬಹುದು. ಉದ್ಯೋಗಗಳಲ್ಲಿ ಕನ್ನಡಿಗರಿಗೆ ಹೆಚ್ಚಿನ ಪಾಲನ್ನು ನೀಡಲಾಗುವುದು. ಇದಕ್ಕಾಗಿ ವೈದ್ಯಕೀಯ, ಕಾಲೇಜುಗಳು ಸೇರಿದಂತೆ ವಿವಿಧ ರಂಗಗಳ ಪ್ರಮುಖರನ್ನು ಕರೆಸಿ ವಿಶ್ವಾಸಕ್ಕೆ ತೆಗೆದುಕೊಂಡು ಶೇಕಡಾವಾರು ಪ್ರಮಾಣವನ್ನು ನಿಗದಿಪಡಿಸಲಾಗುವುದು ಎಂದು ತಿಳಿಸಿದರು. ಈ ಕುರಿತು ಸಂಪೂರ್ಣವಾಗಿ ಚರ್ಚಿಸಿ ವರದಿ ನೀಡಲು ಕ್ಯಾಬಿನೆಟ್ ಸಹೋದ್ಯೋಗಿಗಳಿಗೆ ಸೂಚಿಸಲಾಗಿದ್ದು, ಒಂದು ತಿಂಗಳ ಒಳಗಾಗಿ ವಿವರವಾದ ವರದಿ ಸಲ್ಲಿಸಲಿದ್ದಾರೆ. ಎಲ್ಲವೂ ಆನ್‌ಲೈನ್ ಮೂಲಕವೇ ನಡೆಯಲಿದ್ದು, ಯಾವುದೇ ಪ್ರಭಾವಕ್ಕೆ ಅವಕಾಶವಿರುವುದಿಲ್ಲ ಎಂದು ಹೇಳಿದರು.

10 ಸಾವಿರ ಭಾರತ್ ಜೋಡೋ ಯುವಕರ ಸಂಘ ಸ್ಥಾಪನೆ: ರಾಜ್ಯದಲ್ಲಿ 10 ಸಾವಿರ ಭಾರತ್ ಜೋಡೋ ಯುವಕರ ಸಂಘ ಸ್ಥಾಪಿಸಲಾಗುವುದು. ಮೊದಲ ಹಂತದಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ ಒಟ್ಟು 6 ಸಾವಿರ ಸಂಘಗಳನ್ನು ಸ್ಥಾಪಿಸಲಾಗುವುದು. ಇದು ಯುವಕರಲ್ಲಿ ಕ್ರೀಡಾ ನಾಯಕತ್ವ ಬೆಳೆಸುವ ಉದ್ದೇಶ ಹೊಂದಿದೆ. ಪ್ರತಿ ಸಂಘಕ್ಕೆ 10 ಲಕ್ಷ ರೂ. ಸಹಾಯಧನ ನೀಡಲಾಗುವುದು ಎಂದರು. ಪ್ರತಿ ಸಂಘದಲ್ಲಿ ಕನಿಷ್ಠ 150ರಿಂದ 200 ಯುವಕರಿರುತ್ತಾರೆ. ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳು, ನಾಟಕಗಳು, ನಾಯಕತ್ವದ ಗುಣಗಳನ್ನು ಬೆಳೆಸುವುದು ಮತ್ತು ಸಾಮಾಜಿಕ ಸಾಮರಸ್ಯ ಕಾಪಾಡುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದರು.

ವಿದ್ಯುತ್ ಹಾಗೂ ನೀರು ಸಂಪರ್ಕ

2,500 ಚದರ ಅಡಿ ವಿಸ್ತೀರ್ಣದ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡುತ್ತೇವೆ. ಈ ಮೊದಲು ಒಸಿ, ಸಿಸಿ ಇಲ್ಲದೆ ವಿದ್ಯುತ್ ಸಂಪರ್ಕ ಸಿಗುತ್ತಿರಲಿಲ್ಲ, ಈಗ ಅದಕ್ಕೆ ರಿಲೀಫ್ ಕೊಡಲು ಮುಂದಾಗಿದ್ದೇವೆ ಎಂದರು.

ಡಾಂಬರೀಕರಣಕ್ಕೆ ಒತ್ತು

ಬೆಂಗಳೂರು ನಗರ ಪ್ರದೇಶದಲ್ಲಿ (ಜಿಬಿಎ, ಬಿಡಿ ವ್ಯಾಪ್ತಿಯಲ್ಲಿ) ರಸ್ತೆಗೆ ಡಾಂಬರೀಕರಣ ಮಾಡಲು 2 ಸಾವಿರ ಕೋಟಿ ರೂ.ಗಳನ್ನು ಹಣ ಬಿಡುಗಡೆ ಮಾಡಲು ಸಂಪುಟದಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ. ಮುಂದಿನ 3 ರಿಂದ 4 ತಿಂಗಳಲ್ಲಿ ಈ ಕೆಲಸವನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ ಎಂದು ವಿವರಿಸಿದರು.

ಬಿ ನಿಂದ ಎ ಖಾತೆಗೆ ಪರಿವರ್ತನೆ ರಾಜ್ಯಾದ್ಯಂತ ವಿಸ್ತರಣೆ

ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿದ್ದ ಬಿ ಖಾತೆಯಿಂದ ಎ ಖಾತೆಗೆ ಪರಿವರ್ತನೆ ಮಾಡಿಕೊಳ್ಳುವ ಸೌಲಭ್ಯವನ್ನು ರಾಜ್ಯಾದ್ಯಂತ ವಿಸ್ತರಿಸಲು ತೀರ್ಮಾನ ಕೈಗೊಳ್ಳಲಾಗಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಅರ್ಹ ಆಸ್ತಿಗಳ ದಾಖಲೆಗಳನ್ನು ಸರಿಪಡಿಸುವುದು. ಇದು ಸರ್ಕಾರದ ಭೂ ಗ್ಯಾರಂಟಿ (ಆರನೇ ಗ್ಯಾರಂಟಿ) ಯೋಜನೆಯಾಗಿದೆ. ಇದರಿಂದ ಸಾರ್ವಜನಿಕರು ಬ್ಯಾಂಕ್ ಲೋನ್ ಪಡೆಯಲು, ಮಕ್ಕಳಿಗೆ ಆಸ್ತಿ ಹಂಚಲು ಅಥವಾ ಇತರ ಕಾರ್ಯಗಳಿಗೆ ಅಧಿಕೃತ ದಾಖಲೆಗಳನ್ನು ಹೊಂದಲು ಸುಲಭವಾಗುತ್ತದೆ ಎಂದು ತಿಳಿಸಿದರು.

10 ವಿದೇಶಿಯರು ಸೇರಿ 21 ಜನ ಸಜೀವ ದಹನ

ಪುಟ ೧ ➡ ಗಾಯಗೊಂಡವರಲ್ಲಿ ಹಲವರ ಸ್ಥಿತಿ ಗಂಭೀರವಾಗಿದೆ.

ಅಕ್ರಮ ಕಾರ್ಯಾಚರಣೆ: ದಿಲ್ಲಿ ಸರ್ಕಾರದ ಬೆಡ್ ಆ್ಯಂಡ್ ಬ್ರೇಕ್‌ಫಾಸ್ಟ್ ನೀತಿಯಲ್ಲಿ ಕೇವಲ ಆರು ಕೊಠಡಿಗಳಿಗೆ ಮಾತ್ರ ಅನುಮತಿ ಇದ್ದರೂ, ಹೋಟೆಲ್‌ನಲ್ಲಿ ಬೇಸ್‌ಮೆಂಟ್ ಮತ್ತು ಮೇಲಿನ ಮಹಡಿಗಳಲ್ಲಿ ಅನಧಿಕೃತ ಕೊಠಡಿಗಳನ್ನು ನಿರ್ಮಿಸಿ ಒಟ್ಟು 25 ಕೊಠಡಿಗಳನ್ನು ನಡೆಸಲಾಗುತ್ತಿತ್ತು. ಕಟ್ಟಡದ ಎತ್ತರ 15 ಮೀಟರ್‌ಗಿಂತ ಹೆಚ್ಚಿದ್ದರಿಂದ ಅಗ್ನಿಶಾಮಕ ಸುರಕ್ಷತಾ ಅನುಮತಿ ಕಡ್ಡಾಯವಾಗಿತ್ತು. ಆದರೆ, ದಿಲ್ಲಿ ಅಗ್ನಿಶಾಮಕ ದಳಕ್ಕೆ ಯಾವುದೇ ಎನ್‌ಒಸಿ ಅರ್ಜಿ ಸಲ್ಲಿಕೆಯಾಗಿರಲಿಲ್ಲ.

ನರಹತ್ಯೆ ಆರೋಪದಲ್ಲಿ ಪ್ರಕರಣ: ಕಟ್ಟಡದ ಮಾಲೀಕ ಲವ್‌ಕೇಶ್, ಪರವಾನಗಿ ಹೊಂದಿರುವ ಜೈ ಮಿಶ್ರಾ ಮತ್ತು ಹೋಟೆಲ್ ಮಾಲೀಕ ಲೋಕೇಶ್ ಬಜಾಜ್ ವಿರುದ್ಧ ದಿಲ್ಲಿ ಪೊಲೀಸರು ನರಹತ್ಯೆ ಆರೋಪದಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ. ಸದ್ಯಕ್ಕೆ ಯಾರನ್ನೂ ಬಂಧಿಸಿಲ್ಲವಾದರೂ, ಶಂಕಿತರು ಪರಾರಿಯಾಗುವುದನ್ನು ತಡೆಯಲು ರೈಲ್ವೆ ಮತ್ತು ವಿಮಾನ ನಿಲ್ದಾಣದ ಅಧಿಕಾರಿಗಳಿಗೆ ಎಚ್ಚರಿಕೆ ನೀಡಲಾಗಿದೆ.

ಸಂತ್ರಸ್ತರ ವಿವರ ಮತ್ತು ಪರಿಹಾರ: ಮ್ಯಾಕ್ಸ್ ಆಸ್ಪತ್ರೆ 39 ರೋಗಿಗಳನ್ನು ದಾಖಲಿಸಿಕೊಂಡಿದ್ದು, ಅವರಲ್ಲಿ 15 ಜನರನ್ನು ಐಸಿಯುಗೆ ಸೇರಿಸಲಾಗಿದೆ. ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ (ಎಐಐಎಂಎಸ್) 13 ರೋಗಿಗಳನ್ನು ದಾಖಲಿಸಿಕೊಂಡಿದೆ. ಪ್ರಧಾನಿ ನರೇಂದ್ರ ಮೋದಿ, ಮೃತರ ಕುಟುಂಬದವರಿಗೆ ತಲಾ 2 ಲಕ್ಷ ರೂ. ಹಾಗೂ ಗಾಯಗೊಂಡವರಿಗೆ 50,000 ರೂಪಾಯಿಗಳ ಪರಿಹಾರ ಘೋಷಿಸಿದ್ದಾರೆ.

ಮಮತಾ ಪಕ್ಷದಲ್ಲಿ ಐತಿಹಾಸಿಕ ವಿಭಜನೆ

ಪುಟ ೧ ➡ ನಾವು ಟಿಎಂಸಿ ಚಿಹ್ನೆಯ ಮೇಲೆ ಗೆದ್ದ 58 ಶಾಸಕರು. ವಿಧಾನಸಭೆಯಲ್ಲಿ ನಾವೇ ನಿಜವಾದ ಟಿಎಂಸಿ ಎಂದು ರಿತಬ್ರತಾ ಬ್ಯಾನರ್ಜಿ ಘೋಷಿಸಿದರು. ಆದರೆ ಅವರು ಮಮತಾ ಬ್ಯಾನರ್ಜಿಯವರ ನಾಯಕತ್ವವನ್ನು ಒಪ್ಪಿಕೊಂಡು, ಅಭಿಷೇಕ್ ಬ್ಯಾನರ್ಜಿಯವರ ಅಧಿಕಾರವನ್ನು ಮಾತ್ರ ತಿರಸ್ಕರಿಸಿದ್ದಾರೆ. ಮಮತಾ ನಮ್ಮ ನಾಯಕರು, ಆದರೆ ಅಭಿಷೇಕ್ ಅವರನ್ನು ನಾವು ಒಪ್ಪುವುದಿಲ್ಲ ಎಂದು ಬಂಡಾಯ ಗುಂಪಿನ ನಾಯಕರು ತಿಳಿಸಿದ್ದಾರೆ. ಬಂಡಾಯ ಗುಂಪು ರಿತಬ್ರತಾ ಬ್ಯಾನರ್ಜಿ ಅವರನ್ನು ವಿರೋಧ ಪಕ್ಷದ ನಾಯಕರನ್ನಾಗಿ, ಅಖ್ರುಜ್ಜಮಾನರನ್ನು ಮುಖ್ಯ ಸಚೇತಕರನ್ನಾಗಿ ನೇಮಿಸಿದೆ. ಜಾವೇದ್ ಅಹ್ಮದ್ ಖಾನ್, ಸಂದೀಪನ್ ಸಾಹಾ, ಸಬೀನಾ ಯಾಸ್ಮಿನ್ ಹಾಗೂ ಶಿಯುಲಿ ಸಾಹಾ ಅವರನ್ನು ಉಪನಾಯಕರನ್ನಾಗಿ ಘೋಷಿಸಲಾಗಿದೆ.

ಟಿಎಂಸಿ ಸಮಿತಿಗಳ ವಿಸರ್ಜನೆ: ಈ ಬೆಳವಣಿಗೆಯಿಂದ ಬೆಚ್ಚಿಬಿದ್ದ ಟಿಎಂಸಿ ನಾಯಕತ್ವವು ರಾಜ್ಯದ ಎಲ್ಲಾ ಪಕ್ಷ ಸಮಿತಿಗಳು ಮತ್ತು ಇತರ ಸಂಘಟನೆಗಳನ್ನು ತಕ್ಷಣದಿಂದಲೇ ವಿಸರ್ಜಿಸಿದೆ. ಪಕ್ಷದ ಸಂಘಟನೆ ಹಾಗೂ ಕಾರ್ಯವೈಖರಿಯನ್ನು ಮರುಪರಿಶೀಲಿಸಿ ಹೊಸ ಸಮಿತಿಗಳನ್ನು ರಚಿಸುವುದಾಗಿ ಪ್ರಕಟಿಸಿದೆ.

ರಾಜಕೀಯ ವೀಕ್ಷಕರ ಪ್ರಕಾರ, ಈ ಬೆಳವಣಿಗೆ ಮಹಾರಾಷ್ಟ್ರದಲ್ಲಿ ಶಿವಸೇನೆ ಹಾಗೂ ಎನ್‌ಸಿಪಿ ಪಕ್ಷಗಳಲ್ಲಿ ನಡೆದ ವಿಭಜನೆಯ ಮಾದರಿಯನ್ನು ನೆನಪಿಸುತ್ತದೆ. ಆದರೆ, ಇಲ್ಲಿ ಮಮತಾ ಬ್ಯಾನರ್ಜಿ ಇನ್ನೂ ಸಕ್ರಿಯ ರಾಜಕೀಯ ನಾಯಕಿಯಾಗಿರುವುದು ಪ್ರಮುಖ ವ್ಯತ್ಯಾಸವಾಗಿದೆ. ಸಿಪಿಎಂ ಮತ್ತು ಕಾಂಗ್ರೆಸ್ ನಾಯಕರು, ಅಧಿಕಾರಕ್ಕೆ ಬಂದ ಬಳಿಕ ಇತರ ಪಕ್ಷಗಳ ಶಾಸಕರನ್ನು ಸೆಳೆದ ಟಿಎಂಸಿ ಈಗ ಅದೇ ರಾಜಕೀಯದ ಪರಿಣಾಮವನ್ನು ಅನುಭವಿಸುತ್ತಿದೆ ಎಂದು ಟೀಕಿಸಿದ್ದಾರೆ. ಮತ್ತೊಂದೆಡೆ ಬಿಜೆಪಿ, ಮಮತಾ ಬ್ಯಾನರ್ಜಿ ತಮ್ಮ ಶಾಸಕರ ಮೇಲಿನ ನಿಯಂತ್ರಣ ಕಳೆದುಕೊಂಡಿದ್ದಾರೆ ಎಂದು ಹೇಳಿದೆ. ಈ ಬೆಳವಣಿಗೆಯಿಂದ ಟಿಎಂಸಿಯಲ್ಲಿ ಎರಡು ಅಧಿಕಾರ ಕೇಂದ್ರಗಳು ರೂಪುಗೊಳ್ಳುವ ಸಾಧ್ಯತೆ ಮೂಡಿದ್ದು, ಪಕ್ಷದ ಭವಿಷ್ಯ ಹಾಗೂ ರಾಜಕೀಯ ಪರಂಪರೆ ಕುರಿತ ಅನಿಶ್ಚಿತತೆ ಹೆಚ್ಚಾಗಿದೆ.

ಬಿ.ಕೆ.ಹರಿಪ್ರಸಾದ್‌ಗೆ ಕೆಪಿಸಿಸಿ ಅಧ್ಯಕ್ಷ ಪಟ್ಟ

ಪುಟ ೧ ➡ ಕಾಂಗ್ರೆಸ್ ವರಿಷ್ಠರ ಅಂಗಳದಲ್ಲಿ ಜಾತಿ ಲೆಕ್ಕಾಚಾರದ ಚರ್ಚೆ ನಡೆದಿತ್ತು. ಸದ್ಯ ಜಾತಿ ಕಾಂಬಿನೇಶನ್ ಆಧಾರದ ಮೇಲೆ ಅಧ್ಯಕ್ಷರನ್ನು ಆಯ್ಕೆ ಮಾಡಲು ಹೈಕಮಾಂಡ್ ಚಿಂತನೆ ನಡೆಸಿತ್ತು. ರಾಜ್ಯದಲ್ಲಿ ಅಹಿಂದ ನಾಯಕರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಿರುವ ಹೈಕಮಾಂಡ್, ಈಗ ಕೆಪಿಸಿಸಿ ಪೀಠದಲ್ಲಿ ಅಹಿಂದ ನಾಯಕರಿಗೇ ಮಣೆ ಹಾಕುವ ಲೆಕ್ಕಾಚಾರ ಹಾಕಿತ್ತು.

ಈ ಹಿನ್ನೆಲೆಯಲ್ಲಿ ಮೂಲ ಕಾಂಗ್ರೆಸಿಗ ಹಾಗೂ ಹೈಕಮಾಂಡ್‌ಗೆ ಆಪ್ತರಾಗಿರುವ ಹಿಂದುಳಿದ ವರ್ಗದ ಪ್ರಮುಖ ಮುಖಂಡ ಬಿ.ಕೆ. ಹರಿಪ್ರಸಾದ್‌ಗೆ ಮಣೆ ಹಾಕಲು ಎಐಸಿಸಿ ತೀರ್ಮಾನ ಮಾಡಿದೆ. ಬಿ.ಕೆ.ಹರಿಪ್ರಸಾದ್ ಈಡಿಗ ಸಮುದಾಯದವರಾಗಿದ್ದು, ಅಹಿಂದ ಸಮುದಾಯದವರನ್ನು ಗಮನದಲ್ಲಿಟ್ಟುಕೊಂಡು ಹರಿಪ್ರಸಾದ್‌ಗೆ ಮಣೆ ಹಾಕಿದೆ.

ಕಾರ್ಯಾಧ್ಯಕ್ಷರ ನೇಮಕ: ಒಬ್ಬರು ಅಧ್ಯಕ್ಷರ ಜತೆಗೆ 2ರಿಂದ 3 ಕಾರ್ಯಾಧ್ಯಕ್ಷರನ್ನು ನೇಮಿಸಲು ಗಂಭೀರ ಚಿಂತನೆ ನಡೆದಿದೆ. ಆ ಮೂಲಕ ಜಾತಿ ಲೆಕ್ಕಾಚಾರ ಸರಿದೂಗಿಸಿ, ಎಲ್ಲ ಸಮುದಾಯಗಳಿಗೂ ಆದ್ಯತೆ ನೀಡಿದಂತಾಗುತ್ತದೆ ಎಂಬುದು ಕೈ ನಾಯಕರ ಯೋಚನೆಯಾಗಿದೆ.

ಸಂಘಟನಾ, ವಾಕ್‌ಚಾತುರ್ಯ ಹೊಂದಿರುವ ಬಿ.ಕೆ. ಹರಿಪ್ರಸಾದ್, ರಾಜ್ಯ ರಾಜಕಾರಣದ ಬಗ್ಗೆ ಸಾಕಷ್ಟು ಅನುಭವ ಹೊಂದಿದ್ದಾರೆ. ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ ಉಸ್ತುವಾರಿಯಾಗಿ ಹೊಣೆ ಹೊತ್ತಿದ್ದ ಅವರು, ಪಕ್ಷ ಸಂಘಟನೆಗೆ ಕಾರ್ಯತಂತ್ರ ರೂಪಿಸಿದ್ದರು.

ಸ.ಶಾಲೆಗಳಲ್ಲಿ ವಾಣಿಜ್ಯ ಚಿತ್ರೀಕರಣಕ್ಕೆ ನಿರ್ಬಂಧ

ಬೆಂಗಳೂರು: ಸರ್ಕಾರಿ ಶಾಲೆಗಳ ಶೈಕ್ಷಣಿಕ ವಾತಾವರಣ, ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಗೌಪ್ಯತೆಯನ್ನು ಕಾಪಾಡುವ ಉದ್ದೇಶದಿಂದ ಶಾಲಾ ಆವರಣಗಳಲ್ಲಿ ಚಲನಚಿತ್ರ, ಧಾರಾವಾಹಿ, ಕಿರುಚಿತ್ರ, ಸಾಕ್ಷ್ಯಚಿತ್ರ ಹಾಗೂ ಸಾಮಾಜಿಕ ಜಾಲತಾಣಗಳಿಗಾಗಿ ನಡೆಯುವ ವಾಣಿಜ್ಯಕ ಚಿತ್ರೀಕರಣಕ್ಕೆ ರಾಜ್ಯ ಸರ್ಕಾರ ಕಟ್ಟುನಿಟ್ಟಿನ ನಿರ್ಬಂಧ ಹೇರಿದೆ.

ಶಾಲೆಗಳು ಶಿಕ್ಷಣದ ಕೇಂದ್ರಗಳಾಗಿದ್ದು, ವಿದ್ಯಾರ್ಥಿಗಳ ಕಲಿಕೆ ಮತ್ತು ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾದ ವಾತಾವರಣವನ್ನು ಒದಗಿಸಬೇಕಾಗಿದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಸಾಮಾಜಿಕ ಜಾಲತಾಣಗಳ ಪ್ರಭಾವ ಹೆಚ್ಚಿದ ಹಿನ್ನೆಲೆಯಲ್ಲಿ ಶಾಲಾ ಆವರಣಗಳನ್ನು ಚಿತ್ರೀಕರಣ ಮತ್ತು ರೀಲ್ಸ್ ನಿರ್ಮಾಣಕ್ಕಾಗಿ ಬಳಸುವ ಪ್ರವೃತ್ತಿ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿತ್ತು. ಈ ಹಿನ್ನೆಲೆಯಲ್ಲಿ ಶಾಲೆಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಯಾವುದೇ ರೀತಿಯ ಅಡ್ಡಿ ಉಂಟಾಗದಂತೆ ಕ್ರಮ ಕೈಗೊಳ್ಳಲಾಗಿದೆ.

ಶಿಕ್ಷಣ ಇಲಾಖೆಯ ಅಧಿಕಾರಿಗಳ ಪ್ರಕಾರ, ತರಗತಿಗಳು ನಡೆಯುವ ಸಮಯದಲ್ಲಿ ಚಿತ್ರೀಕರಣ ನಡೆಸುವುದರಿಂದ ವಿದ್ಯಾರ್ಥಿಗಳ ಏಕಾಗ್ರತೆಗೆ ಧಕ್ಕೆಯಾಗುತ್ತದೆ. ಇದಲ್ಲದೆ, ಶಾಲಾ ಆವರಣದಲ್ಲಿ ಚಿತ್ರೀಕರಣ ನಡೆಯುವ ವೇಳೆ ವಿದ್ಯಾರ್ಥಿಗಳು ತಿಳಿಯದೆ ದೃಶ್ಯಗಳಲ್ಲಿ ಕಾಣಿಸಿಕೊಳ್ಳುವ ಸಾಧ್ಯತೆಗಳಿವೆ. ಇಂತಹ ಚಿತ್ರಗಳು ಅಥವಾ ವಿಡಿಯೊಗಳು ನಂತರ ವಿವಿಧ ಡಿಜಿಟಲ್ ವೇದಿಕೆಗಳಲ್ಲಿ ಬಳಕೆಯಾಗುವ ಮೂಲಕ ವಿದ್ಯಾರ್ಥಿಗಳ ವೈಯಕ್ತಿಕ ಗೌಪ್ಯತೆಗೆ ಧಕ್ಕೆ ಉಂಟಾಗಬಹುದು ಎಂಬ ಆತಂಕವನ್ನು ಸರ್ಕಾರ ವ್ಯಕ್ತಪಡಿಸಿದೆ.

ಕಿರುಸುದ್ದಿ

ಅಭಿವೃದ್ಧಿ ಪಥದಲ್ಲಿ ಮುನ್ನಡೆಸಲಿ: ಸಿದ್ದರಾಮಯ್ಯ



• **ಬೆಂಗಳೂರು:** ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಡಿ.ಕೆ.ಶಿವಕುಮಾರ್ ಹಾಗೂ ಹೊಸ ಸಚಿವ ಸಂಪುಟದ ಸದಸ್ಯರಿಗೆ ಅಭಿನಂದನೆ ತಿಳಿಸಿರುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕವನ್ನು ಶಾಂತಿ, ಸಮೃದ್ಧಿ ಹಾಗೂ ಸೌಹಾರ್ದತೆಯ ನಾಡನ್ನಾಗಿ ಕಟ್ಟಲು, ರಾಜ್ಯದ ಪ್ರತಿಯೊಬ್ಬರಿಗೂ ನ್ಯಾಯ, ಸ್ವಾತಂತ್ರ್ಯ ಹಾಗೂ ಸುರಕ್ಷತೆ ಒದಗಿಸಲು ಪ್ರಾಮಾಣಿಕ ಶ್ರಮಿಸಿದ ಆತ್ಮಸಂತೃಪ್ತಿ ನನಗಿದೆ. ಗ್ಯಾರಂಟಿ ಯೋಜನೆಗಳನ್ನು ಒಳಗೊಂಡ ಅಭಿವೃದ್ಧಿ ಕಾರ್ಯಕ್ರಮಗಳ ಜತೆಗೆ ಸಾಮಾಜಿಕ ನ್ಯಾಯವನ್ನು ಅನುಷ್ಠಾನಕ್ಕೆ ಕೊಟ್ಟು ಕರ್ನಾಟಕ ಅಭಿವೃದ್ಧಿಯ ಹೊಸ ಮಾದರಿಯನ್ನು ಕಟ್ಟಿದ್ದೇವೆ. ಮುಂದಿನ ದಿನಗಳಲ್ಲಿ ನೂತನ ಮುಖ್ಯಮಂತ್ರಿಗಳು ಹಾಗೂ ಸಚಿವರು ಎಲ್ಲರೂ ಒಗ್ಗೂಡಿ ಕರ್ನಾಟಕವನ್ನು ಇದೇ ಮಾದರಿಯ ಅಭಿವೃದ್ಧಿ ಪಥದಲ್ಲಿ ಮುನ್ನಡೆಸಲಿ ಎಂದು ಆಶಿಸಿದ್ದಾರೆ.

ಎಚ್‌ಡಿಡಿ, ಬಿಎಸ್‌ವೈ ಆಶೀರ್ವಾದ ಪಡೆದ ಡಿಕೆಶಿ



• **ಬೆಂಗಳೂರು:** ಡಿ.ಕೆ ಶಿವಕುಮಾರ್ ಪಾಲಿಗೆ ಶುಭಗಳಿಗೆ ಕೂಡಿ ಬಂದಿದ್ದು, ಬುಧವಾರ ರಾಜಕೀಯ ಜೀವನದ ಹೊಸ ಅಧ್ಯಾಯ ಆರಂಭಿಸಿರುವ ಅವರು, ಬುಧವಾರ ರಾಜ್ಯದ ಹಿರಿಯ ರಾಜಕಾರಣಿಗಳಾದ ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡ ಮತ್ತು ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದಿರುವುದು ವಿಶೇಷವಾಗಿದೆ. ಮಂಗಳವಾರ ತಡರಾತ್ರಿ ದಿಲ್ಲಿಯಿಂದ ಬೆಂಗಳೂರಿಗೆ ಆಗಮಿಸಿದ ಅವರು ಬುಧವಾರ ಬೆಳಗ್ಗೆ ಕಾವೇರಿ ನಿವಾಸಕ್ಕೆ ತೆರಳಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆದುಕೊಂಡ ನಂತರ ದೇವೇಗೌಡರ ನಿವಾಸಕ್ಕೆ ತೆರಳಿದ ಡಿ.ಕೆ. ಶಿವಕುಮಾರ್ ಅವರು, ಹೂಗುಚ್ಛ ನೀಡಿ ಆಶೀರ್ವಾದ ಪಡೆದುಕೊಂಡರು, ಈ ವೇಳೆ ದೇವೇಗೌಡರು ಶುಭ ಹಾರೈಸಿ ಸನ್ಮಾನಿಸಿದರು. ಇದರ ಜತೆಗೆ ಡಾಲರ್ಸ್ ಕಾಲೋನಿಯಲ್ಲಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಧವಳಗಿರಿ ನಿವಾಸಕ್ಕೆ ಭೇಟಿ ನೀಡಿದ ಅವರು, ದೇವರ ಮನೆ ಪ್ರವೇಶಿಸಿ ನಮಸ್ಕರಿಸಿ, ಯಡಿಯೂರಪ್ಪ ಅವರ ಆಶೀರ್ವಾದ ಪಡೆದುಕೊಂಡರು. ಇದಕ್ಕೂ ಮೊದಲು ಡಾ. ಜಿ. ಪರಮೇಶ್ವರ್ ಅವರು ಶಿವಕುಮಾರ್ ಅವರ ಸದಾಶಿವನಗರ ನಿವಾಸಕ್ಕೆ ಭೇಟಿ ನೀಡಿ ಅಭಿನಂದಿಸಿದರು. ಮಾಜಿ ಸಿಎಂ ಸಿದ್ದರಾಮಯ್ಯ ಅವರ ಕಾವೇರಿ ನಿವಾಸಕ್ಕೆ ತೆರಳಿದ ಸಿಎಂ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಅವರ ಆಶೀರ್ವಾದ ಪಡೆದರು.

ವಿಧಾನ ಪರಿಷತ್‌ಗೆ ಅಭ್ಯರ್ಥಿಗಳ ಆಯ್ಕೆ

• **ಬೆಂಗಳೂರು:** ವಿಧಾನ ಪರಿಷತ್ ಚುನಾವಣೆಗೆ ಕಾಂಗ್ರೆಸ್ ತನ್ನ 4 ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದು, ಬಿ.ಕೆ ಹರಿಪ್ರಸಾದ್ ಅವರಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಜತೆಗೆ ಮೇಲ್ಮನೆಗೂ ಅವಕಾಶ ನೀಡಲಾಗಿದೆ. ಒಟ್ಟು ಖಾಲಿಯಾಗಲಿರುವ 7 ಸ್ಥಾನಗಳ ಪೈಕಿ 4 ಸ್ಥಾನಗಳು ಕಾಂಗ್ರೆಸ್‌ಗೆ ಸಿಗಲಿದ್ದು, ಈ ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಕಾಂಗ್ರೆಸ್ ಹೈಕಮಾಂಡ್ ಆಯ್ಕೆ ಮಾಡಿದೆ. ಈಗಾಗಲೇ ಸದಸ್ಯರಿರುವ ಬಿ.ಕೆ. ಹರಿಪ್ರಸಾದ್ ಮತ್ತು ತಿಪ್ಪಣ್ಣ ಕಮನಕೂರು ಅವರಿಗೆ ಮತ್ತೊಮ್ಮೆ ಅವಕಾಶ ನೀಡಲಾಗಿದೆ. ಇನ್ನೂ ಪಿ.ವಿ ಮೋಹನ್ ಮತ್ತು ಶಿವಣ್ಣ ಮಳವಳ್ಳಿ ಅವರಿಗೆ ಅವಕಾಶ ನೀಡಲಾಗಿದೆ.

ಸಿಎಂ ಸಚಿವಾಲಯ ಸಿಬ್ಬಂದಿ ಬಿಡುಗಡೆ


• **ಬೆಂಗಳೂರು:** ಸಿದ್ದರಾಮಯ್ಯ ಅವರ ಮುಖ್ಯಮಂತ್ರಿ ಸಚಿವಾಲಯ, ಸಲಹೆಗಾರರ ಆಪ್ತ ಶಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಬಿಡುಗಡೆ ಮಾಡಲಾಗಿದೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ಮುಖ್ಯಮಂತ್ರಿಯವರ ಸಚಿವಾಲಯ ಮುಖ್ಯಮಂತ್ರಿಯವರ ಸಲಹೆಗಾರರ ಆಪ್ತ ಶಾಖೆಗಳಲ್ಲಿ ಸ್ಥಳ ನಿಯುಕ್ತಿ, ನಿಯೋಜನೆ, ಒಪ್ಪಂದ ಹಾಗೂ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರರನ್ನು ಬಿಡುಗಡೆಗೊಳಿಸಲಾಗಿದೆ.

ಉಪ ಮುಖ್ಯಮಂತ್ರಿಯಾಗಿ ಜಿ.ಪರಮೇಶ್ವರ್, ಸಚಿವರಾಗಿ ಯತೀಂದ್ರ ಸಿದ್ದರಾಮಯ್ಯ, ಖಾದರ್ ಪ್ರಮಾಣ

ರಾಜ್ಯದಲ್ಲಿ ಶಿವಕುಮಾರ್ ಶಕೆ...

ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಡಿ.ಕೆ.ಶಿವಕುಮಾರ್, ಅವರ ಸಂಪುಟಕ್ಕೆ 13 ಜನ ಶಾಸಕರು ಸಂಪುಟ ದರ್ಜೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಇವರಲ್ಲಿ ಡಾ. ಜಿ.ಪರಮೇಶ್ವರ್ ಅವರು ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಉಳಿದಂತೆ ವಿಧಾನಸಭಾಧ್ಯಕ್ಷರಾಗಿದ್ದ ಯು.ಟಿ.ಖಾದರ್ ಹಾಗೂ ಇದೇ ಮೊದಲ ಬಾರಿಗೆ ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಡಾ. ಜಿ. ಪರಮೇಶ್ವರ



ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿ ಡಾ. ಜಿ. ಪರಮೇಶ್ವರ ಅವರ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಅವರು ಕೊರಟಗೆರೆ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. 1992-1994ರಲ್ಲಿ ಎಂ. ವೀರಪ್ಪ ಮೊಯ್ಲಿ ಅವರ ಸರ್ಕಾರದಲ್ಲಿ ರೇಷ್ಮೆ ರಾಜ್ಯ ಸಚಿವರಾಗಿದ್ದರು. 1999ರಲ್ಲಿ ಎಸ್. ಎಂ. ಕೃಷ್ಣ ಅವರ ಸರ್ಕಾರದಲ್ಲಿ ಉನ್ನತ ಶಿಕ್ಷಣ ಸಚಿವರಾಗಿ (ಸ್ವತಂತ್ರ ನಿರ್ವಹಣೆ) ಕಾರ್ಯ ನಿರ್ವಹಿಸಿದ್ದರು. ಅವರದೇ ಸರ್ಕಾರದಲ್ಲಿ 2001ರವರೆಗೆ ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರಾಗಿಯೂ ಕೆಲಸ ಮಾಡಿದ್ದಾರೆ. ಬಳಿಕ 2004ರವರೆಗೆ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರಾಗಿದ್ದರು. 2003ರಿಂದ ವಾರ್ತಾ ಮತ್ತು ಪ್ರಚಾರ ಸಚಿವರಾಗಿದ್ದರು. 2013ರಲ್ಲಿ ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿದ್ದರು. 2016ರಿಂದ 2017ರವರೆಗೆ ವಿಧಾನ ಪರಿಷತ್ತಿನ ಸಭಾ ನಾಯಕರಾಗಿದ್ದರು. 2018ರಲ್ಲಿ ಕುಮಾರಸ್ವಾಮಿ ಸಂಪುಟದಲ್ಲಿ ಗೃಹ ಸಚಿವರಾಗಿದ್ದು, 2023ರಲ್ಲಿ ಸಿದ್ದರಾಮಯ್ಯ ಅವರ ಸಂಪುಟದಲ್ಲಿಯೂ ಗೃಹ ಸಚಿವರಾಗಿದ್ದರು.

ಈಶ್ವರ ಖಂಡ್ರೆ



ಸಂಪುಟ ದರ್ಜೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿರುವ ಈಶ್ವರ ಖಂಡ್ರೆ ಅವರು 2008ರಲ್ಲಿ ಭಾಲ್ಕಿ ವಿಧಾನಸಭಾ ಕ್ಷೇತ್ರದಿಂದ ವಿಧಾನಸಭೆಯನ್ನು ಪ್ರವೇಶಿಸಿದರು. ಅವರು 2016ರಿಂದ 2018ರವರೆಗೆ ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಪೌರಾಡಳಿತ ಮತ್ತು ಸಾರ್ವಜನಿಕ ಉದ್ಯಮಗಳ ರಾಜ್ಯ ಸಚಿವರಾಗಿದ್ದರು.

ಯು.ಟಿ. ಖಾದರ್



ಮಂಗಳೂರು ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಯು.ಟಿ. ಖಾದರ್ ಅವರು ಡಿ.ಕೆ. ಶಿವಕುಮಾರ್ ಅವರ ಸಂಪುಟದಲ್ಲಿ ಸೇರ್ಪಡೆಯಾಗಿದ್ದಾರೆ. ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿರುವ ಅವರು 2023ರಲ್ಲಿ ಸಿದ್ದರಾಮಯ್ಯ ಅವರ ಅವಧಿಯಲ್ಲಿ ವಿಧಾನಸಭೆಯ ಸಭಾಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದ್ದರು. ತಂದೆ ಹಾಜಿ ಯು.ಟಿ. ಫರೀದ್ ಅವರ ನಿಧನದ ನಂತರ 2007ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಗೆದ್ದು ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದರು. 2013ರಿಂದ 2016ರವರೆಗೆ ಸಿದ್ದರಾಮಯ್ಯ ಅವರ ಮೊದಲ ಸಂಪುಟದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾಗಿದ್ದರು. 2018ರಲ್ಲಿ ಕುಮಾರಸ್ವಾಮಿ ಅವರ ಸಂಪುಟದಲ್ಲಿ ನಗರಾಭಿವೃದ್ಧಿ ಮತ್ತು ವಸತಿ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.



ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿ ಮೊದಲ ಬಾರಿಗೆ ವಿಧಾನಸೌಧಕ್ಕೆ ಆಗಮಿಸಿದ ಡಿ.ಕೆ.ಶಿವಕುಮಾರ್ ಅವರು ಉತ್ತರ ದ್ವಾರದ ಮೆಟ್ಟಿಲುಗಳಿಗೆ ನಮಸ್ಕರಿಸಿ ವಿಧಾನ ಸೌಧ ಪ್ರವೇಶಿಸಿದರು.

ಪ್ರಿಯಾಂಕ್ ಖರ್ಗೆ



ಚಿತ್ತಾಪುರ ಶಾಸಕ ಪ್ರಿಯಾಂಕ್ ಖರ್ಗೆ ಅವರು ಸಂಪುಟ ದರ್ಜೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಅವರು ಚಿತ್ತಾಪುರ ಕ್ಷೇತ್ರದಿಂದ ಮೂರು ಬಾರಿ ವಿಧಾನಸಭೆ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. 2016ರಿಂದ 2018ರವರೆಗೆ ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಐಟಿ-ಬಿಟಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. 2018ರಲ್ಲಿ ಕುಮಾರಸ್ವಾಮಿ ಸಂಪುಟದಲ್ಲಿ ಸಮಾಜ ಕಲ್ಯಾಣ ಇಲಾಖೆ ಸಚಿರಾಗಿದ್ದರು. 2023ರಲ್ಲಿ ಸಿದ್ದರಾಮಯ್ಯ ಅವರ ಎರಡನೇ ಸಂಪುಟದಲ್ಲಿ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಐಟಿ ಮತ್ತು ಬಿಟಿ ಸಚಿವರಾಗಿ ಕರ್ತವ್ಯ ನಿರ್ವಹಿಸಿದ್ದಾರೆ.

ಯತೀಂದ್ರ ಸಿದ್ದರಾಮಯ್ಯ



ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಗ ಯತೀಂದ್ರ ಸಿದ್ದರಾಮಯ್ಯ ಅವರೂ ಡಿ.ಕೆ. ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ. ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಪ್ರಸ್ತುತ ವಿಧಾನ ಪರಿಷತ್ ಸದಸ್ಯರಾಗಿರುವ ಅವರು 2018ರಲ್ಲಿ ವರುಣಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಯತೀಂದ್ರ ಸಿದ್ದರಾಮಯ್ಯ ಅವರು ವೃತ್ತಿಯಲ್ಲಿ ವೈದ್ಯರಾಗಿದ್ದಾರೆ.

ಸೋನಿಯಾ ಶುಭಾಶಯ

ಕಾಂಗ್ರೆಸ್ ಪಕ್ಷದ ವರಿಷ್ಠರಾದ ಸೋನಿಯಾ ಗಾಂಧಿ ಅವರು ಮಧ್ಯಾಹ್ನ ಡಿ.ಕೆ ಶಿವಕುಮಾರ್ ಅವರಿಗೆ ದೂರವಾಣಿ ಕರೆ ಮಾಡಿ ಶುಭ ಹಾರೈಸಿದರು. ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯಿರಿ. ಕರ್ನಾಟಕವನ್ನು ಯಶಸ್ವಿಯಾಗಿ ಮುನ್ನಡೆಸುತ್ತೀರಿ ಎಂಬ ಅದಮ್ಯ ವಿಶ್ವಾಸ ನನಗಿದೆ. ಹೊಸ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿ. ಮತ್ತಷ್ಟು ಯಶಸ್ಸು ನಿಮ್ಮದಾಗಲಿ ಎಂದು ಶುಭಾಶಯ ಹೇಳಿದರು.

ಗಣ್ಯರ ಶುಭ ಹಾರೈಕೆ

ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿರುವ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಗಣ್ಯರು ಶುಭ ಹಾರೈಸಿದ್ದಾರೆ. ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡ, ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ಎಚ್.ಡಿ ಕುಮಾರಸ್ವಾಮಿ, ತಮಿಳುನಾಡು ಮುಖ್ಯಮಂತ್ರಿ ವಿಜಯ್ ಜೋಸೆಫ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ್ ಮತ್ತು ಛಲವಾದಿ ನಾರಾಯಣಸ್ವಾಮಿ ಸೇರಿದಂತೆ ಹಲವು ಗಣ್ಯರು ಶುಭ ಹಾರೈಸಿದ್ದಾರೆ.

ಕೆ.ಎಚ್. ಮುನಿಯಪ್ಪ



ಡಿ.ಕೆ. ಶಿವಕುಮಾರ್ ಅವರ ಸಂಪುಟದಲ್ಲಿ ಸಚಿವರಾಗಿ ಕೆ.ಎಚ್. ಮುನಿಯಪ್ಪ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ದೇವನಹಳ್ಳಿ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಅವರು ಕಳೆದ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ಕೋಲಾರ ಲೋಕಸಭಾ ಕ್ಷೇತ್ರದಿಂದ ಏಳು ಬಾರಿ ಸಂಸದರಾಗಿರುವ ಅವರು ಕ್ಯಾಬಿನೆಟ್ ಸಚಿವರಾಗಿಯೂ ಸೇವೆ ಸಲ್ಲಿಸಿದ್ದಾರೆ. ಅವರು 2004-2009ರವರೆಗೆ ಮನಮೋಹನ್ ಸಿಂಗ್ ಮೊದಲ ಸಂಪುಟದಲ್ಲಿ ರಸ್ತೆ, ಸಾರಿಗೆ ಮತ್ತು ಹೆದ್ದಾರಿ ಸಚಿವರಾಗಿ ಕಾರ್ಯ ನಿರ್ವಹಿಸಿದ್ದಾರೆ. 2009-12ರಲ್ಲಿ ಸಿಂಗ್ ಸರ್ಕಾರದಲ್ಲಿ ರೈಲ್ವೇ ರಾಜ್ಯ ಸಚಿವರಾಗಿದ್ದರು. 2012-2014ರವರೆಗೆ ಕೇಂದ್ರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವ (ಸ್ವತಂತ್ರ ನಿರ್ವಹಣೆ)ರಾಗಿ ಕೆಲಸ ಮಾಡಿದ್ದರು.

ಕೃಷ್ಣ ಬೈರೇಗೌಡ



ಡಿ.ಕೆ. ಶಿವಕುಮಾರ್ ಅವರ ಸಂಪುಟದಲ್ಲಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿರುವ ಕೃಷ್ಣ ಬೈರೇಗೌಡ ಅವರು 2003ರಲ್ಲಿ ರಾಜಕೀಯ ಜೀವನ ಪ್ರಾರಂಭಿಸಿದರು. ತಂದೆಯ ನಿಧನದಿಂದ ತೆರವಾದ ವೇಮಗಲ್ ಕ್ಷೇತ್ರದ ಉಪ ಚುನಾವಣೆಯಲ್ಲಿ ಸ್ಪರ್ಧಿಸಿ ವಿಜಯ ಸಾಧಿಸಿದರು. 2008ರಲ್ಲಿ ಬ್ಯಾಟರಾಯನಪುರ ಕ್ಷೇತ್ರದಿಂದ ಶಾಸಕರಾದರು. 2013ರಲ್ಲಿ ಸಿದ್ದರಾಮಯ್ಯ ಅವರ ಸಚಿವ ಸಂಪುಟದಲ್ಲಿ ಕೃಷಿ ಸಚಿವರಾಗಿದ್ದರು. 2018ರಲ್ಲಿ ಕುಮಾರಸ್ವಾಮಿ ಸಂಪುಟದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. 2023ರಲ್ಲಿ ಸಿದ್ದರಾಮಯ್ಯ ಅವರ ಎರಡನೇ ಸಂಪುಟದಲ್ಲಿ ಕಂದಾಯ ಇಲಾಖೆ ಸಚಿವರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಇಲಾಖೆಯಲ್ಲಿ ಅನೇಕ ಸುಧಾರಣೆಗಳನ್ನು ತಂದಿದ್ದಾರೆ.

ಬೈರತಿ ಸುರೇಶ್ ಸಚಿವ



ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಶಾಸಕ ಬೈರತಿ ಸುರೇಶ್ ಕ್ಯಾಬಿನೆಟ್ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. 2012ರಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗುವ ಮೂಲಕ ರಾಜಕೀಯ ಜೀವನ ಪ್ರಾರಂಭಿಸಿದರು. 2018ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಪರಿಷತ್ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೆಬ್ಬಾಳದಿಂದ ಶಾಸಕರಾಗಿ ಆಯ್ಕೆಯಾದರು. 2023ರಲ್ಲಿ ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಬೆಂಗಳೂರು ಹೊರತುಪಡಿಸಿ ನಗರಾಭಿವೃದ್ಧಿ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

ಡಾ. ಶರಣಪ್ರಕಾಶ ಪಾಟೀಲ್



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಡಾ. ಶರಣ ಪ್ರಕಾಶ ಪಾಟೀಲ್ ಅವರು ಸೇಡಂ ವಿಧಾನಸಭಾ ಕ್ಷೇತ್ರವನ್ನು ನಾಲ್ಕನೇ ಬಾರಿಗೆ ಪ್ರತಿನಿಧಿಸುತ್ತಿದ್ದಾರೆ. 2013ರಲ್ಲಿ ಸಿದ್ದರಾಮಯ್ಯ ನೇತೃತ್ವದ ಮೊದಲ ಸಚಿವ ಸಂಪುಟದಲ್ಲಿ ವೈದ್ಯಕೀಯ ಶಿಕ್ಷಣ ಸಚಿವರಾಗಿದ್ದರು. 2023ರಲ್ಲಿ ಸಿದ್ದರಾಮಯ್ಯ ಅವರ ಎರಡನೇ ಸಚಿವ ಸಂಪುಟದಲ್ಲಿ ವೈದ್ಯಕೀಯ ಶಿಕ್ಷಣ ಮತ್ತು ಕೌಶಲಾಭಿವೃದ್ಧಿ ಸಚಿರಾಗಿ ಕರ್ತವ್ಯ ನಿರ್ವಹಿಸಿದ್ದರು.

ಸತೀಶ್ ಜಾರಕಿಹೊಳಿ



ಸತೀಶ್ ಜಾರಕಿಹೊಳಿ ಅವರು ಡಿ.ಕೆ. ಶಿವಕುಮಾರ್ ಅವರ ಸಂಪುಟದಲ್ಲಿ ಸ್ಥಾನ ಪಡೆದಿದ್ದು, ತಮ್ಮ 30 ವರ್ಷಗಳ ರಾಜಕೀಯ ಜೀವನದಲ್ಲಿ ಐದು ಬಾರಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. 2004-05ರಲ್ಲಿ ಧರಂ ಸಿಂಗ್ ನೇತೃತ್ವದ ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಮೊದಲ ಬಾರಿಗೆ ಜವಳಿ ಖಾತೆ ಸಚಿವರಾಗಿದ್ದರು. 2013-16ರಲ್ಲಿ ಸಿದ್ದರಾಮಯ್ಯ ಅವರ ಮೊದಲ ಸಂಪುಟದಲ್ಲಿ ಅಬಕಾರಿ ಮತ್ತು ಸಣ್ಣ ಕೈಗಾರಿಕೆಗಳ ಸಚಿವರಾಗಿ ಸೇವೆ ಸಲ್ಲಿಸಿದ್ದರು. 2018-19ರಲ್ಲಿ ಕುಮಾರಸ್ವಾಮಿ ಸಂಪುಟದಲ್ಲಿ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಸಚಿವರಾಗಿದ್ದರು. 2023ರಲ್ಲಿ ಸಿದ್ದರಾಮಯ್ಯ ಅವರ ಎರಡನೇ ಸಂಪುಟದಲ್ಲಿ ಲೋಕೋಪಯೋಗಿ ಸಚಿವರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಸತೀಶ್ ಜಾರಕಿಹೊಳಿ ಅವರು ಯಮಕನಮರಡಿ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ.

ಕೆ.ಜೆ. ಜಾರ್ಜ್



ಐದು ದಶಕಗಳಿಗೂ ಹೆಚ್ಚು ಕಾಲ ರಾಜಕೀಯ ಜೀವನದಲ್ಲಿರುವ ಕೆ.ಜೆ. ಜಾರ್ಜ್ ಅವರು ಡಿ.ಕೆ. ಶಿವಕುಮಾರ್ ಅವರ ಸಂಪುಟದಲ್ಲಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. 1989-91ರಲ್ಲಿ ವೀರೇಂದ್ರ ಪಾಟೀಲ್ ಅವರ ಸರ್ಕಾರದಲ್ಲಿ ಸಾರಿಗೆ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗಳ ರಾಜ್ಯ ಸಚಿವರಾಗಿದ್ದರು. 1991ರಲ್ಲಿ ಎಸ್. ಬಂಗಾರಪ್ಪ ಅವರ ಸಂಪುಟದಲ್ಲಿ ವಸತಿ ಮತ್ತು ನಗರಾಭಿವೃದ್ಧಿ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಬಳಿಕ 2013ರಲ್ಲಿ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಗೃಹ ಸಚಿವರಾಗಿದ್ದರು. 2015-18ರವರೆಗೆ ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿ ಕರ್ತವ್ಯ ನಿರ್ವಹಿಸಿದ್ದರು. 2018ರಲ್ಲಿ ಕುಮಾರಸ್ವಾಮಿ ಅವರ ಸಂಪುಟದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರಾಗಿದ್ದರು. 2023ರಲ್ಲಿ ಸಿದ್ದರಾಮಯ್ಯ ಅವರ ಎರಡನೇ ಸಂಪುಟದಲ್ಲಿ ಇಂಧನ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ.

ಎಂ.ಬಿ. ಪಾಟೀಲ್



ಡಿ.ಕೆ. ಶಿವಕುಮಾರ್ ಅವರ ಸಂಪುಟದಲ್ಲಿ ಸಚಿವರಾಗಿ ಎಂ.ಬಿ. ಪಾಟೀಲ್ ಪ್ರಮಾಣ ವಚನ ಸ್ವೀಕರಿಸಿದ್ದಾರೆ. 1991ರಲ್ಲಿ ರಾಜಕೀಯ ಜೀವನ ಪ್ರಾರಂಭಿಸಿದ ಅವರು ಐದನೇ ಬಾರಿಗೆ ಶಾಸಕರಾಗಿದ್ದಾರೆ. ಪ್ರಸ್ತುತ ಬಬಲೇಶ್ವರ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. 2013ರಲ್ಲಿ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಜಲಸಂಪನ್ಮೂಲ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. 2018ರಲ್ಲಿ ಕುಮಾರಸ್ವಾಮಿ ಅವರ ಸಂಪುಟದಲ್ಲಿ ಬೆಂಗಳೂರು ಅಭಿವೃದ್ಧಿ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. 2023ರಲ್ಲಿ ಮತ್ತೆ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ದೊಡ್ಡ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಮೂಲಸೌಕರ್ಯ ಅಭಿವೃದ್ಧಿ ಖಾತೆ ನಿರ್ವಹಿಸಿದ್ದಾರೆ.

ರಾಮಲಿಂಗಾ ರೆಡ್ಡಿ



ಎಂಟು ಬಾರಿ ಶಾಸಕರಾಗಿರುವ ರಾಮಲಿಂಗಾರೆಡ್ಡಿ ಅವರು ಡಿ.ಕೆ. ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ. ಐದು ದಶಕಗಳಿಗೂ ಹೆಚ್ಚು ಕಾಲ ರಾಜಕಾರಣದಲ್ಲಿರುವ ಅವರು ಮೊದಲು ಜಯನಗರ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು. ಪ್ರಸಕ್ತ ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. 2013ರಿಂದ 2017ರವರೆಗೆ ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಸಾರಿಗೆ ಸಚಿವರಾಗಿದ್ದರು. ಬಳಿಕ ಗೃಹ ವ್ಯವಹಾರಗಳ ರಾಜ್ಯ ಸಚಿವರಾಗಿ ಕರ್ತವ್ಯ ನಿರ್ವಹಿಸಿದ್ದರು.



ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸಿದ್ದೇನೆ

ಮುಖ್ಯಮಂತ್ರಿಯಾಗಿ ರಾಜ್ಯದ ಏಳು ಕೋಟಿ ಜನತೆಯ ಸೇವೆ ಮಾಡಲು ಒದಗಿ ಬಂದಿರುವ ಈ ಅವಕಾಶ ನನ್ನ ಬದುಕಿನ ಭಾಗ್ಯ ಎಂದು ವಿನೀತನಾಗಿ ಸ್ವೀಕರಿಸಿದ್ದೇನೆ.

ಮನೆ ಮಗನಂತೆ ಹರಸಿ, ಹಾರೈಸಿ. ರಾಜಕೀಯ ಕ್ಷೇತ್ರದಲ್ಲಿ ಈ ಹಂತದ ವರೆಗೆ ನನ್ನನ್ನು ಬೆಳೆಸಿದ ಜನತಾ ಜನಾರ್ಧನರಿಗೆ ಕಾಯಾ ವಾಚಾ ಮನಸಾ ನನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡು, ಜನರ ಸೇವೆ ಮಾಡುತ್ತೇನೆ ಎಂದು ನಾನು ವಿನಯಪೂರ್ವಕವಾಗಿ ವಾಗ್ದಾನ ಮಾಡುತ್ತೇನೆ.

ರಾಜ್ಯದ ಜನತೆಗೆ ನಮ್ಮ ಸರ್ಕಾರ ಮತ್ತು ಹೊಸ ಸಾರಥಿಯಾಗಿ ಬಂದಿರುವ ನನ್ನ ಬಗ್ಗೆ ಬಹಳ ನಿರೀಕ್ಷೆಗಳಿವೆ ಎನ್ನುವುದು ನನಗೆ ಗೊತ್ತಿದೆ. ಇಂದು ಕರ್ನಾಟಕ ಜಗಮೆಚ್ಚುತ್ತಿರುವ ಹೆಮ್ಮೆಯ ರಾಜ್ಯವಾಗಿದೆ. ಅಭಿವೃದ್ಧಿ ಪಥದಲ್ಲಿರುವ ಕರ್ನಾಟಕವನ್ನು ಸಮೃದ್ಧ, ಸ್ವಾವಲಂಬಿ ಮತ್ತು ಸ್ವಾಭಿಮಾನಿ ರಾಜ್ಯವನ್ನಾಗಿ ರೂಪಿಸಬೇಕೆಂಬ ಕನಸು ನನ್ನದು. ಅದನ್ನು ನನಸು ಮಾಡಲು ವಿಶ್ವಾಸಪೂರ್ವಕವಾಗಿ ಸಹಕಾರ ನೀಡಬೇಕೆಂದು ಏಳು ಕೋಟಿ ಕನ್ನಡಿಗರಲ್ಲಿ ಬೊಗಸೆಯೊಡ್ಡಿ ಕೇಳಿಕೊಳ್ಳುತ್ತಿದ್ದೇನೆ.

ಪಕ್ಷದ ಮೇಲಿನ ನಿಷ್ಠೆ ಮತ್ತು ಜನಸೇವೆ ಮಾಡುವ ನನ್ನ ಸಾಮರ್ಥ್ಯದ ಮೇಲೆ ನಂಬಿಕೆ ಇಟ್ಟು ಮುಖ್ಯಮಂತ್ರಿಯಾಗಿ ಸೇವೆಗೈಯ್ಯುವ ಅವಕಾಶ ನೀಡಿದ ಕಾಂಗ್ರೆಸ್ ಪಕ್ಷಕ್ಕೆ, ನನ್ನ ಮೇಲೆ ವಿಶ್ವಾಸ ಇಟ್ಟು ತಮ್ಮ ನಾಯಕನಾಗಿ ಆಯ್ಕೆ ಮಾಡಿರುವ ಶಾಸಕ ಮಿತ್ರರಿಗೆ ನಾನು ಆಭಾರಿಯಾಗಿದ್ದೇನೆ.

ಮತ್ತೊಮ್ಮೆ ತಮ್ಮೆಲ್ಲರಿಗೆ ಹೃದಯಪೂರ್ವಕ ಧನ್ಯವಾದಗಳು. ನಿಮ್ಮೆಲ್ಲರ ಪ್ರೀತಿ-ವಿಶ್ವಾಸ ಸದಾ ನನ್ನ ಮೇಲಿರಲಿ.

ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

ಮಧ್ಯ ಕರ್ನಾಟಕಕ್ಕಿಲ್ಲ ಸಚಿವ ಸ್ಥಾನ

▸ **ವಾದಿರಾಜ್ ಕಮರೂರು**

• **ಶಿವಮೊಗ್ಗ:** ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಮೊದಲ ಹಂತದ ಸಂಪುಟದಲ್ಲಿ ಮಧ್ಯ ಕರ್ನಾಟಕದ ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಯಾರಿಗೂ ಮಂತ್ರಿ ಸ್ಥಾನ ಸಿಕ್ಕಿಲ್ಲ.

ಸಿದ್ದರಾಮಯ್ಯ ಸರ್ಕಾರದಲ್ಲಿ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಎಸ್.ಎಸ್. ಮಲ್ಲಿಕಾರ್ಜುನ್, ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಸೊರಬದ ಶಾಸಕ ಮಧು ಬಂಗಾರಪ್ಪ ಪುನಃ ಸಚಿವರಾಗಲು ಪ್ರಯತ್ನಿಸಿದ್ದರು. ಮತ್ತೊಂದೆಡೆ ಹಿರಿಯ ಶಾಸಕರಾಗಿರುವ ಭದ್ರಾವತಿಯ ಬಿ.ಕೆ. ಸಂಗಮೇಶ್ವರ ಮತ್ತು ಸಾಗರದ ಬೇಳೂರು ಗೋಪಾಲಕೃಷ್ಣ ಕೂಡ ಲಾಬಿ ನಡೆಸಿದ್ದರು. ಅತ್ತ ದಾವಣಗೆರೆಯಲ್ಲಿ ಮೊನ್ನೆ ಮೊನ್ನೆ ಶಾಸಕರಾಗಿರುವ ಸಮರ್ಥ್ ಅವಕಾಶ ಸಿಕ್ಕರೆ ಸಚಿವ ಸ್ಥಾನ ನಿಭಾಯಿಸುವೆ ಎಂದು ಹೇಳಿಕೆ ನೀಡಿ ಹುಬ್ಬೇರುವಂತೆ ಮಾಡಿದ್ದರೆ, ಹೊನ್ನಾಳಿಯ ಶಾಸಕ ಡಿ.ಜಿ. ಶಾಂತನಗೌಡ ಪಕ್ಷ ಈ ಬಾರಿಯಾದರೂ ತಮ್ಮ ಹಿರಿತನವನ್ನು ಗುರುತಿಸುವುದೇ ಎಂದು ಕಾದುನೋಡುವ ತಂತ್ರ ಅನುಸರಿಸಿದ್ದಾರೆ.

ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಡಿ. ಸುಧಾಕರ್ ನಿಧನರಾಗಿರುವ ಕಾರಣ ಜಿಲ್ಲೆಯ ಹಿರಿಯ ಶಾಸಕ ಚಳ್ಳಕೆರೆಯ ರಘುಮೂರ್ತಿ ಸಚಿವರಾಗಲು ಬಯಸಿದ್ದರು. ಮೊಳಕಾಲ್ಮೂರಿನ ಎನ್.ವೈ. ಗೋಪಾಲಕೃಷ್ಣ ಕೂಡ ತಮ್ಮ ಆಕಾಂಕ್ಷೆಯನ್ನು ಪಕ್ಷದೊಳಗೆ ಹೇಳಿಕೊಂಡಿದ್ದರು.

ಇನ್ನು ಕಳೆದ ಮೂರು ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಸಚಿವ ಸ್ಥಾನವೇ ಸಿಕ್ಕಿರಲಿಲ್ಲ. ಕಾರಣ ತರೀಕೆರೆ ಶಾಸಕ ಜಿ.ಹೆಚ್. ಶ್ರೀನಿವಾಸ್ ಮತ್ತು ಶೃಂಗೇರಿಯ ರಾಜೇಗೌಡ ಹೊರತು ಉಳಿದ ಎಲ್ಲ ಕಾಂಗ್ರೆಸ್ ಶಾಸಕರು ಮೊದಲ ಬಾರಿಗೆ ಆಯ್ಕೆಯಾದವರು. ಹೀಗಾಗಿ ಶ್ರೀನಿವಾಸ್ ಆಕಾಂಕ್ಷಿಯಾಗಿದ್ದರೆ, ಡಿಕೆಶಿ ಕುಟುಂಬಕ್ಕೆ ಆತ್ಮೀಯರಾಗಿರುವ ರಾಜೇಗೌಡಗೆ ಲಕ್ ಕುದುರಲಿದೆ ಎಂದೇ ಕ್ಷೇತ್ರದ ಜನತೆ ಭಾವಿಸಿದ್ದರು.

ಆದರೆ ಡಿ.ಕೆ. ಶಿವಕುಮಾರ್ ಹೈಕಮಾಂಡ್ ಪಟ್ಟಿಗೆ ಮೊದಲ ಹಂತದಲ್ಲಿ ಮನ್ನಣೆ ನೀಡಿದಂತಿದೆ. ಪರಿಣಾಮ ಎರಡನೇ ಹಂತದ ವಿಸ್ತರಣೆಯವರೆಗೂ ಈ ಜಿಲ್ಲೆಗಳ ಸಚಿವಾಕಾಂಕ್ಷಿಗಳು ಸಂಪುಟ ಸೇರಲು ಕಸರತ್ತು ನಡೆಸಬೇಕಾಗಿದೆ. ಅದೃಷ್ಟ ಯಾರ ಪಾಲಿಗಿದೆ ಎಂಬುದು ಕೂಡ ಕುತೂಹಲವಾಗಿಯೇ ಉಳಿದಿದೆ.

ಸಿಎಂ ನಡೆಗೆ ಪೇಜಾವರಶ್ರೀ ಬೆಂಬಲ



• **ಉಡುಪಿ:** ಸರಕಾರವನ್ನು ಮುನ್ನಡೆಸುವಾಗ ಸಮಾಜದ ಎಲ್ಲಾ ನಾಗರಿಕರ ವಿಶ್ವಾಸವನ್ನು ಗಳಿಸುವುದು ಅತ್ಯಂತ ಮುಖ್ಯವಾಗುತ್ತದೆ. ಅಧಿಕಾರ ನಮ್ಮ ಕೈಯಲ್ಲಿದ್ದಾಗಲೂ ಸಮಾಜದ ಸರ್ವ ವರ್ಗಗಳ ನಂಬಿಕೆ ಯನ್ನು ಗಳಿಸಿಕೊಳ್ಳದಿದ್ದರೆ ಅನೇಕ ವಿವಾದ ಗಳು ತಲೆದೋರುವ ಪ್ರಸಂಗಗಳು ಎದುರಾಗುತ್ತವೆ. ಸಮಾಜದ ಯಾವುದೇ ಒಂದು ವರ್ಗದಲ್ಲಿ ಅಭದ್ರತೆ ಅಥವಾ ಭಯದ ವಾತಾವರಣ ನಿರ್ಮಾಣವಾದರೆ, ಅದರಿಂದ ಅಶಾಂತಿ ಉಂಟಾಗುವ ಸಂಭವವಿರುತ್ತದೆ ಎಂದು ಉಡುಪಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು ಅಭಿಪ್ರಾಯಪಟ್ಟಿದ್ದಾರೆ.

ನೂತನ ಸಿಎಂ ಪ್ರಮಾಣ ವಚನ ಸ್ವೀಕಾರ ಸಮಾರಂಭದ ಹಿನ್ನೆಲೆಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಶ್ರೀಗಳು, ಹೊಸ ಸರಕಾರದ ನಿಲುವಿಗೆ ತಮ್ಮ ಸಕಾರಾತ್ಮಕ ಬೆಂಬಲವನ್ನು ವ್ಯಕ್ತಪಡಿಸಿದರು.

ಸರ್ವಧರ್ಮ ಸಮಭಾವದ ಸಂದೇಶ: ನಮ್ಮ ನೂತನ ಮುಖ್ಯಮಂತ್ರಿಗಳು ತಾವು ಪ್ರಮಾಣ ವಚನ ಸ್ವೀಕರಿಸುವ ಸಂದರ್ಭದಲ್ಲಿಯೇ ಸರ್ವಧರ್ಮಗಳ ಹಾಗೂ ಧಾರ್ಮಿಕ ಮುಖಂಡರನ್ನು ಮುಂಚೂಣಿಯಲ್ಲಿಟ್ಟುಕೊಂಡು ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಆ ಮೂಲಕ ತಾವು ಇಡೀ ಸಮಾಜದ ಎಲ್ಲಾ ಧರ್ಮಗಳನ್ನು ಸಮಭಾವದಿಂದ ಕಾಣುತ್ತೇವೆ ಎಂಬ ಅತ್ಯಂತ ಶ್ರೇಷ್ಠ ಹಾಗೂ ಸೌಹಾರ್ದಯುತ ಸಂದೇಶವನ್ನು ನೀಡುತ್ತಿದ್ದಾರೆ.

ನೂತನ ಮುಖ್ಯಮಂತ್ರಿಗಳ ಈ ಉತ್ತಮವಾದ ನಡೆಯನ್ನು ಬೆಂಬಲಿಸುವುದು ನಮ್ಮೆಲ್ಲರ ಕರ್ತವ್ಯ ಎಂಬ ನೆರಳಿನಲ್ಲಿಯೇ ನಾವು ಕೂಡ ಈ ಪ್ರಮಾಣ ವಚನ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಶಾಂತಿ, ಭದ್ರತೆಗೆ ಶ್ರೀಕೃಷ್ಣನ ಅನುಗ್ರಹವಿರಲಿ: ನೂತನ ಮುಖ್ಯಮಂತ್ರಿಗಳಿಗೆ ಸಮಾಜವನ್ನು ಇದೇ ರೀತಿಯಾಗಿ ಎಲ್ಲರನ್ನೂ ಒಟ್ಟಿಗೆ ಸೇರಿಸಿಕೊಂಡು ಮುನ್ನಡೆಸುವ ಶಕ್ತಿ ಸಿಗಲಿ. ನಾಡಿನಲ್ಲಿ ಸದಾ ಶಾಂತಿ, ಭದ್ರತೆ ಹಾಗೂ ಸಮೃದ್ಧಿ ಉಂಟಾಗುವಂತೆ ಸರಕಾರವನ್ನು ಮುನ್ನಡೆಸಲು ಅವರಿಗೆ ಉಡುಪಿ ಶ್ರೀಕೃಷ್ಣನ ಹಾಗೂ ಶ್ರೀರಾಮಚಂದ್ರ ದೇವರ ಅನುಗ್ರಹ ಮತ್ತು ರಕ್ಷಣೆ ಸದಾ ಇರಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತಾ, ಎಲ್ಲರಿಗೂ ಮಂಗಳವನ್ನು ಹಾರೈಸುತ್ತೇನೆ ಎಂದು ಪೇಜಾವರ ಶ್ರೀಗಳು ತಮ್ಮ ಆಶೀರ್ವಚನದಲ್ಲಿ ನುಡಿದರು.



ಸಿಎಂ ಶಿವಕುಮಾರ್ ಗಾಂಧಿ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು.

ಸಿಎಂ ಎಸಿಎಸ್ ಆಗಿ ತುಷಾರ್ ಗಿರಿನಾಥ್

• **ಬೆಂಗಳೂರು:** ಡಿ.ಕೆ. ಶಿವಕುಮಾರ್ ಸಿಎಂ ಆಗುತ್ತಿದ್ದಂತೆ ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದಾರೆ. ಈ ಹಿಂದೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಅವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ಅಂಜುಂ ಪರ್ವೇಜ್ ಅವರನ್ನು ವರ್ಗಾವಣೆಗೊಳಿಸಿ, ಆ ಸ್ಥಾನಕ್ಕೆ ನಗರಾಭಿವೃದ್ಧಿ ಹಾಗೂ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ತುಷಾರ್ ಗಿರಿನಾಥ್ ಅವರನ್ನು ನೇಮಕ ಮಾಡಲಾಗಿದೆ. ಮುಖ್ಯಮಂತ್ರಿಗಳ ಕಾರ್ಯದರ್ಶಿಯಾಗಿದ್ದ ಬಿ.ಬಿ. ಕಾವೇರಿ ಅವರನ್ನು ವರ್ಗಾವಣೆಗೊಳಿಸಿ ಅವರ ಜಾಗಕ್ಕೆ ರಾಜೇಂದ್ರ ಚೋಳನ್ ಅವರನ್ನು ನೇಮಕ ಮಾಡಲಾಗಿದೆ.

ಆರ್ಥಿಕ ಸಲಹೆಗಾರರ ನೇಮಕ: ನಿವೃತ್ತ ಐಎಎಸ್ ಅಧಿಕಾರಿ ಎಲ್.ಕೆ. ಅತೀಕ್ ಅವರನ್ನು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರಾಗಿ ನೇಮಕಗೊಳಿಸಲಾಗಿದೆ. ಎಲ್.ಕೆ. ಅತೀಕ್ ಅವರು ಈ ಹಿಂದೆ ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು.

ಸಂಪಾದಕೀಯ

ಅಗ್ನಿ ದುರಂತಗಳು: ನಿರ್ಲಕ್ಷ್ಯ ಸಲ್ಲದು

ದಿಲ್ಲಿಯ ಮಾಳವೀಯ ನಗರ ಪ್ರದೇಶದಲ್ಲಿರುವ ಹೋಟೆಲೊಂದರಲ್ಲಿ ಭೀಕರ ಅಗ್ನಿ ಅನಾಹುತ ಸಂಭವಿಸಿ ವಿದೇಶಿಯರೂ ಸೇರಿದಂತೆ 20ಕ್ಕೂ ಅಧಿಕ ಮಂದಿ ಸಾವಿಗೀಡಾಗಿರುವುದು ಅತ್ಯಂತ ಮನಕಲಕುವ ದುರಂತ. ದುರಂತದಲ್ಲಿ 40ಕ್ಕೂ ಅಧಿಕ ಮಂದಿಯನ್ನು ರಕ್ಷಿಸಲಾಗಿದೆಯಾದರೂ ಅವರಲ್ಲಿ ಕೆಲವರು ಗಂಭೀರ ಸುಟ್ಟ ಗಾಯಗಳನ್ನು ಪಡೆದಿದ್ದಾರೆ. ಇನ್ನು ಕೆಲವರು ಬೆಂಕಿಯಿಂದ ರಕ್ಷಿಸಿಕೊಳ್ಳಲು ಹೋಟೆಲ್ ಮಹಡಿಯಿಂದ ಕೆಳಗೆ ಹಾರಿ ಗಾಯಗೊಂಡ ಘಟನೆಯೂ ನಡೆದಿದೆ. ಇದು ದಿಲ್ಲಿಯಲ್ಲಿ ದಶಕಗಳ ಹಿಂದೆ ನಡೆದ ಉಪಹಾರ್ ಸಿನಿಮಾ ಮಂದಿರದ



ಅಗ್ನಿದುರಂತವೂ ಸೇರಿದಂತೆ ಹಲವಾರು ಅಗ್ನಿ ದುರಂತಗಳ ಕಹಿನೆನಪುಗಳನ್ನು ಮತ್ತೊಮ್ಮೆ ಕೆದಕಿದೆ.

ಇಂತಹ ಅಗ್ನಿದುರಂತಗಳು ಆಕಸ್ಮಿಕವಾದರೂ ಬಹುತೇಕ ಬಾರಿ ಮಾನವ ಪ್ರಮಾದಗಳೇ ಇದಕ್ಕೆ ಕಾರಣವಾಗಿರುತ್ತವೆ ಎನ್ನುವುದು ಸುಳ್ಳಲ್ಲ. ಅದರಲ್ಲಿಯೂ ಅಗ್ನಿದುರಂತದಲ್ಲಿ ಸಾವುನೋವುಗಳು ಹೆಚ್ಚಾಗಲಂತೂ ಮಾನವನ ದುರಾಶೆ, ನೀತಿನಿಯಮಗಳ ಉಲ್ಲಂಘನೆ, ಆಡಳಿತದ ನಿರ್ಲಕ್ಷ್ಯ ಮೊದಲಾದವು ಪ್ರಮುಖ ಕಾರಣಗಳಾಗಿರುತ್ತವೆ. ಪ್ರಸಕ್ತ ಮಾಳವೀಯ ನಗರದ ಹೋಟೆಲ್ ದುರಂತದಲ್ಲೂ ಇದೇ ಅಂಶಗಳು ಪ್ರಧಾನವಾಗಿ ಎದ್ದು ಕಾಣುತ್ತಿರುವುದು ದುರ್ದೈವ. ಉಪಹಾರ ಮತ್ತು ವಿರಾಮ ಪಡೆಯಲಷ್ಟೇ ಈ ಹೋಟೆಲ್‌ಗೆ ಅನುಮತಿ ನೀಡಲಾಗಿದ್ದು, ಆರು ಕೊಠಡಿಗಳಿಗಷ್ಟೇ ಪರವಾನಿಗೆ ನೀಡಲಾಗಿತ್ತು. ಆದರೆ ಅಲ್ಲಿ 25 ಕೊಠಡಿಗಳನ್ನು ಪರವಾನಿಗೆರಹಿತವಾಗಿ ಕಟ್ಟಲಾಗಿತ್ತು. ಅಷ್ಟು ದೊಡ್ಡ ಕಟ್ಟಡಕ್ಕೆ ಕೇವಲ ಒಂದು ನಿರ್ಗಮನ ದ್ವಾರವಿದ್ದು, ಅಗ್ನಿಶಾಮಕ ವಾಹನಗಳು ಆಗಮಿಸಲು ಅಗತ್ಯವಾಗಿರುವ ಸೂಕ್ತ ಸ್ಥಳಾವಕಾಶವನ್ನೂ ಬಿಟ್ಟಿರಲಿಲ್ಲ. ಇವೆಲ್ಲವೂ ಆಡಳಿತದ ಕಣ್ಣು ತಪ್ಪಿಸಿ ನಡೆದಿರಲಾರದು. ಸ್ಥಳೀಯಾಡಳಿತವು ಇವನ್ನು ಕಂಡೂ ಕಾಣದಂತೆ ವರ್ತಿಸಿರುವ ಹಾಗೂ ಅದಕ್ಕಾಗಿ ಸೂಕ್ತ 'ಪ್ರತಿಫಲ' ಪಡೆದಿರುವ ಸಾಧ್ಯತೆಗಳೂ ಇವೆ. ಬಹುತೇಕ ಪ್ರಕರಣಗಳಲ್ಲಿ ನಡೆಯುವುದು ಇದೇರೀತಿ. ಕಟ್ಟಡ ನಿರ್ಮಾಣದಲ್ಲಂತೂ ಇಂತಹ ನಿಯಮೋಲ್ಲಂಘನೆಗಳು ಸಾಕಷ್ಟು ನಡೆಯುತ್ತವೆ. ಅಗ್ನಿದುರಂತ ತಡೆಗೆ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ನಿಯಮವಿದ್ದರೂ ಅದನ್ನು ಕಟ್ಟಡ ನಿರ್ಮಾಣದ ವೇಳೆ ಪಾಲಿಸುವುದು ಕಡಿಮೆಯೇ.

ಇದೇವೇಳೆ, ಇತ್ತೀಚಿನ ತಿಂಗಳುಗಳಲ್ಲಿ ಹಲವಾರು ಅಗ್ನಿದುರಂತಗಳು ನಡೆದಿರುವ ಹಿನ್ನೆಲೆಯಲ್ಲಿ ಈ ಕುರಿತಂತೆಯೂ ಹೆಚ್ಚಿನ ತನಿಖೆ ನಡೆಯುವ ಅಗತ್ಯವಿದೆ. ರೈಲುಗಳಲ್ಲಿ ಇತ್ತೀಚೆಗೆ ಬೆನ್ನುಬೆನ್ನಿಗೇ ನಡೆದ ಕೆಲವು ಅಗ್ನಿ ಆಕಸ್ಮಿಕಗಳಲ್ಲಿ ವಿಧ್ವಂಸಕರ ಕೈವಾಡವಿರುವುದನ್ನು ಬಳಿಕ ರೈಲ್ವೆ ಇಲಾಖೆ ಪತ್ತೆ ಹಚ್ಚಿತ್ತು. ಅದೇರೀತಿ, ಇನ್ನಿತರ ಅಗ್ನಿ ದುರಂತಗಳಲ್ಲೂ ವಿಧ್ವಂಸಕರ ಕೈವಾಡವಿದೆಯೇ ಎಂಬ ಬಗ್ಗೆ ತನಿಖೆ ನಡೆಸಬೇಕಾಗಿದೆ. ದೇಶದ ಶಾಂತಿ, ಸುವ್ಯವಸ್ಥೆಯನ್ನು ಕೆಡಿಸಲು ದುಷ್ಟಶಕ್ತಿಗಳು ಸಕ್ರಿಯವಾಗಿರುವ ಹಿನ್ನೆಲೆಯಲ್ಲಿ ಈ ಆಯಾಮದಲ್ಲೂ ತನಿಖೆ ನಡೆಯುವುದು ಅವಶ್ಯವಾಗಿದೆ.

ಎಐ ಯುಗದಲ್ಲಿ ಭಾರತೀಯ ಭಾಷೆಗಳ ಭವಿಷ್ಯ



ಗುರುತರ

• ಸೋಮಶೇಖರ ಸಿ.ಜೆ.
sompreethi@gmail.com

ಕೃತಕ ಬುದ್ಧಿಮತ್ತೆ ಇಂದು ಕೇವಲ ತಂತ್ರಜ್ಞಾನದ ಪದವಲ್ಲ, ಅದು ನಮ್ಮ ಬದುಕಿನ ರೀತಿ, ಕೆಲಸದ ವಿಧಾನ ಮತ್ತು ಜ್ಞಾನದ ಪ್ರವಾಹವನ್ನೇ ಮರುರೂಪಿಸುತ್ತಿರುವ ಮಹಾಶಕ್ತಿ ಎಂದರೆ ತಪ್ಪಾಗಲಾರದು. ಕೈಗಾರಿಕೆ, ಶಿಕ್ಷಣ, ಆರೋಗ್ಯ, ಕೃಷಿ, ಮಾಧ್ಯಮ ಮತ್ತು ಆಡಳಿತ ಸೇರಿದಂತೆ ಎಲ್ಲ ಕ್ಷೇತ್ರಗಳ ಮೇಲೂ ಅದರ ಪ್ರಭಾವ ಆಳವಾಗಿ ಬೀಳುತ್ತಿದೆ. ಇಂತಹ ಸಮಯದಲ್ಲಿ ಭಾರತದಂತಹ ಬಹುಭಾಷಿಕ ದೇಶದ ಮುಂದೆ ಒಂದು ಅತ್ಯಂತ ಮಹತ್ವದ ಪ್ರಶ್ನೆ ನಿಂತಿದೆ. ಎಐ ಯುಗದಲ್ಲಿ ಭಾರತೀಯ ಭಾಷೆಗಳ ಭವಿಷ್ಯ ಯಾವ ದಿಕ್ಕಿಗೆ ಸಾಗಲಿದೆ? ಕನ್ನಡ ಸೇರಿದಂತೆ ನಮ್ಮ ಭಾಷೆಗಳು ಈ ಹೊಸ ತಂತ್ರಜ್ಞಾನ ಅಲೆಯೊಂದಿಗೆ ಬೆಳೆದು ಬಲವಾಗಲಿವೆಯೇ ಅಥವಾ ಕ್ರಮೇಣ ಅಂಚಿಗೆ ಸರಿಯಲಿವೆಯೇ? ಇದು ಸದ್ಯಕ್ಕೆ ಎದ್ದಿರುವ ಪ್ರಶ್ನೆ.

ಹಿಂದೊಂದು ಕಾಲದಲ್ಲಿ ತಂತ್ರಜ್ಞಾನ ಅರ್ಥವಾಗಬೇಕಾದರೆ, ಇಂಗ್ಲಿಷ್ ಭಾಷೆ ಬೇಕೇ ಬೇಕು ಎಂಬಂತೆ ಆಲೋಚನೆ ಇತ್ತು. ಕಂಪ್ಯೂಟರ್ ಬಳಸುವುದರಿಂದ ಹಿಡಿದು ಅಂತರ್ಜಾಲದಲ್ಲಿ ಮಾಹಿತಿ ಹುಡುಕುವ ತನಕ, ಡಿಜಿಟಲ್ ಜಗತ್ತಿನ ಬಹುತೇಕ ಬಾಗಿಲುಗಳು ಇಂಗ್ಲಿಷ್ ಮೂಲಕವೇ ತೆರೆಯುತ್ತವೆ ಎಂಬ ಸ್ಥಿತಿ ಇತ್ತು. ಇದರ ಪರಿಣಾಮವಾಗಿ ಭಾರತೀಯ ಭಾಷೆಗಳು, ವಿಶೇಷವಾಗಿ ಪ್ರಾದೇಶಿಕ ಭಾಷೆಗಳು, ತಂತ್ರಜ್ಞಾನ ಕ್ಷೇತ್ರದಲ್ಲಿ ಹಿಂಬದಿಗೆ ಸರಿದವು. ಆದರೆ ಕಳೆದ ಕೆಲವು ವರ್ಷಗಳಲ್ಲಿ ಈ ಚಿತ್ರಣ ಗಮನಾರ್ಹವಾಗಿ ಬದಲಾಗಿದೆ. ಭಾಷಾಮಾದರಿಗಳು, ಧ್ವನಿ ಗುರುತಿಸುವ ವ್ಯವಸ್ಥೆಗಳು, ಸ್ವಯಂ ಅನುವಾದ ಸಾಧನಗಳು ಮತ್ತು ಸಂವಾದಾತ್ಮಕ ಎಐ ವೇದಿಕೆಗಳು ಸ್ಥಳೀಯ ಭಾಷೆಗಳಿಗೆ ಹೊಸ ಅವಕಾಶಗಳನ್ನು ನೀಡಲು ಆರಂಭಿಸಿವೆ. ಇದರಿಂದ ಡಿಜಿಟಲ್ ಪ್ರವೇಶ ಇಂಗ್ಲಿಷ್ ಬಲ್ಲವರಿಗಷ್ಟೇ ಸೀಮಿತವಲ್ಲ ಎಂಬ ನಂಬಿಕೆ ಬಲಪಡುತ್ತಿದೆ.

ಇಂದು ಕನ್ನಡದಲ್ಲೇ ಪ್ರಶ್ನೆ ಕೇಳಿ ಉತ್ತರ ಪಡೆಯುವುದು ಸಾಧ್ಯವಾಗಿದೆ. ಕನ್ನಡದಲ್ಲೇ ಲೇಖನ ಬರೆಯಬಹುದು, ಪಠ್ಯವನ್ನು ಅನುವಾದಿಸಬಹುದು, ಪ್ರಸ್ತುತಿಗಳು ಮತ್ತು ಭಾಷಣಗಳನ್ನು ಸಿದ್ಧಪಡಿಸಬಹುದು. ಗ್ರಾಮೀಣ ರೈತನು ತನ್ನ ನೆಲದ ಸಮಸ್ಯೆಗೆ ತನ್ನ ಭಾಷೆಯಲ್ಲೇ ಕೃಷಿ ಸಲಹೆ ಪಡೆದುಕೊಳ್ಳಬಹುದು. ವಿದ್ಯಾರ್ಥಿಯೊಬ್ಬ ಕಷ್ಟವಾದ ಇಂಗ್ಲಿಷ್ ವಿಷಯವನ್ನು ಕನ್ನಡದಲ್ಲಿ ಅರ್ಥಮಾಡಿಕೊಳ್ಳಬಹುದು. ಸಾಮಾನ್ಯ ನಾಗರಿಕನಿಗೆ ಸರ್ಕಾರಿ ಸೇವೆಗಳು, ಆರೋಗ್ಯ ಮಾಹಿತಿ ಮತ್ತು ಶಿಕ್ಷಣ ಸಂಬಂಧಿತ ನೆರವು ಸ್ಥಳೀಯ ಭಾಷೆಯಲ್ಲೇ ತಲುಪಬಹುದು. ತಂತ್ರಜ್ಞಾನವು ಜನರಿಗೆ ನಿಜವಾದ ಅರ್ಥದಲ್ಲಿ ಉಪಯುಕ್ತವಾಗುವುದಾದರೆ ಅದು ಅವರ ಭಾಷೆಯಲ್ಲಿ ಮಾತನಾಡಬೇಕು. ಈ ಅರ್ಥದಲ್ಲಿ ಎಐ ಭಾಷೆ ಪ್ರಜಾಪ್ರಭುತ್ವಕ್ಕೆ ಹೊಸ ಬಾಗಿಲು ತೆರೆದಿದೆ.

ಎಐ ಭಾರತೀಯ ಭಾಷೆಗಳ ಬೆಳವಣಿಗೆಗೆ ಒಂದು ಅಪರೂಪದ ಐತಿಹಾಸಿಕ ಅವಕಾಶವನ್ನೂ ಒದಗಿಸಿದೆ. ಕನ್ನಡ ಸೇರಿದಂತೆ ಅನೇಕ ಭಾಷೆಗಳಲ್ಲಿರುವ ಪುಸ್ತಕಗಳು, ಪತ್ರಿಕೆಗಳು, ಸಂಶೋಧನಾ ಕೃತಿಗಳು, ಶಾಸನಗಳು, ಜನಪದ ಸಾಹಿತ್ಯ ಮತ್ತು ಸಾಂಸ್ಕೃತಿಕ ದಾಖಲೆಗಳು ಈಗ ವೇಗವಾಗಿ ಡಿಜಿಟಲ್ ರೂಪಕ್ಕೆ ಬರುತ್ತಿವೆ. ಹಿಂದೆ ಕೆಲವೇ ವಾಚನಾಲಯಗಳಲ್ಲಿ ಸೀಮಿತವಾಗಿದ್ದ ಜ್ಞಾನಸಂಪತ್ತು ಇಂದು ಬಹು ಜನರಿಗೆ ತಲುಪುವ ಅವಕಾಶ ಪಡೆಯುತ್ತಿದೆ. ಇದು ಕೇವಲ ಭಾಷೆಯನ್ನು ಉಳಿಸುವ ಕಾರ್ಯವಲ್ಲ, ಅದರಲ್ಲಿರುವ ಜ್ಞಾನವನ್ನು ಹೊಸ ಪೀಳಿಗೆಗಳಿಗೆ ಜೀವಂತವಾಗಿ ಸಾಗಿಸುವ ಪ್ರಕ್ರಿಯೆಯಾಗಿದೆ.

ಭಾರತದಲ್ಲಿ ಭಾಷಾ ತಂತ್ರಜ್ಞಾನದ ಬೆಳವಣಿಗೆಯಲ್ಲಿ ಸರ್ಕಾರದ ಪಾತ್ರವೂ ನಿರ್ಣಾಯಕವಾಗಿದೆ. ಡಿಜಿಟಲ್ ಇಂಡಿಯಾ ಮುಂತಾದ ಯೋಜನೆಗಳು ಭಾರತೀಯ ಭಾಷೆಗಳನ್ನು ತಂತ್ರಜ್ಞಾನದ ಕೇಂದ್ರವಲಯಕ್ಕೆ ತರಬೇಕೆಂಬ ಆಶಯವನ್ನು ಹೊತ್ತಿವೆ. ಆದರೆ ಉದ್ದೇಶ ಘೋಷಿಸುವುದಷ್ಟೇ ಸಾಕಾಗುವುದಿಲ್ಲ, ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು, ಖಾಸಗಿ ತಂತ್ರಜ್ಞಾನ ಕಂಪನಿಗಳು, ಪ್ರಕಾಶಕರು ಮತ್ತು ಭಾಷಾ ತಜ್ಞರು ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ಸಮೃದ್ಧ ಭಾಷಾ ಸಂಪನ್ಮೂಲಗಳು ನಿರ್ಮಾಣವಾಗುತ್ತವೆ. ನಿಘಂಟುಗಳು, ಪಠ್ಯ ಸಂಗ್ರಹಗಳು, ಧ್ವನಿ ಡೇಟಾ ಮತ್ತು ವಿವಿಧ ಬಳಕೆಯ ಉದಾಹರಣೆಗಳನ್ನು ವ್ಯವಸ್ಥಿತವಾಗಿ ನಿರ್ಮಿಸುವುದು ಭಾಷಾಭವಿಷ್ಯದ ದೃಢ ನೆಲೆಯಲ್ಲಿ ಒಂದಾಗಿದೆ.

ಭಾರತದ ಭಾಷಾ ವೈವಿಧ್ಯತೆ ಜಗತ್ತಿನಲ್ಲಿ ಅಪರೂಪದ ಸಂಪತ್ತಾಗಿದೆ. ಸಂವಿಧಾನ ಮಾನ್ಯತೆ ನೀಡಿರುವ ಭಾಷೆಗಳ ಜೊತೆಗೆ ಅನೇಕ ಉಪ ಭಾಷೆಗಳು, ಪ್ರಾದೇಶಿಕ ಉಚ್ಚಾರಣೆಗಳು ಮತ್ತು ಸ್ಥಳೀಯ ಅಭಿವ್ಯಕ್ತಿಗಳು ನಮ್ಮ ಸಾಂಸ್ಕೃತಿಕ ಜೀವಂತಿಕೆಯನ್ನು ಪ್ರತಿನಿಧಿಸುತ್ತವೆ. ಇಂತಹ ವೈವಿಧ್ಯಪೂರ್ಣ ಪರಿಸರದಲ್ಲಿ ಎಐ ಅಭಿವೃದ್ಧಿಪಡಿಸುವುದು ಸುಲಭವಲ್ಲ, ಆದರೆ ಇದೇ ಸಂಕೀರ್ಣತೆ ಭಾರತವನ್ನು ಜಾಗತಿಕ ಮಟ್ಟದಲ್ಲಿ ಬಹುಭಾಷಿಕ ತಂತ್ರಜ್ಞಾನ ಅಭಿವೃದ್ಧಿಯ ಮುಂಚೂಣಿ ರಾಷ್ಟ್ರವನ್ನಾಗಿ ರೂಪಿಸುವ ಸಾಮರ್ಥ್ಯವನ್ನು ಹೊಂದಿದೆ. ಅನೇಕ ಭಾಷೆಗಳ ನಡುವೆ ಸುಗಮವಾಗಿ ಕಾರ್ಯನಿರ್ವಹಿಸಬಲ್ಲ ಎಐ ಮಾದರಿಗಳು ಕೇವಲ ಭಾರತಕ್ಕಲ್ಲ, ಜಗತ್ತಿನ ಇತರ ಬಹುಭಾಷಿಕ ಸಮಾಜಗಳಿಗೂ ದಾರಿದೀಪವಾಗಬಹುದು.

ಸದ್ಯ ಭಾಷೆಗಳಿಗೆ ಒಂದಷ್ಟು ಸವಾಲುಗಳೂ ಎದ್ದಿವೆ ಅಂದರೆ, ಮಹತ್ವದ ಸವಾಲು ಡೇಟಾದ ಕೊರತೆ. ಎಐ ಯಾವುದೇ ಭಾಷೆಯನ್ನು ಅರ್ಥಮಾಡಿಕೊಳ್ಳುವುದು ಅದಕ್ಕೆ ಲಭ್ಯವಿರುವ ವಿಷಯದ ಆಧಾರದ ಮೇಲೆ. ಇಂಗ್ಲಿಷ್ ಭಾಷೆಯಲ್ಲಿ ಅಪಾರ ಪ್ರಮಾಣದ ಡಿಜಿಟಲ್ ವಿಷಯ ಲಭ್ಯವಿರುವುದರಿಂದ ಅದರ ಅಭಿವೃದ್ಧಿ ವೇಗವಾಗಿ ಸಾಗುತ್ತದೆ. ಆದರೆ ಕನ್ನಡ ಸೇರಿದಂತೆ ಅನೇಕ ಭಾರತೀಯ ಭಾಷೆಗಳಲ್ಲಿ ಗುಣಮಟ್ಟದ ಪಠ್ಯ, ಸಂಶೋಧನೆ, ಧ್ವನಿ ಮತ್ತು ಸಂವಾದ ಡೇಟಾ ಇನ್ನೂ ಸಮರ್ಪಕ ಪ್ರಮಾಣದಲ್ಲಿ ಲಭ್ಯವಿಲ್ಲ. ಈ ಕೊರತೆಯನ್ನು ನೀಗಿಸದೆ ಭಾಷಾ ತಂತ್ರಜ್ಞಾನವನ್ನು ಸಮಾನತೆಯ ದೃಷ್ಟಿಯಿಂದ ಬೆಳೆಸಲು ಸಾಧ್ಯವಿಲ್ಲ. ಇಲ್ಲದಿದ್ದರೆ ತಂತ್ರಜ್ಞಾನದ ಪ್ರಗತಿಯಲ್ಲಿಯೂ ಭಾಷಾ ಅಸಮಾನತೆ ಮುಂದುವರಿಯುವ ಅಪಾಯ ಹೆಚ್ಚುತ್ತದೆ.

ಇಂದಿನ ಮಕ್ಕಳು ಮತ್ತು ಯುವಜನರು ಡಿಜಿಟಲ್ ಜಗತ್ತಿನಲ್ಲೇ ಬೆಳೆಯುತ್ತಿದ್ದಾರೆ. ಅವರ ಕಲಿಕೆ, ಮನರಂಜನೆ, ಸಂವಹನ ಮತ್ತು ಅಭಿವ್ಯಕ್ತಿ ಹೆಚ್ಚಾಗಿ ಮೊಬೈಲ್ ಮತ್ತು ಇಂಟರ್ನೆಟ್ ಮೂಲಕವೇ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಕನ್ನಡ ಸೇರಿದಂತೆ ಭಾರತೀಯ ಭಾಷೆಗಳಲ್ಲಿ ಆಕರ್ಷಕ, ಸಮಕಾಲೀನ ಮತ್ತು ಗುಣಮಟ್ಟದ ಡಿಜಿಟಲ್ ವಿಷಯಗಳನ್ನು ನಿರ್ಮಿಸುವುದು ಅತ್ಯಗತ್ಯ. ಇಂಥ ಸಂದರ್ಭದಲ್ಲಿ ಮಾಧ್ಯಮಗಳು, ಪ್ರಕಾಶಕರು, ಲೇಖಕರು ಮತ್ತು ಶಿಕ್ಷಕರ ಪಾತ್ರ ಇನ್ನಷ್ಟು ದೊಡ್ಡದಾಗುತ್ತದೆ. ಇಂದು ಅಂತರ್ಜಾಲದಲ್ಲಿ ಪ್ರಕಟವಾಗುವ ವಿಷಯವೇ ನಾಳೆಯ ಎಐಗೆ ಕಲಿಕೆಯ ಆಧಾರವಾಗುತ್ತದೆ. ಆದ್ದರಿಂದ ಕನ್ನಡದಲ್ಲಿ ಹೆಚ್ಚು ಗುಣಮಟ್ಟದ, ಪರಿಶುದ್ಧ ಮತ್ತು ವೈವಿಧ್ಯಮಯ ಡಿಜಿಟಲ್ ವಿಷಯ ಸೃಷ್ಟಿಯಾಗುವುದು ಅತ್ಯಗತ್ಯ. ನಮ್ಮ ಭಾಷೆಯಲ್ಲಿನ ಸಮೃದ್ಧ ವಿಷಯ ಹೆಚ್ಚಿದಷ್ಟೂ ಎಐ ಕೂಡ ಕನ್ನಡವನ್ನು ಹೆಚ್ಚು ಸರಿಯಾಗಿ ಅರ್ಥಮಾಡಿಕೊಳ್ಳಲು ಮತ್ತು ಪರಿಣಾಮಕಾರಿಯಾಗಿ ಬಳಸಲು ಸಾಧ್ಯವಾಗುತ್ತದೆ. ಭಾಷೆಯ ಭವಿಷ್ಯವನ್ನು ಕೇವಲ ತಂತ್ರಜ್ಞಾನ ಕಂಪನಿಗಳ ಕೈಗೆ ಬಿಡದೆ, ಸಮಾಜವೇ ಅದರ ನಿರ್ಮಾಣದಲ್ಲಿ ಭಾಗವಹಿಸಬೇಕು.

ಶಿಕ್ಷಣ ಕ್ಷೇತ್ರದಲ್ಲಿ ಎಐ ಹೊಸ ದಿಕ್ಕುಗಳನ್ನು ತೆರೆದಿದೆ. ಸ್ಥಳೀಯ ಭಾಷೆಗಳಲ್ಲಿ ಗುಣಮಟ್ಟದ ಪಠ್ಯವಸ್ತುಗಳನ್ನು ಸಿದ್ಧಪಡಿಸುವುದು, ವಿದ್ಯಾರ್ಥಿಗಳ ಕಲಿಕೆಯ ವೇಗಕ್ಕೆ ತಕ್ಕಂತೆ ವೈಯಕ್ತಿಕ ಸಹಾಯ ಒದಗಿಸುವುದು ಮತ್ತು ಕಠಿಣ ವಿಷಯಗಳನ್ನು ಸರಳ ಭಾಷೆಯಲ್ಲಿ ಅರ್ಥಮಾಡಿಕೊಡುವುದು ಈಗ ಸಾಧ್ಯವಾಗುತ್ತಿದೆ. ಮಾತೃಭಾಷಾಶಿಕ್ಷಣದ ಮಹತ್ವವನ್ನು ಪುನಃ ಒತ್ತಿ ಹೇಳುತ್ತಿರುವ ಈ ಸಂದರ್ಭದಲ್ಲಿ ಎಐ ಒಂದು ಪರಿಣಾಮಕಾರಿ ಸಹಾಯಕ ಸಾಧನವಾಗಿ ಬೆಳೆಯುವ ಸಾಮರ್ಥ್ಯ ಹೊಂದಿದೆ. ಆದರೆ ಅದನ್ನು ಸರಿಯಾಗಿ ಬಳಸಲು ಶಿಕ್ಷಕರ ಮಾರ್ಗದರ್ಶನ ಮತ್ತು ವಿಷಯದ ಗುಣಮಟ್ಟ ಎರಡೂ ಅವಶ್ಯಕ.

ಆದರೂ ತಂತ್ರಜ್ಞಾನವನ್ನು ಅಂತಿಮ ಪರಿಹಾರವೆಂದು ಭಾವಿಸುವುದು ತಪ್ಪು. ಭಾಷೆಯನ್ನು ಉಳಿಸುವುದು ಮತ್ತು ಬೆಳೆಸುವುದು ಕೇವಲ ಯಂತ್ರಗಳ ಹೊಣೆಗಾರಿಕೆಯಾಗುವುದಿಲ್ಲ. ಅದು ಸಮಾಜದ, ಶಿಕ್ಷಣ ಸಂಸ್ಥೆಗಳ, ಮಾಧ್ಯಮಗಳ, ಸರ್ಕಾರದ ಮತ್ತು ಪ್ರತಿಯೊಬ್ಬ ಭಾಷಾಭಿಮಾನಿಯ ಸಹಭಾಗಿತ್ವದಿಂದ ಮಾತ್ರ ಸಾಧ್ಯ. ಮನೆಗಳಲ್ಲಿ, ಶಾಲೆಗಳಲ್ಲಿ, ಕಚೇರಿಗಳಲ್ಲಿ ಮತ್ತು ಸಾರ್ವಜನಿಕ ಬದುಕಿನಲ್ಲಿ ಭಾಷೆಯ ಬಳಕೆ ಕುಂಠಿತವಾದರೆ ಅತ್ಯಾಧುನಿಕ ಎಐ ಕೂಡ ಆ ಭಾಷೆಯ ಜೀವಂತಿಕೆಯನ್ನು ಉಳಿಸಲು ಸಾಧ್ಯವಿಲ್ಲ. ಆದ್ದರಿಂದ ತಂತ್ರಜ್ಞಾನದ ಜೊತೆಗೆ ಮಾನವ ಬದ್ಧತೆಯೂ ಅನಿವಾರ್ಯವಾಗಿದೆ.

ಭಾರತವು ಜಗತ್ತಿನ ಅತ್ಯಂತ ಶ್ರೀಮಂತ ಭಾಷಾವೈವಿಧ್ಯತೆಯನ್ನು ಹೊಂದಿರುವ ರಾಷ್ಟ್ರಗಳಲ್ಲಿ ಒಂದು. ಈ ವೈವಿಧ್ಯತೆ ನಮ್ಮ ಸಾಂಸ್ಕೃತಿಕ ಶಕ್ತಿ, ಬೌದ್ಧಿಕ ಪರಂಪರೆ ಮತ್ತು ಸಾಮಾಜಿಕ ಚೈತನ್ಯದ ಗುರುತು. ಎಐ ಯುಗದಲ್ಲಿ ಈ ಭಾಷೆಗಳನ್ನು ಕೇವಲ ಸಂರಕ್ಷಿಸಬೇಕೆಂಬ ಮಟ್ಟದಲ್ಲಿ ನಿಲ್ಲುವುದು ಸಾಕಾಗುವುದಿಲ್ಲ, ಅವನ್ನು ಜ್ಞಾನಸೃಷ್ಟಿಯ, ಸಂಶೋಧನೆಯ, ನವೋದ್ಯಮದ ಮತ್ತು ಸಾರ್ವಜನಿಕ ಸಂವಾದದ ಪ್ರಬಲ ಮಾಧ್ಯಮಗಳನ್ನಾಗಿ ರೂಪಿಸುವ ಅಗತ್ಯ ಇದೆ. ಆಗ ಮಾತ್ರ ಭಾಷೆಗಳು ಭೂತಕಾಲದ ಸ್ಮಾರಕಗಳಾಗದೇ ಭವಿಷ್ಯದ ಸಾಧನಗಳಾಗುತ್ತವೆ.

ಕೊನೆಗೆ ಹೇಳುವುದಾದರೆ, ಎಐ ಯುಗದಲ್ಲಿ ಕನ್ನಡ ಉಳಿಯುತ್ತದೆಯೇ ಎಂಬ ಪ್ರಶ್ನೆ ಈಗ ಅಪ್ರಸ್ತುತ. ಕನ್ನಡ ಉಳಿಯುವುದು ಖಚಿತ. ಆದರೆ ಅದು ಡಿಜಿಟಲ್ ಜಗತ್ತಿನಲ್ಲಿ ನಾಯಕತ್ವ ವಹಿಸುತ್ತದೆಯೇ, ಜ್ಞಾನ ಸೃಷ್ಟಿಯ ಭಾಷೆಯಾಗುತ್ತದೆಯೇ ಮತ್ತು ಹೊಸ ತಲೆಮಾರಿನ ಚಿಂತನೆಯ ಮಾಧ್ಯಮವಾಗುತ್ತದೆಯೇ ಎಂಬುದೇ ನಮ್ಮ ಮುಂದಿರುವ ನಿಜವಾದ ಸವಾಲು. ಅದಕ್ಕೆ ಉತ್ತರವನ್ನು ನಾವು ಇಂದು ತೆಗೆದುಕೊಳ್ಳುವ ನಿರ್ಧಾರಗಳೇ ನಿರ್ಧರಿಸಲಿವೆ.

ತಂತ್ರಜ್ಞಾನವು ಭಾಷೆಯ ಪ್ರತಿಸ್ಪರ್ಧಿಯಲ್ಲ, ಅದು ಸರಿಯಾಗಿ ಬಳಸಿದರೆ ಭಾಷೆಯ ಅತ್ಯಂತ ಶಕ್ತಿಶಾಲಿ ಸಹಯೋಗಿಯಾಗಬಹುದು. ಭಾರತೀಯ ಭಾಷೆಗಳ ಭವಿಷ್ಯವನ್ನು ನಿರ್ಧರಿಸುವುದು ಯಂತ್ರಗಳಲ್ಲ, ಅವುಗಳನ್ನು ಬಳಸುವ ನಮ್ಮ ದೃಷ್ಟಿಕೋನ ಮತ್ತು ಬದ್ಧತೆಯೇ ಆಗಿದೆ.

ತುಪ್ಪವು ನಾಲಗೆಗೆ ಅಂಟುವುದಿಲ್ಲ

ಅಜ್ಞಂ ಕರ್ಮಾಣಿ ಲಿಂಪಂತಿ ತಜ್ಞಂ ಕರ್ಮ ನ ಲಿಂಪತಿ।
ಲಿಪ್ಯತೇ ರಸನೈವೈಕಾ ಸರ್ಪಿಷಾ ನ ತಥಾ ಕರಃ ॥

ಅಜ್ಞನನ್ನು ಕರ್ಮಗಳು ಅಂಟುವವು. ಬಲ್ಲವನನ್ನು ಕರ್ಮಗಳು ಅಂಟುವುದಿಲ್ಲ, ತುಪ್ಪವು ಕೈಗೆ ಅಂಟಿಕೊಂಡ ಹಾಗೆ ನಾಲಗೆಗೆ ಮಾತ್ರ ಅಂಟುವುದಿಲ್ಲ –ಎಂಬುದು ಶ್ಲೋಕಾರ್ಥ



ತುಪ್ಪ ಗೊತ್ತಿಲ್ಲದವರಿಲ್ಲ, ತುಪ್ಪವನ್ನು ತಿಂದಿರದವರು ಇಲ್ಲ, ನಮ್ಮ ಭಾರತೀಯ ಪರಂಪರೆಯಲ್ಲಿ ತುಪ್ಪಕ್ಕೆ ಮಹತ್ವದ ಸ್ಥಾನವಿದೆ ಎಂಬುದನ್ನು 'ಘೃತೇನ ವರ್ಧತೇ ಬುದ್ಧಿಃ' ಎಂಬ ಪ್ರಸಿದ್ಧ ಸೂಕ್ತಿ ತಿಳಿಸುತ್ತದೆ. 'ಘೃತಮಾಯುಃ ಘೃತಂ ಜ್ಯೋತಿಃ' ಎಂಬುದು ಪ್ರಸಿದ್ಧವಾದ ಇನ್ನೊಂದು ಲೋಕೋಕ್ತಿ. ತುಪ್ಪವೇ ಆಯಸ್ಸು, ತುಪ್ಪವೇ ಬೆಳಕು ಎಂಬುದು ಇದರ ಅರ್ಥ. ಆಯುಷ್ಯ ವೃದ್ಧಿಗಾಗಿ, ಆರೋಗ್ಯಪೂರ್ಣ ಬದುಕಿಗಾಗಿ ತುಪ್ಪವನ್ನು ತಿನ್ನಬೇಕು ಎಂಬುದು ಬಾಗಾಯ್ತಿನಿಂದಲೂ ಪ್ರಚಲಿತದಲ್ಲಿರುವ ಮಾತು. ಶುದ್ಧವಾದ ಬೆಳಕು, ಆರೋಗ್ಯಪೂರ್ಣ ವಾತಾವರಣ ಮನೆಯಲ್ಲಿರಬೇಕು ಎಂದು ನಾವು ಬಯಸುವುದಾದರೆ ಮನೆಯಲ್ಲಿ ತುಪ್ಪದ ದೀಪ ಬೆಳಗಿಸಬೇಕು ಎಂಬ ಪರಿಪಾಠವಿದೆ. ದೇವರ ಮುಂದೆ ತುಪ್ಪದ ದೀಪ ಹಚ್ಚುವುದು ಸರ್ವ ಶ್ರೇಷ್ಠ. ತುಪ್ಪದ ದೀಪ ಹಚ್ಚುತ್ತೇನೆ ಎಂದು ಹರಕೆ ಹೇಳುವವರಿದ್ದಾರೆ.

ಆಯುರ್ವೇದದ ದೃಷ್ಟಿಯಲ್ಲಿಯೂ ತುಪ್ಪ ಅತ್ಯಂತ ಮಹತ್ವದ್ದು. ಬೇರೆ ಬೇರೆ ರೋಗಗಳಿಗೆ ಆಯುರ್ವೇದದಲ್ಲಿ ಹೇಳುವ ಘೃತ ದಿವ್ಯೌಷಧಿ.

ಅಡುಗೆಯಲ್ಲಿಯೂ ಇದರ ಸ್ಥಾನ ಮಹತ್ವದ್ದು. ಶುದ್ಧ ತುಪ್ಪದಲ್ಲಿ ಮಾಡಿದ್ದು, ತುಪ್ಪದ ಒಗ್ಗರಣೆ, ಊಟದಲ್ಲಿ ಮೇಲಿನಿಂದ ತುಪ್ಪ ಬಳಸುವುದು ಇವೆಲ್ಲವೂ ರುಚಿಯನ್ನು ಇಮ್ಮಡಿಗೊಳಿಸುತ್ತದೆ. ಹೋಮಾದಿಗಳಲ್ಲಿ ಆಜ್ಯಾಹುತಿ ಶ್ರೇಷ್ಠ. ಒಟ್ಟಿನಲ್ಲಿ ತುಪ್ಪ ಮನುಕುಲದ ಅವಿಭಾಜ್ಯ ಅಂಗವೆಂದರೂ ತಪ್ಪಾಗಲಾರದು.

ತುಪ್ಪದ ವಿಶೇಷ ಗುಣವೆಂದರೆ ಕೈಗೆ ಅಂಟಿಕೊಳ್ಳುವುದು. ಕೈಗೆ ಅಂಟಿದರೆ ಸುಲಭದಲ್ಲಿ ಜಿಡ್ಡಿನ ಅಂಶ ಹೋಗುವುದಿಲ್ಲ, ಸ್ವಲ್ಪವೇ ತಾಗಿದರೂ ಆ ಜಿಡ್ಡಿನ ಅಂಶವನ್ನು ತೊಳೆದುಕೊಳ್ಳಲು ಸಾಬೂನು ಇತ್ಯಾದಿ ಬಳಸಬೇಕು. ಆಶ್ಚರ್ಯವೆಂದರೆ ತುಪ್ಪವೆಂದೂ ನಾಲಿಗೆಗೆ ಅಂಟಿಕೊಳ್ಳದು. ಎಷ್ಟೇ ತುಪ್ಪ ತಿಂದರೂ ಸಣ್ಣ ಕುರುಹು ಕೂಡಾ ನಾಲಿಗೆಯಲ್ಲಿರುವುದಿಲ್ಲ, ಇದು ಘೃತ ವೈಶಿಷ್ಟ್ಯ.

ಈ ಗುಣ ಧರ್ಮವನ್ನು ದೃಷ್ಟಾಂತವಾಗಿರಿಸಿ ಕವಿಯು ಕರ್ಮವಾಗಿ ವ್ಯಾಖ್ಯಾನಿಸುತ್ತಾನೆ ಕೈಗೆ ತುಪ್ಪವು ಅಂಟುವಂತೆ ಕರ್ಮವು ಅಜ್ಞರಿಗೆ ಅಂಟಿಕೊಳ್ಳುತ್ತದೆ. ನಾಲಿಗೆಗೆ ಅಂಟದಿರುವಂತೆ ತಜ್ಞರನ್ನು ಕರ್ಮವು ಅಂಟುವುದಿಲ್ಲ ಎಂಬುದಾಗಿ.

ಯಾವುದೇ ಕೆಲಸವನ್ನು ಮಾಡುವಾಗಲೂ ಪ್ರಾಮಾಣಿಕವಾಗಿ ಜಾಗ್ರತೆಯಿಂದ ಮಾಡಬೇಕು. ಯಾವುದೇ ದೋಷವಾಗದಂತೆ, ಆಕ್ಷೇಪಕ್ಕೆ ಈಡಾಗದಂತೆ ಕರ್ತವ್ಯವನ್ನು ನಿರ್ವಹಿಸಬೇಕು. ನಾಲಿಗೆಗೆ ತುಪ್ಪ ಅಂಟದ ತೆರದಲ್ಲಿ ಕರ್ಮಕ್ಕೆ ಅಂಟಿಕೊಳ್ಳಬಾರದು. ಬಲ್ಲವರು ಅಥವಾ ತಜ್ಞರು ಇದೇ ರೀತಿ ಬದುಕುತ್ತಾರೆ. ಇದೇ ರೀತಿ ಬದುಕನ್ನು ಕಟ್ಟಿಕೊಳ್ಳಬೇಕು. ಅಜ್ಞರು ಕರ್ಮದಲ್ಲಿ ತೊಡಗಿದರೆ ಕರ್ಮವನ್ನು ಬದುಕಿನುದ್ದಕ್ಕೂ ಅಂಟಿಸಿಕೊಳ್ಳುತ್ತಾರೆ. ಆಕ್ಷೇಪಕ್ಕೂ, ಆರೋಪಕ್ಕೂ ಈಡಾಗುತ್ತಾರೆ. ನೀರಿನಲ್ಲಿಯೇ ಇದ್ದರೂ ಕಮಲದ ಎಲೆ ನೀರನ್ನು ಅಂಟಿಸಿಕೊಳ್ಳದಿರುವಂತೆ, ಮಳೆ ಹನಿ ಬಿದ್ದರೂ ಕೆಸುವಿನ ಎಲೆ ಅಂಟಿಸಿಕೊಳ್ಳದಂತೆ ಕರ್ಮವನ್ನು ಮಾಡುತ್ತಾ, ಅದಕ್ಕೆ ಅಂಟಿಕೊಳ್ಳದೆ ಪ್ರಾಮಾಣಿಕವಾಗಿ ತಜ್ಞರೆನಿಸಿಕೊಳ್ಳಬೇಕೇ ವಿನಾ ಮೈ–ಮನಗಳನ್ನು ಗಬ್ಬೆಬ್ಬಿಸಿಕೊಳ್ಳುವ ಅಜ್ಞರಾಗಬಾರದು. ಇದನ್ನು ಕವಿ ಘೃತದ ದೃಷ್ಟಾಂತದೊಂದಿಗೆ ನಿರೂಪಿಸಿದ್ದಾನೆ.

ಮಾರ್ಕ್ಸಿಸ್ಟ್ ಇತಿಹಾಸಕಾರರ ಏಕಸ್ವಾಮ್ಯ ಮುರಿಯುತ್ತಿದೆ

▸ ಸದಾನಂದ ಹೆಗ್ಡೆ

ತಥಾಕಥಿತ 'ಖ್ಯಾತ' ಇತಿಹಾಸಕಾರರಾದ ರೋಮಿಲಾ ಥಾಪರ್ ತಮ್ಮ ಒಂದು ವಿಡಿಯೋದಲ್ಲಿ ''ಪತಂಜಲಿಯು ಬ್ರಾಹ್ಮಣರು ಮತ್ತು ಶ್ರಮಣರ ನಡುವಿನ ಸಂಬಂಧವು ಹಾವು ಮುಂಗುಸಿಯಂತಿದೆ ಎಂಬುದಾಗಿ ಬಣ್ಣಿಸಿದ್ದಾನೆ'' ಎಂದು ಹೇಳಿರುವುದು ವೈರಲ್ ಆಗಿದೆ. ಪ್ರಾಚೀನ ಭಾರತದಲ್ಲಿ ಸಾಮಾಜಿಕ ಸಂಘರ್ಷ ನಡೆಯುತ್ತಿತ್ತು ಎಂದು ಬಿಂಬಿಸುವ ಮಾರ್ಕ್ಸಿಸ್ಟ್ ಇತಿಹಾಸಕಾರರ ಚಾಳಿಗೆ ಥಾಪರ್ ಅವರ ಈ ಹೇಳಿಕೆಯೂ ಒಂದು ಸೂಕ್ತ ನಿದರ್ಶನ. ಆದರೆ 'ಪತಂಜಲಿಯ ಮಹಾಭಾಷ್ಯದಲ್ಲಿ ಎಲ್ಲಿಯೂ ಇಂತಹ ವರ್ಣನೆ ಕಾಣಲು ಸಿಗುವುದೇ ಇಲ್ಲ. ಅವರ ಗ್ರಂಥದಲ್ಲಿ ಕೇವಲ ಒಂದು ಬಾರಿ ಮಾತ್ರ ಬ್ರಾಹ್ಮಣ ಮತ್ತು ಶ್ರಮಣರ ಉಲ್ಲೇಖ ಬರುತ್ತದೆ. ಆದರೆ ಅಲ್ಲಿಯೂ ಹಾವು–ಮುಂಗುಸಿಯ ಪ್ರಸ್ತಾವನೆ ಇಲ್ಲ' ಎಂಬುದಾಗಿ ಖ್ಯಾತ ಲೇಖಕರೊಬ್ಬರು ವಿವರಿಸುತ್ತಾರೆ. ಥಾಪರ್ ಇದೇ ಬ್ರಾಹ್ಮಣ- ಶ್ರಮಣರ ಸಂಘರ್ಷದ ಹೋಲಿಕೆಯನ್ನು ತಮ್ಮ ಇನ್ನೂ ಎರಡು ಪುಸ್ತಕಗಳಲ್ಲಿ ನೀಡಿದ್ದಿದೆ.

ಇದು ಕೆಲವು 'ಖ್ಯಾತನಾಮ' ಇತಿಹಾಸಕಾರರು ವಾಸ್ತವಿಕ ಸಂಗತಿಗಳನ್ನು ಹೇಗೆ ತಿರುಚುತ್ತಾರೆ ಎಂಬುದಕ್ಕೆ ನಿದರ್ಶನ. ದುರಂತವೆಂದರೆ ಇತರ ಇತಿಹಾಸಕಾರರನ್ನು ವಿಮರ್ಶೆಗೆ ಒಳಪಡಿಸುವ ನಮ್ಮ ಶಿಕ್ಷಣವೇತ್ತರರು ಇಂತಹ 'ಖ್ಯಾತನಾಮ' ಇತಿಹಾಸಕಾರರನ್ನು ಪರಾಮರ್ಶೆಗೆ ಒಳಪಡಿಸುವುದಿಲ್ಲ, ಅವರು ಹೇಳಿದ್ದೆಲ್ಲ ಕುರುಡಾಗಿ ನಂಬಲಾಗುತ್ತದೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಇಂತಹ ಕೆಲವೇ ಕೆಲವು ಮಾರ್ಕ್ಸಿಸ್ಟ್ ಇತಿಹಾಸಕಾರರೇ ದೇಶದ ಇತಿಹಾಸವನ್ನು ರೂಪಿಸಿದ್ದರು. ದಶಕಗಳ ಕಾಲ ಅವರದೇ ಆಧಿಪತ್ಯವಿತ್ತು. ಸಾಂಸ್ಥಿಕವಾಗಿಯೂ ಅತ್ಯಂತ ಪ್ರಭಾವ ಹೊಂದಿದ್ದರು. ಪಠ್ಯಪುಸ್ತಕ ಬರೆಯುತ್ತಿದ್ದುದು ಅವರೇ. ಕಾಲೇಜು ಮತ್ತು ವಿಶ್ವವಿದ್ಯಾಲಯದ ಇಲಾಖೆಗಳಲ್ಲೂ ಅವರದೇ ಪಾರಮ್ಯ. ಮಾಧ್ಯಮಗಳಲ್ಲೂ ಅವರಿಗಷ್ಟೇ ಪ್ರಾಶಸ್ತ್ಯ. 'ನೈಜ, ಗಂಭೀರ ಇತಿಹಾಸಕಾರರು' ಯಾರು ಎಂಬುದನ್ನು ಕೂಡಾ ಅವರೇ ನಿರ್ಧರಿಸುತ್ತಿದ್ದರು. ವಿಪರ್ಯಾಸವೆಂದರೆ ತಮ್ಮನ್ನು ತಾವು 'ವೈಜ್ಞಾನಿಕ ಇತಿಹಾಸ'ದ ಸಂರಕ್ಷಕರು ಎಂದು ಹೇಳಿಕೊಳ್ಳುವ ಇವರು ತಾವು ಮಾತ್ರ ಯಾವುದೇ ಪರಾಮರ್ಶೆಗೆ ಒಳಪಡದ ರೀತಿಯಲ್ಲಿ ತಮ್ಮ ಸುತ್ತ ಕೋಟೆ ಕಟ್ಟಿಕೊಂಡಿದ್ದರು.

ಆದರೆ ಆ ಕೋಟೆಯೀಗ ಒಡೆದಿದೆ. ಅವರು ಮಂಡಿಸಿದ ಇತಿಹಾಸದ ಸತ್ಯಾಸತ್ಯತೆಯನ್ನು ಈಗ ಪರೀಕ್ಷೆಗೆ ಒಡ್ಡಲಾಗುತ್ತಿದೆ. ತಮ್ಮ ಇತ್ತೀಚಿನ ಪುಸ್ತಕವೊಂದರಲ್ಲಿ ಥಾಪರ್ ಅವರು ''ಇತಿಹಾಸಕಾರರಲ್ಲದವರು ಈಗ ಜನಾಭಿಪ್ರಾಯ ರೂಪಿಸುತ್ತಿದ್ದಾರೆ. ವೃತ್ತಿಪರ ಇತಿಹಾಸಕಾರರ ಅಭಿಪ್ರಾಯಕ್ಕೆ ವಿರುದ್ಧವಾದ ಚಿತ್ರಣವನ್ನು ಅವರು ಮಂಡಿಸುತ್ತಿದ್ದು ಅದನ್ನು ಬೆಂಬಲಿಸಲಾಗುತ್ತಿದೆ'' ಎಂದು ಕೊರಗಿದ್ದಾರೆ. ''ಹಿಂದೆಲ್ಲಾ ಇತಿಹಾಸದ ಸ್ಕಾಲರ್‌ಶಿಪ್ ಅನರ್ಹರಾದವರಿಗೆ ಸಿಗುತ್ತಿರಲಿಲ್ಲ, ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಇತಿಹಾಸ ಪಂಡಿತರು ಸಂಶೋಧಿಸಿದ ವಿಷಯವನ್ನು ಇತ್ತೀಚಿನ ಕೆಲವು ಹೊಸ ಇತಿಹಾಸಕಾರರು ವಿರೋಧಿಸುತ್ತಿದ್ದಾರೆ'' ಎಂದು



ತಮ್ಮ ಹತಾಶೆ ಮತ್ತು ಅಸಹನೆಯನ್ನು ಕಕ್ಕಿದ್ದಾರೆ. ಅಂತೂ ಮಾರ್ಕ್ಸಿಸ್ಟ್ ಇತಿಹಾಸಕಾರರ ಬೌದ್ಧಿಕ ಪ್ರಭುತ್ವಕ್ಕೆ ಸವಾಲು ಒದಗಿದೆಯೆಂಬುದನ್ನು ಅವರೇ ಒಪ್ಪಿಕೊಂಡಂತಾಗಿದೆ. ಇತಿಹಾಸದ ಮೇಲೆ ಅವರ ಏಕಸ್ವಾಮ್ಯ ಕಳಚಿಕೊಳ್ಳುತ್ತಿದೆ. ಇದುವೇ ಈ ಎಡಪಂಥೀಯ ಇತಿಹಾಸಕಾರರಿಗೆ ಅಸಹನೆ ಹಾಗೂ ಆತಂಕ ಸೃಷ್ಟಿಸಿರುವುದು.

ಈ ಖ್ಯಾತ ಇತಿಹಾಸಕಾರರು ಈವರೆಗೆ ಉತ್ತರದಾಯಿತ್ವದ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುತ್ತಿದ್ದರು. ಅವರನ್ನು ಪ್ರಶ್ನಿಸುವವರಾರೂ ಇರಲಿಲ್ಲ. ರಾಮಜನ್ಮಭೂಮಿ ಪ್ರಕರಣವು ಅಲಹಾಬಾದ್ ಹೈಕೋರ್ಟಿನಲ್ಲಿ ವಿಚಾರಣೆಗೆ ಬಂದಾಗ ಇಂತಹ ಕೆಲವು ಖ್ಯಾತ ಇತಿಹಾಸಕಾರರ ಬಣ್ಣ ಬಯಲಾಯಿತು. 'ತಜ್ಞ ಸಾಕ್ಷಿಗಳು' ಎಂಬ ನೆಲೆಯಲ್ಲಿ ಕಟಕಟೆಯಲ್ಲಿ ನಿಂತ ಈ ಇತಿಹಾಸಕಾರರ ಪೊಳ್ಳುತನ ಜಗಜ್ಜಾಹೀರಾಯಿತು. ಕ್ಲಾಸ್‌ರೂಂಗಳಲ್ಲಿ, ಸೆಮಿನಾರ್‌ಗಳಲ್ಲಿ ನಿರರ್ಗಳವಾಗಿ ಇತಿಹಾಸದ ಬಗ್ಗೆ ಮಾತನಾಡುವ ಇವರು ಅಯೋಧ್ಯೆಗೆ ಸಂಬಂಧಿಸಿದ ಪ್ರಕರಣದಲ್ಲಿ ನ್ಯಾಯಾಲಯದ ಕಟಕಟೆಯಲ್ಲಿ ಪಾಟೀಸವಾಲಿಗೆ ಈಡಾದಾಗ ಅವರ ಬೌದ್ಧಿಕ ದಿವಾಳಿತನ ಬಹಿರಂಗವಾಯಿತು.

ಪ್ರೊ. ಸುರೇಶ್ಚಂದ್ರ ಮಿಶ್ರಾ ಎಂಬವರು ಲಿಪಿಕಾರರಾಗಿ ಒಬ್ಬ ಪರಿಣತರಂತೆ ನ್ಯಾಯಾಲಯಕ್ಕೆ ಆಗಮಿಸಿದ್ದರು. ಅಯೋಧ್ಯೆಯ ವಿವಾದಾಸ್ಪದ ಕಟ್ಟಡದಲ್ಲಿ ಕಂಡುಬಂದ ಲಿಪಿಗಳು ಅರೇಬಿಕ್ ಎಂದು ವಿಚಾರಣೆ ವೇಳೆ ನುಡಿದರು. ಪಾಟೀಸವಾಲಿಗೆ ಒಳಪಡಿಸಿದಾಗ ಅವರು ಅದು ಪರ್ಶಿಯನ್ ಲಿಪಿಗಳು ಎಂದು ಮಾತು ಬದಲಿಸಿದರು. ಬಳಿಕವಂತೂ ತನಗೆ ಪರ್ಶಿಯನ್ ಭಾಷೆಯಾಗಲೀ ಅರೇಬಿಕ್ ಭಾಷೆಯಾಗಲೀ ತಿಳಿದೇ ಇಲ್ಲ ಎಂದು ಒಪ್ಪಿಕೊಂಡರು. ನಂತರವಂತೂ ಪ್ರೊ. ಮಿಶ್ರಾ ಇನ್ನಷ್ಟು ನಗೆಪಾಟಲಿಗೀಡಾಗುವ ಪ್ರತಿಪಾದನೆ ಸಲ್ಲಿಸಿದರು. ಅಯೋಧ್ಯೆಯ ಈ ಲಿಪಿಗಳು ಬಾಬರ್‌ನಾಮಾ ಪುಸ್ತಕದಲ್ಲಿ ಕಂಡುಬಂದುದಕ್ಕೆ ಹೋಲಿಕೆಯಾಗುತ್ತದೆ ಹಾಗೂ ತಾನು ಬಾಬರ್‌ನಾಮಾ ಪುಸ್ತಕವನ್ನು ವಿವಾದಿತ ಕಟ್ಟಡದೊಳಕ್ಕೆ ಕೊಂಡೊಯ್ದು ಅದನ್ನು ತುಲನೆ ಮಾಡಿ ನೋಡಿದ್ದಾಗಿ ಹೇಳಿದರು. ವಿವಾದಿತ ಕಟ್ಟಡದೊಳಗೆ ಏನನ್ನೂ ಕೊಂಡೊಯ್ಯಲು ಅವಕಾಶ ಇಲ್ಲವಲ್ಲ ಎಂದು ವಕೀಲರು ನುಡಿದಾಗ ತಮ್ಮ ಹೇಳಿಕೆಯನ್ನು ಮತ್ತೆ ಬದಲಿಸಿದರು. ತಾನು ತನ್ನ ಸ್ಮರಣ ಶಕ್ತಿಯ ಮೂಲಕ ಈ ಲಿಪಿಗಳನ್ನು ತುಲನೆ ಮಾಡಿದ್ದಾಗಿ ಹೇಳಿದರು. ಇದನ್ನು ಕೇಳಿದ ನ್ಯಾಯಾಧೀಶರೇ, ಮೊದಲೊಮ್ಮೆ ತನಗೆ ಪರ್ಷಿಯನ್ ಅಥವಾ ಅರೇಬಿಕ್ ಭಾಷೆ ತಿಳಿದೇ ಇಲ್ಲ ಎಂದು ಹೇಳಿದ ಮಿಶ್ರಾ ಈಗ ತಮಗೆ ಅದ್ಭುತ ಸ್ಮರಣ ಶಕ್ತಿಯಿದೆ ಎಂಬಂತೆ ಮಾತನಾಡುತ್ತಿರುವುದು ಆಶ್ಚರ್ಯಕರ ಎಂದು ಉದ್ಗಾರ ಎತ್ತಿದರು.

ಬಳಿಕ ಬಂದವರು ಪುರಾತತ್ವಜ್ಞ ಸೂರಜ್ ಭಾನ್. ಸಾರ್ವಜನಿಕ ಸಂವಾದಗಳಲ್ಲಿ, ಚರ್ಚೆಗಳಲ್ಲಿ ಪ್ರಖರವಾಗಿ ವಾದ ಮಂಡಿಸುವ ಇವರೂ ಶಿಕ್ಷಣ ವಲಯದಲ್ಲಿ ಖ್ಯಾತನಾಮರು. ಆದರೆ ನ್ಯಾಯಾಲಯದಲ್ಲಿ ಅವರ ಹುಳುಕು ಬಯಲಾಯಿತು. ಸಂಸ್ಕೃತದಲ್ಲಿ ಪದವಿ ಪಡೆದಿರುವ ಹೊರತಾಗಿಯೂ ತಾನು ಸಂಸ್ಕೃತವನ್ನು ಓದಲು ಅಥವಾ ಬರೆಯಲು ಅಸಮರ್ಥ ಎಂಬುದನ್ನು ಒಪ್ಪಿಕೊಂಡರು. ''ಸೂರಜ್ ಭಾನ್ ತಾವು ಬರೆದ ಹಲವಾರು ಪುಸ್ತಕಗಳಲ್ಲಿ ಅಯೋಧ್ಯೆ ಕಟ್ಟಡದ ಮೇಲಿರುವ ಬರಹಗಳನ್ನು ಓದಿರುವುದಾಗಿ ಹಾಗೂ ಅದನ್ನು ತುಲನೆ ಮಾಡಿರುವುದಾಗಿ ಬರೆದಿದ್ದಾರೆ. ಆದರೆ ಅವರು ಇದಾವುದನ್ನೂ ಓದಿಲ್ಲವೆಂಬುದು ಸ್ಪಷ್ಟವಾಗುತ್ತದೆ'' ಎಂದು ನ್ಯಾಯಮೂರ್ತಿ ಅಭಿಪ್ರಾಯಿಸಿದರು. ಮತ್ತೋರ್ವ ಸಾಕ್ಷಿಯಾಗಿ ಕೋರ್ಟಿಗೆ ಬಂದಿದ್ದ ಪ್ರೊ. ಸುವಿರಾ ಜೈಸ್ವಾಲ್ ತಾನು ಅಯೋಧ್ಯೆ ವಿವಾದಕ್ಕೆ ಪ್ರಮುಖ ಮೂಲವಾಗಿರುವ ಬಾಬರ್‌ನಾಮಾವನ್ನು ಓದಿಯೇ ಇಲ್ಲವೆಂಬುದನ್ನು ಒಪ್ಪಿಕೊಂಡರು. ಮತ್ತೋರ್ವ 'ತಜ್ಞ ಸಾಕ್ಷಿ' ಪ್ರೊ. ಶಿರಿನ್ ಮುಸಾವಿ ತಾನು ವಿವಾದಿತ ಪ್ರದೇಶವನ್ನು ಪರಿಶೀಲಿಸಲು ಅಯೋಧ್ಯೆಗೆ ಈವರೆಗೆ ಭೇಟಿ ನೀಡಿಯೇ ಇಲ್ಲವೆಂಬ ಸತ್ಯವನ್ನು ಒಪ್ಪಿಕೊಂಡರು. ಇತಿಹಾಸಕಾರರು ಸ್ಥಳಾಧ್ಯಯನ ಮಾಡುವ ಅಗತ್ಯವೇ ಇಲ್ಲವೆಂಬುದು ಆಕೆಯ ವಿಚಿತ್ರ ನಿಲುವು.

ಇಂತಹ ಇತಿಹಾಸಕಾರರನ್ನು ನಮ್ಮ ದೇಶದ ಖ್ಯಾತನಾಮ ಇತಿಹಾಸಕಾರರಾದ ರೋಮಿಲಾ ಥಾಪರ್, ಆರ್.ಎಸ್. ಶರ್ಮಾ, ಡಿ.ಎನ್.ಝಾ. ಮತ್ತು ಇರ್ಫಾನ್ ಹಬೀಬ್ ಮುಂತಾದವರು ಬೆಂಬಲಿಸುತ್ತಾರೆ ಮತ್ತು ಪ್ರೋತ್ಸಾಹಿಸುತ್ತಾರೆ. ಕುತೂಹಲಕಾರಿ ವಿಷಯವೆಂದರೆ ಈ ಎರಡನೇ ದರ್ಜೆ ಇತಿಹಾಸಕಾರರು ಅಯೋಧ್ಯೆ ವಿವಾದದಲ್ಲಿ ಬಾಬರಿ ಮಸೀದಿ ಪರವಾಗಿ ಕೋರ್ಟಿಗೆ ಹಾಜರಾದರೆ, ಮೇಲಿನ ಖ್ಯಾತನಾಮ ಇತಿಹಾಸಕಾರರು ಅಂತಹ ಹೊಣೆಗಾರಿಕೆಯಿಂದ ಮೆಲ್ಲಗೆ ಜಾರಿಕೊಂಡರು. ಬಹುಶಃ ಅವರಿಗೇ ತಮ್ಮ ಇತಿಹಾಸದ ಪೊಳ್ಳುತನದ ಅರಿವಿತ್ತು. ನ್ಯಾಯಾಲಯದಲ್ಲಿ ಪಾಟೀಸವಾಲಿನ ಮುಂದೆ ತಮ್ಮ ವಾದ ನಿಲ್ಲದೆಂಬ ಅರಿವಿತ್ತು. ಅವರಿಗೆ ತಮ್ಮ ಸುಳ್ಳುಗಳನ್ನು ಹೇಳುತ್ತಾ ಹೋಗುವುದೇ ಗೊತ್ತು ಹೊರತು, ಸಾರ್ವಜನಿಕವಾಗಿ ಇತರರಿಂದ ಪ್ರಶ್ನೆಗಳನ್ನು ಎದುರಿಸಿ ಅನುಭವವಿಲ್ಲವಲ್ಲ.

ಈ ಖ್ಯಾತ ಇತಿಹಾಸಕಾರರ ವೈರುಧ್ಯವೂ ಇಲ್ಲಿ ಸ್ಪಷ್ಟವಾಗಿದೆ. ಇತರ ಇತಿಹಾಸಕಾರರು ಸಾಕ್ಷ್ಯಾಧಾರವಿಲ್ಲದೆ ಮಾತನಾಡುತ್ತಾರೆ ಎಂದು ಆರೋಪಿಸುವ ಇವರೇ ನಿಜವಾಗಿ ಸಾಕ್ಷ್ಯಾಧಾರವಿಲ್ಲದೆ ಇತಿಹಾಸ ಬರೆದವರು. ಕೆಲವಾರು ದಶಕಗಳಿಂದ ಈ ಇತಿಹಾಸಕಾರರನ್ನು ಯಾರೂ ಪ್ರಶ್ನಿಸುವವರಿರಲಿಲ್ಲ, ಅವರು ಬರೆದುದೇ ಅಂತಿಮ ಸತ್ಯ ಎಂಬಂತಾಗಿತ್ತು. ಅವರು ಪ್ರತಿಪಾದಿಸಿದ ಇತಿಹಾಸವನ್ನು ಪರಾಮರ್ಶಿಸುವುದು ಬಹಳ ದೊಡ್ಡ ಅಪಚಾರ ಎಂಬಂತೆ ಪರಿಗಣಿಸಲಾಗುತ್ತಿತ್ತು. ಆದರೀಗ ಕಾಲ ಬದಲಾಗಿದೆ. ಅವರು ಬರೆದ ಇತಿಹಾಸದ ಲೋಪಗಳು, ತಾರತಮ್ಯಗಳು ಬೆಳಕಿಗೆ ಬರತೊಡಗಿವೆ. ಭಾರತದ ನೈಜ ಇತಿಹಾಸದ ಅನಾವರಣವು ಈಗ ಆಗತೊಡಗಿದೆ. ಜನರಿಗೆ ಸತ್ಯದ ಅರಿವಾಗತೊಡಗಿದೆ.

ಬಾಲ್ಯವನ್ನು ಪರದೆಗಳ ಕೈಗೆ ಒಪ್ಪಿಸುವ ಮುನ್ನ...

▸ ದೇವಿತಾ ಸಿ ಸುಬ್ಬಯ್ಯ



ಇಂದಿನ ಸಮಾಜದಲ್ಲಿ ಮಕ್ಕಳ ಬಾಲ್ಯ ಮೌನವಾಗಿ ಒಂದು ಅಪಾಯಕಾರಿ ಬದಲಾವಣೆಯೊಳಗೆ ಜಾರುತ್ತಿದೆ. ಕೆಲ ವರ್ಷಗಳ ಹಿಂದೆ ಬಾಲ್ಯವೆಂದರೆ ಬೀದಿಯ ಆಟ, ಪುಸ್ತಕಗಳ ಓದು, ಶಾಲೆಯ ಸ್ನೇಹ, ಮನೆಯ ಮಾತುಕತೆ ಮತ್ತು ಕುಟುಂಬದ ಮಮತೆ. ಆದರೆ ಇಂದು ಆ ಜಾಗವನ್ನು ಸ್ಮಾರ್ಟ್‌ಫೋನ್, ರೀಲ್ಸ್ ಮತ್ತು ಸೋಷಿಯಲ್ ಮೀಡಿಯಾ ಆಕ್ರಮಿಸಿಕೊಂಡಿವೆ. ಈಗ ಮಕ್ಕಳ ವ್ಯಕ್ತಿತ್ವವನ್ನು ರೂಪಿಸುತ್ತಿರುವುದು ಕೇವಲ ಮನೆ ಮತ್ತು ಶಾಲೆಯಲ್ಲ, ಅಲ್ಗೋರಿದಮ್‌ಗಳು, ಪರದೆ ಮತ್ತು ಡಿಜಿಟಲ್ ಜಗತ್ತೂ ಆಗಿದೆ. ಇದು ಕೇವಲ ತಂತ್ರಜ್ಞಾನದ ಬೆಳವಣಿಗೆಯಲ್ಲ; ಸಮಾಜದ ಮೌಲ್ಯ ವ್ಯವಸ್ಥೆಯಲ್ಲೇ ನಡೆಯುತ್ತಿರುವ ಗಂಭೀರ ಬದಲಾವಣೆ.

ಇಂದು ಎರಡು ವರ್ಷದ ಮಗು ಮೊಬೈಲ್‌ನಲ್ಲಿ ವಿಡಿಯೊ ಸ್ಕ್ರೋಲ್ ಮಾಡುತ್ತಿದೆ. ಐದನೇ ತರಗತಿಯ ಮಕ್ಕಳು ರೀಲ್ಸ್ ತಯಾರಿಸುತ್ತಿದ್ದಾರೆ. ಹದಿಹರೆಯದ ವಿದ್ಯಾರ್ಥಿಗಳು ತಮ್ಮ ಆತ್ಮವಿಶ್ವಾಸವನ್ನು 'ಲೈಕ್ಸ್' ಮತ್ತು 'ಫಾಲೋವರ್ಸ್' ಸಂಖ್ಯೆಯಲ್ಲಿ ಅಳೆಯುತ್ತಿದ್ದಾರೆ. ಮಾಹಿತಿಯ ಪ್ರವಾಹ ಹೆಚ್ಚಿದರೂ, ಭಾವನಾತ್ಮಕ ಪ್ರೌಢಿಮೆ ಅದೇ ವೇಗದಲ್ಲಿ ಬೆಳೆಯುತ್ತಿಲ್ಲ, ಪರಿಣಾಮವಾಗಿ ಸಹನೆ ಕುಸಿಯುತ್ತಿದೆ, ತಕ್ಷಣ ಪ್ರತಿಕ್ರಿಯಿಸುವ ಸ್ವಭಾವ ಹೆಚ್ಚುತ್ತಿದೆ, ''ನನ್ನ ಮಾತೇ ಸರಿ'' ಎನ್ನುವ ಅಹಂ ಮನೋಭಾವ ಗಾಢವಾಗುತ್ತಿದೆ.

ಶಾಲೆಗಳಲ್ಲಿ ಶಿಕ್ಷಕರು ಈಗ ಸ್ಪಷ್ಟವಾಗಿ ಗಮನಿಸುತ್ತಿರುವ ದೊಡ್ಡ ಸಮಸ್ಯೆ ಮಕ್ಕಳ ಗಮನ ಕೇಂದ್ರೀಕರಣ ಸಾಮರ್ಥ್ಯದ ಕುಸಿತ. ಕೇವಲ 30 ಸೆಕೆಂಡ್‌ಗಳ ರೀಲ್ಸ್‌ಗೆ ಒಗ್ಗಿಕೊಂಡ ಮನಸ್ಸಿಗೆ ಒಂದು ಗಂಟೆಯ ಪಾಠ ಕಠಿಣವಾಗುತ್ತಿದೆ. ತಡರಾತ್ರಿವರೆಗೆ ಮೊಬೈಲ್ ಬಳಸಿ, ನಿದ್ರಾಹೀನತೆಯೊಂದಿಗೆ ಶಾಲೆಗೆ ಬರುವ ಮಕ್ಕಳ ಸಂಖ್ಯೆ ಹೆಚ್ಚುತ್ತಿದೆ. ಇದು ಕೇವಲ ಅಭ್ಯಾಸದ ಸಮಸ್ಯೆಯಲ್ಲ; ಮಾನಸಿಕ ಆರೋಗ್ಯದ ಎಚ್ಚರಿಕೆಯ ಗಂಟೆ. ಇದಕ್ಕಿಂತ ಆತಂಕಕಾರಿ ಸಂಗತಿ ಎಂದರೆ, ಸೋಷಿಯಲ್ ಮೀಡಿಯಾ ಮಕ್ಕಳಲ್ಲಿ ಅಕಾಲಿಕ ಪ್ರೌಢತೆಯನ್ನು ಹುಟ್ಟುಹಾಕುತ್ತಿದೆ. ಫ್ಯಾಷನ್, ದುಬಾರಿ ಜೀವನಶೈಲಿ, ಸಂಬಂಧಗಳು ಮತ್ತು ಅತಿಯಾದ ಸ್ವಾತಂತ್ರ್ಯವನ್ನು ಮಕ್ಕಳು ವಯಸ್ಸಿಗಿಂತ ಬೇಗ ಅನುಕರಿಸಲು ಆರಂಭಿಸಿದ್ದಾರೆ. ಒಂದು ಫೋಟೋಗೆ ಕಡಿಮೆ ಲೈಕ್ಸ್ ಬಂದರೂ ಮನಸ್ಸಿಗೆ ಹೊಡೆತವಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಲವು ಸಂದರ್ಭಗಳಲ್ಲಿ ಮೊಬೈಲ್ ಬಳಕೆ ಕಡಿಮೆ ಮಾಡಲು ಹೇಳಿದ ಪೋಷಕರ ಮೇಲೆಯೇ ಮಕ್ಕಳು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಇದು ಕೇವಲ ಶಿಸ್ತಿನ ಸಮಸ್ಯೆಯಲ್ಲ, ಪರದೆ ಮೇಲಿನ ಮಾನಸಿಕ ಅವಲಂಬನೆಯ ಸಂಕೇತ. ಅತಿಯಾದ ಮೊಬೈಲ್ ಬಳಕೆಯಿಂದ ಮಕ್ಕಳ ದೈಹಿಕ ಆರೋಗ್ಯದ ಮೇಲೂ ಪರಿಣಾಮಗಳು ಕಾಣಿಸುತ್ತಿವೆ. ಹೊರಾಂಗಣ ಆಟಗಳು ಕಡಿಮೆಯಾಗುತ್ತಿರುವುದರಿಂದ ದೈಹಿಕ ಚಟುವಟಿಕೆ ಕುಸಿಯುತ್ತಿದೆ. ಕಣ್ಣಿನ ಸಮಸ್ಯೆ, ಬೆನ್ನುನೋವು, ತೂಕ ಹೆಚ್ಚಳ ಮತ್ತು ನಿದ್ರಾ ವ್ಯತ್ಯಯಗಳು ಈಗ ಚಿಕ್ಕ ವಯಸ್ಸಿನಲ್ಲೇ ಕಾಣಿಸುತ್ತಿವೆ. ವೈದ್ಯರು ಮತ್ತು ಮನೋವೈದ್ಯರು ಮಕ್ಕಳಲ್ಲಿ ಆತಂಕ, ಏಕಾಂತ ಭಾವನೆ ಮತ್ತು ಕೋಪದ ಪ್ರಮಾಣ ಹೆಚ್ಚುತ್ತಿರುವುದನ್ನು ಸೂಚಿಸುತ್ತಿದ್ದಾರೆ. ಸಾವಿರಾರು ಆನ್‌ಲೈನ್ ಸ್ನೇಹಿತರಿದ್ದರೂ, ಮನದ ಮಾತು ಹೇಳಿಕೊಳ್ಳುವ ನಿಜವಾದ ಸ್ನೇಹಿತರ ಕೊರತೆ ಮಕ್ಕಳನ್ನು ಒಳಗೊಳಗೆ ಖಾಲಿಯಾಗಿಸುತ್ತಿದೆ.

> ನಾಳಿನ ಸಮಾಜವನ್ನು ರೂಪಿಸುವ ಶಕ್ತಿಯನ್ನು ಯಾರು ಮುನ್ನಡೆಸುತ್ತಾರೆ? ಪೋಷಕರಾ, ಸಮಾಜವಾ, ಅಥವಾ ಅಲ್ಗೋರಿದಮ್‌ಗಳಾ? ಎಂಬುದರ ಮೇಲೆ ಮುಂದಿನ ಪೀಳಿಗೆಯ ಭವಿಷ್ಯ ನಿರ್ಧಾರವಾಗಲಿದೆ.



ಇನ್ನೊಂದು ಗಂಭೀರ ಅಂಶ ಎಂದರೆ, ಡಿಜಿಟಲ್ ಜಗತ್ತು ಮಕ್ಕಳನ್ನು ಅತಿವೇಗದ ಹೋಲಿಕೆಯ ಬದುಕಿಗೆ ತಳ್ಳುತ್ತಿದೆ. ಯಾರು ಹೆಚ್ಚು ಸುಂದರ? ಯಾರಿಗೆ ಹೆಚ್ಚು ಫಾಲೋವರ್ಸ್? ಯಾರು ಹೆಚ್ಚು ಸ್ಟೈಲಿಶ್? ಎಂಬ ಸ್ಪರ್ಧೆಯಲ್ಲಿ ಮಕ್ಕಳು ತಮ್ಮ ಸ್ವಾಭಾವಿಕ ವ್ಯಕ್ತಿತ್ವವನ್ನೇ ಕಳೆದುಕೊಳ್ಳುತ್ತಿದ್ದಾರೆ. ಸೋಷಿಯಲ್ ಮೀಡಿಯಾದಲ್ಲಿ ಕಾಣುವ ಕೃತಕ 'ಪರಿಪೂರ್ಣ ಜೀವನ' ಮಕ್ಕಳ ಮನಸ್ಸಿನಲ್ಲಿ ಅಸಮಾಧಾನ ಮತ್ತು ಹೀನಭಾವನೆ ಹುಟ್ಟುಹಾಕುತ್ತಿದೆ. ಇದು ಭವಿಷ್ಯದಲ್ಲಿ ಮಾನಸಿಕ ಆರೋಗ್ಯದ ದೊಡ್ಡ ಸಂಕಷ್ಟಕ್ಕೆ ಕಾರಣವಾಗುವ ಸಾಧ್ಯತೆ ಇದೆ. ಹಿಂದೆ ಮಕ್ಕಳಿಗೆ ತಾಯಿ–ತಂದೆಯರೇ ಆದರ್ಶರಾಗಿದ್ದರು. ಆದರೆ ಇಂದು ಆ ಜಾಗವನ್ನು ಇನ್‌ಫ್ಲುಯೆನ್ಸರ್‌ಗಳು ಆಕ್ರಮಿಸಿದ್ದಾರೆ. ಮಕ್ಕಳು ಮನೆಯವರ ಮಾತಿಗಿಂತ ಯೂಟ್ಯೂಬರ್‌ಗಳ ಮಾತಿಗೆ ಹೆಚ್ಚು ಪ್ರಭಾವಿತರಾಗುತ್ತಿದ್ದಾರೆ. ಇದು ಕುಟುಂಬದೊಳಗಿನ ಸಂವಹನ ಕುಸಿಯುತ್ತಿರುವ ಅತ್ಯಂತ ಗಂಭೀರ ಸೂಚನೆ. ಆದರೆ ಇದರ ಸಂಪೂರ್ಣ ಹೊಣೆ ಮಕ್ಕಳ ಮೇಲಾಗಲಿ ಅಥವಾ ತಂತ್ರಜ್ಞಾನದ ಮೇಲಾಗಲಿ ಹಾಕುವುದು ಸರಿಯಲ್ಲ, ಇಂದಿನ ಪೋಷಕರ ಜೀವನಶೈಲಿಯೂ ಇದಕ್ಕೆ ಸಮಾನವಾಗಿ ಕಾರಣವಾಗಿದೆ. ಉದ್ಯೋಗದ ಒತ್ತಡ, ಸಮಯದ ಕೊರತೆ ಮತ್ತು ನ್ಯೂಕ್ಲಿಯರ್ ಕುಟುಂಬ ವ್ಯವಸ್ಥೆಯ ನಡುವೆ ಮೊಬೈಲ್ ಒಂದು 'ಡಿಜಿಟಲ್ ಬೇಬಿ ಸಿಟ್ಟರ್' ಆಗಿ ಪರಿಣಮಿಸಿದೆ. ಮಗುವನ್ನು ಶಾಂತವಾಗಿರಿಸಲು, ಊಟ ಮಾಡಿಸಲು ಅಥವಾ ಅಳು ನಿಲ್ಲಿಸಲು ಮೊಬೈಲ್ ಕೊಡುವುದು ಈಗ ಸಾಮಾನ್ಯ ದೃಶ್ಯ. ಹೀಗಾಗಿ ಸಮಸ್ಯೆ ಕೇವಲ ಮಕ್ಕಳದಲ್ಲ, ಇಡೀ ಸಮಾಜದ ಜೀವನಶೈಲಿಯಲ್ಲಿದೆ.

ಈ ಸಂದರ್ಭದಲ್ಲಿ ಮಕ್ಕಳ ಮೇಲೆ ಕಠಿಣ ನಿಯಂತ್ರಣ ಹೇರುವುದಕ್ಕಿಂತ, ಅವರನ್ನು ಅರ್ಥಮಾಡಿಕೊಳ್ಳುವುದು ಹೆಚ್ಚು ಅಗತ್ಯ. ಇಂದಿನ ಮಕ್ಕಳಿಗೆ ಆದೇಶಕ್ಕಿಂತ ಸಂವಾದ ಬೇಕಾಗಿದೆ. ''ಮೊಬೈಲ್ ಬೇಡ'' ಎನ್ನುವುದಕ್ಕಿಂತ ''ಏನು ನೋಡುತ್ತಿದ್ದೀಯ?'' ಎಂದು ಕೇಳುವ ಸಂಬಂಧ ಬೆಳೆಯಬೇಕು. ಕುಟುಂಬದಲ್ಲಿ ಪರದೆರಹಿತ ಸಮಯ, ಒಟ್ಟಿಗೆ ಊಟ, ಹೊರಾಂಗಣ ಆಟಗಳು ಮತ್ತು ನೇರ ಮಾತುಕತೆ ಮತ್ತೆ ಮರಳಬೇಕಾಗಿದೆ. ಶಾಲೆಗಳಲ್ಲೂ ಡಿಜಿಟಲ್ ಜಾಗೃತಿಯ ಕುರಿತು ಶಿಕ್ಷಣ ನೀಡುವುದು ಕಾಲದ ಅಗತ್ಯವಾಗಿದೆ. ತಂತ್ರಜ್ಞಾನದಿಂದ ಮಕ್ಕಳನ್ನು ಸಂಪೂರ್ಣ ದೂರ ಇಡುವುದು ಅಸಾಧ್ಯ. ಆದರೆ ಅದರ ಬಳಕೆಗೆ ಮಿತಿ, ಜವಾಬ್ದಾರಿ ಮತ್ತು ಮೌಲ್ಯಗಳನ್ನು ಕಲಿಸುವುದು ಸಾಧ್ಯ. ಯಾಕೆಂದರೆ ಇಂದು ಮಕ್ಕಳ ಕೈಯಲ್ಲಿರುವ ಮೊಬೈಲ್ ಕೇವಲ ಸಾಧನವಲ್ಲ, ಅದು ನಾಳಿನ ಸಮಾಜದ ಸ್ವಭಾವವನ್ನು ರೂಪಿಸುವ ಶಕ್ತಿ. ಆ ಶಕ್ತಿಯನ್ನು ಯಾರು ಮುನ್ನಡೆಸುತ್ತಾರೆ? ಪೋಷಕರಾ, ಸಮಾಜವಾ, ಅಥವಾ ಅಲ್ಗೋರಿದಮ್‌ಗಳಾ? ಎಂಬುದರ ಮೇಲೆ ಮುಂದಿನ ಪೀಳಿಗೆಯ ಭವಿಷ್ಯ ನಿರ್ಧಾರವಾಗಲಿದೆ. ಬಾಲ್ಯವನ್ನು ಪರದೆಗಳ ಕೈಗೆ ಸಂಪೂರ್ಣ ಒಪ್ಪಿಸುವ ಮುನ್ನ ಸಮಾಜ ಒಂದು ಕ್ಷಣ ನಿಂತು ಯೋಚಿಸಬೇಕಾದ ಸಮಯ ಈಗಾಗಲೇ ಬಂದಿದೆ.

ಕದನ ವಿರಾಮ ನಡುವೆಯೂ ಇರಾನ್ ದಾಳಿ

ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಹೆಚ್ಚಳ

ದುಬೈ: ಕದನ ವಿರಾಮ ಜಾರಿಯಲ್ಲಿದ್ದರೂ ಇರಾನ್ ಮತ್ತು ಅಮೆರಿಕ ನಡುವಿನ ಉದ್ವಿಗ್ನತೆ ಮತ್ತೆ ಉಲ್ಬಣಗೊಂಡಿದೆ. ಇರಾನ್ ಡ್ರೋನ್ ದಾಳಿಯಿಂದ ಕುವೈತ್‌ನ ಪ್ರಮುಖ ವಿಮಾನ ನಿಲ್ದಾಣದ ಟರ್ಮಿನಲ್ ಕಟ್ಟಡಕ್ಕೆ ಭಾರೀ ಹಾನಿಯಾಗಿದ್ದು, ಭಾರತೀಯನೋರ್ವ ಮೃತಪಟ್ಟಿದ್ದಾನೆ. ಇತರೆ ಹಲವರು ಗಾಯಗೊಂಡಿದ್ದಾರೆ. ಇದರಿಂದ ಕುವೈತ್ ಸರ್ಕಾರ ಕೆಲಕಾಲ ವಿಮಾನ ನಿಲ್ದಾಣದ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿತ್ತು.

ಇರಾನ್ ಬೆಂಬಲಿತ ಮಾಧ್ಯಮಗಳ ಪ್ರಕಾರ, ಅಮೆರಿಕ ಹಾಗೂ ಇಸ್ರೇಲ್ ಜತೆಗಿನ ಯುದ್ಧಕ್ಕೆ ಸಂಬಂಧಿಸಿದ ಕದನ ವಿರಾಮ ವಿಸ್ತರಣೆ ಕುರಿತ ಮಧ್ಯಸ್ಥರೊಂದಿಗೆ ಇರಾನ್ ಸಂಪರ್ಕವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ಲೆಬನಾನ್‌ಲ್ಲಿ ಇಸ್ರೇಲ್ ಮತ್ತು ಹೆಜ್ಬುಲ್ಲಾ ನಡುವಿನ ಘರ್ಷಣೆ ನಿಲ್ಲಿಸಿದ ಬಳಿಕವೇ ಮುಂದಿನ ಮಾತುಕತೆಗೆ ಮರಳುವುದಾಗಿ ಟೆಹ್ರಾನ್ ಹೇಳಿದೆ. ಆದರೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ವರದಿಗಳನ್ನು ತಳ್ಳಿಹಾಕಿದ್ದು, ಮಾತುಕತೆಗಳು ನಿರಂತರವಾಗಿ ನಡೆಯುತ್ತಿವೆ ಎಂದಿದ್ದಾರೆ. ಪರ್ಷಿಯನ್ ಕೊಲ್ಲಿಯಲ್ಲಿನ ಈ ಹೊಸ ದಾಳಿ-ಪ್ರತಿದಾಳಿಗಳು ಮಧ್ಯಪ್ರಾಚ್ಯದ ಸ್ಥಿರತೆಗೆ ಮತ್ತೊಮ್ಮೆ ಸವಾಲು ಎಸೆದಿವೆ.

ಲೆಬನಾನ್ ಯುದ್ಧ ಹೊಸ ತಲೆನೋವು: ಇಸ್ರೇಲ್ ಸೇನೆ ಲೆಬನಾನ್ ಒಳ ಪ್ರವೇಶಿಸಿದ್ದು, ಹೆಜ್ಬುಲ್ಲಾ ರಾಕೆಟ್ ಮತ್ತು ಡ್ರೋನ್ ದಾಳಿಗಳನ್ನು ಮುಂದುವರಿಸಿದೆ. ಅಧಿಕೃತವಾಗಿ ಕದನ ವಿರಾಮ ಜಾರಿಯಲ್ಲಿದ್ದರೂ ಎರಡೂ ಕಡೆಯ ದಾಳಿನಿಂತಿಲ್ಲ.

ಟ್ರಂಪ್-ನೆತನ್ಯಾಹು ವಾಗ್ವಾದ: ಲೆಬನಾನ್ ಯುದ್ಧದಿಂದ ಇರಾನ್ ಜತೆಗಿನ ಒಪ್ಪಂದ ಪ್ರಕ್ರಿಯೆ ವಿಳಂಬವಾಗುತ್ತಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ಟ್ರಂಪ್, ದೂರವಾಣಿ ಸಂಭಾಷಣೆಯಲ್ಲಿ ನೆತನ್ಯಾಹು ಅವರನ್ನು ಹುಚ್ಚ ಎಂದು ಕರೆದಿದ್ದ ವರದಿಯನ್ನು ಪರೋಕ್ಷವಾಗಿ ದೃಢಪಡಿಸಿದ್ದಾರೆ. ಆದಾಗ್ಯೂ, ತಮ್ಮ ಮತ್ತು ನೆತನ್ಯಾಹು ನಡುವಿನ ಸಂಬಂಧ ಉತ್ತಮವಾಗಿಯೇ ಇದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.



ಭಾರತೀಯನ ಸಾವು

ಇನ್ನು ಕುವೈತ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಇರಾನ್ ನಡೆಸಿದ ದಾಳಿಯಲ್ಲಿ ಭಾರತೀಯ ಪ್ರಜೆಯೊಬ್ಬರು ಮೃತಪಟ್ಟಿದ್ದಾರೆ ಎಂದು ಕುವೈತ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಬುಧವಾರ ಖಚಿತಪಡಿಸಿದೆ. ಮೃತರ ಕುಟುಂಬ ಮತ್ತು ಘಟನೆಯಲ್ಲಿ ಗಾಯಗೊಂಡವರಿಗೆ ಸಾಧ್ಯವಿರುವ ಎಲ್ಲ ಬೆಂಬಲ ಮತ್ತು ಸಹಾಯವನ್ನು ನೀಡಲು ಮಿಷನ್ ಕುವೈತ್ ಅಧಿಕಾರಿಗಳೊಂದಿಗೆ ನಿಕಟವಾಗಿ ಸಮನ್ವಯ ಸಾಧಿಸುತ್ತಿದೆ ಎಂದು ರಾಯಭಾರ ಕಚೇರಿ ಹೇಳಿದೆ.

ಜೆಟ್ ತೈಲ ಹೊರೆ ತಗ್ಗಿಸಲು 10,000 ಕೋಟಿ ರೂ. ನಿಧಿ

ಹೊಸದಿಲ್ಲಿ: ಪಶ್ಚಿಮ ಏಷ್ಯಾದಲ್ಲಿ ಮುಂದುವರಿದಿರುವ ಉದ್ವಿಗ್ನತೆಯಿಂದ ಏರಿಕೆಯಾಗಿರುವ ವಿಮಾನ ಇಂಧನ (ಎಟಿಎಫ್) ಬೆಲೆಗಳ ಹೊರೆ ಕಡಿಮೆ ಮಾಡಲು ಕೇಂದ್ರ ಸಚಿವ ಸಂಪುಟ ಬುಧವಾರ 10,000 ಕೋಟಿ ರೂ. ಮೊತ್ತದ ಎಟಿಎಫ್ ದರ ಸ್ಥಿರೀಕರಣ ನಿಧಿಗೆ ಅನುಮೋದನೆ ನೀಡಿದೆ.

ಈ ಯೋಜನೆಯಲ್ಲಿ ತೈಲ ಮಾರುಕಟ್ಟೆ ಕಂಪನಿಗಳಿಗೆ(ಒಎಂಸಿ) ಬಡ್ಡಿರಹಿತ ಮುಂಗಡ ಹಣ ನೀಡಲಾಗುವುದು. ಇದರ ಮೂಲಕ ದೇಶೀಯ ಹಾಗೂ ಅಂತಾರಾಷ್ಟ್ರೀಯ ಸೇವೆಗಳನ್ನು ನಡೆಸುವ ಭಾರತೀಯ ವಿಮಾನಯಾನ ಸಂಸ್ಥೆಗಳಿಗೆ ನಿಗದಿತ ದರದಲ್ಲಿ ಇಂಧನ ಪೂರೈಕೆ ಮಾಡಲಾಗುತ್ತದೆ. ದೇಶೀಯ ವಿಮಾನಗಳಿಗಾಗಿ ಎಟಿಎಫ್ ದರವನ್ನು ಪ್ರತಿ ಲೀಟರ್‌ಗೆ 75.60ರೂ.ಗೆ ಮಿತಿಗೊಳಿಸಲಾಗಿದೆ.

ಇತರೆ ತೀರ್ಮಾನಗಳು

- ದಿಲ್ಲಿ-ಎನ್‌ಸಿಆರ್‌ನಲ್ಲಿ ವಾಯು ಮಾಲೀನ್ಯ ನಿಯಂತ್ರ ಯೋಜನೆಗೆ 9585 ಕೋಟಿ ರೂ.
- ಮಧ್ಯಪ್ರದೇಶದಲ್ಲಿ ಹೆದ್ದಾರಿ ಯೋಜನೆಗಳಿಗೆ 4,415 ಕೋಟಿ ರೂ.
- ಒಡಿಶಾದಲ್ಲಿ ಹೊಸ ಕರಾವಳಿ ರಾಮೇಶ್ವರ- ಪರದೀಪ್ ಹೆದ್ದಾರಿ ನಿರ್ಮಾಣಕ್ಕೆ 8,300 ಕೋಟಿ ರೂ.

ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಮಾತನಾಡಿ, ಮಾರ್ಚ್‌ನಲ್ಲಿ ಲೀಟರ್‌ಗೆ 60.5 ರೂ. ಇದ್ದ ಅಂತಾರಾಷ್ಟ್ರೀಯ ಎಟಿಎಫ್ ಬೆಲೆ ಮೇನಲ್ಲಿ 142 ರೂ.ಗೆ ಏರಿಕೆಯಾಗಿದೆ ಎಂದರು.



ಝೋಜಿಲಾ ಸುರಂಗ ಮಾರ್ಗದ ಭೂಗತ ಜೋಡಣೆ ಜೂನ್ 9ಕ್ಕೆ ಪೂರ್ಣ

ಗಡಿ ಭದ್ರತೆಗೆ ಬಲ

ಚೀನಾ ಮತ್ತು ಪಾಕಿಸ್ತಾನದೊಂದಿಗೆ ಸೂಕ್ಷ್ಮ ಗಡಿ ಹಂಚಿಕೊಂಡಿರುವ ಲಡಾಖ್‌ಗೆ ಚಳಿಗಾಲದಲ್ಲಿ ಸಂಪರ್ಕ ಕಡಿತಗೊಳ್ಳುತ್ತಿತ್ತು. ಈ ಸುರಂಗದಿಂದಾಗಿ ಇನ್ಮುಂದೆ ಸೇನಾ ಸಿಬ್ಬಂದಿ, ಭಾರೀ ರಕ್ಷಣಾ ಉಪಕರಣಗಳು ಹಾಗೂ ತುರ್ತು ಸೇವೆಗಳ ಅಡೆತಡೆಯಿಲ್ಲದ ಚಲನೆ ಸಾಧ್ಯವಾಗಲಿದೆ.

ಲಡಾಖ್ ಟು ಕಾಶ್ಮೀರ ಸರ್ವಋತು ಸಂಪರ್ಕ

ಕಾರ್ಯತಂತ್ರದ ದೃಷ್ಟಿಯಿಂದ ಅತ್ಯಂತ ನಿರ್ಣಾಯಕ ಎನಿಸಿರುವ ಝೋಜಿಲಾ ಸುರಂಗ ಮಾರ್ಗ, ಜೂನ್ 9 ರಂದು ತನ್ನ ಅಂತಿಮ ಭೂಗತ ಜೋಡಣೆಯ ಮೈಲಿಗಲ್ಲನ್ನು ಸಾಧಿಸಲಿದ್ದು, ಕಾಶ್ಮೀರ ಮತ್ತು ಲಡಾಖ್ ನಡುವೆ ನಿರಂತರವಾದ ಸರ್ವಋತು ಸಂಪರ್ಕ ಕಲ್ಪಿಸಲಿದೆ. ಮುಖ್ಯ ಸುರಂಗದ ಎರಡೂ ತುದಿಗಳನ್ನು ಜೋಡಿಸುವ ಅಂತಿಮ ಬ್ಲಾಸ್ಟಿಂಗ್ ಪ್ರಕ್ರಿಯೆ ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಲಿದೆ.

ತಾಂತ್ರಿಕ ವಿಧಾನ, ಸೌಲಭ್ಯ

ಸುರಂಗದ ಪಶ್ಚಿಮ ಮತ್ತು ಪೂರ್ವದ ಪ್ರವೇಶ ದ್ವಾರಗಳಿಂದ ಉತ್ಖನನ ನಡೆಸಲು ಇಂಜಿನಿಯರ್‌ಗಳು ನ್ಯೂ ಆಸ್ಟ್ರಿಯನ್ ಟನೆಲಿಂಗ್ ಮೆಥಡ್(ಎನ್‌ಎಟಿಎಂ) ತಂತ್ರಜ್ಞಾನ ಬಳಸಿದ್ದಾರೆ. ಸುರಕ್ಷತೆಯ ದೃಷ್ಟಿಯಿಂದ ಈ ಆಧುನಿಕ ಸುರಂಗದಲ್ಲಿ ಪ್ರತಿ 750 ಮೀಟರ್‌ಗಳ ಅಂತರದಲ್ಲಿ ಲೇ-ಬೈಗಳನ್ನು(ವಾಹನ ನಿಲುಗಡೆ ತಾಣ), ಗಾಳಿಯ ಸಂಚಾರವನ್ನು ಸುಗಮಗೊಳಿಸಲು ಮೂರು ಬೃಹತ್ ವೆಂಟಿಲೇಶನ್ ಶಾಫ್ಟ್‌ಗಳನ್ನು ಅಳವಡಿಸಲಾಗಿದೆ.

ಹಿನ್ನೆಲೆ ಮತ್ತು ಇತಿಹಾಸ

ಪ್ರಧಾನಿ ಮೋದಿ, ಮೇ 2018ರಲ್ಲಿ ಈ ಮಹತ್ವಾಕಾಂಕ್ಷೆಯ ಯೋಜನೆಗೆ ಚಾಲನೆ ನೀಡಿದ್ದರು. 2020ರಲ್ಲಿ ಕಾಮಗಾರಿಯ ಗುತ್ತಿಗೆಯನ್ನು ಎಂಇಐಎಲ್ ಸಂಸ್ಥೆಗೆ ವಹಿಸಲಾಯಿತು. ಆದರೆ, ಕೆಲವು ಪ್ರತಿಕೂಲ ಪರಿಸ್ಥಿತಿಗಳಿಂದಾಗಿ ಆರಂಭಿಕ ಹಂತದಲ್ಲಿ ಅಡೆತಡೆಗಳನ್ನು ಎದುರಿಸಿದ ಯೋಜನೆ, ಅಂತಿಮವಾಗಿ 2021ರಲ್ಲಿ ಕಾಮಗಾರಿ ಪ್ರಾರಂಭಿಸಿತು.

ಮೂಲಸೌಕರ್ಯದ ವೇಗವರ್ಧನೆ

ಕೇಂದ್ರ ಸರ್ಕಾರ ದೇಶದ ವಾಯುವ್ಯ ಗಡಿ ಭಾಗಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಯನ್ನು ಚುರುಕುಗೊಳಿಸುತ್ತಿದ್ದು, ದೂರದ ಪ್ರದೇಶಗಳನ್ನು ದೇಶದ ಇತರ ಭಾಗಗಳೊಂದಿಗೆ ಸಾಮಾಜಿಕ- ಸಾಂಸ್ಕೃತಿಕವಾಗಿ ಸಂಯೋಜಿಸಲು ಮತ್ತು ಸಂಪರ್ಕವನ್ನು ಸುಧಾರಿಸಲು ಗಮನ ಹರಿಸಿದೆ. ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶದಲ್ಲಿ 19 ಸುರಂಗಗಳನ್ನು ನಿರ್ಮಿಸುವ ಪ್ರಮುಖ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

ಸುರಂಗದ ವಿಸ್ತೀರ್ಣ

ಶ್ರೀನಗರ-ಲೇಹ್ ರಾಷ್ಟ್ರೀಯ ಹೆದ್ದಾರಿಯ ಝೋಜಿಲಾ ಪಾಸ್‌ನಲ್ಲಿ 13.15 ಕಿಲೋಮೀಟರ್ ಉದ್ದದ ಈ ಬೃಹತ್ ಮೂಲಸೌಕರ್ಯವನ್ನು ನಿರ್ಮಿಸಲಾಗುತ್ತಿದೆ. ಸಮುದ್ರ ಮಟ್ಟದಿಂದ 11,578 ಅಡಿ ಎತ್ತರದಲ್ಲಿರುವ ಈ ಸುರಂಗ, ಪೂರ್ಣಗೊಂಡ ನಂತರ ಭಾರತದ ಅತಿ ಉದ್ದದ ರಸ್ತೆ ಸುರಂಗ ಮತ್ತು ಏಷ್ಯಾದ ಅತಿ ಉದ್ದದ ದ್ವಿಮುಖ ಸುರಂಗ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ. ಮೇಘಾ ಇಂಜಿನಿಯರಿಂಗ್ (ಎಂಇಐಎಲ್) ಸಂಸ್ಥೆ ಒಟ್ಟು 6,808.69 ಕೋಟಿ ರೂ.ಗಳ ಮಂಜೂರಾದ ವೆಚ್ಚದಲ್ಲಿ ಈ ಕಾಮಗಾರಿಯನ್ನು ಕೈಗೆತ್ತಿಕೊಂಡಿದೆ.

ಆಯಕಟ್ಟಿನ, ಆರ್ಥಿಕ ಮಹತ್ವ


ಈ ಸುರಂಗದ ಪೂರ್ಣಗೊಳ್ಳುವಿಕೆಯಿಂದಾಗಿ ಪ್ರತಿ ವರ್ಷ ಹಿಮಪಾತ ಹಾಗೂ ಭೂಕುಸಿತದ ಭೀತಿಯಿಂದಾಗಿ ತಿಂಗಳುಗಟ್ಟಲೆ ಮುಚ್ಚಲ್ಪಡುತ್ತಿದ್ದ ಝೋಜಿಲಾ ಪಾಸ್‌ನ ಅವಲಂಬನೆ ತಪ್ಪಲಿದೆ. ಇದರ ಪರಿಣಾಮವಾಗಿ ಪ್ರಸ್ತುತ ಇರುವ ಮೂರು ಗಂಟೆಗಳ ಪ್ರಯಾಣದ ಅವಧಿ ಕೇವಲ 15 ನಿಮಿಷಗಳಿಗೆ ಇಳಿಕೆಯಾಗಲಿದೆ. ಈ ಬದಲಾವಣೆ, ನಾಗರಿಕ ಸಾರಿಗೆ, ರಕ್ಷಣಾ ಇಲಾಖೆಯ ಸಾಗಣೆ, ಪ್ರವಾಸೋದ್ಯಮ ಹಾಗೂ ಲಡಾಖ್ ಮತ್ತು ಗಂದರ್ಬಲ್ ಪ್ರದೇಶಗಳ ಆರ್ಥಿಕತೆಗೆ ಭಾರೀ ಉತ್ತೇಜನ ನೀಡಲಿದೆ. ಚಳಿಗಾಲದ ದ್ವೀಪದಂತಾಗುತ್ತಿದ್ದ ಈ ಪ್ರದೇಶದ ಸಮಸ್ಯೆಗಳಿಗೆ ಇದು ಶಾಶ್ವತ ಪರಿಹಾರ ಎಂದು ಸೋನಾಮಾರ್ಗ್ ಮತ್ತು ಡ್ರಾಸ್ ಭಾಗದ ಸ್ಥಳೀಯರು ಹರ್ಷ ವ್ಯಕ್ತಪಡಿಸಿದ್ದಾರೆ. ಗಡಿ ಮತ್ತು ಹಿಮಾಲಯದ ಉನ್ನತ ಪ್ರದೇಶಗಳಲ್ಲಿ ಮೂಲಸೌಕರ್ಯವನ್ನು ಬಲಪಡಿಸಲು ಕೇಂದ್ರ ಸರ್ಕಾರ ಆದ್ಯತೆ ನೀಡುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯಿಂದಾಗಿ ಲಡಾಖ್ ಕಳೆದ ಒಂದು ದಶಕದಲ್ಲಿ ಅಭೂತಪೂರ್ವ ಪ್ರಗತಿ ಕಂಡಿದೆ, ಎಂದು ಲೇಹ್ ಎಲ್‌ಎಎಚ್‌ಡಿಸಿಯ ಮಾಜಿ ಮುಖ್ಯ ಕಾರ್ಯನಿರ್ವಾಹಕ ಕೌನ್ಸಿಲರ್ ತಾಶಿ ಗ್ಯಾಲ್ಸನ್ ತಿಳಿಸಿದ್ದಾರೆ.


ಮೂಲಸೌಕರ್ಯ ಮತ್ತು ಕಾಲಮಿತಿ

ಈ ಯೋಜನೆ ಗಂದರ್ಬಲ್ ಜಿಲ್ಲೆಯ ಬಾಲ್ಟಾಲ್ ಅನ್ನು ಕಾರ್ಗಿಲ್‌ನ ಡ್ರಾಸ್‌ನಲ್ಲಿರುವ ಮಿನಾಮಾರ್ಗ್‌ಗೆ ನೇರವಾಗಿ ಸಂಪರ್ಕಿಸುತ್ತದೆ. ಕಾಶ್ಮೀರ ಮತ್ತು ಲಡಾಖ್ ಎರಡೂ ಕಡೆಯಿಂದ ಕಾರ್ಯನಿರ್ವಹಿಸುತ್ತಿರುವ ಭೂಗತ ಇಂಜಿನಿಯರ್‌ಗಳ ತಂಡಗಳು ಜೂನ್ ಎರಡನೇ ವಾರದಲ್ಲಿ ಸುರಂಗದ ಮಧ್ಯಭಾಗದಲ್ಲಿ ಪರಸ್ಪರ ಭೇಟಿಯಾಗಲಿವೆ. ಈ ಜೋಡಣೆಯ ನಂತರ ಲೈನಿಂಗ್, ವೆಂಟಿಲೇಶನ್ ಸೇರಿದಂತೆ ಇತರೆ ಅಂತಿಮ ಹಂತದ ಕಾಮಗಾರಿಗಳನ್ನು ಚುರುಕುಗೊಳಿಸಲಾಗುವುದು. ಫೆಬ್ರವರಿ 2028ರ ವೇಳೆಗೆ ಸುರಂಗ ಪೂರ್ಣ ಪ್ರಮಾಣದಲ್ಲಿ ಸಾರ್ವಜನಿಕ ಸಂಚಾರಕ್ಕೆ ಮುಕ್ತವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಮಯ ಮತ್ತು ಇಂಧನ ಉಳಿತಾಯ

ಈ ಮಾರ್ಗ ಲಡಾಖ್‌ಗೆ ಸರ್ವಋತು ಸಂಪರ್ಕ ಒದಗಿಸಲಿದ್ದು, ಪ್ರಾದೇಶಿಕ ಸಂಚಾರವನ್ನು ಸುಗಮಗೊಳಿಸುತ್ತದೆ. ಸದ್ಯ ಜೊಜಿಲ್ಲಾ ಪಾಸ್ ದಾಟಲು ಸುಮಾರು ಮೂರು ಗಂಟೆಗಳ ಕಾಲ ಬೇಕಾಗುತ್ತಿದ್ದು, ಸುರಂಗದ ನಿರ್ಮಾಣದ ನಂತರ ಈ ಪ್ರಯಾಣದ ಅವಧಿ ಕೇವಲ 30 ನಿಮಿಷಗಳಿಗೆ ಇಳಿಕೆಯಾಗಲಿದೆ. ಈ ಸಮಯದ ಉಳಿತಾಯ, ಪ್ರಯಾಣಿಕರ ಸೌಕರ್ಯವನ್ನು ಹೆಚ್ಚಿಸುವುದಲ್ಲದೆ, ಗಣನೀಯ ಪ್ರಮಾಣದ ಇಂಧನ ಉಳಿಸಲಿದ್ದು ಪರಿಸರಕ್ಕೂ ಪೂರಕವಾಗಲಿದೆ.





ಕಠಿಣ ಭೂಪ್ರದೇಶ- ಇಂಜಿನಿಯರಿಂಗ್ ಸಾಧನೆ

ಝೋಜಿಲಾ ಸುರಂಗ ಯೋಜನೆ, ಅತ್ಯಂತ ಕಠಿಣ ಹವಾಮಾನ ಮತ್ತು ಭೌಗೋಳಿಕ ಸವಾಲುಗಳನ್ನು ಮೀರಿ ಸಾಧಿಸಿದ ಒಂದು ನಿಜವಾದ ಇಂಜಿನಿಯರಿಂಗ್ ಅದ್ಭುತ. ಈ ಯೋಜನೆಯ ಯಶಸ್ವಿ ಪೂರ್ಣಗೊಳ್ಳುವಿಕೆ, ಸ್ಥಳೀಯ ಜನರ ದೈನಂದಿನ ಜೀವನಮಟ್ಟವನ್ನು ಸುಧಾರಿಸುವುದಲ್ಲದೆ, ಗಡಿ ಪ್ರದೇಶದಲ್ಲಿ ಭಾರತದ ವ್ಯೂಹಾತ್ಮಕ ಸ್ಥಾನವನ್ನು ಬಲಪಡಿಸುತ್ತದೆ. ಇದು ರಾಷ್ಟ್ರೀಯ ರಕ್ಷಣೆಗೆ ಪ್ರಮುಖ ಕೊಡುಗೆ ನೀಡುವ ಮೂಲಕ ಜಮ್ಮು-ಕಾಶ್ಮೀರ ಮತ್ತು ಲಡಾಖ್‌ನ ಒಟ್ಟಾರೆ ಅಭಿವೃದ್ಧಿಗೆ ಮುನ್ನುಡಿ ಬರೆಯಲಿದೆ.

ಕಿರುಸುದ್ದಿ

ಮರುಮೌಲ್ಯಮಾಪನಕ್ಕೆ 44,000 ಅರ್ಜಿ ಸಲ್ಲಿಕೆ

ಹೊಸದಿಲ್ಲಿ: ಸುಮಾರು 44,000 ವಿದ್ಯಾರ್ಥಿಗಳು ಬೋರ್ಡ್ ಪರೀಕ್ಷೆಗಳ ಉತ್ತರ ಪತ್ರಿಕೆ ಪರಿಶೀಲನೆ(ವೆರಿಫಿಕೇಶನ್) ಮತ್ತು ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದಾರೆ ಎಂದು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ(ಸಿಬಿಎಸ್‌ಇ) ತಿಳಿಸಿದೆ. ಉತ್ತರ ಪತ್ರಿಕೆಗಳ ಪರಿಶೀಲನೆ ಮತ್ತು ಮರುಮೌಲ್ಯಮಾಪನಕ್ಕಾಗಿ ಆನ್‌ಲೈನ್ ಪೋರ್ಟಲ್ ಒಟ್ಟು 43,980 ಅರ್ಜಿಗಳನ್ನು ಸ್ವೀಕರಿಸಿದೆ ಎಂದು ಮಂಡಳಿ ತಿಳಿಸಿದೆ. ಬುಧವಾರ 12 ಗಂಟೆಯವರೆಗೆ ಪೋರ್ಟಲ್ ಪರಿಶೀಲನೆಗಾಗಿ 4,924 ಅರ್ಜಿಗಳನ್ನು ಮತ್ತು ಮರುಮೌಲ್ಯಮಾಪನಕ್ಕಾಗಿ 39,056 ಅರ್ಜಿಗಳನ್ನು (ಒಟ್ಟು 43,980) ಸ್ವೀಕರಿಸಿದೆ ಎಂದು ಸಿಬಿಎಸ್‌ಇ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದೆ.

ರಷ್ಯಾ ತೈಲ ಟರ್ಮಿನಲ್‌ಗೆ ಉಕ್ರೇನ್ ಡ್ರೋನ್ ದಾಳಿ

ಕೀವ್: ಉಕ್ರೇನ್‌ನ ದೂರಗಾಮಿ ಡ್ರೋನ್‌ಗಳು ರಷ್ಯಾದ ಸೇಂಟ್ ಪೀಟರ್ಸ್‌ಬರ್ಗ್ ನಗರದ ತೈಲ ಟರ್ಮಿನಲ್ ಮೇಲೆ ದಾಳಿ ನಡೆಸಿವೆ. 1,000 ಕಿಮೀಗೂ ಹೆಚ್ಚು ದೂರ ಹಾರಿದ ಡ್ರೋನ್‌ಗಳು ಗುರಿ ತಲುಪಿದ್ದು, ಬಂದರು ಪ್ರದೇಶದಲ್ಲಿ ದಟ್ಟ ಹೊಗೆ ಆವರಿಸಿದೆ. ರಷ್ಯಾದ ಪ್ರತಿಷ್ಠಿತ ಆರ್ಥಿಕ ಸಮಾವೇಶ ನಡೆಯುತ್ತಿರುವ ವೇಳೆ ಈ ದಾಳಿ ನಡೆದಿರುವುದು ಅಧ್ಯಕ್ಷ ಪುಟಿನ್ ಅವರಿಗೆ ಮುಜುಗರ ಉಂಟುಮಾಡಿದೆ. ಉಕ್ರೇನ್ ಡ್ರೋನ್‌ಗಳು ಕ್ರೋನ್ಸ್ಟಾಡ್ ನೌಕಾನೆಲೆ ಹಾಗೂ ಶಸ್ತ್ರಾಸ್ತ್ರ ಉತ್ಪಾದನಾ ಘಟಕಗಳ ಮೇಲೂ ದಾಳಿ ನಡೆಸಿವೆ. ಇದಕ್ಕೆ ಪ್ರತಿಯಾಗಿ ರಷ್ಯಾ, 198 ಡ್ರೋನ್‌ಗಳನ್ನು ಉಕ್ರೇನ್ ಮೇಲೆ ಹಾರಿಸಿದ್ದು, ಹೆಚ್ಚಿನವುಗಳನ್ನು ಹೊಡೆದುರುಳಿಸಲಾಗಿದೆ ಎಂದು ಉಕ್ರೇನ್ ತಿಳಿಸಿದೆ.

ಭಾರತ-ಬಾಂಗ್ಲಾ ಆಂತರಿಕ ಭದ್ರತೆ ಕುರಿತ ಚರ್ಚೆ ಶೀಘ್ರ

ಹೊಸದಿಲ್ಲಿ: ಭಾರತ ಮತ್ತು ಬಾಂಗ್ಲಾದೇಶದ ಗಡಿ ಕಾವಲು ಪಡೆಗಳ ಮುಖ್ಯಸ್ಥರ ನಡುವಿನ ಮುಂಬರುವ ಸಭೆಯಲ್ಲಿ ದೇಶದ ಆಂತರಿಕ ಭದ್ರತೆ ಕುರಿತು ಚರ್ಚೆ ನಡೆಯಲಿದೆ. ಬಾಂಗ್ಲಾದೇಶದ ಪ್ರಜೆಗಳು ತನ್ನ ಪಡೆಗಳು ಮತ್ತು ಭಾರತೀಯ ನಾಗರಿಕರ ಮೇಲೆ ದಾಳಿ ಮಾಡುವುದು, ಗಡಿಯೊಳಗೆ ಅಪರಾಧಿಗಳ ಪ್ರವೇಶವನ್ನು ತಡೆಯುವುದು ಮುಂತಾದ ವಿಷಯಗಳ ಬಗ್ಗೆ ಚರ್ಚಿಸಲಾಗುವುದು ಎಂದು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಬುಧವಾರ ತಿಳಿಸಿದೆ. ಬಿಎಸ್‌ಎಫ್ ಮತ್ತು ಬಾರ್ಡರ್ ಗಾರ್ಡ್ ಬಾಂಗ್ಲಾದೇಶ (ಬಿಜಿಬಿ) ನಡುವಿನ ದ್ವೈವಾರ್ಷಿಕ ಮಹಾನಿರ್ದೇಶಕ ಮಟ್ಟದ ಗಡಿ ಸಮನ್ವಯ ಸಮ್ಮೇಳನದ 57ನೇ ಆವೃತ್ತಿ ಲೋಧಿ ರಸ್ತೆಯಲ್ಲಿರುವ ಬಿಎಸ್‌ಎಫ್ ಪ್ರಧಾನ ಕಚೇರಿಯಲ್ಲಿ ಜೂ.8ರಿಂದ 11ರವರೆಗೆ ನಡೆಯಲಿದೆ.

ಅಕ್ರಮ ಮಸೀದಿ: ಪಾಕ್‌ಗೆ ಜಪಾನ್‌ನಲ್ಲಿ ಮುಜುಗರ

ಟೋಕಿಯೋ: ಜಪಾನ್‌ನ ಕವಾಗೋಯ್ ನಗರದಲ್ಲಿ ಅಕ್ರಮವಾಗಿ ನಿರ್ಮಿಸಲಾದ ಮಸೀದಿ ಪಾಕಿಸ್ತಾನಕ್ಕೆ ಭಾರೀ ಮುಜುಗರ ತಂದಿದೆ. ಜಪಾನ್‌ನಲ್ಲಿನ ಪಾಕಿಸ್ತಾನದ ರಾಯಭಾರಿ ಅಬ್ದುಲ್ ಹಮೀದ್ ಅವರ ಸಮ್ಮುಖದಲ್ಲಿ ಏಪ್ರಿಲ್‌ನಲ್ಲಿ ಉದ್ಘಾಟಿಸಲಾದ ಈ ಮಸೀದಿಯನ್ನು ಜಪಾನಿನ ಕಾನೂನಿನಲ್ಲಿ ಅಗತ್ಯವಾದ ಅನುಮತಿಗಳಿಲ್ಲದೆ ನಿರ್ಮಿಸಲಾಗಿದ್ದು, ಇದೀಗ ಅದನ್ನು ನೆಲಸಮಗೊಳಿಸುವ ಭೀತಿ ಎದುರಾಗಿದೆ.

ನಗರದ ಪುರಸಭೆಯ ಆಡಳಿತ ಕೇಂದ್ರವಾದ ಕವಾಗೋಯ್ ಸಿಟಿ ಹಾಲ್, ಅಕ್ರಮವಾಗಿ ನಿರ್ಮಿಸಲಾದ ಮಸೀದಿಯ ಬಗ್ಗೆ ತನ್ನ ನಿಲುವನ್ನು ಸ್ಪಷ್ಟಪಡಿಸಿದೆ.

ಮಸೀದಿಯನ್ನು ನಗರ ಅಭಿವೃದ್ಧಿ ನಿಯಂತ್ರಣ ಪ್ರದೇಶದಲ್ಲಿ ನಿರ್ಮಿಸಲಾಗಿದ್ದು, ನಗರ ಯೋಜನಾ ಕಾಯ್ದೆಯಲ್ಲಿ ನಿರ್ದಿಷ್ಟ ಅನುಮತಿಗಳನ್ನು ಪಡೆಯದೆ ನಿರ್ಮಿಸಿರುವುದನ್ನು ನಿಷೇಧಿಸಲಾಗಿದೆ ಎಂದು ಸಿಟಿ ಹಾಲ್‌ನ ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಮಸೀದಿಯನ್ನು ಕೆಡವಲು ಸಂಬಂಧಿತ ಪಕ್ಷಗಳಿಂದಲೂ ಅಧಿಕಾರಿಗಳು ವಿನಂತಿಗಳನ್ನು ಸ್ವೀಕರಿಸಿದ್ದಾರೆ.

ಸಿಟಿ ಹಾಲ್ ಹೇಳಿಕೆಯ ಪ್ರಕಾರ, ಈ ಪ್ರಸ್ತಾಪವನ್ನು ಪರಿಶೀಲನೆಗೆ ಸ್ವೀಕರಿಸಲಾಗಿದೆ.

ಮಸೀದಿಯನ್ನು ಅಕ್ರಮವಾಗಿ ನಿರ್ಮಿಸಲಾಗಿದೆ ಎಂದು ತಿಳಿದುಬಂದ ಬೆನ್ನಲ್ಲೇ ಟೋಕಿಯೊದಲ್ಲಿರುವ ಪಾಕಿಸ್ತಾನದ ರಾಯಭಾರ ಕಚೇರಿಯು ಅಸಹಾಯಕ ಪರಿಸ್ಥಿಯಲ್ಲಿದೆ.

ಜಪಾನಿನ ಕಾನೂನುಗಳನ್ನು ಉಲ್ಲಂಘಿಸುವ ಯೋಜನೆಗಳೊಂದಿಗೆ ತನಗೆ ಯಾವುದೇ ಸಂಬಂಧವಿಲ್ಲ ಎಂದು ಅದು ಸ್ಪಷ್ಟಪಡಿಸಿದೆ.

ಟಿಟಿಡಿ ತುಪ್ಪ ಕಲಬೆರಕೆ: ಡೇರಿಗಳಲ್ಲಿ ಇಡಿ ಶೋಧ

ಹೈದರಾಬಾದ್: ಟಿಟಿಡಿ ತುಪ್ಪ ಕಲಬೆರಕೆ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು(ಇಡಿ) ಬುಧವಾರ ಡೆಹ್ರಾಡೂನ್, ದಿಲ್ಲಿ, ತಮಿಳುನಾಡಿನ ದಿಂಡಿಗಲ್, ಆಂಧ್ರಪ್ರದೇಶದ ಗುಂಟೂರು ಮತ್ತು ಮುಂಬೈ ಸೇರಿದಂತೆ 15 ಸ್ಥಳಗಳಲ್ಲಿ ಶೋಧ ನಡೆಸಿದೆ. ದಿಂಡಿಗಲ್‌ನಲ್ಲಿರುವ ಎ ಆರ್ ಡೇರಿ ಫುಡ್ ಪ್ರೈವೇಟ್ ಲಿಮಿಟೆಡ್, ಅಹಲ್ಯಾ ನಗರದ ಮಾಲ್ಗಂಗಾ ಮಿಲ್ಕ್ ಅಂಡ್ ಅಗ್ರೋ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ರೂರ್ಕಿಯ ಭೋಲೆ ಬಾಬಾ ಆರ್ಗ್ಯಾನಿಕ್ ಡೇರಿ ಮಿಲ್ಕ್ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕರ ವಸತಿ ಮತ್ತು ಕಚೇರಿಗಳಲ್ಲಿ ಶೋಧ ನಡೆಸಲಾಗಿದೆ ಎಂದು ಇಡಿ ಹೇಳಿದೆ.

ಶೋಧ ಕಾರ್ಯಾಚರಣೆ ವೇಳೆ, 60 ಲಕ್ಷ ರೂ. ನಗದು ವಶಪಡಿಸಿಕೊಳ್ಳಲಾಗಿದೆ. ದಾಳಿಗಳು ಆರೋಪಿಗಳು ಮತ್ತು ಅವರ ಕುಟುಂಬ ಸದಸ್ಯರ ಹೆಸರಿನಲ್ಲಿದ್ದ ಹಲವಾರು ಸ್ಥಿರ ಆಸ್ತಿಗಳ ವಿವರಗಳ ಹೊರತಾಗಿ, 45 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿಗಳಲ್ಲಿ ಅಪರಾಧದ ಆದಾಯ(ಪಿಒಸಿ) ಹೂಡಿಕೆಗಳ ಬಗ್ಗೆಯೂ ಒಳಗೊಂಡಿತ್ತು. ಎಆರ್ ಡೇರಿ ಫುಡ್ ಮತ್ತು ಇತರರ ವಿರುದ್ಧ ದಾಖಲಾದ ಎಫ್‌ಐಆರ್ ಆಧಾರದ ಮೇಲೆ 2002ರ ಪಿಎಂಎಲ್‌ಎ ಅನ್ವಯ ಇಡಿ ತನಿಖೆ ನಡೆಸುತ್ತಿದೆ.

ಆರೋಪಿಗಳು ತಿರುಮಲ ತಿರುಪತಿ ದೇವಸ್ಥಾನದ ಕೆಲವು ಅಧಿಕಾರಿಗಳೊಂದಿಗೆ ಪಿತೂರಿಯಲ್ಲಿ ನಂಬಿಕೆ ದ್ರೋಹ, ವಂಚನೆ ಮತ್ತು ಕಲಬೆರಕೆಯ ತುಪ್ಪವನ್ನು ಪೂರೈಸುವ ಮೂಲಕ ದೇವಾಲಯಕ್ಕೆ ಭಾರೀ ನಷ್ಟವನ್ನುಂಟು ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

4ನೇ ಎಸ್-400 ತುಕಡಿ ಸುದರ್ಶನ ಚಕ್ರಕ್ಕೆ ಬಲ

ಹೊಸದಿಲ್ಲಿ: ಭಾರತವು ರಷ್ಯಾದಿಂದ ಎಸ್-400 ಸುದರ್ಶನ ವಾಯುರಕ್ಷಣಾ ವ್ಯವಸ್ಥೆಯ 4ನೇ ತುಕಡಿಯನ್ನು ಸ್ವೀಕರಿಸಿದ್ದು, ಈ ಮೂಲಕ ದೇಶದ ಅಭೇದ್ಯ ಸುರಕ್ಷಾ ವ್ಯವಸ್ಥೆಯಾದ ಸುದರ್ಶನ ಚಕ್ರಕ್ಕೆ ಇನ್ನಷ್ಟು ಬಲ ಬಂದಂತಾಗಿದೆ.

ಮೂಲಗಳ ಪ್ರಕಾರ, ಕೆಲವೇ ದಿನಗಳ ಹಿಂದೆ ದೀರ್ಘದೂರ ವ್ಯಾಪ್ತಿಯ ಎಸ್-400ನ 4ನೇ ತುಕಡಿ ರಷ್ಯಾದಿಂದ ಭಾರತಕ್ಕೆ ಬಂದಿದೆ. ಶೀಘ್ರವೇ ಇದನ್ನು ಕಾರ್ಯಾಚರಣೆ ಪ್ರದೇಶವೊಂದರಲ್ಲಿ ನಿಯೋಜಿಸಲಾಗುವುದು. 2018ರ ಒಪ್ಪಂದದಂತೆ, 5.43 ಬಿ.ಡಾ. ವೆಚ್ಚದಲ್ಲಿ ರಷ್ಯಾದಿಂದ 5 ಎಸ್-400 ತುಕಡಿಗಳನ್ನು ಪಡೆಯಲು ನಿರ್ಧರಿಸಲಾಗಿತ್ತು. 5ನೇ ತುಕಡಿ ಕೆಲವೇ ತಿಂಗಳಲ್ಲಿ ಆಗಮಿಸಲಿದೆ.

ಎಸ್-400 ಬಹುಸ್ತರಗಳ ವಾಯುರಕ್ಷಣಾ ವ್ಯವಸ್ಥೆಯಾಗಿದ್ದು, ಏಕಕಾಲದಲ್ಲಿ 100ಕ್ಕೂ ಅಧಿಕ ದಾಳಿಗಳನ್ನು ತಡೆದು ಧ್ವಂಸಗೊಳಿಸುವ ಸಾಮರ್ಥ್ಯ ಹೊಂದಿದೆ. ಆಪರೇಷನ್ ಸಿಂದೂರ್ ವೇಳೆ ಈ ವಾಯುರಕ್ಷಣಾ ವ್ಯವಸ್ಥೆ ಪಾಕಿಸ್ತಾನದ ಎಲ್ಲ ದಾಳಿಗಳನ್ನೂ ಪೂರ್ಣವಾಗಿ ತಡೆದು ಧ್ವಂಸಗೊಳಿಸುವಲ್ಲಿ ಶಕ್ತವಾಗಿದ್ದನ್ನು ಇಲ್ಲಿ ಸ್ಮರಿಸಬಹುದು. ಪಾಕಿಸ್ತಾನದ ಬಹು ಬೆಲೆಯ ವಿಚಕ್ಷಣಾ ವಿಮಾನವನ್ನು 300 ಕಿಮೀ ದೂರದಲ್ಲೇ ನಾಶಗೊಳಿಸಿತ್ತು. ಇದು ಡ್ರೋನ್, ಯುದ್ಧ ವಿಮಾನಗಳು, ಉತ್ಕ್ಷೇಪಕ ಕ್ಷಿಪಣಿ ಬೆದರಿಕೆಗಳನ್ನು ಸಮರ್ಥವಾಗಿ ಹತ್ತಿಕ್ಕಬಲ್ಲ ರಕ್ಷಣಾ ವ್ಯವಸ್ಥೆಯೆಂದೇ ಪರಿಗಣಿತವಾಗಿದೆ.

ಸ್ವದೇಶಿ ಕುಶ ಯೋಜನೆ: ಇದೇ ವೇಳೆ ಭಾರತವು ಸ್ವದೇಶಿ ಕುಶ ವಾಯುರಕ್ಷಣಾ ವ್ಯವಸ್ಥೆಯೊಂದನ್ನು ಅಭಿವೃದ್ಧಿಪಡಿಸುತ್ತಿದ್ದು, ಇದು ಜಾಗತಿಕ ವ್ಯವಸ್ಥೆಗೆ ಸಮಬಲವಾಗಿ ದೀರ್ಘವ್ಯಾಪ್ತಿಯ ತಡೆ ಸಾಮರ್ಥ್ಯದ ಯೋಜನೆಯಾಗಿದೆ.

ಚಿನ್ನ ಮಾರಾಟ ಕೇವಲ ವದಂತಿ ಎಂದ ಆರ್‌ಬಿಐ

ಮುಂಬೈ: ಭಾರತೀಯ ರಿಸರ್ವ್ ಬ್ಯಾಂಕ್ ಚಿನ್ನ ಮಾರಾಟ ಮಾಡಿದೆ ಎಂಬ ವರದಿಗಳನ್ನು ಬುಧವಾರ ನಿರಾಕರಿಸಿರುವ ಆರ್‌ಬಿಐ, ತನ್ನ ಭೌತಿಕ ಚಿನ್ನದ ದಾಸ್ತಾನಿನಲ್ಲಿ(880.52 ಟನ್) ಯಥಾಸ್ಥಿತಿ ಕಾಯ್ದುಕೊಳ್ಳಲಾಗಿದೆ ಎಂದು ಸ್ಪಷ್ಟಪಡಿಸಿದೆ. ಪಶ್ಚಿಮ ಏಷ್ಯಾ ಸಂಘರ್ಷದ ಸಂದರ್ಭದಲ್ಲಿ ವಿದೇಶಿ ವಿನಿಮಯ ಮೀಸಲನ್ನು ರಕ್ಷಿಸಲು ಆರ್‌ಬಿಐ ಸುಮಾರು 12 ಬಿಲಿಯನ್ ಡಾಲರ್ ಮೌಲ್ಯದ ಚಿನ್ನವನ್ನು ಮಾರಾಟ ಮಾಡಿರಬಹುದು ಎಂಬ ವರದಿಗಳ ಬೆನ್ನಲ್ಲೇ ಕೇಂದ್ರ ಬ್ಯಾಂಕ್ ಈ ಸ್ಪಷ್ಟೀಕರಣ ನೀಡಿದೆ. ಭಾರತದ ವಿದೇಶಿ ವಿನಿಮಯ ಮೀಸಲಿನಲ್ಲಿ ಚಿನ್ನದ ಪಾಲು 2026ರ ಮೇ 22ರ ವೇಳೆಗೆ ಶೇ.16.85ಕ್ಕೆ ಏರಿದೆ. ಮಾರ್ಚ್ 31, 2026ರಲ್ಲಿದ್ದ ಒಟ್ಟು 880.52 ಮೆಟ್ರಿಕ್ ಟನ್‌ಗಳಲ್ಲಿ, ವಿತರಣಾ ಇಲಾಖೆ(ಇಶ್ಯೂ ಡಿಪಾರ್ಟ್‌ಮೆಂಟ್) 312.32 ಮೆಟ್ರಿಕ್ ಟನ್ ಹೊಂದಿದ್ದರೆ, ಬ್ಯಾಂಕಿಂಗ್ ಇಲಾಖೆ 568.20 ಮೆಟ್ರಿಕ್ ಟನ್ ಚಿನ್ನವನ್ನು ಹೊಂದಿದೆ.

ಮಾಜಿ ಮಾವೋವಾದಿಗಳ ಕಿರಾಣಿ ಅಂಗಡಿಗೆ ಛತ್ತೀಸ್‌ಗಢ ಸಿಎಂ ಭೇಟಿ

ಪರಿವರ್ತನಾ ಜೀವನ ಕಂಡು ಸಂತಸ

ಬಿಜಾಪುರ: ಪರಿವರ್ತನೆ ಜೀವನ ನಡೆಸಿದರೇ ಜೀವನದಲ್ಲಿ ಎಲ್ಲೆಡೆ ಮನ್ನಣೆ ದೊರಕುವುತ್ತದೆ ಎಂಬುದಕ್ಕೆ ಹಲವು ನಿದರ್ಶಗಳಿವೆ. ಇದಕ್ಕೆ ಸಾಕ್ಷಿ ಎಂಬಂತೆ ಮಾವೋವಾದಿ ಜೀವನದಿಂದ ಹೊರಬಂದು ಇಂದು ನ್ಯಾಯಯುತ ಜೀವನ ನಡೆಸುತ್ತಿರುವ ದಂಪತಿ ಉದಾಹರಣೆಯಾಗಿದ್ದಾರೆ. ಮಾವೋವಾದಿ ಜೀವನದಿಂದ ಹೊರಬಂದ ಮಾಜಿ ನಕ್ಸಲರ ಜೀವನ ರಾಜ್ಯದಲ್ಲಿ ಹೇಗೆ ಪರಿವರ್ತನೆ ಕಂಡಿದೆ ಎಂಬ ನಿಟ್ಟಿನಲ್ಲಿ ರಾಜ್ಯದ ಮುಖ್ಯಮಂತ್ರಿ ವಿಷ್ಣು ದೇವ್ ಸಾಯಿ ಸುಶಾಸನ್ ತಿಹಾರ್‌ನಲ್ಲಿ ನಡೆಸಿದ ಜನಸಂಪರ್ಕ ಕಾರ್ಯಕ್ರಮ ಅಪರೂಪದ ಸನ್ನಿವೇಶಕ್ಕೆ ಸಾಕ್ಷಿಯಾಗಿದೆ.

ಬಿಜಾಪುರದ ಕೊಂಡಪಲ್ಲಿ ಗ್ರಾಮದಲ್ಲಿ ಕಿರಾಣಿ ಅಂಗಡಿ ನಡೆಸುತ್ತಿರುವ ಮಾಜಿ ನಕ್ಸಲ್ ದಂಪತಿ ಮಾಸಾ ತಮೋ ಮತ್ತು ಜಯಮೋತಿಯವರ ಅಂಗಡಿಗೆ ಸಿಎಂ ಸಾಯಿ ಅವರು ಅಚ್ಚರಿ ಭೇಟಿ ನೀಡಿದ್ದಾರೆ. ಈ ಭೇಟಿ ದಂಪತಿಗೆ ಅಚ್ಚರಿ ಮೂಡಿಸಿದರೆ, ಸಿಎಂಗೆ ಖುಷಿ ತಂದಿದೆ. ಈ ಸಂವಾದವು ದಂಪತಿಯ ಸಮಾಜದ ಮುಖ್ಯವಾಹಿನಿಗೆ ಮರಳುವ ಗಮನಾರ್ಹ ಪ್ರಯಾಣವನ್ನು ಪ್ರದರ್ಶಿಸಿದ್ದು ಮಾತ್ರವಲ್ಲದೆ, ಶಾಂತಿ, ಅಭಿವೃದ್ಧಿ ಮತ್ತು ಪುನರ್‌ವಸತಿ ಉತ್ತೇಜಿಸುವ ಪ್ರಯತ್ನಗಳು ಜೀವನವನ್ನು ಸ್ಥಿರವಾಗಿ ಬದಲಾಯಿಸುತ್ತಿರುವ ವಿಶಾಲವಾದ ಪರಿವರ್ತನೆಯನ್ನು ಪ್ರತಿಬಿಂಬಿಸುತ್ತದೆ.

ಹಿಂಸಾಚಾರದಲ್ಲಿ ಭವಿಷ್ಯವಿಲ್ಲ: ಮಾವೋವಾದಿಗಳಾಗಿ ಮುಂದುವರಿದಲ್ಲಿ ಅದು ನಮ್ಮೊಂದಿಗೆ ಕೊನೆಗೊಳ್ಳುವುದಿಲ್ಲ, ಅದು ತಲೆಮಾರುಗಳವರೆಗೆ ಮುಂದುವರಿಯುತ್ತದೆ ಎಂಬುದನ್ನು ಅರಿತ ಅವರು ಆ ಜೀವನಕ್ಕೆ ವಿದಾಯ ಹೇಳಿ ಹೊಸ ಜೀವನ ನಡೆಸಲು ಪ್ರಾರಂಭಿಸಿದ್ದಾರೆ. 2025ರ ಅಕ್ಟೋಬರ್‌ನಲ್ಲಿ ಶರಣಾಗಲು ನಿರ್ಧರಿಸಿದ ದಂಪತಿ, ಅದರಂತೆ ಸಮಾಜದ ಮುಖ್ಯವಾಹಿನಿಗೆ ಬಂದರು.



ದಂಪತಿ ಜೀವನ ಕತೆಗೆ ಕಿವಿಯಾದ ಸಿಎಂ

ಸಿಎಂ ಕಿರಾಣಿ ಅಂಗಡಿಗೆ ಭೇಟಿ ನೀಡಿದ್ದಲ್ಲದೇ ದಂಪತಿಯ ಭರವಸೆಯ ಕಥೆಗೆ ಕಿವಿಯಾಗಿದ್ದಾರೆ. ಇದರ ಜತೆಗೆ ಒಂದು ಬಾಟಲಿ ನೀರನ್ನು ಖರೀದಿಸಿದ್ದಾರೆ. ಅದೇ ರೀತಿ ದಂಪತಿಗಳೊಂದಿಗೆ ಆತ್ಮೀಯ ಸಂಭಾಷಣೆಯಲ್ಲಿ ತೊಡಗಿ, ಅವರ ಹೋರಾಟ, ಶರಣಾಗತಿ ಮತ್ತು ನವೀಕರಣದ ಕಥೆ ಕೇಳಿ ಖುಷಿಯಾಗಿದ್ದಾರೆ.

ರಾಹುಲ್ ಗಾಂಧಿಗೆ ಅನುಭವ ಇಲ್ಲ : ರಾಮಚಂದ್ರ ಗುಹಾ

ತೈಲ ಬಿಕ್ಕಟ್ಟು, ಯುದ್ಧ ನಿರ್ವಹಣೆ ಮೋದಿಯವರಿಂದ ಮಾತ್ರ ಸಾಧ್ಯ

ಬೆಂಗಳೂರು: ನನಗಿಂತ ಹೆಚ್ಚು ಮೋದಿ-ಬಿಜೆಪಿಯನ್ನು ದ್ವೇಷಿಸುವವರು ಇರಲಾರರು. ಆದರೆ, ಇಂಧನ ಬಿಕ್ಕಟ್ಟು ಅಥವಾ ಯುದ್ಧದಂತಹ ಸನ್ನಿವೇಶವನ್ನು ಪ್ರಧಾನಿ ನರೇಂದ್ರ ಮೋದಿಯವರಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನಿರ್ವಹಿಸಲಾರರು ಎಂಬುದಾಗಿ ಎಡಪಂಥೀಯ ಇತಿಹಾಸಕಾರ ಹಾಗೂ ರಾಜಕೀಯ ವಿಶ್ಲೇಷಕ ರಾಮಚಂದ್ರ ಗುಹಾ ಅಭಿಪ್ರಾಯಪಟ್ಟಿರುವುದೀಗ ವ್ಯಾಪಕ ಚರ್ಚೆಗೆ ಕಾರಣವಾಗಿದೆ.



ರಾಹುಲ್ ಗಾಂಧಿಗೆ, ಅವರ ತಂದೆ, ಅಜ್ಜಿ, ಮುತ್ತಜ್ಜ ಪ್ರಧಾನಿಯಾಗಿದ್ದರು ಎಂಬುದನ್ನು ಹೊರತುಪಡಿಸಿ ಬೇರಾವುದೇ ಯಾವುದೇ ಅರ್ಹತೆ ಇಲ್ಲ ಎಂಬುದಾಗಿ ಅವರು ಹೇಳಿದ್ದಾರೆ. ಈ ಹಿಂದೆ ರಾಮಚಂದ್ರ ಗುಹಾ ಅವರು ಕಾಂಗ್ರೆಸಿನ ಅತ್ಯಂತ ನಿಕಟವರ್ತಿಯಾಗಿದ್ದವರು ಎಂಬುದಿಲ್ಲಿ ಉಲ್ಲೇಖನೀಯ. ಈ ಹಿಂದಿನ ಆಪರೇಷನ್ ಸಿಂದೂರ್ ಮತ್ತು ಈಗ ಮಧ್ಯಪ್ರಾಚ್ಯ ಯುದ್ಧದಿಂದ ಉಂಟಾಗಿರುವ ವಿಷಮ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಗುಹಾ ಹೇಳಿಕೆ ಕಾಂಗ್ರೆಸಿಗೆ ತೀವ್ರ ಮುಜುಗರವನ್ನುಂಟು ಮಾಡಿದೆ.

ರಾಹುಲ್ ಕಾಂಗ್ರೆಸ್‌ಗೆ ಹೊರೆ: ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ ಕಾಂಗ್ರೆಸ್‌ಗೆ ಒಂದು ಹೊರೆಯಾಗಿದ್ದಾರೆ. ಕಾಂಗ್ರೆಸಿನ ಕೆಲಸ ಒಂದು ಕುಟುಂಬ ಸಂಸ್ಥೆಯಂತಿದೆ ಎಂದಿರುವ ಗುಹಾ ಅವರು, ರಾಹುಲ್‌ಗೆ 'ಗುರುತ್ವದ ಕೊರತೆ' ಇದೆ ಎನ್ನುವ ಮೂಲಕ ಗಾಂಧಿಯ ನಾಯಕತ್ವದ ಶೈಲಿಯನ್ನು ಪ್ರಶ್ನಿಸಿದ್ದಾರೆ. ನೆಹರೂ -ಗಾಂಧಿ ಕುಟುಂಬಕ್ಕೆ ನಿಕಟರಾಗಿದ್ದ ರಾಮಚಂದ್ರ ಗುಹಾ ಅವರಂತಹವರೇ ರಾಹುಲ್ ಗಾಂಧಿ ನಾಯಕತ್ವದ ಬಗ್ಗೆ ಪ್ರಶ್ನೆಗಳನ್ನೆತ್ತಿರುವುದು ಗಮನಾರ್ಹವಾಗಿದೆ.

ಕಿರುಸುದ್ದಿ

ಮುಖ್ಯ ರಸ್ತೆಯಲ್ಲಿ ರಾಶಿ ರಾಶಿ ಮಣ್ಣು: ಕ್ರಮಕ್ಕೆ ಆಗ್ರಹ



ಗೋಕರ್ಣ: ಮಣ್ಣಿನ ಸಾಗಾಟದಿಂದ ಈ ಭಾಗದ ಪ್ರಮುಖ ರಸ್ತೆಗಳು ಮಳೆ ಬಂದರೆ ರಾಡಿ, ಬಿಸಿಲು ಬಂದರೆ ಧೂಳಿನಿಂದ ತುಂಬಿ ವಾಹನ ಸವಾರರಿಗೆ, ಅಕ್ಕಪಕ್ಕದ ನಿವಾಸಿಗಳಿಗೆ ತೀವ್ರ ತೊಂದರೆಯಾಗುತ್ತಿದ್ದು ಈ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ. ಮಣ್ಣು ತೆಗೆಯುವುದನ್ನ ಸರ್ಕಾರ ನಿಷೇಧಿಸಿ ಗಣಿಗಾರಿಕೆ ವ್ಯಾಪ್ತಿಗೆ ಒಳಪಡಿಸಿದೆ. ಆದರೆ ಇದಾವುದೂ ಪರಿಗಣನೆಗೆ ಬರದೆ ನಿರಂತರವಾಗಿ ಮಣ್ಣು ಸಾಗಾಟ ನಡೆಯುತ್ತಿದೆ. ರಾತ್ರಿ ವೇಳೆ ಹೆಚ್ಚಾಗಿ ಮಣ್ಣು ಸಾಗಿಸುತ್ತಿದ್ದು, ಮೀನು ಮಾರುಕಟ್ಟೆ ರಸ್ತೆ, ತಾರಮಕ್ಕಿ, ಮುಖ್ಯ ಕಡಲತೀರಕ್ಕೆ ಸಾಗುವ ಮಾರ್ಗದಲ್ಲಿ ಮಣ್ಣು ಹರಡಿದೆ. ಇಲ್ಲಿನ ವಿವಿದೆಡೆಯ ಗುಡ್ಡಗಳನ್ನ ಬಗೆಯಲಾಗುತ್ತಿದ್ದು, ಪ್ರಕೃತಿ ಅಸಮತೋಲನದಿಂದ ಮಳೆಗಾಲದಲ್ಲಿ ಅವಘಡವಾಗುವ ಆತಂಕ ಸಹ ಇದೆ. ಇಂತಹ ಅಕ್ರಮ ದಂದೆಯನ್ನ ನಿಯಂತ್ರಿಸ ಬೇಕಾದ ಇಲಾಖೆಗಳಿಗೆ ತಿಂಗಳಿಗೆ ಇಂತಿಷ್ಟು ಎಂದು ಮಾಮೂಲಿ ನೀಡಲಾಗುತ್ತದೆ ಎಂದು ಜನರು ಗಂಭೀರ ಆರೋಪ ಮಾಡುತ್ತಿದ್ದು, ನಿತ್ಯ ಜನಸಾಮಾನ್ಯರ ತೊಂದರೆ ಮುಂದುವರಿದಿದೆ.

ಬಿಯರ್ ಬಾಟಲಿಯಿಂದ ಹಲ್ಲೆ: ಆರೋಪಿ ಬಂಧನ

ಭಟ್ಕಳ: ಪಟ್ಟಣದ 4 ಸೀಸನ್ ಬಾರ್ ಆ್ಯಂಡ್ ರೆಸ್ಟೋರೆಂಟ್ ಸಮೀಪದ ಶೆಡ್‌ನಲ್ಲಿ ಮದ್ಯಪಾನ ಮಾಡುತ್ತಿದ್ದ ವ್ಯಕ್ತಿಯ ಮೇಲೆ ಬಿಯರ್ ಬಾಟಲಿಯಿಂದ ಹಲ್ಲೆ ನಡೆಸಿ ಗಂಭೀರವಾಗಿ ಗಾಯಗೊಳಿಸಿದ ಘಟನೆ ಬುಧವಾರ ಮಧ್ಯಾಹ್ನ ನಡೆದಿದೆ. ಈ ಕುರಿತು ಗಾಯಾಳುವಿನ ಪತ್ನಿ ಮುಬೀನಾ ಬಾನು ಮೈನುದ್ದಿನ್ ಯಾದವಾಡ (37) ಅವರು ಭಟ್ಕಳ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ದೂರಿನ ಪ್ರಕಾರ, ಅವರ ಪತಿ ಮೈನುದ್ದಿನ್ ಗೌಸ್ ಮೋಹಿದ್ದಿನ್ ಯಾದವಾಡ (44) ಅವರು ಮಧ್ಯಾಹ್ನ ಸುಮಾರು 1.10ರ ವೇಳೆಗೆ 4 ಸೀಸನ್ ಬಾರ್ ಆ್ಯಂಡ್ ರೆಸ್ಟೋರೆಂಟ್ ಪಕ್ಕದ ಶೆಡ್‌ನಲ್ಲಿ ಮದ್ಯಪಾನ ಮಾಡುತ್ತಿದ್ದ ವೇಳೆ, ಆರೋಪಿತ ದಿನೇಶ ಪರಶು ಮರಾಠ (28), ಸಾಗರ ತಾಲೂಕಿನ ನಾಗುವಳ್ಳಿ-ಕೋಗಾರ ನಿವಾಸಿ, ತನ್ನೊಂದಿಗೆ ನಾಯಿಯನ್ನು ಕರೆದುಕೊಂಡು ಒಳಗೆ ಬಂದಿದ್ದಾನೆ. ಈ ಸಂದರ್ಭದಲ್ಲಿ ಮೈನುದ್ದಿನ್ ಅವರು ನಾಯಿಯನ್ನು ಹೊರಗೆ ಕರೆದುಕೊಂಡು ಹೋಗುವಂತೆ ತಿಳಿಸಿದ್ದರಿಂದ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದೆ ಎನ್ನಲಾಗಿದೆ. ಇದರಿಂದ ಆಕ್ರೋಶಗೊಂಡ ಆರೋಪಿತನು ಅವಾಚ್ಯ ಶಬ್ದಗಳಿಂದ ನಿಂದಿಸಿ, ತನ್ನ ಕೈಯಲ್ಲಿದ್ದ ಖಾಲಿ ಬಿಯರ್ ಬಾಟಲಿಯಿಂದ ಮೈನುದ್ದಿನ್ ಅವರ ತಲೆಗೆ ಬಲವಾಗಿ ಹೊಡೆದಿದ್ದಾನೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಇದಾದ ಬಳಿಕ ಒಡೆದ ಬಿಯರ್ ಬಾಟಲಿಯಿಂದ ಎದೆಗೆ ಚುಚ್ಚಲು ಯತ್ನಿಸಿದಾಗ, ಮೈನುದ್ದಿನ್ ಅವರು ತಮ್ಮನ್ನು ರಕ್ಷಿಸಿಕೊಳ್ಳಲು ಎಡಗೈ ಮುಂದಕ್ಕೆ ತಂದಿದ್ದು, ಬಾಟಲಿಯ ತುಂಡು ಎಡ ಮೊಣಕೈ ಸಮೀಪ ತಗುಲಿ ಗಂಭೀರ ಗಾಯವಾಗಿದೆ ಎಂದು ತಿಳಿದುಬಂದಿದೆ. ಗಾಯಾಳುವನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಭಟ್ಕಳ ನಗರ ಪೊಲೀಸ್ ಠಾಣೆ ಪಿಎಸೈ ನವೀನ ನಾಯ್ಕ ತಕ್ಷಣ ಗಾಯಾಳುವನ್ನು ಹೆದ್ದಾರಿ ಗಸ್ತು ವಾಹನದಲ್ಲಿ ಸರ್ಕಾರ ಆಸ್ಪತ್ರೆ ಸಾಗಿಸಿ ತುರ್ತು ಚಿಕಿತ್ಸೆ ನೀಡಿ ಉಡುಪಿ ಜಿಲ್ಲೆ ಆಸ್ಪತ್ರೆ ಸಾಗಿಸಿದ್ದಾರೆ. ಆರೋಪಿ ದಿನೇಶ ಪರಶು ಮರಾಠ ಯನ್ನು ಬಂಧಿಸಿ ಪ್ರಕರಣ ದಾಖಲಿಸಿ ಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಕಾಳು	2409	6100
ಉದ್ದಿನಕಾಳು	2511	3270
ಒಣ ಮೆಣಸಿನಕಾಯಿ	2000	47199
ಹೆಸರುಕಾಳು	2410	7862
ನೆಲಗಡಲೆ (ಶೇಂಗಾ)	4446	8099
ಜೋಳ	2795	4326
ಮೆಕ್ಕೆಜೋಳ	1970	2066
ಮಡಿಕೆ (ಮಟಕಿ)	7078	12503
ಈರುಳ್ಳಿ	500	2100
ಆಲೂಗಡ್ಡೆ	1300	1600
ಕುಸುಬೆ	4611	5430
ಸೋಯಾಬಿನ್	5070	7119
ಗೋಧಿ	2221	2426

ಪೆಟ್ರೋಲ್-ಡೀಸೆಲ್ ದರ ಏರಿಕೆ
ಸಾಂಪ್ರದಾಯಿಕ ಬಿತ್ತನೆಗೆ ಮರಳಿದ ರೈತ

ಹುಸೇನಸಾಬ ಕಟಗಿ

ದಿಗಂತ ವಿಶೇಷ

ಹನುಮಸಾಗರ: ಪೆಟ್ರೋಲ್ ಹಾಗೂ ಡೀಸೆಲ್ ದರಗಳ ನಿರಂತರ ಏರಿಕೆಯಿಂದ ಕೃಷಿ ವೆಚ್ಚ ಭಾರೀ ಪ್ರಮಾಣದಲ್ಲಿ ಹೆಚ್ಚಾಗಿದ್ದು, ಹನುಮಸಾಗರ, ಚಂದ್ರಗಿರಿ, ಹನಮನಾಳ, ಹೂಲಗೇರಿ, ಕಾಟಾಪುರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ರೈತರು ದುಬಾರಿ ಕೃಷಿ ಯಂತ್ರೋಪಕರಣಗಳ ಬಳಕೆಯನ್ನು ಕಡಿಮೆ ಮಾಡಿ ಸಾಂಪ್ರದಾಯಿಕ ಕೃಷಿ ಪದ್ಧತಿಗಳತ್ತ ಮರಳುತ್ತಿದ್ದಾರೆ.

ಮುಂಗಾರು ಹಂಗಾಮಿನ ಬಿತ್ತನೆಕಾರ್ಯ ಆರಂಭವಾಗಿರುವ ಈ ಸಂದರ್ಭದಲ್ಲಿ ರೈತರು ಹೊಲಗಳನ್ನು ಸಿದ್ಧಗೊಳಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಆದರೆ ಇಂಧನ ದರ ಏರಿಕೆ ಮತ್ತು ಯಂತ್ರೋಪಕರಣಗಳ ನಿರ್ವಹಣಾ ವೆಚ್ಚ ಹೆಚ್ಚಳದಿಂದ ಕೃಷಿ ಚಟುವಟಿಕೆಗಳ ವೆಚ್ಚವೂ ಗಣನೀಯವಾಗಿ ಏರಿಕೆಯಾಗಿದೆ.

ಕಳೆದ ವರ್ಷ ಟ್ರ್ಯಾಕ್ಟರ್ ಮೂಲಕ ಮಡಿಕೆ ಹೊಡೆಯಲು ಎಕರೆಗೆ ಸುಮಾರು 1,500 ರೂ. ವೆಚ್ಚವಾಗುತ್ತಿದ್ದರೆ, ಪ್ರಸ್ತುತ ಅದು 2,000 ರೂ.ವರೆಗೆ ಏರಿಕೆಯಾಗಿದೆ. ರೂಟರ್ (ರೋಟಾವೇಟರ್) ಬಳಕೆಗೆ ಗಂಟೆಗೆ 800 ರೂ. ಇದ್ದ ದರವು ಈಗ 1,200 ರೂ. ತಲುಪಿದೆ. ಹೊಲ ಸಮತಟ್ಟು ಮಾಡಲು ಗಂಟೆಗೆ 650 ರೂ.ನಿಂದ 850 ರೂ.ವರೆಗೆ ಹಾಗೂ ಬಿತ್ತನೆ ಕಾರ್ಯಕ್ಕೆ 1,000 ರೂ. ಇದ್ದ ವೆಚ್ಚವು ಈಗ 1,500 ರೂ.ವರೆಗೆ ಹೆಚ್ಚಾಗಿದೆ.



ಈ ವೆಚ್ಚದ ಭಾರವನ್ನು ಭರಿಸಲು ಸಾಧ್ಯವಾಗದ ಅನೇಕ ಸಣ್ಣ ಹಾಗೂ ಮಧ್ಯಮ ರೈತರು ಎತ್ತುಗಳ ಸಹಾಯದಿಂದ ಉಳುಮೆ ಮತ್ತು ಬಿತ್ತನೆ ಕಾರ್ಯಗಳನ್ನು ಕೈಗೊಳ್ಳುತ್ತಿದ್ದಾರೆ. ಮುಂಗಾರು ಆರಂಭವಾಗುತ್ತಿದ್ದಂತೆ ಗ್ರಾಮೀಣ ಪ್ರದೇಶಗಳಲ್ಲಿ ಎತ್ತುಗಳ ಮೂಲಕ ಹೊಲ ಸಿದ್ಧಪಡಿಸುವ ದೃಶ್ಯಗಳು ಮತ್ತೆ ಸಾಮಾನ್ಯವಾಗುತ್ತಿವೆ.

ರೈತರ ಪ್ರಕಾರ, ಟ್ರ್ಯಾಕ್ಟರ್ ಮೂಲಕ ಒಂದು ಎಕರೆ ಭೂಮಿಯನ್ನು ಉಳುಮೆ ಮಾಡಲು ಸಾವಿರಾರು ರೂಪಾಯಿ ವೆಚ್ಚವಾಗುತ್ತಿದ್ದು, ಎತ್ತುಗಳ ಸಹಾಯದಿಂದ ಅದೇ ಕೆಲಸವನ್ನು ಕಡಿಮೆ ಖರ್ಚಿನಲ್ಲಿ ನಿರ್ವಹಿಸಬಹುದು. ಜೊತೆಗೆ ಸಾಂಪ್ರದಾಯಿಕ ಕೃಷಿ ಪದ್ಧತಿಯಿಂದ ಮಣ್ಣಿನ ಫಲವತ್ತತೆ ಹಾಗೂ ಸ್ವಾಭಾವಿಕ ಗುಣಲಕ್ಷಣಗಳು ಸಂರಕ್ಷಿತವಾಗುತ್ತವೆ ಎಂಬ ಅಭಿಪ್ರಾಯವೂ ರೈತರಿಂದ ವ್ಯಕ್ತವಾಗಿದೆ.

ಕೃಷಿ ತಜ್ಞರು ಆಧುನಿಕತೆ ಮತ್ತು ಸಾಂಪ್ರದಾಯಿಕತೆಯ ನಡುವೆ ಸಮತೋಲನ ಕಾಯ್ದುಕೊಳ್ಳುವ ಅಗತ್ಯವಿದೆ ಎಂದು ಸಲಹೆ ನೀಡಿದ್ದು, ಇಂಧನ ವೆಚ್ಚ ಕಡಿಮೆ ಮಾಡಲು ಸರ್ಕಾರ ವಿಶೇಷ ಯೋಜನೆಗಳನ್ನು ಜಾರಿಗೊಳಿಸಬೇಕು ಹಾಗೂ ಕೃಷಿ ಯಂತ್ರೋಪಕರಣಗಳ ಬಾಡಿಗೆಗೆ ನೀಡುವ ಸಹಾಯಧನವನ್ನು ಹೆಚ್ಚಿಸಬೇಕು ಎಂದು ಒತ್ತಾಯಿಸಿದ್ದಾರೆ.

> ಉತ್ತಮ ಮಳೆಯ ನಿರೀಕ್ಷೆಯೊಂದಿಗೆ ರೈತರು ಬಿತ್ತನೆ ಕಾರ್ಯದಲ್ಲಿ ತೊಡಗಿದ್ದು, ಇಂಧನ ದರ ಏರಿಕೆಯ ನಡುವೆಯೂ ಕೃಷಿ ಚಟುವಟಿಕೆಗಳನ್ನು ಮುಂದುವರಿಸುತ್ತಿದ್ದಾರೆ. ಗ್ರಾಮೀಣ ಬದುಕಿನ ಅವಿಭಾಜ್ಯ ಅಂಗವಾಗಿದ್ದ ಎತ್ತುಗಳ ಕೃಷಿ ಪದ್ಧತಿ ಮತ್ತೆ ಪ್ರಾಮುಖ್ಯತೆ ಪಡೆಯುತ್ತಿರುವುದು ಗಮನಾರ್ಹ ಬೆಳವಣಿಗೆಯಾಗಿದೆ.
>
> ■ ಹಸೇನ್‌ಸಾಬ ಬೇವಿನ ಗಿಡದ, ಹೂಲಗೇರಿ ಗ್ರಾಮದ ಹಿರಿಯ ರೈತ

ರೈತರ ಮಾತು

ಇಂಧನ ದರ ಹೆಚ್ಚಳದಿಂದ ಕೃಷಿ ವೆಚ್ಚ ಗಣನೀಯವಾಗಿ ಏರಿದ್ದು, ರೈತನ ಜೇಬಿಗೆ ಕತ್ತರಿ ಬೀಳುವಂತಾಗಿದೆ. ಬಿತ್ತನೆ, ಉಳುಮೆ, ಕೊಯ್ಲು ಸೇರಿದಂತೆ ಪ್ರತಿಯೊಂದು ಹಂತದಲ್ಲೂ ಹೆಚ್ಚುವರಿ ವೆಚ್ಚವನ್ನು ರೈತರು ಭರಿಸಬೇಕಾಗಿದೆ. ಆದರೆ ಕೃಷಿ ಉತ್ಪನ್ನಗಳಿಗೆ ಸಮರ್ಪಕ ಬೆಲೆ ಸಿಗುತ್ತಿಲ್ಲ. ಸರ್ಕಾರ ಡೀಸೆಲ್ ಮೇಲಿನ ತೆರಿಗೆಯನ್ನು ಕಡಿಮೆ ಮಾಡಿ ಕೃಷಿ ಚಟುವಟಿಕೆಗಳಿಗೆ ವಿಶೇಷ ರಿಯಾಯಿತಿ ನೀಡಬೇಕು ಎಂದು ಚಂದ್ರಗಿರಿ ಗ್ರಾಮದ ರೈತ ಮಂಜುನಾಥ ಪೂಜಾರ ಸರ್ಕಾರಕ್ಕೆ ಆಗ್ರಹಿಸಿದರು.

ಕರ್ಕಶ ಶಬ್ಧ ಮಾಡುವ ಸೈಲೆನ್ಸರ್‌ಗಳ ನಾಶ

ಹಾವೇರಿ: ಸಾರ್ವಜನಿಕರ ನೆಮ್ಮದಿಗೆ ಭಂಗ ತರುತ್ತಿದ್ದ ಕರ್ಕಶ ಶಬ್ಧ ಮಾಡುವ ಬೈಕ್‌ಗಳಲ್ಲಿರುವ ಸೈಲೆನ್ಸರ್‌ಗಳನ್ನು ಬುಧವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ನೇತೃತ್ವದಲ್ಲಿ ನಗರದ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಎದುರು ಜೆಸಿಬಿ ಮೂಲಕ ಒಡೆದು ನಾಶಪಡಿಸುವ ಮೂಲಕ ಕರ್ಕಶ ಶಬ್ಧಕ್ಕೆ ಬ್ರೇಕ್ ಹಾಕಲಾಯಿತು.

ಸಂಚಾರಿ ಪೊಲೀಸ್ ಠಾಣೆಯ ಅಧಿಕಾರಿಗಳು ಹಾವೇರಿ ಜಿಲ್ಲಾ ಪೊಲೀಸ್ ಮಾರ್ಗದರ್ಶನದಲ್ಲಿ ಕಳೆದ 7-8 ತಿಂಗಳಿನಿಂದ ವಿಶೇಷ ಕಾರ್ಯಾಚರಣೆ ನಡೆಸಿ, ನಿಯಮ ಉಲ್ಲಂಘಿಸಿ ಸಂಚರಿಸುತ್ತಿದ್ದ ಸುಮಾರು 40 ಬುಲೆಟ್ ಬೈಕ್‌ಗಳಿಂದ ಸೈಲೆನ್ಸರ್ ಗಳನ್ನು ವಶಪಡಿಸಿಕೊಂಡಿದ್ದರು.

ಬುಧವಾರ ಸಾರ್ವಜನಿಕರು ಮತ್ತು ಬೈಕ್ ಸವಾರರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಹಾಗೂ ಕರ್ಕಶ ಶಬ್ಧ ಮಾಡುವ ದ್ವಿಚಕ್ರ ಇಟ್ಟುಕೊಂಡವರಿಗೆ ಎಚ್ಚರಿಕೆ ನೀಡುವ ಉದ್ದೇಶದಿಂದ 40ಕ್ಕೂ ಹೆಚ್ಚು ಮಾರ್ಪಡಿಸಿದ ದ್ವಿಚಕ್ರ ಸೈಲೆನ್ಸರ್‌ಗಳನ್ನು ಜೆಸಿಬಿ ವಾಹನದಿಂದ ನಜ್ಜುಗುಜ್ಜು ಮಾಡುವ ಮೂಲಕ ನಾಶಪಡಿಸಿದರು.

ಎಸ್‌ಪಿ ಯಶೋಧಾ ವಂಟಗೋಡಿ ಮಾತನಾಡಿ, ರಸ್ತೆಯಲ್ಲಿ ವೀಲಿಂಗ್ ಮಾಡುವವರ ವಿರುದ್ಧವೂ ಪೊಲೀಸರು ಕ್ರಮಕೈಗೊಂಡಿದ್ದಾರೆ. ಈಗಾಗಲೇ ರಾಣೇಬೆನ್ನೂರಿನಲ್ಲಿ 2 ಕೇಸ್ ದಾಖಲಿಸಲಾಗಿದೆ. ಸಾರ್ವಜನಿಕರು ಅಥವಾ ಯಾರಾದರೂ ವೀಲಿಂಗ್ ಮಾಡುವ ಬೈಕ್ ಸವಾರರ ಫೋಟೋ, ಮಾಡೆಲ್ ನಂಬರ್ ಹೀಗೆಹೆಚ್ಚಿನಮಾಹಿತಿ ಒದಗಿಸಿದ್ದಲ್ಲಿ ಅಂತಹವರ ವಿರುದ್ಧ ಅಗತ್ಯ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಈ ವೇಳೆ ಹೆಚ್ಚುವರಿ ಎಸ್‌ಪಿ ಲಕ್ಷ್ಮಣ ಶಿರಕೋಳ, ಡಿವೈಎಸ್‌ಪಿ ಗಿರಿಮಲ್ಲಪ್ಪ ತಳಕಲ್ಲ, ಶಹರ ಠಾಣೆ ಸಿಪಿಐ ಮೋತಿಲಾಲ್ ಪವಾರ, ಸಂಚಾರಿ ಪೊಲೀಸ್ ಠಾಣೆ ಪಿಎಸ್‌ಐ ಶೈಲಶ್ರೀ ಎಸ್., ಕೆ.ಎಂ.ನದಾಫ, ಸಿ.ವೈ. ತಹಶೀಲ್ದಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಅನಾಥ ವೃದ್ಧೆಯ ಅಂತ್ಯಸಂಸ್ಕಾರ

ಬೆಳಗಾವಿ: ಸಿವಿಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವೇಳೆ ವೃದ್ಧಾಪ್ಯದಿಂದ ಮೃತಪಟ್ಟ ಅನಾಥ ವೃದ್ಧೆಯ ಅಂತ್ಯಸಂಸ್ಕಾರವನ್ನು ಅಲನ್ ವಿಜಯ್ ಮೋರೆ ಹಾಗೂ ಅವರ ತಂಡ ಗೌರವಪೂರ್ವಕವಾಗಿ ನೆರವೇರಿಸಿದರು.

ಈ ಕಾರ್ಯವು ಮಾಜಿ ಮಹಾಪೌರ ವಿಜಯ್ ಮೋರೆ ಅವರ ಮಾರ್ಗದರ್ಶನದಲ್ಲಿ ಹಾಗೂ ಎಪಿಎಂಸಿ ಪೊಲೀಸ್ ಠಾಣೆಯ ಸಿಪಿಐ ಉಸ್ಮಾನ್ ಅವಟಿ ಅವರ ಸಹಕಾರದೊಂದಿಗೆ ನಡೆಯಿತು.



ಸಿವಿಲ್ ಆಸ್ಪತ್ರೆಯ ಶವಾಗಾರದಲ್ಲಿ ಹಲವು ದಿನಗಳಿಂದ ಬಂಧುಬಳಗದ ನಿರೀಕ್ಷೆಯಲ್ಲಿ ಇದ್ದ ಮೃತದೇಹವನ್ನು ಯಾರೂ ಸ್ವೀಕರಿಸದ ಹಿನ್ನೆಲೆಯಲ್ಲಿ ಪೊಲೀಸರು ಮತ್ತು ಸಮಾಜಸೇವಕರು ಮುಂದಾಗಿ ಸದಾಶಿವನಗರ ಶ್ಮಶಾನದಲ್ಲಿ ವಿಧಿವತ್ತಾಗಿ ಅಂತ್ಯಸಂಸ್ಕಾರ ನೆರವೇರಿಸಿ ಮಾನವೀಯತೆ ಮೆರೆದಿದ್ದಾರೆ.

ದ್ವಿಭಾಷಾ ಮಾಧ್ಯಮದ ಸದುಪಯೋಗ ಪಡೆದುಕೊಳ್ಳಿ

ಬಾದಾಮಿ: ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಮಾತೃಭಾಷೆ ಜೊತೆಗೆ ಇಂಗ್ಲಿಷ್ ಭಾಷಾ ಕಲಿಕೆ ಬಲಪಡಿಸಲು ದ್ವಿಭಾಷಾ ಶಿಕ್ಷಣ ವ್ಯವಸ್ಥೆ ರಾಜ್ಯದ ಆಯ್ದ 15 ಜಿಲ್ಲೆಯ ಸರ್ಕಾರಿ ಶಾಲೆಗಳಲ್ಲಿ 1ರಿಂದ 5ನೇ ತರಗತಿವರೆಗೆ ಜಾರಿಗೆ ತರುತ್ತಿದೆ. ಗ್ರಾಮೀಣ ಮತ್ತು ಬಡ ವಿದ್ಯಾರ್ಥಿಗಳಲ್ಲಿ ಹೊಸ ಆಶಾಕಿರಣಮೂಡಿಸಿದೆ. ಈ ಯೋಜನೆ ಸದುಪಯೋಗ ಪಡಿಸಿಕೊಳ್ಳಬೇಕೆಂದು ಶಿಕ್ಷಣ ಸಂಯೋಜಕ ಬಿ.ಟಿ.ಹಳ್ಳಿ ಹೇಳಿದರು.

ತಾಲೂಕಿನ ನೀಲಗುಂದ ಗ್ರಾಮದ ಸರ್ಕಾರಿಮಾದರಿಹಿರಿಯಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಶಾಲಾ ಪ್ರಾರಂಭೋತ್ಸವಕಾರ್ಯಕ್ರಮದಲ್ಲಿ ಮಾತನಾಡಿದರು. ಜಾಗತೀಕರಣದ ಇಂದಿನ ದಿನಗಳಲ್ಲಿ ಆಂಗ್ಲ ಭಾಷೆ ಕೇವಲ ಒಂದು ಭಾಷೆಯಾಗಿ ಉಳಿದಿಲ್ಲ; ಅದೊಂದು ಜಾಗತಿಕ ಸಂಪರ್ಕ ಮತ್ತು ಉದ್ಯೋಗದ ಪ್ರಮುಖ ಸಾಧನವಾಗಿದೆ. ಆದರೆ ಮಕ್ಕಳ ಬೌದ್ಧಿಕ ವಿಕಸನ ಹಾಗೂ ವಿಷಯಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಮಾತೃಭಾಷೆ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ದ್ವಿಭಾಷಾ ಶಿಕ್ಷಣ ಜಾರಿಗೆ ತಂದಿದೆ ಎಂದು ತಿಳಿಸಿದರು.



ಮುಖ್ಯ ಶಿಕ್ಷಕಿ ರತ್ನಾ ನಾಗನೂರ ಮಾತನಾಡಿ, ಶಾಲೆಯಲ್ಲಿ ಬಿಸಿ ಊಟ, ಹಾಲು, ಮೊಟ್ಟೆ, ರಾಗಿ ಮಾಲ್ಟ್, ಉಚಿತ ಪಠ್ಯ ಪುಸ್ತಕ, ಸಮವಸ್ತ್ರದಂತಹ ಸೌಲಭ್ಯ ನೀಡಲಾಗುತ್ತಿದೆ. ಈ ವರ್ಷದಿಂದ ಎಲ್‌ಕೆಜಿ ತರಗತಿ ಪ್ರಾರಂಭವಾಗಿದ್ದು, ಹೆಚ್ಚಿನ ದಾಖಲಾತಿ ಹೆಚ್ಚಿಸಲು ಮನವಿ ಮಾಡಿದರು.

ಸಿಆರ್‌ಪಿ ಸಯ್ಯದ್ ಮುಲ್ಲಾ ಮಾತನಾಡಿ, ಮಕ್ಕಳ ಭವಿಷ್ಯ ರೂಪಿಸಲು ಶಿಕ್ಷಣ ಅವಶ್ಯ. ಮಕ್ಕಳನ್ನು ಪ್ರತಿದಿನ ಶಾಲೆಗೆ ತಪ್ಪದೇ ಕಳಿಸಲು ಪಾಲಕರಿಗೆ ಮನವಿ ಮಾಡಿದರು.

ಶಾಲೆಯ ಸಹ ಶಿಕ್ಷಕರಾಗಿ ಕಾರ್ಯ ನಿರ್ವಹಿಸಿ ನಿವೃತ್ತಿಯಾದ ಎಸ್.ಜಿ. ಬಾಲನಾಯ್ಕರ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು. ಎಸ್‌ಡಿಎಂಸಿ ಅಧ್ಯಕ್ಷ ಶಿವಪ್ಪಯನಮಠ ಅಧ್ಯಕ್ಷತೆ ವಹಿಸಿದ್ದರು. ಕ್ಷೇತ್ರ ಸಮನ್ವಯಾಧಿಕಾರಿ ಎಂ.ಬಿ.ದೊಡ್ಡಪ್ಪನವರ, ಶಿಕ್ಷಕಿ ಬಡಿಗೇರ, ಜಯಶೀಲಾ ಧನ್ನೂರ, ಎಸ್.ಜಿ.ಗಿರಿತಿಮ್ಮನವರ, ನಿವೃತ್ತ ಶಿಕ್ಷಕ ಯು.ಬಿ.ಕಲಹಾಳ, ಎಸ್‌ಡಿಎಂಸಿ ಸದಸ್ಯರಾದ ಬಸವರಾಜ ರಾಮದುರ್ಗ, ಶ್ರೀಕಾಂತ ಹಡಪದ ಹಾಗೂ ಪೋಷಕರು ಉಪಸ್ಥಿತರಿದ್ದರು.

ನೂತನ ಸಿಎಂ ಡಿಕೆಶಿ ಯಶಸ್ವಿ ಆಡಳಿತಕ್ಕಾಗಿ ವಿಶೇಷ ಪೂಜೆ



ಕುಮಟಾ: ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಪ್ರಮಾಣವಚನ ಸ್ವೀಕರಿಸುತ್ತಿರುವ ಶುಭ ಸಂದರ್ಭದಲ್ಲಿ ಕುಮಟಾ ಬ್ಲಾಕ್ ಕಾಂಗ್ರೆಸ್ ವತಿಯಿಂದ ಮಾಸ್ತಿಕಟ್ಟೆಯ ಮಹಾಸತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ನೂತನ ಮುಖ್ಯಮಂತ್ರಿಗಳ ಯಶಸ್ವಿ ಆಡಳಿತ, ರಾಜ್ಯದ ಸಮಗ್ರ ಅಭಿವೃದ್ಧಿ, ಜನಕಲ್ಯಾಣ ಹಾಗೂ ಸುಭದ್ರ ಆಡಳಿತಕ್ಕಾಗಿ ದೇವರಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ಹೊನ್ನಪ್ಪ ನಾಯಕ, ನಾಗೇಶ್ ನಾಯ್ಕ ಕಲಭಾಗ, ತಾಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಅಶೋಕ್ ಗೌಡ, ಕೆಡಿಪಿ ಸದಸ್ಯ ರಾಘವೇಂದ್ರ ಪಟಗಾರ, ಪುರಸಭೆ ಸದಸ್ಯರಾದ ಮಧುಸೂಧನ್ ಶೇಟ್ ಹಾಗೂ ಎಂ.ಟಿ. ನಾಯ್ಕ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಭಾರತಿ ಪಟಗಾರ, ಹಿಂದುಳಿದ ವರ್ಗಗಳ ಅಧ್ಯಕ್ಷ ನಾಗರಾಜ್ ನಾಯ್ಕ, ಯುವ ಕಾಂಗ್ರೆಸ್ ಕುಮಟಾ-ಹೊನ್ನಾವರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ವೈಭವ ನಾಯ್ಕ್, ಕಿಸಾನ್ ಕಾಂಗ್ರೆಸ್ ತಾಲೂಕು ಅಧ್ಯಕ್ಷ ಗಿರೀಶ್ ಪಟಗಾರ, ಸಾಮಾಜಿಕ ಜಾಲತಾಣ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಕ್ಷ್ಮಿಕಾಂತ್ ನಾಯ್ಕ, ತಾಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಸಂದೇಶ್ ನಾಯ್ಕ ಸೇರಿದಂತೆ ಭವ್ಯ ಗಾವಡಿ, ನಾರಾಯಣ ಉಪ್ಪಾರ, ಅನಂತು ರಾಮಕ್ಷತ್ರಿಯ, ಸೀರಜ್ ಹುಬ್ಬಗೇರಿ ಹಾಗೂ ಅನೇಕ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಅಭಿಮಾನಿಗಳು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡರು, ನೂತನ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ರಾಜ್ಯವು ಅಭಿವೃದ್ಧಿಯ ಹೊಸ ಅಧ್ಯಾಯವನ್ನು ಆರಂಭಿಸಲಿ. ಜನಪರ ಯೋಜನೆಗಳು ಪರಿಣಾಮಕಾರಿಯಾಗಿ ಜಾರಿಯಾಗಿ, ಸಮಾಜದ ಎಲ್ಲ ವರ್ಗಗಳ ಜನರ ಆಶೋತ್ತರಗಳನ್ನು ಈಡೇರಿಸುವ ಸುಶಾಸನ ರಾಜ್ಯದಲ್ಲಿ ನೆಲೆಸಲಿ ಎಂದು ಶುಭ ಹಾರೈಸಿದರು.

ಜನರ ಬಹುಕಾಲದ ಕನಸು ಸಾಕಾರ: ಶ್ರೀಗಳು

ಬೀದರ: ಸಿಂಧೋಲ ಗ್ರಾಮದ ಬಳಿ ಸುಮಾರು 7 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ಸುಸಜ್ಜಿತ ಸೇತುವೆ ಕೇವಲ ಒಂದು ಅಭಿವೃದ್ಧಿ ಕಾಮಗಾರಿಯಲ್ಲ, ಸುತ್ತಮುತ್ತಲಿನ 40ಕ್ಕೂ ಹೆಚ್ಚು ಗ್ರಾಮಗಳ ಜನರ ಬಹುಕಾಲದ ಕನಸಿನ ಸಾಕಾರವಾಗಿದೆ. ಮಳೆಗಾಲದಲ್ಲಿ ಜನರು ಅನುಭವಿಸುತ್ತಿದ್ದ ಸಂಚಾರದ ಸಂಕಷ್ಟಕ್ಕೆ ಈ ಸೇತುವೆ ಶಾಶ್ವತ ಪರಿಹಾರ ಒದಗಿಸಿದೆ ಎಂದು ವೀರೇಶ್ವರ ಶಿವಾಚಾರ್ಯ ಧನಾಶ್ರೀ ಹೇಳಿದರು.

ಬೀದರ್ ದಕ್ಷಿಣ ಕ್ಷೇತ್ರದ ಸಿಂಧೋಲ ಗ್ರಾಮದ ಬಳಿ ನಿರ್ಮಿಸಲಾದ ಸೇತುವೆ ಲೋಕಾರ್ಪಣೆ ಹಿನ್ನೆಲೆ ಗ್ರಾಮಸ್ಥರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರಿಂದ ಆಯೋಜಿಸಿದ್ದ ಅಭಿನಂದನಾ ಹಾಗೂ ಸನ್ಮಾನ ಸಮಾರಂಭದಲ್ಲಿ ಅವರು ಆಶೀರ್ವಚನ ನೀಡಿದರು.

ರೈತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಈ ಸೇತುವೆ ಅತ್ಯಂತ ಉಪಯುಕ್ತವಾಗಿದೆ. ಈ ಮಹತ್ವದ ಕಾಮಗಾರಿಯನ್ನು ಪೂರ್ಣಗೊಳಿಸಿ ಜನರಿಗೆ ಸಮರ್ಪಿಸಿರುವ ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರ ಅಭಿವೃದ್ಧಿ ಪರ ಕಾಳಜಿಯನ್ನು ಅಭಿನಂದಿಸುತ್ತೇನೆ. ಮುಂದಿನ ದಿನಗಳಲ್ಲಿಯೂ ಇಂತಹ ಜನೋಪಯೋಗಿ ಯೋಜನೆಗಳು ಇನ್ನಷ್ಟು ಆಗಲಿ ಎಂದು ಆಶಿಸುತ್ತೇನೆ ಎಂದು ಹೇಳಿದರು.

ಈ ವೇಳೆ ಮಾತನಾಡಿದ ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ು, ಸಿಂಧೋಲ ಗ್ರಾಮದ ಬಳಿ ಮಳೆಗಾಲದಲ್ಲಿ ಜನರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದರು. ಇದೀಗ ಸುಮಾರು 7 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ಈ ಸೇತುವೆಯು ಸುತ್ತಮುತ್ತಲಿನ ಸುಮಾರು 40 ಗ್ರಾಮಗಳ ಜನರಿಗೆ, ರೈತರಿಗೆ ಹಾಗೂ ಶಾಲಾ-ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳಿಗೆ ಮಹತ್ತರ ಅನುಕೂಲ ಕಲ್ಪಿಸಿದೆ ಎಂದರು.



''ಹಲವು ವರ್ಷಗಳ ಕಾಲ ಜನರು ಎದುರಿಸುತ್ತಿದ್ದ ಸಂಚಾರದ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಿರುವ ಈ ಸೇತುವೆ ಗ್ರಾಮೀಣ ಅಭಿವೃದ್ಧಿಯ ಮಹತ್ವದ ಹೆಜ್ಜೆಯಾಗಿದೆ. ಗ್ರಾಮಸ್ಥರು ಆತ್ಮೀಯವಾಗಿ ಅಭಿನಂದಿಸಿ ಸನ್ಮಾನಿಸಿರುವುದು ಅಪಾರ ಸಂತಸ ತಂದಿದೆ. ಜನರ ವಿಶ್ವಾಸ, ಪ್ರೀತಿ ಹಾಗೂ ಆಶೀರ್ವಾದವೇ ಇನ್ನಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಪ್ರೇರಣೆಯಾಗಿದೆ'' ಎಂದು ಹೇಳಿದರು.

ರೈತ ಭಗವಂತಪ್ಪ ಸಿಂಧೋಲ, ಗ್ರಾಮದ ಮುಖಂಡರಾದ ಮೋದಿನ್, ಶಿವಕುಮಾರ ಸಿಂಧೋಲ ಮಾತನಾಡಿದರು.

ಮುಖಂಡರಾದ ಗುರುನಾಥ ರಾಜಗೀರ, ರಾಜರೆಡ್ಡಿ ಶಾಬಾದ, ಪ್ರಭು ಮೆಂಗಾ, ಮಾಣಿಕಪ್ಪ ಖಾಶೆಂಪುರ, ಸುರೇಶ ಮಾಶೆಟ್ಟಿ, ಶಿವಕುಮಾರ ಸ್ವಾಮಿ, ಜಗನಾಥ್ ಪಾಟೀಲ, ಚಂದ್ರಶೇಖರ ಶೇಖಾಪುರ, ಮಲ್ಲಿಕಾರ್ಜುನ ಮುತ್ತಂಗಿ, ಚಂದ್ರಯ್ಯ ಸ್ವಾಮಿ, ಸಂಜುಕುಮಾರ ಕೋಳಿ, ಫಾಳೆಪ್ಪ ಚಟನಳ್ಳಿ, ಶಿವಶರಣಪ್ಪ ತಗಾರೆ, ಜೋಸೆಫ್ ಕೊಡ್ಡೆಕರ್, ಹೇಮಾ ತುಕ್ಕಾರೆಡ್ಡಿ, ಸಂತೋಷಿನಿಡವಂಚಾ, ಸಂತೋಷರೆಡ್ಡಿ ಆಣದೂರ, ಜಗನ್ನಾಥ ಜಮಾದಾರ, ಶ್ರೀನಿವಾಸ ಪೊದ್ದಾರ, ಅನೀಲಕುಮಾರ ಪನ್ನಾಳೆ, ನಾರಾಯಣರೆಡ್ಡಿ, ಗುಂಡಪ್ಪ ಬುಧೇರಾ, ಕಾಶಿನಾಥ ಸಿಂಧೋಲ, ಸಂಗಯ್ಯ ಸ್ವಾಮಿ, ಭಗವಂತಪ್ಪ ಸಿಂಧೋಲ, ಶಂಕರೆಪ್ಪ ಬಾಪೂರ, ರಾಮು ರಾಠೋಡ್, ಜಗನ್ನಾಥ ರಾಜಗೀರ, ಮಂಜುನಾಥ ಸುಣಗಾರ, ರಾಜಕುಮಾರ ಯಾಕತಪುರ, ಪೀರಪ್ಪ ಸೇರಿದಂತೆ ಅನೇಕ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಇಂದಿನಿಂದಲೇ ಕಾರ್ಯ ನಡೆಸುವಂತೆ ಸೂಚನೆ
ದೇವಾಲಯದ ದುರಸ್ತಿಗೆ ಮುಹೂರ್ತ ನಿಗದಿ

ಬನವಾಸಿ: ಅನೇಕ ವರ್ಷಗಳಿಂದ ಸೋರುತ್ತಿರುವ ಇತಿಹಾಸ ಪ್ರಸಿದ್ಧ ಶ್ರೀಕ್ಷೇತ್ರ ಬನವಾಸಿ ದೇವಾಲಯದ ದುರಸ್ತಿಗೆ ಮುಹೂರ್ತ ನಿಗದಿ ಆಗಿದೆ.

ಬನವಾಸಿ ನೂತನ ತಾಲೂಕು ರಚನಾ ಹೋರಾಟ ಸಮಿತಿ ಸವಾಲು ಸ್ವೀಕರಿಸಿ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಹಿರಿಯ ಅಧಿಕಾರಿ ಅಧೀಕ್ಷಕ ಎಂಜಿನಿಯರ್ ರಮೇಶ್ ಮೂಲಿಮನಿ ದುರಸ್ತಿ ಕಾರ್ಯ ಮಾಡುವುದಾಗಿ ಸಭೆಯಲ್ಲಿ ಹೇಳಿದ್ದು ಇಂದಿನಿಂದಲೇ ಕಾರ್ಯ ನಡೆಸುವಂತೆ ಸೂಚನೆ ನೀಡಿದ್ದಾರೆ.

ಯಾವುದೇ ಕಾರಣಕ್ಕೂ ದೇವಸ್ಥಾನದ ಮೇಲೆ ಟಾರ್ಪಲ್ ಹೊದಿಕೆ ಮಾಡದೆ, ವಾಟರ್ ಪ್ರೂಫ್ ಪೇಂಟ್ (ಪುರಾತನ ಕಲ್ಲಿಗೆ ಬಳಸುವ ಟ್ರಾನ್ಸಫರಂಟ್ ಪೇಂಟ್) ಬಳಸಿ ದೇವಸ್ಥಾನ ಸೋರದಂತೆ ತಡೆಯಲು ಸಾಧ್ಯವಿದೆ ಎಂದು ಹೇಳಿದ ಅವರು, ಇಂದಿನಿಂದಲೇ ಕಾರ್ಯ ನಿರ್ವಹಿಸಲು ಕನ್ಸರ್ವೇಷನ್ ಅಸಿಸ್ಟೆಂಟ್ ರಾಕೇಶ್ ಅವರಿಗೆ ಹೇಳಿದ್ದಾರೆ. ಅಂತೂ ಪುರಾತನ ದೇಗುಲಕ್ಕೆ ಮೇಲ್ ಬಳಕೆ ಮಾಡುವ ಟಾರ್ಪಲ್ ನಿಂದ ಮುಕ್ತಗೊಂಡಿದೆ. ಹಾಗೆಯೇ ಮುಂದೆ ಸೆಪ್ಟೆಂಬರ್ ಅತವಾ ಅಕ್ಟೋಬರ್ ತಿಂಗಳಲ್ಲಿ ಶಾಶ್ವತ ಕಾಮಗಾರಿ ಆರಂಭಿಸುವದಾಗಿ ಸಭೆಯಲ್ಲಿ ತಿಳಿಸಿದ್ದಾರೆ.



ಹೋರಾಟ ಸಮಿತಿ ಅಧ್ಯಕ್ಷ ಉದಯಕುಮಾರ್ ಕಾನಳ್ಳಿ, ದೇವಸ್ಥಾನ ಆಡಳಿತ ಮಂಡಳಿ ಅಧ್ಯಕ್ಷ ಸುಧಾಕರ್ ಹೇಮಾದ್ರಿ, ವಿಎಸ್‌ಎಸ್ ಅಧ್ಯಕ್ಷ ಗಜಾನನ ಗೌಡ, ವೀರಶೈವ ಮಹಾಸಭಾ ಜಿಲ್ಲಾ ಕಾರ್ಯದರ್ಶಿ ಡಿ.ಮಹೇಶಕುಮಾರ, ಪ್ರಾಂಶುಪಾಲ ಮಧುಸೂದನ್ ಭಟ್, ಹೋರಾಟ ಸಮಿತಿ ಕಾರ್ಯದರ್ಶಿ ವಿಶ್ವನಾಥ್ ವಡೆಯರ್, ಲಯನ್ಸ್ ಪ್ರಮುಖ ಸಾಯಿ ರಾಮ ಕಾನಳ್ಳಿ, ಮಧುಕೇಶ್ವರ ದೇವಸ್ಥಾನ ಆಡಳಿತ ಮಂಡಳಿ ಉಪಾಧ್ಯಕ್ಷ ಪ್ರಕಾಶ್ ಬಂಗ್ಲೆ, ಪಿಎಸ್‌ಐ ಮಹಾಂತೇಶ ಕಂಬಾರ, ದೇವಸ್ಥಾನ ಕಾರ್ಯದರ್ಶಿ ಲತಾ ಶೆಟ್ಟಿ, ಖಜಾಂಚಿ ಮೇಘರಾಜ್ ನರೇಗಲ್, ಸದಸ್ಯರು ಗೀತಾ ಯಜಮಾನ, ಪರಶುರಾಮ ಉಪ್ಪಾರ, ಲಯನ್ಸ್ ಕ್ಲಬ್ ಅಧ್ಯಕ್ಷ ವಾಗೀಶ ಕೆರೂಡಿ, ಸೀಮಾ ಕೆರೂಡಿ, ಸಂಗೀತಾ ಕೊಳೆಕರ, ವಸಂತ ಇಳಿಗೇರ್, ನಾಗರಾಜ್ ನಾಯಕ ಕಲಕರಡಿ, ಸದಾನಂದ ಭಟ್, ಪುರಾತತ್ವ ಇಲಾಖೆಯ ಕಿರಣ್ ಭಟ್, ಅಮಿತ್ಕುಮಾರ್, ಹಿಮಾಂಶು ವೆ. ಮೂ. ನಾಗೇಶ್ ಪತ್ರೆ, ಗುರು ಭಟ್ ಮುಂತಾದವರು ಉಪಸ್ಥಿತರಿದ್ದರು.

ಸರ್ಕಾರಿ ಶಾಲೆಯ ಕೊಠಡಿಗಳು ಸ್ವಚ್ಛಗೊಳಿಸಿದ ಗ್ರಾಮಸ್ಥರು

ಮಸ್ಕಿ: ಕರ್ನಾಟಕ ರಾಜ್ಯಾದ್ಯಂತ ಸರಕಾರಿ ಶಾಲೆಗಳ ಉಳಿವಿಗಾಗಿ,ಮಕ್ಕಳನ್ನು ಆಕರ್ಷಿಸಲು ಊರಿನ ಜನತೆ,ಯುವಕರು ಮತ್ತು ವಿವಿಧ ಟ್ರಸ್ಟ್‌ಗಳು ಸ್ವಯಂಪ್ರೇರಿತರಾಗಿ ಸುಣ್ಣ-ಬಣ್ಣ ಬಳಿದು,ಸ್ವಚ್ಛಗೊಳಿಸುತ್ತಿರುವ ಕಾರ್ಯ ಶ್ಲಾಘನೀಯವಾಗಿರುವ ಸುದ್ದಿಗಳು ಸದಾ ಮುಂಚೂಣಿಯಲ್ಲಿವೆ. ಅದೇ ರೀತಿ ಸರ್ಕಾರದ ಅನುದಾನಕ್ಕೆಕಾಯದೇತಮ್ಮೂರಿನಶಾಲೆಯನ್ನು ಖಾಸಗಿ ಶಾಲೆಗಳಿಗೆ ಸೆಡ್ಡು ಹೊಡೆಯುವಂತೆ ಮಾಡುತ್ತಿರುವ ಕೆಲವು ಪ್ರಮುಖ ಘಟನೆಗಳಿಗೆ ಮತ್ತೊಂದು ಸಾಕ್ಷಿಯಾಗಿ ಗೋನಾಳ-2 ಅಂಬಾದೇವಿನಗರದ ಶಾಲೆ ಒಂದು ಉತ್ತಮ ಉದಾಹರಣೆಯಾಗಿದೆ.

ತಾಲೂಕಿನ ಗೋನಾಳ-2 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಅಂಭಾದೇವಿನಗರದ ಶಾಲೆಯು ಒಂದು ಕಾಲದಲ್ಲಿ ವಿದ್ಯಾರ್ಥಿಗಳಿಂದ ತುಂಬಿ ತುಳುಕುತ್ತಿತ್ತು.ಇತ್ತಿ?ಚೆಗೆ ಬಹಳ?ು ವಿದ್ಯಾರ್ಥಿಗಳು ಪಟ್ಟಣದ ಕಾನ್ವೆಂಟ್ ಹಾದಿ ಹಿಡಿದ ಪರಿಣಾಮ ಈಗ ಒಂದರಿಂದ ಐದನೇ ತರಗತಿಯವರೆಗೆ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಆದರೆ, ಶಾಲೆಯ ಕಾಂಪೌಂಡ್‌ಗೆ ಬಹಳ ವರ್ಷಗಳ ಕಾಲ ಸುಣ್ಣ ಬಣ್ಣ ಹಚ್ಚದ ಪರಿಣಾಮ ಹಾಳುಬಿದ್ದಂತೆ ಗೋಚರಿಸುತ್ತಿತ್ತು. ಇದನ್ನು ಕಂಡ ಗ್ರಾಮದ ಜನರು ಶಾಲೆಯ ಕಾಂಪೌಂಡ್ ಗೆ ಸುಣ್ಣ ಬಣ್ಣ ಬಳಿದು ಶಾಲೆಯ ತರಗತಿಗಳನ್ನು ಸ್ವಚ್ಛಗೊಳಿಸಿ ಸೈ ಎನಿಸಿಕೊಂಡಿದ್ದಾರೆ.



> ನಮ್ಮ ಮಕ್ಕಳು ಶಾಲೆಯನ್ನು ಸ್ವಚ್ಛ ಮಾಡುವುದು ಬೇಡ ಎಂದು ನಾವೇ ಗ್ರಾಮದ ಎಲ್ಲಾ ಜನರು ಸ್ವಯಂ ಪ್ರೇರಿತರಾಗಿ ಸೇರಿ ಶಾಲೆಯನ್ನು ಸ್ವಚ್ಛಗೊಳಿಸಿದ್ದರಿಂದ ಊರಿನ ಸರ್ವರಿಗೂ ಅಭಿನಂದನೆ ಸಲ್ಲಿಸುವೆ.
>
> ■ ಬಾಳಪ್ಪ, ಎಸ್‌ಡಿಎಂಸಿ ಅಧ್ಯಕ್ಷ

> ಶಾಲೆಯ ಎಸ್.ಡಿ.ಎಮ್.ಸಿ ಅಧ್ಯಕ್ಷರು ಸೇರಿದಂತೆ ಗ್ರಾಮದ ಸರ್ವರೂ ಒಗ್ಗೂಡಿ ಶಾಲೆಯನ್ನು ಸ್ವಚ್ಛಗೊಳಿಸಿದ್ದು ತುಂಬಾ ಖುಷಿಯಾಗಿದೆ.
>
> ■ ಎಸ್.ಮಂಜನಾಯಕ, ಅಂಬಾದೇವಿನಗರ ಗೋನಾಳ 2 ಶಾಲೆಯ ಪ್ರಭಾರಿ ಮುಖ್ಯ ಶಿಕ್ಷಕ

ಪ್ರತಿ ದಿನ ಶಾಲೆಗೆ ತಮ್ಮ ಮಕ್ಕಳನ್ನು ಬಿಡಲು ತೆರಳುತ್ತಿದ್ದ ಮಹಿಳೆಯರಿಗೆ ಶಾಲೆಯ ಕಸ ಕಡ್ಡಿ ಕಂಡು ಬೇಜಾರಿತ್ತು.ಒಮ್ಮೆ ಎಲ್ಲ ಮಹಿಳಾ ಪೋ?ಕರು ಹಾಗೂ ಗ್ರಾಮದ ಮಹಿಳೆಯರು ಒಗ್ಗೂಡಿ ತೀರ್ಮಾನಿಸಿ ಎಲ್ಲರೂ ಕೈಲಾದ?ು ಶಾಲೆಯ ಕಾಂಪೌಂಡ್ ಗೆ

ಬಣ್ಣ ಹಚ್ಚಿ ಸ್ವಚ್ಛ ಮಾಡಿ ಇದು ಇಲಾಖೆ ಅಧಿಕಾರಿಗಳ ಹುಬ್ಬೇರಿಸುವಂತೆ ಮಾಡಿದ್ದು ಶಿಕ್ಷಣ ಪ್ರೇಮಿಗಳು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಶಾಲೆಯ ಎಲ್ಲಾ ತರಗತಿಗಳನ್ನು ಸ್ವಚ್ಛ ಮಾಡಿದ ನಂತರ ನೀರು ಹಾಕಿ ತೊಳೆದು,ಶಾಲೆಯ ಆವರಣವನ್ನು ಸ್ವಚ್ಛಗೊಳಿಸಿ ಶಾಲಾ ಕಾಂಪೌಂಡ್ ಗೆ ಸುಣ್ಣ ಹಚ್ಚಿದ್ದೇವೆ,ಶಾಲೆ ಕಲರ್ಫುಲ್ ಆಗಿ ಕಂಡಾಗ ಶಾಲೆಗೆ ಮಕ್ಕಳು ಬರುವುದಕ್ಕೆ ಆಸಕ್ತಿ ಹೆಚ್ಚುತ್ತದೆ ಹಾಗೂ ಇದರಿಂದ ಹೆಚ್ಚಿನ ಮಕ್ಕಳು ಶಾಲೆಗೆ ದಾಖಲಾಗುತ್ತಾರೆ,ಇದಲ್ಲದೆ ಶಾಲೆಯು ಬೆಳೆಯಲು ಅನುಕೂಲವಾಗುತ್ತದೆ.ಇನ್ನೂ ನಮ್ಮ ಬದುಕಿಗೆ ಬಣ್ಣ ತಂದ ಶಾಲೆಗಳಿಗೆ ನಾವು ಬಣ್ಣ ಬಳಿದಿದ್ದೇವೆ ಎಂದು ಶಾಲೆಯ ಎಸ್‌ಡಿಎಂಸಿ ಉಪಾಧ್ಯಕ್ಷೆ ದುರುಗಮ್ಮ ಚಿದಾನಂದಪ್ಪ ಅವರ ಮನದಾಳದ ಮಾತು.

ವಸತಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯ ನೀಡಿ

ಮಾನ್ವಿ: ವಸತಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯ ನೀಡಬೇಕು ಎಂದು ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ರಾಯಚೂರು ಜಿಲ್ಲಾಘಟಕದ ಅಧ್ಯಕ್ಷರಾದ ಹನುಮೇಶ ನಾಯಕ ಸಾದಾಪುರ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಮಾತನಾಡಿ, ತಾಲೂಕಿನಲ್ಲಿ ವಾಲ್ಮೀಕಿ ಸಮುದಾಯದ ಮಕ್ಕಳು ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿದ್ದು ಗ್ರಾಮೀಣ ಭಾಗದ ಪ.ಪಂಗಡ ವರ್ಗದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ದೊರೆಯಲ್ಲಿ ಎನ್ನುವ ಉದ್ದೇಶದಿಂದ ಸರಕಾರವು ಪರಿಶಿಷ್ಟ ವರ್ಗಗಳ ಕಲ್ಯಾಣಾ ಇಲಾಖೆಯ ಮೂಲಕ ವಿದ್ಯಾರ್ಥಿಗಳಿಗೆ ಪಟ್ಟಣದಲ್ಲಿ ಹಲವು ವಸತಿ ನಿಲಯಗಳ ಮೂಲಕ ವಸತಿ ವ್ಯವಸ್ಥೆ ಕಲ್ಪಿಸಿ ವಸತಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಅಗತ್ಯ ಮೂಲ ಸೌಕರ್ಯಕ್ಕಾಗಿ ಲಕ್ಷಾಂತರ ಅನುದಾನವನ್ನು ನೀಡುತ್ತಿದ್ದಾರು ಕೂಡ ಪರಿಶಿಷ್ಟ ವರ್ಗಗಳ ಕಲ್ಯಾಣಾ ಇಲಾಖೆಯ ವಸತಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಕನಿಷ್ಟ ಸೌಲಭ್ಯಗಳು ಕೂಡ ದೊರೆಯುತ್ತಿಲ್ಲ ಎಂದು ಹೇಳಿದರು.

ಉತ್ತಮ ಗುಣಮಟ್ಟದ ಆಹಾರ ,ಶುದ್ಧಕುಡಿಯುವ



ನೀರು ಕೂಡ ನೀಡುತ್ತಿಲ್ಲ, ಸರಕಾರದ ಅನುದಾನ ದುರ್ಬಳಕೆ ಮಾಡಿಕೊಳ್ಳಲಾಗಿದೆ ಆದ್ದರಿಂದ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಹಾಲಿಂಗಪ್ಪ ಇಂಗಳದಾಳ ಅವರನ್ನು ತಾಲೂಕಿನಿಂದ ವರ್ಗವಣೆ ಮಾಡಬೇಕು ಹಾಗೂ ವಿದ್ಯಾರ್ಥಿಗಳ ಹೆಸರಿನಲ್ಲಿ ಬಿಡುಗಡೆಯಾದ ಎಲ್ಲಾ ಅನುದಾನಗಳ ಬಳಕೆಯ ಕುರಿತು ತನಿಖೆ ನಡೆಸಬೇಕು. ಹಾಗೂ ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ವಸತಿ ಶಾಲೆಯಲ್ಲಿ ಕನಿಷ್ಟ ಮೂಲಸೌಲಭ್ಯ ಕಲ್ಪಿಸಬೇಕು, ಮತ್ತು ಗುಣಮಟ್ಟದ ಆಹಾರ ವಿತರಿಸಬೇಕು ಎಂದು ಮುಂದಿನ ದಿನಗಳಲ್ಲಿ ನಮ್ಮ ಸಂಘಟನೆ ವತಿಯಿಂದ ತೀವ್ರ ಹೋರಾಟವನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಬುಡ್ಡಪ್ಪ ನಾಯಕ ಮಲ್ಲಿನಮಡಗು, ಹನುಮಂತ ಸೀಕಲ್, ರಮೇಶ ನಾಯಕ ಕಪಗಲ್, ಅಯ್ಯಪ್ಪ ನಾಯಕ ಮ್ಯಾಕಲ್ ಇತರರಿದ್ದರು.

ಎಸ್‌ಐಆರ್ ಪ್ರಕ್ರಿಯೆ ರದ್ದು ಪಡಿಸಿ

ಹುಬ್ಬಳ್ಳಿ: ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆ ರದ್ದು ಪಡಿಸಬೇಕು.ಆರಂಭದಲ್ಲಿ ಇದಕ್ಕೆ ವಿರೋಧ ಮಾಡದಿದ್ದರೆ ಮುಂದೆ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಸಮಾಜ ಪರಿವರ್ತನ ಸಮುದಾಯದ ಮುಖ್ಯಸ್ಥ ಎಸ್.ಆರ್.ಹಿರೇಮಠ ಹೇಳಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಗ್ಗೆ ಹೋರಾಟ ರೂಪಿಸುವ ಅನಿವಾರ್ಯವಿದ್ದು, ಹೋರಾಟ ಮಾಡುವವರಿಗೆ ನಾವು ಬೆಂಬಲ ನೀಡುತ್ತೇವೆ ಎಂದರು.

ಕೇಂದ್ರದ ಬಿಜೆಪಿ ಸರ್ಕಾರ ಎಸ್‌ಐಆರ್ ಮೂಲಕ ಬಿಹಾರ, ಪಶ್ಚಿಮ ಬಂಗಾಳದಲ್ಲಿ ದೊಡ್ಡ ಪ್ರಮಾಣದಲ್ಲಿ ದಲಿತರು, ವಲಸೆ ಕಾರ್ಮಿಕರು, ಆದಿವಾಸಿಗಳ ಮತದಾನದ ಹಕ್ಕು ಕಿತ್ತುಕೊಳ್ಳಲಾಯಿತು. ಕೇಂದ್ರ ಸರ್ಕಾರವು ತನ್ನ ಹಿತಾಸಕ್ತಿಯನ್ನು ಎಸ್‌ಐಆರ್ ಮೂಲಕ ಕಾರ್ಯಾಚರಣೆಗೆ ತರಲು ಮುಂದಾಗಿದೆ ಎಂದು ತಿಳಿಸಿದರು. ಮುಖ್ಯ ಚುನಾವಣಾ ಆಯುಕ್ತರು ಕೇಂದ್ರ ಸರ್ಕಾರದ ಕೈಗೊಂಬೆಯಾಗಿದ್ದಾರೆ. ಅವರು, ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಸುವಲ್ಲಿ ವಿಫಲರಾಗಿದ್ದಾರೆ ಎಂದರು. ಲಕ್ಷ್ಮಣ ಬಕ್ಕಾಯಿ, ಶಮೀಮ್ ಮುಲ್ಲಾ, ಕಲೀಂ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

CHANGE OF NAME

I, **SHAID SAYED** (Old Name) Resident of 2824, Indira Nagar, Chikodi - 591201, have changed my name as **SHAID ASIF SAYED** (New Name) henceforth I will be called and recognized by new name for all future purposes, dated: 30/05/2026.

CHANGE OF NAME

I, **ISRATH JAHA** (Old Name) R/o: 1102, Nageena Street, Magdoom Colony, Bhatkal - 581320, Uttara Kannada, Karnataka, have changed my name as **RAFAT BEGAM W/O: MOHAMMED ASHRAF IBRAHIM RUKNUDDIN** (New Name) henceforth I will be called and recognized by new name for all future purposes, dated: 03/06/2026.

CHANGE OF NAME

I, **MUNEEBA TAHSEEN** (Old Name) R/o : 186, Darul Qarar, Main Road, Bhatkal - 581320, Uttara Kannada, Karnataka, have changed my name as **MUNEEBA TAHSEEN SYED KAZIMI W/O: RAMEEZ AHMED** (New Name) henceforth I will be called and recognized by new name for all future purposes, dated: 03/06/2026.

CHANGE OF NAME

I, **BASHIRAHMED TAHASILDAR** R/o. Plot No. 2581, SC No.35, Belagavi-590015. I have changed my name from **BASEER AHMAD TASILADAR** (Old Name) to **BASHIRAHMED TAHASILDAR** (New Name). Vide Affidavit sworn before Geeta D. Hireholi Advocae & Notary Belagavi on 03/06/2026

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No: 08372-238782 Fax No. 08372-237268
E.Mail : eepwdgad@gmail.com
ನಂ:ಕಾನಿಇಂಗಃಲೋಇ:ಪಿಬಿ– 1,4:ವಿವಿಧ: 2026–27/753
ದಿನಾಂಕ : 02–06–2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **872.00** ಲಕ್ಷ ಮೊತ್ತದಲ್ಲಿ ಒಟ್ಟು 08 ಕಾಮಗಾರಿಗೆ (ಕನಿಷ್ಠ ಮೊತ್ತ ರೂ: **2.00** ಲಕ್ಷ ಹಾಗೂ ಗರಿಷ್ಠ ಮೊತ್ತ ರೂ: **200.00** ಲಕ್ಷ) ಕೆಪಿಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟ್ಯಾಂಡರ್ಡ್ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ–1, 3, ಹಾಗೂ 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.kppp.Karnataka.gov.in/ ದಲ್ಲಿ ನೋಡಿಕೊಳ್ಳಬಹುದು.

Work Indent No: Part-1 : 35978, 36031, 35880, 33032/call-2, 32763-SC/call-2, 32773-SC/call-2, 32784 Category-2A/call-2

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **08–06–2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **10–06–2026** ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **11–06–2026.** ಆರ್ಥಿಕ ಬಿಡ್ ತೆರೆಯುವ ದಿನಾಂಕ : **12–06–2026.**

Work Indent No : Part-2 : 36229

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **20–06–2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **22–06–2026** ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್/ಆರ್ಥಿಕ ಬಿಡ್ ತೆರೆಯುವ ದಿನಾಂಕ : **23–06–2026.**

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ–1 ಹಾಗೂ ಕೆಟಗರಿ–2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ,
ವಾಸಾಸಂಇ/ಗದಗ/ಕೆಎಸ್‌ಎಂಸಿಎ/98/2026–27 ಗದಗ

ಕ್ರಿಮಿನಲ್ ಮಿಸಲೇನಿಯಸ್ ನಂ : 416/2026
ಮೇ॥ ದಿವಾಣಿ ನ್ಯಾಯಾಧೀಶರ ಮತ್ತು ಜೆ.ಎಮ್.ಎಫ್.ಸಿ. ಸವಣೂರ ಇವರ ನ್ಯಾಯಾಲಯಕ್ಕೆ
ಅರ್ಜಿದಾರರು : ಹನುಮಂತಪ್ಪ ತಂದೆ ನಿಂಗಪ್ಪ ಹರಿಜನ ವಯಾ: 67 ವರ್ಷ, ಉದ್ಯೋಗ : ಶೇತ್ಕಿ ಸಾ॥ ಯಲವಿಗಿ ತಾ: ಸವಣೂರ ಜಿ: ಹಾವೇರಿ ಹಾಗೂ ಇನ್ನೊಬ್ಬ
ವಿರುದ್ಧ
ಎದುರುಗಾರರು : ಜನನ ವ ಮರಣ ನೋಂದಣಿ ಅಧಿಕಾರಿಗಳ ಪರವಾಗಿ ಮೇ॥ ತಹಶೀಲ್ದಾರ ಸವಣೂರ ತಾ: ಸವಣೂರ
ಇಸ್ತಿಯಾರ
ಸದರ 1ನೇ ಅರ್ಜಿದಾರನ ತಂದೆ ಹಾಗೂ 2ನೇ ಅರ್ಜಿದಾರನ ಅಜ್ಜನಾದ ನಿಂಗಪ್ಪ ತಂದೆ ಕರಿಯಪ್ಪ ಹರಿಜನ ಇವರು ದಿನಾಂಕ: 19–02–1966 ರಂದು ಸವಣೂರ ತಾಲೂಕಾ ಪೈಕಿ ಯಲವಿಗಿ ಗ್ರಾಮದಲ್ಲಿ ಇರತಕ್ಕ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿದ್ದು ಈ ಕುರಿತು ಎದುರುಗಾರರ ದಾಖಲೆಗಳಲ್ಲಿ ನಮೂದಿಸಿಕೊಳ್ಳುವಂತೆ ನಿರ್ದೇಶನ ನೀಡುವದಾಗಬೇಕು ಅಂತಾ ಮಾನ್ಯ ನ್ಯಾಯಾಲಯಕ್ಕೆ ಅರ್ಜಿಯನ್ನು ದಾಖಲಿಸಿದ್ದು ಆ ಪ್ರಕಾರ ಮಾನ್ಯ ನ್ಯಾಯಾಲಯದವರು ಸದರಿ ಅರ್ಜಿಯ ಮುಂದಿನ ಚವಕಾಸಿಗಾಗಿ ದಿನಾಂಕ: 09–07–2026 ರಂದು ನಿಗದಿಪಡಿಸಿದ್ದು ಇರುತ್ತದೆ.
ಕಾರಣ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಯಾರಾದರೂ ತಕರಾರು ಸಲ್ಲಿಸುವವರು ಇದ್ದಲ್ಲಿ ಅಂದು ಮುಂಜಾನೆ 11–00 ಗಂಟೆಗೆ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ತಕರಾರು ಸಲ್ಲಿಸತಕ್ಕದ್ದು ತಪ್ಪಿದಲ್ಲಿ ಸೂಕ್ತ ಆದೇಶ ಮಾಡಲಾಗುವುದು ಅಂತಾ ನ್ಯಾಯಾಲಯದ ಮೋಹರಿನೊಂದಿಗೆ ದಿನಾಂಕ: 25–05–2026 ರಂದು ಆದೇಶ ಹೊರಡಿಸಿರುತ್ತದೆ.
ಸ್ಥಳ : ಸವಣೂರ
ದಿನಾಂಕ: 03–06–2026
ಸಹಿ/– ಎಸ್.ಎ. ಹೊಸೂರ, ಶಿರಸ್ತೇದಾರರು
ದಿವಾಣಿ ನ್ಯಾಯಾಧೀಶರ ನ್ಯಾಯಾಲಯ, ಸವಣೂರ
ಸಹಿ/– ಶ್ರೀ ಪಿ.ಬಿ. ಹಳ್ಳಾಕಾಯಿ
ಅರ್ಜಿದಾರರ ಪರ ವಕೀಲರು, ಸವಣೂರ

ಕ್ರಿ.ಮಿ. ನಂ. 381/2026
ಮೇ॥ ಪ್ರಧಾನ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ ಇವರ ನ್ಯಾಯಾಲಯದಲ್ಲಿ.
1) ಕೃಷ್ಣಪ್ಪ ತಂ. ಲಕ್ಷ್ಮಣ ಕವಟಗಿ ಹಾಗೂ ಇತರರು .....ಅರ್ಜಿದಾರರು
–ವಿರುದ್ಧ–
1) ಮೇ॥ ತಹಶೀಲ್ದಾರರು, ಜನನ ಮತ್ತು ಮರಣ ವಿಭಾಗ ಜಮಖಂಡಿ, ತಾ॥ ಜಮಖಂಡಿ ಜಿ: ಬಾಗಲಕೋಟ .....ಎದುರುದಾರರು
ಸಾರ್ವಜನಿಕ ನೋಟಿಸು
ಮೇಲ್ಕಾಣಿಸಿದ ಪ್ರಕರಣದಲ್ಲಿ ಅರ್ಜಿದಾರರ ತಾಯಿಯಾದ ಶ್ರೀಮತಿ ಮಹಾದೇವಿ ಗಂ. ಲಕ್ಷ್ಮಣ ಕವಟಗಿ ಇವರು ದಿನಾಂಕ: 17/11/2014 ರಂದು ಜಮಖಂಡಿ ತಾಲೂಕಾ ಪೈಕಿ ಅಡಿಹುಡಿ ಗ್ರಾಮದಲ್ಲಿ ಮೃತರಾಗಿರುತ್ತಾರೆ ಅಂತಾ ಹಾಗೂ ಮೃತರ ಮರಣ ದಿನಾಂಕವನ್ನು ನೋಂದಣಿ ಮಾಡುವ ಕುರಿತು ಎದುರುದಾರರ ವಿರುದ್ಧ ಆದೇಶ ಕೋರಿ ಈ ಮೇ॥ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾನೆ.
ಆದ್ದರಿಂದ ಸದರಿ ವಿಷಯದ ಸಂಬಂಧದಲ್ಲಿ ಯಾರಾದರೂ ಹಿತಾಸಕ್ತಿ ಉಳ್ಳವರು ಇದ್ದಲ್ಲಿ ದಿನಾಂಕ: 7/7/2026 ರಂದು ಮೇ॥ ಪ್ರಧಾನ ದಿವಾಣಿ ನ್ಯಾಯಾಧೀಶರ ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಜಮಖಂಡಿ ಇವರ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ತಕರಾರುಗಳನ್ನು ಸಲ್ಲಿಸಬೇಕು, ಅದಕ್ಕೆ ತಪ್ಪಿದಲ್ಲಿ ಯಾರದೂ ಏನೂ ತಕರಾರು ಇರುವದಿಲ್ಲ ಅಂತಾ ಪರಿಗಣಿಸಿ ಮೇ॥ ರವರು ಮುಂದಿನ ವಿಚಾರಣೆಯನ್ನು ಕೈಗೆತ್ತಿಕೊಳ್ಳುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.
ಸದರಿ ನೋಟಿಸನ್ನು ಇವತ್ತು ದಿನಾಂಕ: 2/6/2026 ರಂದು ಮೇ॥ ನ್ಯಾಯಾಲಯದ ಶೀಲು ಹಾಗೂ ಸಹಿಯೊಂದಿಗೆ ಕೊಡಲಾಗಿದೆ.
ಸ್ಥಳ: ಜಮಖಂಡಿ
ದಿನಾಂಕ: 2–6–2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೇದಾರರು
ಮೇ॥ ಪ್ರಧಾನ ದಿವಾಣಿ ನ್ಯಾಯಾಧೀಶರ ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಜಮಖಂಡಿ
ಸಹಿ/– ಎಸ್. ಎಸ್. ಪಾಟೀಲ
ಅರ್ಜಿದಾರರ ಪರ ವಕೀಲರು

ಕ್ರಿ.ಮಿ. ನಂ: 380/2026
ಮೇ॥ ಪ್ರಧಾನ ಸಿವ್ಹಿಲ್ ನ್ಯಾಯಾಧೀಶರು ವ ಜೆಎಮ್‌ಎಫ್‌ಸಿ ಬಸವನ ಬಾಗೇವಾಡಿ ಇವರ ನ್ಯಾಯಾಲಯದಲ್ಲಿ
1) ಸಂಗಯ್ಯ ತಂ. ರುದ್ರಯ್ಯ ಶಿರಸಂಗಿ ಹಾಗೂ ಇತರರು .....ಅರ್ಜಿದಾರರು
ವಿರುದ್ಧ
1) ತಹಶೀಲ್ದಾರರು, ಜನನ ಮರಣ ನೋಂದಣಾಧಿಕಾರಿಗಳು ಬಸವನ ಬಾಗೇವಾಡಿ .....ಎದುರುದಾರ
ಪತ್ರಿಕಾ ಪ್ರಕಟಣೆ
ಸದರ ಮೇಲ್ಕಾಣಿಸಿದ ಅರ್ಜಿಯಲ್ಲಿಯ ಅರ್ಜಿದಾರರ ತಾಯಿಯಾದ ಗೌರಮ್ಮ ಗಂ. ರುದ್ರಯ್ಯ ಶಿರಸಂಗಿ ಇವಳು ದಿನಾಂಕ: 04–07–2017 ರಂದು ಬಸವನ ಬಾಗೇವಾಡಿ ತಾಲೂಕಿನ ರಬಿನಾಳ ಗ್ರಾಮದಲ್ಲಿ ಮೃತವಾಗಿದ್ದು, ಸದರಿಯವರ ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿದಾರರು ಈ ಅರ್ಜಿಯನ್ನು ದಾಖಲಿಸಿರುತ್ತಾರೆ. ಆದ್ದರಿಂದ ಸದರಿ ಅರ್ಜಿದಾರರ ತಾಯಿಯ ಮರಣದ ಬಗ್ಗೆ ಮರಣ ನೋಂದಣಾಧಿಕಾರಿಗಳ ರಜಿಸ್ಟರ್‌ದಲ್ಲಿ ದಾಖಲಿಸುವ ಕುರಿತು. ಯಾರಾದರೂ ಯಾವುದೇ ರೀತಿಯ ತಂಟೆ, ವ ತಕರಾರು ಇದ್ದಲ್ಲಿ ಅಂತವರು ಹಾಜರಾಗಲು ಮಾನ್ಯ ನ್ಯಾಯಾಲಯದವರು ದಿನಾಂಕ: 15–07–2026 ರಂದು ಬೆಳಿಗ್ಗೆ 11–00 ಘಂಟೆಗೆ ಮುದ್ದತ್ ನೇಮಿಸಿದ್ದು ಇರುತ್ತದೆ. ತಾವಾಗಲೀ ತಮ್ಮ ವಕೀಲರ ಮುಖಾಂತರವಾಗಲೀ ಈ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಪ್ರಕರಣವನ್ನು ತಮ್ಮ ಗೈರ ಹಾಜರಾತಿಯಲ್ಲಿ ನಿರ್ಣಯಿಸಲಾಗುವದು. ಈ ಹೊತ್ತು ದಿನಾಂಕ : 03–06–2026 ರಂದು ನ್ಯಾಯಾಲಯದ ಆದೇಶದ ಮೇರೆಗೆ ನನ್ನ ಸಹಿ ಹಾಗೂ ನ್ಯಾಯಾಲಯದ ಮುದ್ರೆಯೊಂದಿಗೆ ಕೊಡಲ್ಪಟ್ಟಿತು.
ಬಸವನಬಾಗೇವಾಡಿ
ದಿನಾಂಕ: 08–05–2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೇದಾರರು, (ಆಡಳಿತ)
ಮೇ॥ ಪ್ರಧಾನ ಸಿವ್ಹಿಲ್ ನ್ಯಾಯಾಧೀಶರು ವ ಜೆ.ಎಮ್.ಎಫ್.ಸಿ ನ್ಯಾಯಾಲಯ ಬಸವನಬಾಗೇವಾಡಿ
ಸಹಿ/– ಶ್ರೀ ಬಿ.ಕೆ. ಕಲ್ಲೂರ,
ಅರ್ಜಿದಾರರ ಪರ ವಕೀಲರು

ಓ.ಎಸ್. ನಂ.: 122/2025
ಮಾನ್ಯ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು, ಹಾವೇರಿ ಇವರ ಕೋರ್ಟಿಗೆ
ಅರ್ಜಿದಾರರು 1) ಶಂಕರಗೌಡ ತಂದೆ ಹನಮಂತಗೌಡ ಭಂಗಿಗೌಡ್ರ, ಹಾಲಿವಸ್ತಿ, ಮನೆ ನಂ 63, ಬಸವೇಶ್ವರ ನಿಲಯ 4ನೇ ಕ್ರಾಸ್ ಮಾದಾವರಾ ನ್ಯೂಟೌನ್ ಮಾದಾವರ – ಬೆಂಗಳೂರು.
–ವಿರುದ್ಧ–
ಎದುರುಗಾರರು 1) ಶ್ರೀಮತಿ ಸುಶೀಲಾ ಕೋಂ. ಹನಮಂತಗೌಡ ಭಂಗಿಗೌಡ್ರ ವಯಾ: 65 ವರ್ಷ: ಉದ್ಯೋಗ: ನಿವೃತ್ತ ಶಿಕ್ಷಕಿ, ಸಾ: ಚಿಕ್ಕೇರೂರ ತಾ: ಹಿರೇಕೆರೂರ ವ ಜಿ: ಹಾವೇರಿ. ಹಾಲಿ ವಸ್ತಿ : ಬೆಂಗಳೂರು
ದಿವಾಣಿ ಪ್ರಕ್ರಿಯ ಸಂಹಿತೆ ಕ್ರಮಾದೇಶ 5 ನಿಯಮ 20 ರ ಅಡಿಯಲ್ಲಿ ಪತ್ರಿಕಾ ಪ್ರಕಟಣೆ
ಇದರಲ್ಲಿ ವಾದಿಯರು ಓ.ಎಸ್ ನಂ: 122/2025 ನೇದ್ದನ್ನು ದಾಖಲಿಸಿ ದಾವಾ ಶೆಡ್ಯೂಲ–ಬ ಆಸ್ತಿಗಳಲ್ಲಿ ತಮಗೆ ಇರುವ 1/8 ಹಿಸ್ಸೆದ ಆಸ್ತಿಯನ್ನು ಸರಸನಿರಸವಾಗಿ ವಿಂಗಡಿಸುವ ಕುರಿತು ಮೇಲ್ಕಂಡ ನಂಬರಿನ ದಾವೆಯನ್ನು ದಾಖಲಿಸಿದ್ದು ಇರುತ್ತದೆ. ಸದರ ದಾವೇದಲ್ಲಿ ನೀವು ಪ್ರತಿವಾದಿ ನಂ.6 ಶ್ರೀಮತಿ ವಿಜಯಲಕ್ಷ್ಮೀ ಕೋಂ. ಶಂಬಣ್ಣ ಗಡಿಯಪ್ಪನವರ ಸಾ: ಹೊಂಬಳಿ ತಾ: ಹಾನಗಲ್ಲ ಜಿ: ಹಾವೇರಿ ಹಾಗೂ ಪ್ರತಿವಾದಿ ನಂ.8ನೇದವರು ಮಹದೇವಗೌಡ ತಂದೆ ಹನಮಂತಗೌಡ ಭಂಗಿಗೌಡ್ರ ಸಾ: ಕುರುಬಗೊಂಡ ತಾ: ವ ಜಿ: ಹಾವೇರಿ ಅಂತಾ ಇದ್ದು, ನಿಮ್ಮ ವಿರುದ್ಧ ದಾವೆಯನ್ನು, ಮಾನ್ಯ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾವೇರಿ ಇವರ ನ್ಯಾಯಾಲಯದಲ್ಲಿ ದಾಖಲಿಸಿದ್ದು ಇರುತ್ತದೆ. ಆದ್ದರಿಂದ ನೀವಾಗಲೀ ಅಥವಾ ನಿಮ್ಮಿಂದ ಅಧಿಕಾರ ಪಡೆದವರಾಗಲೀ ದಿನಾಂಕ 27–06–2026 ನೇ ದಿವಸ ಹಾಜರಾಗಲು ನೇಮಿಸಿದ್ದು ಇರುತ್ತದೆ.
ಸದರ ದಿನದಂದು ನೀವು ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಲು ವಿಫಲರಾದಲ್ಲಿ ನಿಮ್ಮ ಗೈರು ಹಾಜರಾತಿಯಲ್ಲಿ ವಾದಿಯರ ವಿನಂತಿಯ ಪ್ರಕಾರ ಏಕತರ್ಫಿಯ ಆದೇಶವನ್ನು ಮಾಡಲಾಗುವುದು ಅಂತಾ ಕೊಟ್ಟ ಸಮನ್ಸ್/ನೋಟಿಸ್ ಆಗಿದೆ.
ಈ ದಿವಸ ದಿನಾಂಕ॥ 3–6–2026 ರಂದು ಮಾನ್ಯ ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿತು.
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– (ಶ್ರೀ ಎಸ್.ಜಿ. ಪಕ್ಕೀರ) ಶಿರಸ್ತೇದಾರರು
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾವೇರಿ ಇವರ ನ್ಯಾಯಾಲಯದಲ್ಲಿ
ಸಹಿ/– ಎಮ್.ಬಿ. ನೀರಲಗಿಮಠ
ವಾದಿಯರ ಪರ ವಕೀಲರು, ಹಾವೇರಿ

ಓ.ಎಸ್. ನಂ.: 118/2025
ಮಾನ್ಯ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು, ಹಾವೇರಿ ಇವರ ಕೋರ್ಟಿಗೆ
ವಾದಿ :– 1) ಶ್ರೀಮತಿ ಬಿಬಿ ಕೋಂ. ಇಬ್ರಾಹಿಂ ಶಿಗಿಹಳ್ಳಿ ವಯಾ: 58 ವರ್ಷ, ಉದ್ಯೋಗ: ಮನೆಕೆಲಸ ಸಾ: ದೇವಿಹೊಸೂರ ತಾ: ಜಿ: ಹಾವೇರಿ
–ವಿರುದ್ಧ–
ಪ್ರತಿವಾದಿ :– 1) ಶ್ರೀಮತಿ ಶಕೀಲಾಬಾನು ಕೋಂ. ಖಾಜಾಮೊಹಿದ್ದೀನ ಕರೆಜಮ್ಮುಸಾಬನವರ ವಯಾ: 41 ವರ್ಷ, ಉದ್ಯೋಗ: ಮನೆಗೆಲಸ ಸಾ: ದೇವಿಹೊಸೂರ ತಾ: ವ ಜಿ: ಹಾವೇರಿ
ದಿವಾಣಿ ಪ್ರಕ್ರಿಯ ಸಂಹಿತೆ ಕ್ರಮಾದೇಶ 5 ನಿಯಮ 20 ರ ಅಡಿಯಲ್ಲಿ ಪತ್ರಿಕಾ ಪ್ರಕಟಣೆ
ಇದರಲ್ಲಿ ವಾದಿಯರು ಓ.ಎಸ್. ನಂ: 118/2024 ನೇದ್ದನ್ನು ದಾಖಲಿಸಿ ದಾವಾ ಶೆಡ್ಯೂಲ–ಬ ಆಸ್ತಿಗಳಲ್ಲಿ ತಮಗೆ ಇರುವ 1/9 ಹಿಸ್ಸೆದ ಆಸ್ತಿಯನ್ನು ಸರಸನಿರಸವಾಗಿ ವಿಂಗಡಿಸುವ ಕುರಿತು ಮೇಲ್ಕಂಡ ನಂಬರಿನ ದಾವೇಯನ್ನು ದಾಖಲಿಸಿದ್ದು ಇರುತ್ತದೆ. ಸದರ ದಾವೇದಲ್ಲಿ ನೀವು ಪ್ರತಿವಾದಿ ನಂ. 5 ಶ್ರೀ ಸಬಿಯಾ ಕೋಂ. ಹಸನಸಾಬ ನಗರವಾಡಿ ಸಾ: ಹಾನಗಲ್ಲ ತಾ: ಹಾನಗಲ್ಲ ಜಿ: ಹಾವೇರಿ ಹಾಗೂ ಪ್ರತಿವಾದಿ ನಂ.6 ಅಬ್ದುಲಸತ್ತಾರ ತಂದೆ ಗೌಸುಸಾಬ ಕರೆಜಮ್ಮುಸಾಬನವರ ಸಾ: ದೇವಿಹೊಸೂರ ತಾ: ವ ಜಿ: ಹಾವೇರಿ ಅಂತಾ ಇದ್ದು, ನಿಮ್ಮ ವಿರುದ್ಧ ದಾವೇಯನ್ನು, ಮಾನ್ಯ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾವೇರಿ ಇವರ ನ್ಯಾಯಾಲಯದಲ್ಲಿ ದಾಖಲಿಸಿದ್ದು ಇರುತ್ತದೆ. ಆದ್ದರಿಂದ ನೀವಾಗಲೀ ಅಥವಾ ನಿಮ್ಮಿಂದ ಅಧಿಕಾರ ಪಡೆದವರಾಗಲೀ ದಿನಾಂಕ॥ 27–06–2026 ನೇ ದಿವಸ ಹಾಜರಾಗಲು ನೇಮಿಸಿದ್ದು ಇರುತ್ತದೆ.
ಸದರ ದಿನದಂದು ನೀವು ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಲು ವಿಫಲರಾದಲ್ಲಿ ನಿಮ್ಮ ಗೈರು ಹಾಜರಾತಿಯಲ್ಲಿ ವಾದಿಯರ ವಿನಂತಿಯ ಪ್ರಕಾರ ಏಕತರ್ಫಿಯ ಆದೇಶವನ್ನು ಮಾಡಲಾಗುವುದು ಅಂತಾ ಕೊಟ್ಟ ಸಮನ್ಸ್/ನೋಟಿಸ್ ಆಗಿದೆ.
ಈ ದಿವಸ ದಿನಾಂಕ॥ 3–6–2026 ರಂದು ಮಾನ್ಯ ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿತು.
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– (ಶ್ರೀ ಎಸ್.ಜಿ. ಪಕ್ಕೀರ) ಶಿರಸ್ತೇದಾರರು
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾವೇರಿ ಇವರ ನ್ಯಾಯಾಲಯದಲ್ಲಿ
ಸಹಿ/– ಎಮ್.ಬಿ. ನೀರಲಗಿಮಠ
ವಾದಿಯರ ಪರ ವಕೀಲರು, ಹಾವೇರಿ

ನೇರ ನೇಮಕಾತಿ ಅಧಿಸೂಚನೆ

ಭಾರತ ಸರ್ಕಾರದ ಕಾರ್ಪೋರೇಟ್ ಅಫೇರ್ಸ್ ಸಚಿವಾಲಯದ ಅಡಿಯಲ್ಲಿ ನೋಂದಾಯಿತ ದಕ್ಷಿಣ ಕನ್ನಡ ಬೆಳೆಗಾರರ ಸಾವಯವ ಸಂಯುಕ್ತ ರೈತ ಉತ್ಪಾದಕ ಕಂಪನಿ ಲಿಮಿಟೆಡ್ ಸಂಸ್ಥೆಯಲ್ಲಿ ಬೆಂಗಳೂರು, ಹಾಸನ, ಮೈಸೂರು, ಶಿವಮೊಗ್ಗ, ಮಂಗಳೂರು ಮೂಡಬಿದ್ರೆ, ಕುಂದಾಪುರ, ಸುರತ್ಕಲ್, ಕಾರ್ಕಳ ಹಾಗೂ ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ಆರಂಭವಾಗಲಿರುವ ಶಾಖೆಗಳಲ್ಲಿ ಕೆಳಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.
ಹುದ್ದೆಗಳು : ಮ್ಯಾನೇಜರ್, ಸಹಾಯಕ ಮ್ಯಾನೇಜರ್ ಕ್ಯಾಶ್ ಅಧಿಕಾರಿ, ಸಾಲ ಅಧಿಕಾರಿ, ಗ್ರಾಹಕ ಸೇವಾ ಅಧಿಕಾರಿ, ಫೀಲ್ಡ್ ಕಲೆಕ್ಷನ್ ಅಧಿಕಾರಿ
ಒಟ್ಟು ಹುದ್ದೆಗಳು: 65
ವೇತನ: ರೂ. 18,500 ರಿಂದ ರೂ. 45000
(ಅರ್ಹತೆ/ಅನುಭವ ಆಧಾರಿತ ವೇತನ)
ಸೌಲಭ್ಯಗಳು: ESI, PF
ಅರ್ಹತಾ ಪ್ರದೇಶ : ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.
ಹುದ್ದೆಗಳಿಗೆ ಅಯ್ಕೆಯ ಕೊನೆಯ ದಿನಾಂಕ: 20–06–2026
ಸಂಪರ್ಕಿಸಿ : ಎಸ್. ಸತೀಶ್ ನಾಯಕ್
+919980496533/9448627226

CHANGE OF NAME

MY NEW NAME **ATHARVA JAYAPRAKASH BANNI** and MY FATHER NEW NAME **JAYAPRAKASH** previously called **ATHARV** and MY FATHER OLD NAME **JAIPRAKASH BANNI** (my old name), Self Employed, Resident of #234/59 Ward No 11, Near Kasturimath Shanti Nagar Extension Area Bagalkot 587101 District Bagalkot, State Karnataka, for all purposes, vide affidavit dated: 03/06/2026 before notary **S. S. Revadigar.**

CHANGE OF NAME

I, **HASAN SAB** (Old Name) Resident of Balavalli, Taluk : Sirsi, Dist.: Uttara Kannada, Karnataka State, Pin Code: 581315, India, have changed my name as **HASAN ABDUL WAHAB SAB** (New Name) for all purposes affidavit Dtd.: 03-06-2026 sworn before notary **S. G. Hegde.**

CHANGE OF NAME

I, **SNEHA KHATAWATE (Old Name) D/o. SHRINIVAS** (Before Marriage) and I R/o. Hubballi-580030, have changed my name to **SNEHA PRAVEEN ARSHID (New Name) W/o. PRAVEEN ANANT ARSHID** (After Marriage), henceforth I will be recognized by My New Name for all Purposes, Vide Affidavit Sworn Before Notary V.H.PATIL at Hubballi on 03/06/2026.

CHANGE OF NAME

I, **SHAINAZ MADARASHA** (Old Name) Resident of Attar Galli, Shindikurbet Tq: Gokak, have changed my name as **SHAINAZ HABIB MADARSHA** (New Name) henceforth I will be called and recognized by new name for all future purposes, dated: 30/05/2026.

CHANGE OF NAME

I, **SNEHA HOTTIGOUDRA** (Old Name) Resident of Teredhalli, Mallur, Byadagi, Haveri, Karnataka, Pin Code: 581106, have changed my name as **SNEHA RAGHAVENDRA FAKKIRANNANAVAR** (New Name) henceforth I will be called and recognized by new name for all future purposes, dated: 03/06/2026.

CHANGE OF NAME

I, **MUSKAN BYADAGI** (Old Name) Resident of Mukabasarikatti, Halebankapur, Haveri, Karnataka, Pin Code: 581202, have changed my name as **MUSKAN GAUSMUDDIN BALESABNAVAR** (New Name) henceforth I will be called and recognized by new name for all future purposes, dated: 03/06/2026.

CHANGE OF NAME

I, **GULZARBEGAUM** (Old Name) Resident of Mehaboob Nagar, Shiggaon, Haveri, Karnataka, Pin Code: 581205, have changed my name as **GULZARBEGAUM MULLAN** (New Name) henceforth I will be called and recognized by new name for all future purposes, dated: 30/05/2026.

CHANGE OF NAME

I, **RESHMA JAKATI** (Old Name) Resident of Attar Galli, Shindikurbet Tq: Gokak, have changed my name as **RESHMA SALEEM JAKATI** (New Name) henceforth I will be called and recognized by new name for all future purposes, dated: 30/05/2026.

CHANGE OF NAME

I, **SHILPA BHANDAGE** (Old Name) Resident of C/17 Amingad Road Post Gudur Tq Hungund Dist Bagalkot 587202 (Address), have changed my name as **SHILPA BASAVA** (New Name) henceforth I will be called and recognized by new name for all future purposes, dated: 03/06/2026.

CHANGE OF NAME

I, **ZAHEER AHMADD GAADIWAN** (Old Name) Resident of H No: 293 E Block SM Krishna Nagar Hubli 580024 (Address), have changed my name as **ZAHEER AHAMAD GADIWAN** (New Name) henceforth I will be called and recognized by new name for all future purposes, dated: 03/06/2026.

CHANGE OF NAME

I, **SUFIYABEGUM PATEL** (Old Name) Resident of: - H No 981, Shankar Nagar, Athani, Tq, Athani, Dist: Belagavi, State of Karnataka Pin Code 591304 (address), Have changed my name as **SUFIYA FAZALAHAMED PATEL** (New Name) for all purposes, Vide Affidavit dated: 03/06/2026,Before Notary, **Shri S. V. Chougala of Athani**

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನೀಯರರು ಲೋಕೋಪಯೋಗಿ, ಇಲಾಖೆ ಶಿರಸಿ ವಿಭಾಗ ಶಿರಸಿ
ಕ್ರಸಂ: ಪಿಬಿ/KRDCL/ಅಧಿಸೂಚನೆ: 2026–27/00666 ದಿನಾಂಕ: 27.05.2026

ಇ–ಟೆಂಡರ್ ಅಧಿಸೂಚನೆ IFT-KW-4
ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ಧತಿಯಲ್ಲಿ)(ಅಲ್ಪಾವಧಿ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ–ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಕಾಣಿಸಿದಂತೆ ಇ–ಪ್ರೋಕ್‌ನಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ. (ಒಟ್ಟು 2 ಕಾಮಗಾರಿ)
1. ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ ದಿನಾಂಕ: 03–06–2026 (16.00 ಗಂಟೆವರೆಗೆ) 2. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 04–06–2026 (16.00 ಗಂಟೆವರೆಗೆ) 3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 05–06–2026 (16.30 ಗಂಟೆಗೆ) 4. ಆರ್ಥಿಕ ಬಿಡ್ ತೆರೆಯುವ ದಿನಾಂಕ: 06–06–2026 (16.00 ಗಂಟೆಗೆ)

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ
ಶಿರಸಿ(ಉತ್ತರ ಕನ್ನಡ ಜಿಲ್ಲೆ)
DIPR/KWR/KSMCA/174/26-27 dt. 01.06.2026

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನೀಯರರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಹಾವೇರಿ
ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.8/ಪಂ.ರಾ.ಇಂ/ವಿ.ಹಾ/ಪಿ.ಬಿ–1&2/ಟೆಂಡರ/2026–27/1174 ದಿನಾಂಕ : 02–06–2026

ಇ–ಟೆಂಡರ್ ಪ್ರಕಟಣೆ

ದಿನಾಂಕ : 01–06–2026 ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ, ಕಾಮಗಾರಿ ಇಂಡೆಂಟ್ ಸಂಖ್ಯೆ 26562, 23441/CALL-3, 20599/CALL-2, 20614/CALL-2SC, 24666/CALL-2Cat-IIA, 26598/CALL-2,(1ನೇ, 2ನೇ & 3ನೇ ಕರೆ) ಕಾಮಗಾರಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **10–06–2026** (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬಸೈಟ್ http://www.kppp.karnatak.gov.in ನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತರಾಜ ಇಂಜಿನೀಯರಿಂಗ್ ವಿಭಾಗ,
ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/130/2026–27 ಹಾವೇರಿ

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರ ಕಛೇರಿ,
ನಂ.6 ಹೇಮಾವತಿ ಎಡದಂಡೆ ನಾಲಾ ವಿಭಾಗ,
ಕಾವೇರಿ ನೀರಾವರಿ ನಿಗಮ ನಿಯಮಿತ, ಪಾಂಡವಪುರ, ಮಂಡ್ಯ ಜಿಲ್ಲೆ.

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಸಂ:02/2026–27
ದಿನಾಂಕ:02.06.2026. – (ದ್ವಿ ಲಕೋಟೆ ಪದ್ಧತಿ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ಇವರ ಪರವಾಗಿ ಹಾಗೂ ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆ ಇಲ್ಲಿ ನೋಂದಾಯಿಸಿರುವ 4ನೇ ದರ್ಜೆ ಹಾಗೂ ಮೇಲ್ಪಟ್ಟು ಗುತ್ತಿಗೆದಾರರಿಂದ (ದ್ವಿ ಲಕೋಟೆ ಪದ್ಧತಿಯಲ್ಲಿ) 16.37 ಲಕ್ಷ ಮೊತ್ತದ 1 ಕಾಮಗಾರಿಗೆ KC4 ಅನ್ವಯ ಐಟಂವಾರು (KPPP ಪೋರ್ಟಲ್ ಮೂಲಕ ಮಾತ್ರ) ಅಲ್ಪಾವಧಿ ಟೆಂಡರನ್ನು ಕರೆಯಲಾಗಿದೆ. ಅಂದಾಜು ಮೊತ್ತ , ಮುಂಗಡ ಠೇವಣಿ (ಇ.ಎಂ.ಡಿ) ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಮಗಾರಿಗೆ ಸಂಬಂಧಿಸಿದ ಹೆಚ್ಚಿನ ವಿವರಗಳು, ಸೂಚನೆಗಳು ಮತ್ತು ನಿಬಂಧನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ http://kppp.karnataka.gov.in ಪೋರ್ಟಲ್‌ನಲ್ಲಿ ದಿ:02.06.2026 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ ಗುತ್ತಿಗೆದಾರರು ಹೆಚ್ಚಿನ ಮಾಹಿತಿಯನ್ನು, ಸದರಿ ಕಛೇರಿಯಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ನಂ.06, ಹೇ.ಎ.ದ.ನಾಲಾ.ವಿಭಾಗ,
ಕಾ.ನೀ.ನಿ.ನಿ, ಪಾಂಡವಪುರ
ವಾಸಾಸಂಇ/ಓಪನಿ–ಮಂ/ಕೆಎಸ್‌ಎಂಸಿಎ/168/2025–26

ಕರ್ನಾಟಕ ಸರ್ಕಾರ
ರೇಷ್ಮೆ ಇಲಾಖೆ
ರೇಷ್ಮೆ ಉಪನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್,
ರೇಷ್ಮೆ ಇಲಾಖೆ, ಅಲ್–ಅಮೀನ ಮೆಡಿಕಲ್ ಕಾಲೇಜ ಹತ್ತಿರ
ತೊರವಿ ರಸ್ತೆ, ವಿಜಯಪುರ. ದೂರವಾಣಿ ಸಂ:08352–200066,
ಇ–ಮೇಲ್:ddsbjp.sericulture@gmail.com

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ವಿಜಯಪುರ ಜಿಲ್ಲೆಯ ರೇಷ್ಮೆ ಇಲಾಖೆಯ 03 ತಾಲ್ಲೂಕಗಳಲ್ಲಿ ಹೊರಗುತ್ತಿಗೆ ಆಧಾರದ ಮೇರೆಗೆ ವಾಹನ ಚಾಲಕ ಸಮೇತ ಬಾಡಿಗೆ ಆಧಾರದ ವಾಹನವನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಸಲ್ಲಿಸಲು ಅಲ್ಪಾವಧಿ ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ಸಲ್ಲಿಸಲು ದಿನಾಂಕಗಳ ವಿವರ ಈ ಕೆಳಗಿನಂತಿದೆ.
1) ಟೆಂಡರ ವಿವರ: ರೇಷ್ಮೆ ಇಲಾಖೆಯ 03 ತಾಲ್ಲೂಕುಗಳಲ್ಲಿ ಹೊರಗುತ್ತಿಗೆ ಆಧಾರದ ಮೇರೆಗೆ ವಾಹನ ಚಾಲಕ ಸಮೇತ ಬಾಡಿಗೆ ಆಧಾರದ ವಾಹನವನ್ನು ಟೆಂಡರ್ ಪ್ರಕಟಣೆ **2) ಟೆಂಡರ್ ಸಂಖ್ಯೆ** SD/2026-27/SE0309 ದಿನಾಂಕ:– 02.06.2026 3) ಇ–ಪೋರ್ಟಲನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ **ದಿನಾಂಕ:– 02.06.2026.** 4) **ಕಛೇರಿ ವಿಳಾಸ:–** ರೇಷ್ಮೆ ಉಪನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್ ವಿಜಯಪುರ, ರೇಷ್ಮೆ ಇಲಾಖೆ ಅಲ್–ಅಮೀನ ಮೆಡಿಕಲ್ ಕಾಲೇಜ ಹತ್ತಿರ ತೊರವಿ ರಸ್ತೆ ವಿಜಯಪುರ–586108 5) ಟೆಂಡರ್ ಡೌನ್‌ಲೋಡ್ ಮಾಡಲು ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ & ಸಮಯ 17.06.2026 ಸಂಜೆ 17.00 ಗಂಟೆ 6)** ಇ.ಎಂ.ಡಿ ಹಾಗೂ ಭದ್ರತಾ ಠೇವಣಿ ಮೊತ್ತ : ಟೆಂಡರ್ ಡಾಕ್ಯೂಮೆಂಟನಲ್ಲಿ ತಿಳಿಸಿರುವಂತೆ 7) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ & ಸಮಯ:–19.06.2026 ಬೆ:– 11.00 ಗಂಟೆಗೆ 8)** ಆರ್ಥಿಕ ಬಿಡ್ ತೆರೆಯುವ **ದಿನಾಂಕ:– 20.06.2026 ಬೆ: 11.30** ಗಂಟೆಗೆ (ತಾತ್ಕಾಲಿಕ ವೇಳಾಪಟ್ಟಿ ಬದಲಾವಣೆಗೆ ಒಳಪಟ್ಟಿದೆ). ಆಸಕ್ತರು " ಇ–ಪೋರ್ಟಲ್" ಮುಖಾಂತರ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು www.eproc.karnataka.gov.in ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ಸಹಿ/– ರೇಷ್ಮೆ ಉಪನಿರ್ದೇಶಕರು,
ಜಿಲ್ಲಾ ಪಂಚಾಯತ, ವಿಜಯಪುರ
ವಾಸಾಸಂಇ/ವಿಜಯಪುರ/126/ಕೆಎಸ್‌ಎಂಸಿಎ/2026–27

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ
ಸಂ.ಕಾನಿಅ/ಲೋಇ/ಯಾವಿ/ತಾಶಾ–1&2/ಇ–ಟೆಂಡರ್ ಪ್ರಕಟಣೆ/2026–27/528 ದಿನಾಂಕ:03–06–2026

ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–2,3 & 4 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ಲೆಕ್ಕಶೀರ್ಷಿಕೆ 2025–26ನೇ ಸಾಲಿನ ಕೆ.ಕೆ.ಆರ.ಡಿ.ಬಿ ಅಡಿಯಲ್ಲಿ ಯಾದಗಿರಿ ತಾಲೂಕಿನ (1)36181, ಶಹಾಪುರ ತಾಲೂಕಿನ (1) 35311/2ನೇ ಕರೆ ಹಾಗೂ ಸುರಪುರ ತಾಲೂಕಿನ (1)35967, ಒಟ್ಟು 3 (ಮೂರು) ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. **2) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ರೂ.50.00 ಲಕ್ಷಗಳು ಹಾಗೂ ಗರಿಷ್ಠ ರೂ:500.00 ಲಕ್ಷಗಳು **3) ಗುತ್ತಿಗೆದಾರರ ಅರ್ಹತೆ ವಿವರ:**ಸಿವಿಲ್ 3ನೇ ದರ್ಜೆ ಹಾಗೂ ಮೇಲ್ಪಟ್ಟು **4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, **5) ಪ್ರೀ ಬಿಡ್ ಮೀಟಿಂಗ್ ದಿನಾಂಕ:** 06.06.2026 (11.30 ಗಂಟೆ ನಂತರ)(ಕೆಡಬ್ಲ್ಯೂ–4ರ ಕಾಮಗಾರಿಗಳಿಗೆ ಮಾತ್ರ) **6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:** 09.06.2026 (17.30 ಗಂಟೆವರೆಗೆ) **7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:** 12.06.2026 (16.00 ಗಂಟೆವರೆಗೆ) **8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:** 15.06.2026 (11.30 ಗಂಟೆ ನಂತರ) **9) ಆರ್ಥಿಕ ಬಿಡ್ ತೆರೆಯುವ ದಿನಾಂಕ:** 17.06.2026 (11.30 ಗಂಟೆ ನಂತರ) **10) ಹೆಚ್ಚಿನ ವಿವರಗಳಿಗೆ:** ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ **11) ಅಂತರ್ಜಾಲ ತಾಣದ ವಿಳಾಸ:** https://kppp.karnataka.gov.in

ವಿಶೇಷ ಸೂಚನೆಃ ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ವಾ.ಸಾ.ಸಂ.ಇ/ಯಾದಗಿರಿ/98/ಕೆ.ಎಸ್.ಎಂ.ಸಿ.&ಎ/2026–27 ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ.

ಕರ್ಣಾಟಕ ಬ್ಯಾಂಕ್ ಲಿಮಿಟೆಡ್

ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

(ನೋಂದಾಯಿತ ಮತ್ತು ಪ್ರಧಾನ ಕಚೇರಿ: ಮಹಾವೀರ ವೃತ್ತ, ಕಂಕನಾಡಿ, ಮಂಗಳೂರು–575 002)
ಕಂಪನಿ ಗುರುತು ಸಂಖ್ಯೆ : L85110KA1924PLC001128 ಇ–ಮೇಲ್ : investor.grievance@ktk.bank.in
ಕಂಪನಿ ಜಾಲತಾಣ : https://karnatakabank.bank.in ಫೋನ್ ನಂ. : 0824-2228222

ನೋಟೀಸು (ಬ್ಯಾಂಕಿನ ಷೇರುದಾರರ ಗಮನಕ್ಕಾಗಿ)

ಈ ಮೂಲಕ ಬ್ಯಾಂಕಿನ ಷೇರುದಾರರಿಗೆ ತಿಳಿಯಪಡಿಸುವುದೇನೆಂದರೆ, ಕಂಪನಿ ಕಾಯ್ದೆ 2013ರ ಸೆಕ್ಷನ್ 124(6) ಮತ್ತು ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ ಪ್ರಾಧಿಕಾರ ನಿಯಮಗಳು, 2016ರ (IEPF Rules) ನಿಬಂಧನೆಗಳಿಗೆ ಅನುಗುಣವಾಗಿ ಸತತ ಏಳು ವರ್ಷದ ಅವಧಿಗೆ ಪಾವತಿಯಾಗದೆ ಉಳಿದಿರುವ ಲಾಭಾಂಶವನ್ನು, ಸಂಬಂಧಪಟ್ಟ ಷೇರುಗಳೊಂದಿಗೆ, IEPFಗೆ ವರ್ಗಾವಣೆ ಮಾಡುವುದು ಕಡ್ಡಾಯವಾಗಿರುತ್ತದೆ.

ಈ ವಿಷಯದ ಕುರಿತಾಗಿ, ಹಣಕಾಸು ವರ್ಷ 2025-26ರಲ್ಲಿ IEPFಗೆ ವರ್ಗಾಯಿಸಲಾಗುವ ಡಿವಿಡೆಂಡ್ ಮತ್ತು ಷೇರುಗಳ ಬಗೆಗಿನ ಮಾಹಿತಿಯನ್ನು ಸಂಬಂಧಪಟ್ಟ ಷೇರುದಾರರಿಗೆ ದಿನಾಂಕ 30.05.2026 ಪತ್ರದ ಮೂಲಕ ತಿಳಿಸಲಾಗಿದೆ. ಅದಲ್ಲದೆ ಇದಕ್ಕೆ ಸಂಬಂಧಪಟ್ಟ ಷೇರುದಾರರ ಮಾಹಿತಿಯನ್ನು ಬ್ಯಾಂಕಿನ ಜಾಲತಾಣ https://www.karnatakabank.bank.in/dividend-refund-search ನಲ್ಲಿ ಕೂಡ ಪ್ರಕಟಿಸಲಾಗಿದೆ. ಈ ವಿವರಗಳನ್ನು ಷೇರುದಾರರು ಪರಿಶೀಲಿಸಿ, ಪಾವತಿಯಾಗದೆ ಉಳಿದಿರುವ ಲಾಭಾಂಶವನ್ನು **31.07.2026** ರ ಮುಂಚಿತವಾಗಿ ಪಡೆಯಬೇಕಾಗಿ ಈ ಮೂಲಕ ಕೋರುತ್ತೇವೆ.

ಈ ಮೇಲೆ ಉಲ್ಲೇಖಿಸಿದ ಷೇರುಗಳು ಭೌತಿಕ ರೂಪದಲ್ಲಿದ್ದರೆ, IEPF ನಿಯಮಗಳ ಪ್ರಕಾರ ಅಂತಹ ಷೇರುಗಳಿಗೆ, ಷೇರು ಪ್ರಮಾಣಪತ್ರಗಳನ್ನು ನೀಡಿ, ಆ ಷೇರುಗಳನ್ನು ವಿದ್ಯುನ್ಮಾನದ ರೂಪದಲ್ಲಿ (Demat) IEPFಗೆ ವರ್ಗಾವಣೆ ಮಾಡಲಾಗುತ್ತದೆ. ಆನಂತರದಲ್ಲಿ, ಅಂತಹ ಷೇರುಗಳ ಮೂಲ ಷೇರು ಪ್ರಮಾಣಪತ್ರಗಳನ್ನು ಅಮಾನ್ಯವೆಂದು ಪರಿಗಣಿಸಲಾಗುತ್ತದೆ. ಅದಲ್ಲದೆ, ಷೇರುಗಳನ್ನು IEPFಗೆ ವರ್ಗಾವಣೆ ಮಾಡುವ ಸಲುವಾಗಿ ಷೇರು ಪ್ರಮಾಣ ಪತ್ರಗಳ ನೀಡಿಕೆಗೆ ಸಂಬಂಧಿಸಿದಂತೆ, ಬ್ಯಾಂಕ್ ತನ್ನ ಜಾಲತಾಣದಲ್ಲಿ ಕೊಡಮಾಡಿರುವ ವಿವರಗಳು ಈ ವಿಷಯದ ಕುರಿತಾದ ಪೂರ್ಣಪ್ರಮಾಣದ ನೋಟಿಸು ಎಂದು ಪರಿಗಣಿಸಲಾಗುತ್ತದೆ.

ಈ ಸಂಬಂಧ ಡಿವಿಡೆಂಡ್ ಪಾವತಿಯನ್ನು ಕೋರಿ ಷೇರುದಾರರು ಸಲ್ಲಿಸುವ ಯಾವುದೇ ಮನವಿಯು (ಸೂಕ್ತ ದಾಖಲೆಗಳೊಂದಿಗೆ) 31.07.2026 ರ ಒಳಗಾಗಿ ಬ್ಯಾಂಕಿಗೆ/ ಬ್ಯಾಂಕಿನ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣಾ ಏಜೆಂಟ್ (RTA) ತಲುಪದೇ ಇದ್ದ ಪಕ್ಷದಲ್ಲಿ ಈ ಪ್ರಕಟಣೆಯನ್ನೇ ಅಂತಿಮ ನೋಟೀಸು ಎಂಬುದಾಗಿ ಪರಿಗಣಿಸಿ ಅಂತಹ ಡಿವಿಡೆಂಡ್ ಮತ್ತು ಷೇರುಗಳನ್ನು ನಿಗದಿಪಡಿಸಿದ ಕಾರ್ಯವಿಧಾನದ ಪ್ರಕಾರ IEPFಗೆ ವರ್ಗಾಯಿಸಲಾಗುತ್ತದೆ.

ಈ ರೀತಿ IEPFಗೆ ವರ್ಗಾವಣೆಯಾದ ಡಿವಿಡೆಂಡ್ ಮತ್ತು ಷೇರುಗಳನ್ನು ಹಿಂಪಡೆಯಲು IEPF ನಿಯಮಗಳ ಪ್ರಕಾರ ಷೇರುದಾರರು IEPF–5 ಅರ್ಜಿಯನ್ನು MCA ಪೋರ್ಟಲ್‌ನಲ್ಲಿ https://www.mca.gov.in/ ಸಲ್ಲಿಸಬಹುದು. ವಿವರಗಳಿಗಾಗಿ https://www.iepf.gov.in/ ಜಾಲತಾಣವನ್ನು ಸಂಪರ್ಕಿಸಬಹುದು.

ಡಿವಿಡೆಂಡ್ ಪಾವತಿಗಾಗಿ ಅಥವಾ ಹೆಚ್ಚಿನ ಮಾಹಿತಿಗಾಗಿ ಷೇರುದಾರರು ಬ್ಯಾಂಕಿನ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣಾ ಏಜೆಂಟ್–ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್– ನಂಬರ್–30, ರಮಣ ರೆಸಿಡೆನ್ಸಿ, ನಾಲ್ಕನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003 ಇವರನ್ನು ಸಂಪರ್ಕಿಸಬಹುದು. (ದೂ. ಸಂಖ್ಯೆ:080-23460815-18, ಇ–ಮೇಲ್: irg@integratedindia.in.)

ದಿನಾಂಕ: 03.06.2026
ಸ್ಥಳ : ಮಂಗಳೂರು

ಕರ್ಣಾಟಕ ಬ್ಯಾಂಕ್ ಲಿಮಿಟೆಡ್ ನ ಪರವಾಗಿ
ಶಾಮ್ ಕೆ.
ಕಂಪನಿ ಕಾರ್ಯದರ್ಶಿ

ಕಿರುಸುದ್ದಿ

ನೆಟ್ ಬೌಲಿಂಗ್: 7 ಯುವ ಬೌಲರ್‌ಗೆ ಬಿಸಿಸಿಐ ಆಹ್ವಾನ

ಮುಂಬೈ: ಅಫ್ಘಾನಿಸ್ತಾನ ವಿರುದ್ಧದ ಏಕೈಕ ಟೆಸ್ಟ್‌ಗೂ ಮುನ್ನ ಟೀಮ್ ಇಂಡಿಯಾ ಬ್ಯಾಟರ್‌ಗಳಿಗೆ ನೆಟ್ಸ್‌ನಲ್ಲಿ ಬೌಲಿಂಗ್ ಮಾಡಲು ಜಮ್ಮು ಕಾಶ್ಮೀರದ ವೇಗಿ ಆಕಿಬ್ ನಬಿ ದಾರ್ ಮತ್ತು ಉತ್ತರಪ್ರದೇಶದ ಲೆಗ್‌ಸ್ಪಿನ್ನರ್ ಜೀಶಾನ್ ಅನ್ಸಾರಿ ಸೇರಿದಂತೆ ಒಟ್ಟು 7 ಬೌಲರ್‌ಗಳನ್ನು ಬಿಸಿಸಿಐ ಆಹ್ವಾನಿಸಿದೆ. ಐಪಿಎಲ್ ಮತ್ತು ರಣಜಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಹೊರತಾಗಿಯೂ ಆಕಿಬ್ ಭಾರತ ತಂಡಕ್ಕೆ ಆಯ್ಕೆ ಆಗದಿರುವುದು ಸಾಕಷ್ಟು ಟೀಕೆಗೆ ಕಾರಣವಾಗಿತ್ತು. ಐಪಿಎಲ್ ಬಳಿಕ ಪ್ರಮುಖ ವೇಗಿಗಳಿಗೆ ವಿಶ್ರಾಂತಿ ಅಗತ್ಯವಿದ್ದು, ಪೂರ್ಣ ಪ್ರಮಾಣದಲ್ಲಿ ನೆಟ್ಸ್‌ನಲ್ಲಿ ಬೌಲಿಂಗ್ ನಡೆಸಲು ಸಾಧ್ಯವಿಲ್ಲ. ಆದರೆ ಬ್ಯಾಟರ್‌ಗಳಿಗೆ ಅಭ್ಯಾಸದ ಅಗತ್ಯವಿದೆ. ಈ ಕಾರಣಕ್ಕೆ 7 ಯುವ ಬೌಲರ್‌ಗಳನ್ನು ಆಹ್ವಾನಿಸಲಾಗಿದೆ ಎನ್ನಲಾಗುತ್ತಿದೆ.

ಇಂಡೋನೇಷ್ಯಾ ಓಪನ್: 2ನೇ ಸುತ್ತಿಗೆ ಆಯುಷ್, ಸಿಂಧು



ಹೊಸದಿಲ್ಲಿ: ಇಂಡೋನೇಷ್ಯಾ ಓಪನ್ 2026 ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತದ ಯುವ ಶಟ್ಲರ್ ಆಯುಷ್ ಶೆಟ್ಟಿ ಪುರುಷರ ವಿಭಾಗದಲ್ಲಿ ಬುಧವಾರ ದ್ವಿತೀಯ ಸುತ್ತನ್ನು ಪ್ರವೇಶಿಸಿದ್ದಾರೆ. ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ತಾರಾ ಆಟಗಾರ್ತಿ ಪಿವಿ ಸಿಂಧು ದ್ವಿತೀಯ ಸುತ್ತನ್ನು ಪ್ರವೇಶಿಸಿದ್ದಾರೆ.

21ರ ಹರೆಯದ ಆಯುಷ್ ಚೀನಾ ಎದುರಾಳಿ ವೆಂಗ್ ಹೊಂಗ್ ಯಾಂಗ್ ವಿರುದ್ಧ ಏಕಪಕ್ಷೀಯ ಪಂದ್ಯದಲ್ಲಿ ಸುಲಭ ಜಯ ಸಾಧಿಸಿದ್ದಾರೆ. 20ನೇ ಶ್ರೇಯಾಂಕದ ಶೆಟ್ಟಿ ಚೀನಾದ 15ನೇ ಶ್ರೇಯಾಂಕದ ಹೊಂಗ್‌ರನ್ನು 66 ನಿಮಿಷಗಳ ಪಂದ್ಯದಲ್ಲಿ 22–20, 21–15 ಅಂಕಗಳ ಅಂತರದಲ್ಲಿ ಸೋಲಿಸಿದ್ದಾರೆ.

ಹೊರಬಿದ್ದ ಸಾತ್ವಿಕ್–ಚಿರಾಗ್ ಜೋಡಿ: ಪುರುಷರ ಡಬಲ್ಸ್‌ನಲ್ಲಿ ಪ್ರಶಸ್ತಿ ನಿರೀಕ್ಷೆಯನ್ನು ಹೊತ್ತಿದ್ದ ಭಾರತದ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಇಂಡೋನೇಷ್ಯಾ ಓಪನ್‌ನಿಂದ ಹೊರಬಿದ್ದಿದೆ. ಇತ್ತೀಚೆಗೆ ಈ ಜೋಡಿ ಸಿಂಗಾಪುರ ಓಪನ್ ಪುರುಷರ ಡಬಲ್ಸ್ ಗರಿ ಮುಡಿಗೇರಿಸಿತ್ತು. ಆದರೆ ಇಂಡೋನೇಷ್ಯಾ ಓಪನ್ ಮೊದಲ ಸುತ್ತಿನಲ್ಲಿ 7 ನಿಮಿಷದ ಆಟದ ಬಳಿಕ ಸಾತ್ವಿಕ್ ಭುಜದ ಗಾಯಕ್ಕೆ ಒಳಗಾದ ಕಾರಣ ಜೋಡಿ ಸ್ಪರ್ಧೆಯಿಂದ ಹಿಂದೆ ಸರಿಯಿತು. ಪಂದ್ಯದಲ್ಲಿ ಮಲೇಷ್ಯಾ ಜೋಡಿ ವಿರುದ್ಧ 6–11 ಅಂಕಗಳ ಹಿನ್ನಡೆ ಅನುಭವಿಸಿದ್ದರು. ಮಿಶ್ರ ಡಬಲ್ಸ್ ವಿಭಾಗದಲ್ಲಿ ಭಾರತದ ರೋಹನ್ ಕುಮಾರ್ ಮತ್ತು ರುಥ್ವಿಕಾ ಗದ್ದೆ ಜೋಡಿ ಚೈನೀಸ್ ಥೈಪೆ ಜೋಡಿಯನ್ನು 21–14, 21–14 ನೇರ ಗೇಮ್‌ಗಳಿಂದ ಸೋಲಿಸಿ ದ್ವಿತೀಯ ಸುತ್ತನ್ನು ಪ್ರವೇಶಿಸಿದ್ದಾರೆ. ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಅನುಭವಿ ಎಚ್‌ಎಸ್ ಪ್ರಣೊಯ್ ಮೊದಲ ಸುತ್ತಿನಲ್ಲೇ ಸೋತು ಹೊರಬಿದ್ದಿದ್ದಾರೆ. ಮಹಿಳೆಯರ ಸಿಂಗಲ್ಸ್ ಸ್ಪರ್ಧೆಯಲ್ಲಿ ಯುವ ಶಟ್ಲರ್ ಉನ್ನತಿ ಹುಡ್ಡಾ ಜಪಾನ್ ಎದುರಾಳಿ ನಯೊಮಿ ಒಕುಹಾರ ವಿರುದ್ಧ 15–21, 14–21 ನೇರ ಸೋಲುಂಡಿದ್ದಾರೆ.

ದ್ವಿತೀಯ ಸುತ್ತಿಗೆ ಸಿಂಧು: ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿವಿ ಸಿಂಧು ಮಂಗಳವಾರ ತಡರಾತ್ರಿ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಗೆದ್ದು ದ್ವಿತೀಯ ಸುತ್ತನ್ನು ಪ್ರವೇಶಿಸಿದ್ದಾರೆ. ಥೈಲೆಂಡ್ ಎದುರಾಳಿ ಬುಸಾನನ್ ವಿರುದ್ಧ 51 ನಿಮಿಷಗಳ ಪಂದ್ಯದಲ್ಲಿ 25–23, 21–16 ಅಂಕಗಳಿಂದ ಸಿಂಧು ಜಯಿಸಿದ್ದಾರೆ. ಗುರುವಾರ ತಮ್ಮ ದ್ವಿತೀಯ ಸುತ್ತಿನ ಪಂದ್ಯದಲ್ಲಿ ಜಪಾನ್ ಎದುರಾಳಿ ಎಸ್‌ವೈ ಆ್ಯನ್ ಸವಾಲನ್ನು ಎದುರಿಸಲಿದ್ದಾರೆ.

ಸೆಮಿಗೆ ಮೆನ್ಸಿಕ್, ಖ್ವಾಲೀನಾಸ್ಕಾ

ಪ್ಯಾರಿಸ್: ಫ್ರೆಂಚ್ ಓಪನ್ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಜೇಕಬ್ ಮೆನ್ಸಿಕ್ ಹಾಗೂ ಮಹಿಳೆಯರ ವಿಭಾಗದಲ್ಲಿ ಪೋಲೆಂಡ್‌ನ ಮಾಯ ಖ್ವಾಲೀನಾಸ್ಕಾ ತಮ್ಮ ಕ್ವಾರ್ಟರ್ ಫೈನಲ್ ಪಂದ್ಯಗಳನ್ನು ಗೆದ್ದು ಸೆಮಿ ಫೈನಲ್ ಹಂತಕ್ಕೇರಿದ್ದಾರೆ. ಬುಧವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ತಾಳ್ಮೆಯ ಆಟ ಪ್ರದರ್ಶಿಸಿದ ಜೆಕ್ ಗಣರಾಜ್ಯದ ಆಟಗಾರ ಮೆನ್ಸಿಕ್, ಬ್ರೆಜಿಲ್ ಆಟಗಾರ ಜಾವೊ ಫಾನ್ಸೇಕರನ್ನು 6–4, 6–3 ಮತ್ತು 7–6(3) ಸೆಟ್ ಅಂತರದಿಂದ ಸೋಲಿಸಿದ್ದಾರೆ. ಮಹಿಳೆಯರ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ 22ನೇ ಶ್ರೇಯಾಂಕದ ರಷ್ಯಾ ಆಟಗಾರ್ತಿ ಅನ್ನಾ ಕಲಿನ್ಸ್‌ಕಯಾ ಅವರನ್ನು ಪೋಲೆಂಡ್ ಆಟಗಾರ್ತಿ 7–6(3), 6–3 ಸೆಟ್ ಅಂತರದಿಂದ ಸೋಲಿಸಿದ್ದಾರೆ.

ಮತ್ತೆ ನಂ.1 ಮ್ಯಾಗ್ನಸ್ ಮಣಿಸಿದ ಭಾರತದ ಗ್ರಾಂಡ್‌ಮಾಸ್ಟರ್

ಪ್ರಜ್ಞಾನಂದ ದಿಗ್ವಿಜಯ



ಓಸ್ಲೋ: ನಾರ್ವೆಯ ಓಸ್ಲೋದಲ್ಲಿ ನಡೆಯುತ್ತಿರುವ ನಾರ್ವೆ ಚೆಸ್ 2026 ಪಂದ್ಯಾವಳಿಯ ಎಂಟನೇ ಸುತ್ತಿನಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಮತ್ತೊಂದು ಐತಿಹಾಸಿಕ ಸಾಧನೆ ಮಾಡಿದ್ದಾರೆ.

ಚೆಸ್ ಲೋಕದಲ್ಲಿ ಭಾರತದ ಪಾರಮ್ಯ ಮುಂದುವರಿದಿದ್ದು, ವಿಶ್ವ ನಂ.1 ಮ್ಯಾಗ್ನಸ್ ಕಾರ್ಲ್ಸನ್‌ರನ್ನು ಕ್ಲಾಸಿಕಲ್ ವಿಭಾಗದಲ್ಲಿ ಮತ್ತೊಮ್ಮೆ ಮಣಿಸಿದ್ದಾರೆ. ಇದರೊಂದಿಗೆ ಪ್ರಶಸ್ತಿ ಸುತ್ತು ಇನ್ನಷ್ಟು ರೋಚಕಗೊಂಡಿದ್ದು, ಪ್ರಜ್ಞಾನಂದ ಪಂದ್ಯಾವಳಿಯಲ್ಲಿ ಪ್ರಬಲ ಸ್ಪರ್ಧಿಯಾಗಿದ್ದಾರೆ.

ಐತಿಹಾಸಿಕ ದಾಖಲೆ: ಕಳೆದ ವಾರ ಬಿಳಿ ಕಾಯಿಗಳೊಂದಿಗೆ ಮ್ಯಾಗ್ನಸ್ ಅವರನ್ನು ಸೋಲಿಸಿದ್ದ ಪ್ರಜ್ಞಾನಂದ, ಈ ಬಾರಿ ಕಪ್ಪು ಕಾಯಿಗಳೊಂದಿಗೆ ಗೆಲುವು ಸಾಧಿಸಿ ಅಪರೂಪದ ದಾಖಲೆ ನಿರ್ಮಿಸಿದರು. ಒಂದೇ ಟೂರ್ನಿಯಲ್ಲಿ ಕಾರ್ಲ್ಸನ್ ವಿರುದ್ಧ ಎರಡು ಕ್ಲಾಸಿಕಲ್ ಗೆಲುವು ಸಾಧಿಸಿದ ಭಾರತದ ಎರಡನೇ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಈ ಸಾಧನೆಯನ್ನು ಈ ಹಿಂದೆ ಭಾರತದ ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಮಾತ್ರ ಮಾಡಿದ್ದರು.

ಇದರೊಂದಿಗೆ ಕ್ಲಾಸಿಕಲ್ ಚೆಸ್‌ನಲ್ಲಿ ಐದು ಬಾರಿಯ ವಿಶ್ವ ಚಾಂಪಿಯನ್ ಕಾರ್ಲ್ಸನ್ ಅವರನ್ನು ಮೂರು ಬಾರಿ ಮಣಿಸಿದ ಆಯ್ದ ಆಟಗಾರರ ಪಟ್ಟಿಗೂ ಪ್ರಜ್ಞಾನಂದ ಸೇರ್ಪಡೆಯಾದರು. ಇನ್ನೊಂದು ಪ್ರಮುಖ ಪಂದ್ಯದಲ್ಲಿ ಅಲಿರೆಜಾ ಫಿರೌಜಾ, ಹಾಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ವಿರುದ್ಧ ಕ್ಲಾಸಿಕಲ್ ವಿಭಾಗದಲ್ಲಿ ಜಯ ಸಾಧಿಸಿದರು. ಸಮಯದ ಒತ್ತಡದ ನಡುವೆಯೂ ಅಂತಿಮ ಹಂತದಲ್ಲಿ ಉತ್ತಮ ಆಟವಾಡಿದ ಫಿರೌಜಾ ಅಮೂಲ್ಯ ಮೂರು ಅಂಕಗಳನ್ನು ತಮ್ಮದಾಗಿಸಿಕೊಂಡರು.

ವೆಸ್ಲಿ ಸೋ ಮತ್ತು ವಿನ್ಸೆಂಟ್ ಕೀಮರ್ ನಡುವಿನ ಕ್ಲಾಸಿಕಲ್ ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿತು. ಬಳಿಕ ನಡೆದ ಆರ್ಮಗೆಡ್ಡನ್ ಪಂದ್ಯದಲ್ಲಿ ವೆಸ್ಲಿ ಸೋ ಗೆದ್ದು ಹೆಚ್ಚುವರಿ ಅಂಕಗಳನ್ನು ಪಡೆದುಕೊಂಡರು. ಎಂಟು ಸುತ್ತುಗಳ ಅಂತ್ಯಕ್ಕೆ ವೆಸ್ಲಿ ಸೋ 14 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ಫಿರೌಜಾ 13 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದರೆ, ಪ್ರಜ್ಞಾನಂದ 12 ಅಂಕಗಳೊಂದಿಗೆ ಪ್ರಶಸ್ತಿ ಪೈಪೋಟಿಯಲ್ಲಿ ಉಳಿದಿದ್ದಾರೆ.

ದಿವ್ಯಾಗೆ ಜಂಟಿ ತೃತೀಯ ಸ್ಥಾನ

ಮಹಿಳಾ ವಿಭಾಗದಲ್ಲಿ ಬಿಬಿಸಾರಾ ಅಸೌಬಯೇವಾ ಮಹತ್ವದ ಕ್ಲಾಸಿಕಲ್ ಗೆಲುವು ದಾಖಲಿಸಿ ಅಗ್ರಸ್ಥಾನವನ್ನು ಇನ್ನಷ್ಟು ಬಲಪಡಿಸಿಕೊಂಡರು. ಭಾರತದ ದಿವ್ಯಾ ದೇಶಮುಖ್ ವಿರುದ್ಧ ಕಪ್ಪು ಕಾಯಿಗಳೊಂದಿಗೆ ಆಡಿದ ಅಸೌಬಯೇವಾ, ಸಮಯದ ಒತ್ತಡವನ್ನು ಸದುಪಯೋಗಪಡಿಸಿಕೊಂಡು ಪೂರ್ಣ ಅಂಕ ಗಳಿಸಿದರು.



ಮತ್ತೊಂದು ಪಂದ್ಯದಲ್ಲಿ ಝು ಜಿನರ್, ಹಾಲಿ ಮಹಿಳಾ ವಿಶ್ವ ಚಾಂಪಿಯನ್ ಜು ವೆನ್‌ಜುನ್ ಅವರನ್ನು ಮಣಿಸಿ ಮಹತ್ವದ ಜಯ ಸಾಧಿಸಿದರು. ಇದರೊಂದಿಗೆ ಅವರು ದಿವ್ಯಾ ದೇಶಮುಖ್ ಅವರೊಂದಿಗೆ ತಲಾ 10 ಅಂಕಗಳನ್ನು ಹೊಂದಿದ್ದಾರೆ. ಅನ್ನಾ ಮುಜಿಚುಕ್ ಹಾಗೂ ಕೊನೇರು ಹಂಪಿ ನಡುವಿನ ಕ್ಲಾಸಿಕಲ್ ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿತು. ಬಳಿಕ ನಡೆದ ಆರ್ಮಗೆಡ್ಡನ್ ಪಂದ್ಯದಲ್ಲಿ ಕಪ್ಪು ಕಾಯಿಗಳೊಂದಿಗೆ ಆಡಿದ ಹಂಪಿ ಗೆದ್ದು ಹೆಚ್ಚುವರಿ ಅಂಕಗಳನ್ನು ಕಲೆಹಾಕಿದರು. ಎಂಟನೇ ಸುತ್ತಿನ ಬಳಿಕ ಮಹಿಳಾ ವಿಭಾಗದಲ್ಲಿ ಬಿಬಿಸಾರಾ ಅಸೌಬಯೇವಾ 15.5 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ಅನ್ನಾ ಮುಜಿಚುಕ್ 10.5 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದರೆ, ದಿವ್ಯಾ ದೇಶಮುಖ್ ಹಾಗೂ ಝು ಜಿನರ್ ತಲಾ 10 ಅಂಕಗಳೊಂದಿಗೆ ಜಂಟಿ ಮೂರನೇ ಸ್ಥಾನದಲ್ಲಿದ್ದಾರೆ.

ಜೂ.6ಕ್ಕೆ ಅಫ್ಘಾನಿಸ್ತಾನ ವಿರುದ್ಧದ ಏಕೈಕ ಟೆಸ್ಟ್

ಕಠಿಣ ಅಭ್ಯಾಸ ನಡೆಸಿದ ಗಿಲ್ ನೇತೃತ್ವದ ಭಾರತ





ಹೊಸದಿಲ್ಲಿ: ಜೂ.6ರಂದು ಚಂಡೀಗಢದಲ್ಲಿ ಅಫ್ಘಾನಿಸ್ತಾನ ವಿರುದ್ಧದ ಏಕೈಕ ಟೆಸ್ಟ್ ಪಂದ್ಯಕ್ಕಾಗಿ ಶುಬ್ಮನ್ ಗಿಲ್ ನೇತೃತ್ವದ ಭಾರತ ತಂಡ ಬುಧವಾರ ಕಠಿಣ ಅಭ್ಯಾಸವನ್ನು ಆರಂಭಿಸಿದೆ.

ಏಕೈಕ ಟೆಸ್ಟ್ ಬಳಿಕ ಅಫ್ಘಾನಿಸ್ತಾನ ವಿರುದ್ಧ ಭಾರತ ಮೂರು ಪಂದ್ಯಗಳ ಏಕದಿನ ಸರಣಿಯನ್ನೂ ಆಡಲಿದೆ. ಟೆಸ್ಟ್ ತಂಡದಲ್ಲಿ ಸ್ಥಾನ ಪಡೆದ ಕನ್ನಡಿಗರಾದ ಭರವಸೆಯ ಬ್ಯಾಟರ್ ಕೆಎಲ್ ರಾಹುಲ್ ಹಾಗೂ ವೇಗಿ ಪ್ರಸಿದ್ಧ್ ಕೃಷ್ಣ ನೆಟ್ಸ್‌ನಲ್ಲಿ ಕಠಿಣ ಅಭ್ಯಾಸದಲ್ಲಿ ಪಾಲ್ಗೊಂಡು ಬೆವರಿಳಿಸಿದ್ದಾರೆ. ಪ್ರಸಿದ್ಧ್ ಜತೆಗೂಡಿ ವೇಗಿ ಮೊಹಮ್ಮದ್ ಸಿರಾಜ್ ನಿರಂತರ 25 ನಿಮಿಷಗಳ ಕಾಲ ಬೌಲಿಂಗ್ ಅಭ್ಯಾಸ ನಡೆಸಿದ್ದಾರೆ. ಸಿರಾಜ್ ಫಿಟ್ ಇದ್ದಾರೆಂದೂ ಆಫ್ಘಾನ್ ವಿರುದ್ಧದ ಟೆಸ್ಟ್ ಪಂದ್ಯಕ್ಕೆ ಸಿದ್ಧರಿದ್ದಾರೆಂದೂ ತಿಳಿದುಬಂದಿದೆ.

ನೆಟ್ಸ್‌ನಲ್ಲಿ ಗಮನಸೆಳೆದ ವೇಗಿಗಳು: ಸಿರಾಜ್ ಮತ್ತು ಪ್ರಸಿದ್ಧ್ ಮಾತ್ರವಲ್ಲದೆ, ಇತರ ವೇಗಿಗಳೂ ನೆಟ್ ಅಭ್ಯಾಸದ ವೇಳೆ ಗಮನಸೆಳೆದರು. ವೇಗಿ ಗುರ್‌ನೂರ್ ಬ್ರಾರ್ ತಮ್ಮ ಬೌನ್ಸಿ ಎಸೆತಗಳಿಂದ ಬ್ಯಾಟರ್ ಕೆಎಲ್ ರಾಹುಲ್ ಅವರನ್ನು ತುಸು ಕಾಡಿದರು. ಬ್ರಾರ್ ಅವರ ಕೆಲವು ಎಸೆತಗಳು ರಾಹುಲ್ ಸ್ಟಂಪ್‌ಗಳನ್ನು ತಗುಲಿದವು. ಆದರೂ ನೆಟ್ಸ್‌ನಲ್ಲಿ ರಾಹುಲ್ ಅದ್ಭುತ ಲಯದಲ್ಲಿ ಇರುವಂತೆ ಕಾಣಿಸಿದರು.

7 ಯುವ ಬೌಲರ್‌ಗಳು ಭಾಗಿ: ಬಿಸಿಸಿಐ ಆಹ್ವಾನಿಸಿದ 7 ಯುವ ಬೌಲರ್‌ಗಳೂ ನೆಟ್ ಅಭ್ಯಾಸದಲ್ಲಿ ಭಾರತೀಯ ಬ್ಯಾಟರ್‌ಗಳಿಗೆ ಬೌಲಿಂಗ್ ನಡೆಸಿದರು. ಐಪಿಎಲ್ ಮತ್ತು ರಣಜಿ ಋತುವಿನಲ್ಲಿ ಮಿಂಚಿದ್ದ ಜಮ್ಮು ಕಾಶ್ಮೀರದ ವೇಗಿ



ಆಕಿಬ್ ನಬಿ ದಾರ್ ಬಹಳ ಹೊತ್ತು ಬೌಲಿಂಗ್ ನಡೆಸಿದರು. ಇದೇ ಸಂದರ್ಭ ನಾಯಕ ಶುಬ್ಮನ್ ಗಿಲ್ ಸಹಿತ ಬ್ಯಾಟರ್‌ಗಳೆಲ್ಲರೂ ರಿಸರ್ವ್ ಬೌಲರ್ಸ್ ವಿರುದ್ಧ ಬ್ಯಾಟಿಂಗ್ ಅಭ್ಯಾಸ ನಡೆಸಿದರು.

ಸ್ಪಿನ್ನರ್‌ಗಳ ಮಧ್ಯೆ ಸ್ಪರ್ಧೆ: ತರಬೇತಿ ಸಂದರ್ಭ ಎಡಗೈ ಸ್ಪಿನ್ನರ್ ಹರ್ಷ್ ದುಬೆ ಗಮನಸೆಳೆದರು. ಇದೇ ವೇಳೆ ಟೀಮ್ ಮ್ಯಾನೇಜ್‌ಮೆಂಟ್ ಹರ್ಷ್ ಅವರ ಬ್ಯಾಟಿಂಗ್ ಕೌಶಲವನ್ನೂ ಪರೀಕ್ಷಿಸಿದೆ. ಕೆಲಹೊತ್ತು ಹರ್ಷ್ ಬ್ಯಾಟಿಂಗ್ ಅಭ್ಯಾಸವನ್ನೂ ನಡೆಸಿದ್ದಾರೆ. ದುಬೆ ಮತ್ತು ಎಡಗೈ ಸ್ಪಿನ್ನರ್ ಮಾನವ್ ಸುಥಾರ್ ನಡುವೆ ಆಡುವ ಬಳಗಕ್ಕೆ ಯಾರು ಆಯ್ಕೆ ಆಗುತ್ತಾರೆ ಎಂಬ ಸ್ಪರ್ಧೆ ಏರ್ಪಟ್ಟಿದೆ. ಮುಖ್ಯ ಕೋಚ್ ಗೌತಮ್ ಗಂಭೀರ್ ಇಬ್ಬರ ಮೇಲೂ ಗಮನಹರಿಸಿದ್ದಾರೆ.

ಮರಳಿದ ಮಯಾಂಕ್: ಕಳೆದ ಕೆಲವು ವರ್ಷಗಳಿಂದ ಹಲವು ಗಾಯಗಳ ಕಾರಣದಿಂದ ಸ್ಥಾನ ಪಡೆಯದ ವೇಗಿ ಮಯಾಂಕ್ ಯಾದವ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಅವರು ಬೌಲಿಂಗ್ ಅಭ್ಯಾಸಕ್ಕಿಂತ ಹೆಚ್ಚಾಗಿ ಡ್ರಿಲ್ಸ್ ಮತ್ತು ಫಿಟ್‌ನೆಸ್ ಮೇಲೆ ಗಮನಹರಿಸಿದ್ದಾರೆ.

ಮಹಿಳಾ ಟಿ20 ವಿಶ್ವಕಪ್‌ಗೂ ಮುನ್ನ ಕೊನೆಯ ಸರಣಿ

ಭಾರತಕ್ಕೆ ಸರಣಿ ಸೋಲು



ಟೌಂಟನ್: ಮುಂಬರುವ ಮಹಿಳಾ ಟಿ20 ವಿಶ್ವಕಪ್‌ಗೂ ಮುನ್ನ ಕೊನೆಯ ಟಿ20 ಸರಣಿ ಆಡಿದ ಭಾರತ, ಆತಿಥೇಯರ ವಿರುದ್ಧ 1–2 ಅಂತರದ ಸರಣಿ ಸೋಲುಂಡಿದೆ. ಇಲ್ಲಿ ಮಂಗಳವಾರ ತಡರಾತ್ರಿ ನಡೆದ ಮೂರನೇ ಹಾಗೂ ಅಂತಿಮ ಪಂದ್ಯದಲ್ಲಿ ಇಂಗ್ಲೆಂಡ್ 6 ವಿಕೆಟ್ ಜಯ ಸಾಧಿಸಿದೆ.

ಟಾಸ್ ಗೆದ್ದ ಇಂಗ್ಲೆಂಡ್ ನಾಯಕಿ ಚಾರ್ಲಿ ಡೀನ್ ಭಾರತೀಯರನ್ನು ಬ್ಯಾಟಿಂಗ್‌ಗೆ ಇಳಿಸಿದ್ದರು. ನಾಯಕಿ ಹರ್ಮನ್‌ಪ್ರೀತ್ ಕೌರ್ ಅರ್ಧ ಶತಕದ (56) ನೆರವಿನಿಂದ ಭಾರತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 180 ರನ್ ಪೇರಿಸಿತ್ತು. ಅಲೀಸ್ ಕ್ಯಾಪ್ಸಿ ಸ್ಫೋಟಕ 82 ರನ್ ಮತ್ತು ಹೀದರ್ ನೈಟ್ ಅವರ ಅಜೇಯ 70 ರನ್ ನೆರವಿನಿಂದ ಇಂಗ್ಲೆಂಡ್ ಗೆಲುವಿನ ದಡ ಸೇರಿಸಿದೆ.

ಭಾರತದ ಪರ ಸ್ಮೃತಿ ಮಂದನಾ(8) ಮತ್ತು ಶೆಫಾಲಿ ವರ್ಮಾ(11) ಬೇಗನೆ ಔಟಾಗಿ ಪೆವಿಲಿಯನ್ ಸೇರಿದ್ದರು. ತಂಡ ಸಂಕಷ್ಟದಲ್ಲಿದ್ದಾಗ ಯಸ್ತಿಕಾ ಭಾಟಿಯಾ(32) ಮತ್ತು ಜೆಮಿಮಾ ರಾಡ್ರಿಗ್ಸ್(29) ಕೊಡುಗೆ ನೀಡಿದರು. ಜೆಮಿಮಾ ಮತ್ತು ಹರ್ಮನ್ 4ನೇ ಜತೆಗೂಡಿ 26 ಎಸೆತಗಳಲ್ಲಿ 40 ರನ್ ಚಚ್ಚಿದರು. ಭಾರತ ತಂಡವು ಭರ್ತಿ 100 ರನ್ ಗಳಿಸಿದ್ದಾಗ 4ನೇ ವಿಕೆಟ್ ರೂಪದಲ್ಲಿ ಜೆಮಿಮಾ ಔಟಾಗಿದ್ದರು. ಈ ಸಂದರ್ಭ ಜತೆಗೂಡಿದ ನಾಯಕಿ ಹರ್ಮನ್‌ಪ್ರೀತ್ ಮತ್ತು ದೀಪ್ತಿ ಶರ್ಮಾ 5ನೇ ವಿಕೆಟ್‌ಗೆ 67 ರನ್ ಸೇರಿಸಿದರು. ಜೆಮಿಮಾರನ್ನು ಕ್ಲೀನ್‌ಬೌಲ್ಡ್ ಮಾಡಿದ್ದ ಬೆಲ್ ದೀಪ್ತಿ ವಿಕೆಟ್ ಸಹ ಕಬಳಿಸಿದರು.

ಕ್ಯಾಪ್ಸಿ–ನೈಟ್ 137 ರನ್ ಜತೆಯಾಟ: ಇಂಗ್ಲೆಂಡ್ ಆರಂಭಿಕ ಆಘಾತಗಳನ್ನು ಕಂಡರೂ ಬ್ಯಾಟಿಂಗ್ ಆಲ್‌ರೌಂಡರ್ ಅಲೀಸ್ ಕ್ಯಾಪ್ಸಿ 43 ಎಸೆತಗಳಿಂದ 82 ರನ್ ಬಾರಿಸಿದರು. ಇನ್ನೊಂದು ಬದಿ ಕ್ರೀಸ್ ಆಕ್ರಮಿಸಿದ ಹೀದರ್ 42 ಎಸೆತಗಳಿಂದ ಔಟಾಗದೆ 70 ರನ್ ಗಳಿಸಿದರು. ಇಬ್ಬರೂ 5ನೇ ವಿಕೆಟ್‌ಗೆ 76 ಎಸೆತಗಳಲ್ಲಿ 137 ರನ್ ಪೇರಿಸುವ ಮೂಲಕ ಇಂಗ್ಲೆಂಡ್ ಟಿ20 ಸರಣಿ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದರು.

ಇಂಗ್ಲೆಂಡ್‌ನಲ್ಲಿ ಕೌರ್ ಚೊಚ್ಚಲ ಟಿ20 ಫಿಫ್ಟಿ: ನಾಯಕಿ ಹರ್ಮನ್‌ಪ್ರೀತ್ ಕೌರ್ ಇಂಗ್ಲೆಂಡ್ ನೆಲದಲ್ಲಿ ಚೊಚ್ಚಲ ಟಿ20 ಅರ್ಧ ಶತಕ ದಾಖಲಿಸಿದ್ದು, ಒಟ್ಟಾರೆ ಅವರ 17ನೇ ಟಿ20 ಅರ್ಧ ಶತಕ ಇದಾಗಿತ್ತು.

ಸಂಕ್ಷಿಪ್ತ ಸ್ಕೋರ್

ಭಾರತ ವನಿತೆಯರು 180/5(20): ಹರ್ಮನ್‌ಪ್ರೀತ್ 56*, ಯಸ್ತಿಕಾ 32, ದೀಪ್ತಿ 32, ಜೆಮಿಮಾ 29, ಬೆಲ್ 36ಕ್ಕೆ 2.

ಇಂಗ್ಲೆಂಡ್ ವನಿತೆಯರು 184/4(20): ಕ್ಯಾಪ್ಸಿ 82, ನೈಟ್ 70*, ಅರುಂಧತಿ 31ಕ್ಕೆ 2, ಕ್ರಾಂತಿ 40ಕ್ಕೆ 2.

ಕೊಡಗು ಸೈನಿಕ ಶಾಲೆಯಲ್ಲಿ ಅಖಿಲ ಭಾರತ ಅಂತರಗುಂಪು ಫುಟ್ಬಾಲ್

ಪ್ರಿ ಸುಬ್ರೊಟೊ ಕಪ್‌ಗೆ ಚಾಲನೆ

ಕುಶಾಲನಗರ: ಕೂಡಿಗೆಯಲ್ಲಿರುವ ಕೊಡಗು ಸೈನಿಕ ಶಾಲೆಯ ಮರಿಯಪ್ಪ ಕೆಂಪಯ್ಯ ಫುಟ್ಬಾಲ್ ಮೈದಾನದಲ್ಲಿ ಪ್ರತಿಷ್ಠಿತ ಅಖಿಲ ಭಾರತ ಅಂತರ ಗುಂಪು ಫುಟ್ಬಾಲ್ ಪಂದ್ಯಾವಳಿ(ಪ್ರಿ ಸುಬ್ರೊಟೊ ಕಪ್–2026) ವಿದ್ಯುಕ್ತವಾಗಿ ಉದ್ಘಾಟನೆಗೊಂಡಿತು.

ಕೂಡಿಗೆಯ ಸೈನಿಕ ಶಾಲೆಯಲ್ಲಿ ಮೊದಲ ಬಾರಿಗೆ ನಡೆಯುತ್ತಿರುವ ಈ ಪಂದ್ಯಾವಳಿಯು ಜೂ.11ರವರೆಗೆ ನಡೆಯಲಿದ್ದು, ದೇಶದೆಲ್ಲೆಡೆಯ 13 ಸೈನಿಕ ಶಾಲೆಗಳ 21 ತಂಡಗಳು ಇದರಲ್ಲಿ ಭಾಗವಹಿಸಿವೆ.

ಈ ಚಾಂಪಿಯನ್‌ಶಿಪ್ ಸಬ್ ಜೂನಿಯರ್ ಬಾಲಕರು(15 ವರ್ಷದೊಳಗಿನ), ಜೂನಿಯರ್ ಬಾಲಕರು(17 ವರ್ಷದೊಳಗಿನ) ಮತ್ತು ಜೂನಿಯರ್ ಬಾಲಕಿಯರು(17 ವರ್ಷದೊಳಗಿನ) ಎಂಬ ಮೂರು ವಿಭಾಗಗಳಲ್ಲಿ ನಡೆಯಲಿದೆ. ಕೊಡಗು ಸೈನಿಕ ಶಾಲೆ ಗುಂಪು ಮಟ್ಟದ ಪಂದ್ಯಗಳಲ್ಲಿ ಜಯ ಗಳಿಸಿ ಮೂರೂ ವಿಭಾಗಗಳಲ್ಲಿ ಗ್ರೂಪ್ ಎಚ್ ಅನ್ನು ಪ್ರತಿನಿಧಿಸುತ್ತಿದ್ದು, ಈ ಮೂಲಕ ಸಂಸ್ಥೆಯು ಇತಿಹಾಸವನ್ನು ಸೃಷ್ಟಿಸಿದೆ.

ಉದ್ಘಾಟನಾ ಸಮಾರಂಭವು ಕೊಡಗು ಸೈನಿಕ ಶಾಲೆಯ ಪೆರೇಡ್ ಕಮಾಂಡರ್ ಕೆಡೆಟ್



ಆರ್ಯನ್ ಮಹಾರ್ವರ್ ನೇತೃತ್ವದಲ್ಲಿ ಭಾಗವಹಿಸಿದ ಎಲ್ಲಾ ತಂಡಗಳ ಆಕರ್ಷಕ ಪಥಸಂಚಲನದೊಂದಿಗೆ ಚಾಲನೆಗೊಂಡಿತು.

ಪ್ರಸ್ತುತ ಪಂದ್ಯಾವಳಿಯಲ್ಲಿ ಒಟ್ಟು 336 ಕ್ರೀಡಾಪಟುಗಳು ಸ್ಪರ್ಧಿಸುತ್ತಿದ್ದು, ಇದು ಸೈನಿಕ ಶಾಲೆಗಳ ಕ್ಯಾಲೆಂಡರ್‌ನ ಅತಿ ದೊಡ್ಡ ಮತ್ತು ಅತಿ ಮಹತ್ವದ ಕ್ರೀಡಾಕೂಟಗಳಲ್ಲಿ ಒಂದಾಗಿದೆ. ಕೊಡಗು ಸೈನಿಕ ಶಾಲೆಯ ಪ್ರಾಂಶುಪಾಲ ಕರ್ನಲ್ ಅಮರ್‌ಜೀತ್ ಸಿಂಗ್ ಅವರು, ಮುಖ್ಯ ಅತಿಥಿಗಳಾದ ಮೈಸೂರು ದಕ್ಷಿಣ ವಲಯದ ಪೊಲೀಸ್ ಮಹಾನಿರೀಕ್ಷಕ ಡಾ. ಎಂ.ಬಿ.ಬೋರಲಿಂಗಯ್ಯ, ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್. ಬಿಂದುಮಣಿ ಹಾಗೂ ಭಾಗವಹಿಸಿದ ಎಲ್ಲಾ ತಂಡಗಳ ಕ್ರೀಡಾಪಟುಗಳು ಹಾಗೂ ಆಯಾ ಶಾಲೆಗಳ ಸಿಬ್ಬಂದಿಗಳನ್ನು ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್. ಬಿಂದುಮಣಿ, ಸೈನಿಕ ಶಾಲೆಯ ಉಪ ಪ್ರಾಂಶುಪಾಲ ವಿಂಗ್ ಕಮಾಂಡರ್ ಮೊಹಮ್ಮದ್ ಶಾಜಿ, ದಿವ್ಯಾ ಸಿಂಗ್, ಹಿರಿಯ ಶಿಕ್ಷಕ ವಿಬಿನ್ ಕುಮಾರ್, ಭಾಗವಹಿಸಿದ ವಿವಿಧ ತಂಡಗಳ ಮೇಲ್ವಿಚಾರಕರು, ತೀರ್ಪುಗಾರರು, ಪಂದ್ಯದ ಅಧಿಕಾರಿಗಳು, ವಿದ್ಯಾರ್ಥಿಗಳು ಹಾಗೂ ಸೈನಿಕ ಶಾಲೆಯ ಸಿಬ್ಬಂದಿ ವರ್ಗ, ಕೂಡಿಗೆಯ ಮೊರಾರ್ಜಿ ಶಾಲೆ ಮತ್ತು ಅತ್ತೂರಿನ ಜ್ಞಾನಗಂಗಾ ಶಾಲೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಫ್ರೆಂಚ್ ಓಪನ್: ವಿಶ್ವ ನಂ.1 ಸಬಲೆಂಕಾಗೆ ಆಘಾತ!





ಪ್ಯಾರಿಸ್: ವಿಶ್ವ ನಂ.1 ಅರೀನಾ ಸಬಲೆಂಕಾ ಫ್ರೆಂಚ್ ಓಪನ್ ಕ್ವಾರ್ಟರ್ ಫೈನಲ್‌ನಲ್ಲಿ ಸೋತು ಆಘಾತ ಅನುಭವಿಸಿದ್ದಾರೆ. ನಾಲ್ಕು ಬಾರಿಯ ಗ್ರ್ಯಾಂಡ್ ಸ್ಲಾಮ್ ಚಾಂಪಿಯನ್ ಸಬಲೆಂಕಾ ಅವರು ಬುಧವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಡಯಾನ ಶ್ನೈಡರ್ ಎದುರು 3–6, 7–5, 6–0 ಸೆಟ್ ಅಂತರದಿಂದ ಸೋಲುಂಡಿದ್ದಾರೆ. ಸುಲಭದಲ್ಲಿ ಸೆಮಿ ಫೈನಲ್ ಪ್ರವೇಶಿಸುತ್ತಾರೆ ಎಂಬ ನಿರೀಕ್ಷೆಯಿದ್ದ ಸಬಲೆಂಕಾ ಕ್ವಾರ್ಟರ್ ಸೋಲುಂಡು ಹೊರಬಿದ್ದಿದ್ದಾರೆ. ಕಳೆದ ಬಾರಿ ಅವರು ಫೈನಲ್‌ನಲ್ಲಿ ಕೊಕೊ ಗಾಫ್ ಎದುರು ಸೋತು ರನ್ನರ್‌ಅಪ್ ಪ್ರಶಸ್ತಿಗೆ ತೃಪ್ತಿಪಟ್ಟಿದ್ದರು.

ನ್ಯೂಜಿಲೆಂಡ್ ಪ್ರವಾಸದ ವೇಳಾಪಟ್ಟಿ ಪ್ರಕಟ

ಕಿವೀಸ್ ವಿರುದ್ಧ 12 ಪಂದ್ಯ

ವೆಲ್ಲಿಂಗ್ಟನ್: ಐತಿಹಾಸಿಕ ನ್ಯೂಜಿಲೆಂಡ್ ಪ್ರವಾಸದ ವೇಳಾಪಟ್ಟಿಯನ್ನು ಬಿಸಿಸಿಐ ಬುಧವಾರ ಪ್ರಕಟಿಸಿದೆ. ಇದೇ ವರ್ಷ ಅಕ್ಟೋಬರ್‌ನಲ್ಲಿ ನ್ಯೂಜಿಲೆಂಡ್ ಪ್ರವಾಸ ಕೈಗೊಳ್ಳಲಿರುವ ಭಾರತೀಯ ಕ್ರಿಕೆಟ್ ತಂಡವು 12 ಪಂದ್ಯಗಳನ್ನು ಆಡಲಿದೆ. ಸುದೀರ್ಘ ಸರಣಿಯಲ್ಲಿ ಐದು ಟಿ20, ಐದು ಏಕದಿನ ಮತ್ತು 2 ಟೆಸ್ಟ್ ಪಂದ್ಯಗಳನ್ನು ಒಳಗೊಂಡಿವೆ. ಕಿವೀಸ್ ಪ್ರವಾಸ ಅ.22ರಂದು ಆರಂಭವಾಗಲಿದ್ದು, ಸರಣಿ ಮೊದಲ ಟಿ20 ಪಂದ್ಯ ಹ್ಯಾಗ್ಲೆ ಓವಲ್‌ನಲ್ಲಿ ನಡೆಯಲಿದೆ. ನ.27ರಂದು ಕ್ರೈಸ್ಟ್‌ಚರ್ಚ್‌ನಲ್ಲಿ ನಡೆಯುವ ಎರಡನೇ ಟೆಸ್ಟ್ ಪಂದ್ಯದೊಂದಿಗೆ ಸರಣಿ ಸಮಾರೋಪಗೊಳ್ಳಲಿದೆ. ಇದು ಕ್ರಿಕೆಟ್ ಅಷ್ಟೇ ಅಲ್ಲದೆ, ಭಾರತ– ಕಿವೀಸ್ ನಡುವಿನ ಸ್ನೇಹ, ಇತಿಹಾಸ ಮತ್ತು ಸಂಸ್ಕೃತಿಯ ಸಂಭ್ರಮಾಚರಣೆ ಆಗಿರಲಿದೆ ಎಂದು ನ್ಯೂಜಿಲೆಂಡ್ ಕ್ರಿಕೆಟ್ ಮಾರ್ಕೆಟಿಂಗ್ ಮತ್ತು ವಾಣಿಜ್ಯ ಅಧಿಕಾರಿ ಗ್ಲೆನ್ ಕ್ರಿಟ್‌ಚ್ಲೆ ಹೇಳಿದ್ದಾರೆ.



ತಿಂಗಳಾಂತ್ಯ ಐರ್ಲೆಂಡ್ ಪ್ರವಾಸ

ಭಾರತೀಯ ಕ್ರಿಕೆಟ್ ತಂಡ ಇದೇ ತಿಂಗಳಾಂತ್ಯದಲ್ಲಿ ಐರ್ಲೆಂಡ್ ಪ್ರವಾಸ ಕೈಗೊಳ್ಳಲಿದ್ದು, ಎರಡು ಟಿ20 ಪಂದ್ಯಗಳನ್ನು ಆಡಲಿದೆ. ಬೆಲ್‌ಫಾಸ್ಟ್ ಮೈದಾನದಲ್ಲೇ ಜೂ.26ರಂದು ಮೊದಲ ಟಿ20 ಮತ್ತು ಜೂ.28ರಂದು ದ್ವಿತೀಯ ಟಿ20 ಪಂದ್ಯ ಆಡಲಾಗುವುದು.

ಸರಣಿ ವೇಳಾಪಟ್ಟಿ

ಐದು ಟಿ20 ಅಂ. ಪಂದ್ಯಗಳು

ಅ.22, ಮೊದಲ ಟಿ20, ಹ್ಯಾಗ್ಲೆ ಓವಲ್, ಕ್ರೈಸ್ಟ್‌ಚರ್ಚ್
ಅ.24, ದ್ವಿತೀಯ ಟಿ20, ಹ್ಯಾಗ್ಲೆ ಓವಲ್, ಕ್ರೈಸ್ಟ್‌ಚರ್ಚ್
ಅ.27, ತೃತೀಯ ಟಿ20, ಹೆನ್ರಿ ಸ್ಟೇಡಿಯಂ, ವೆಲ್ಲಿಂಗ್ಟನ್
ಅ.30, ನಾಲ್ಕನೇ ಟಿ20, ಈಡನ್ ಪಾರ್ಕ್, ಆಕ್ಲೆಂಡ್
ನ.1, ಐದನೇ ಟಿ20, ಸೆಡ್ಡನ್ ಪಾರ್ಕ್, ಹ್ಯಾಮಿಲ್ಟನ್
(ಎಲ್ಲಾ ಪಂದ್ಯಗಳೂ ಭಾರತೀಯ ಕಾಲಮಾನ ಮಧ್ಯಾಹ್ನ 1.30ರಿಂದ).

ಐದು ಏಕದಿನ ಪಂದ್ಯಗಳು


ನ.4, ಮೊದಲ ಏಕದಿನ, ಈಡನ್ ಪಾರ್ಕ್, ಆಕ್ಲೆಂಡ್
ನ.7, ಎರಡನೇ ಏಕದಿನ, ಹೆನ್ರಿ ಸ್ಟೇಡಿಯಂ, ವೆಲ್ಲಿಂಗ್ಟನ್
ನ.10, ತೃತೀಯ ಏಕದಿನ, ಸೆಡ್ಡನ್ ಪಾರ್ಕ್, ಹ್ಯಾಮಿಲ್ಟನ್
ನ.13, 4ನೇ ಏಕದಿನ, ಬೇ ಓವಲ್, ಮೌಂಟ್ ಮೌಂಗನೂಯಿ
ನ.15, 5ನೇ ಏಕದಿನ, ಬೇ ಓವಲ್, ಮೌಂಟ್ ಮೌಂಗನೂಯಿ
(ಎಲ್ಲಾ ಪಂದ್ಯಗಳೂ ಭಾರತೀಯ ಕಾಲಮಾನ ಬೆಳಗ್ಗೆ 8.30ರಿಂದ).

ಎರಡು ಟೆಸ್ಟ್ ಪಂದ್ಯಗಳು

ನ.19, ಮೊದಲ ಟೆಸ್ಟ್, ಬೇಸಿನ್ ರಿಸರ್ವ್, ವೆಲ್ಲಿಂಗ್ಟನ್
ನ.27, ದ್ವಿತೀಯ ಟೆಸ್ಟ್, ಹ್ಯಾಗ್ಲೆ ಓವಲ್, ಕ್ರೈಸ್ಟ್‌ಚರ್ಚ್.
(ಎರಡೂ ಪಂದ್ಯಗಳು ಭಾರತೀಯ ಕಾಲಮಾನ ಬೆಳಗ್ಗೆ 4.30ರಿಂದ).

ಪದಬಂಧ

ರಾಜಾ ಸಂಗಮೇಶ ಹಿರೇಮಠ



6004

6003 ಉತ್ತರ

ಎಡದಿಂದ ಬಲಕ್ಕೆ:
2.ತಿನ್ನಾಸಕ 4.ಕಪ್ಪೆ
5.ಕುಕಿಲ 6.ದ್ವಾರಪಾಲಕ
8.ಪುರಾತನ
11.ತಾಳಮೇಳ
12.ಮತಿಭ್ರಮಣೆ
14.ದಾತಾರ 16.ಕೇರಿ
17.ಯಶಸ್ಕರ

ಮೇಲಿನಿಂದ ಕೆಳಕ್ಕೆ :
1.ಬೇಕು 2.ತಿಲಘಾತಕ
3.ಕಸರತ್ತು 4.ಕಪಾಲ
7.ಕಳವಳ 8.ಪುಣ್ಯಧಾಮ
9.ಬಳಕೆದಾರ
10.ಕಮನೀಯ
13.ತಿಜೋರಿ 15.ರಟ್ಟು

ಎಡದಿಂದ ಬಲಕ್ಕೆ
1.ದರದ ನಡುವೆ ಅಡಗಿದ ಮೋಸಗಾರ (4)
6.ನ್ಯಾಯ ನಿರ್ವಹಣಾ ಶಾಸ್ತ್ರ (4)
7.ಮುಚ್ಚಳವಿರುವ ಸಣ್ಣಪಾತ್ರೆ (3)
8.ಈಕೆ ಅಣ್ಣನ ಹೆಂಡತಿ (3)
10.ನಡವಳಿಕೆ–ವರ್ತನೆ (3)
11.ಜೊತೆಯಾಗಿರುವ ಗಂಡಹೆಂಡತಿ (3)
12.ವಸ್ತುವಿನ ಏಕಮಾನ ಗಾತ್ರದಲ್ಲಿರುವ ದ್ರವ್ಯರಾಶಿಯ ಅಳತೆ (3)
14.ತರಬೇತಿ–ಅಭ್ಯಾಸದ ಸಮಾನಪದ (3)
16.ಆರಂಭದಲ್ಲಿ ವಿಷ್ಣು ಹೊಂದಿರುವ ಸುದ್ದಿ ತಲುಪಿಸುವ ವ್ಯಕ್ತಿ (4)
17.ಒಳ್ಳೆಯ ಮನಸ್ಸಿರುವವನು (4)

ಮೇಲಿನಿಂದ ಕೆಳಕ್ಕೆ
2.ಈಕೆ ತೆಲ್ಲಿಗರ ಮಹಿಳೆ (4)
3.ಹಾಸ್ಯ ಮನೋಭಾವದವ–ರಸಜ್ಞ (3)
4.ದಂಡ ಕಡೆಯಲ್ಲಿಟ್ಟುಕೊಂಡ ಬಿಲ್ಲು (3)
5. ಪಾತಿವ್ರತ್ಯವುಳ್ಳವಳು–ಗರತಿ (4)
9. ಸಖಿ–ಮಿತ್ರೆಯೀಕೆ (3)
10. ಸಮಾಧಾನದ ಮಾತು ತಲೆಕೆಳಗಾಗಿದೆ (3)
11. ಕಡಗೋಲಿನಿಂದ ಕಡೆದ ಮಜ್ಜಿಗೆ (4)
13. ಹಣವಿಲ್ಲದವನು–ಬಡವ (4)
14. ತಾಣದ ನಡುವೆ ದಾಟುವಿಕೆಯಿದೆ (3)
15. ಹತ್ತಿರದವರ ಕೋಪಿಸಿಕೊಳ್ಳುವಿಕೆ (3)

ಕಿರುಸುದ್ದಿ

ವಿದ್ಯುತ್ ವ್ಯತ್ಯಯ ನಾಳೆ

ನರಗುಂದ: 110/11ಕೆವ್ಹಿ ನರಗುಂದ ವಿದ್ಯುತ್ ವಿತರಣಾ ಉಪ-ಕೇಂದ್ರದಿಂದ ತ್ರೈಮಾಸಿಕ ನಿರ್ವಹಣಾ ಕೆಲಸ ಕೈಗೊಳ್ಳುವುದರಿಂದ ಜೂ.5ರ ಬೆಳಗ್ಗೆ 10 ರಿಂದ ಸಂಜೆ 5.30 ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. ಅಲ್ಲಿನ ವಿದ್ಯುತ್ ವಿತರಣಾ ಉಪ-ಕೇಂದ್ರದಿಂದ ವಿದ್ಯುತ್ ಪೂರೈಕೆಯಾಗುತ್ತಿರುವ, ನರಗುಂದ ಪಟ್ಟಣ ಮತ್ತು 07 ಗ್ರಾಮ ಪಂಚಾಯತಿಗಳಾದ ಹುಣಸಿಕಟ್ಟಿ, ಹಿರೇಕೊಪ್ಪ, ಚಿಕ್ಕನರಗುಂದ, ಬನಹಟ್ಟಿ, ಸುರಕೋಡ, ಕಣಕಿಕೊಪ್ಪ, ಬೆನಕನಕೊಪ್ಪ ಗ್ರಾಮ ಪಂಚಾಯತಿಗಳಿಗೆ ಸಂಬಂಧಪಟ್ಟ ಹಳ್ಳಿಗಳು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಹುವಿಸಕಂ ಕಾರ್ಯ ಮತ್ತು ಪಾಲನಾ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಗದಗ: ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಪರಿಷತ್ Indian Council Cultural Relations (ICCR) ಹಾಗೂ ಕರ್ನಾಟಕ ಸರ್ಕಾರದ ನಡುವೆ ಸಂಸ್ಕೃತಿ, ಕಲೆ ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದಂತೆ ICCR ಸಂಸ್ಥೆಯ ವತಿಯಿಂದ ರಾಜ್ಯ ಸರ್ಕಾರದ ಸಾಂಸ್ಕೃಕ ಕಲಾತಂಡಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ವಿವಿಧ ಸಾಂಸ್ಕೃತಿಕ ಉತ್ಸವ ಹಾಗೂ ಕಾರ್ಯಕ್ರಮಗಳಿಗೆ ಕಳುಹಿಸಿಕೊಡುವ ಮೂಲಕ ಕಲಾವಿದರ ಮತ್ತು ಕಲಾತಂಡಗಳ ಪ್ರತಿಭೆಯನ್ನು ಪ್ರಚುರಪಡಿಸಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂನ್ 12 ಕೊನೆಯ ದಿನವಾಗಿದೆ. ಅರ್ಜಿ ನಮೂನೆಯನ್ನು :www.Kannadasiri.karnataka.gov.in ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ. ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೊಠಡಿ ಸಂಖ್ಯೆ:103 ಜಿಲ್ಲಾಡಳಿತ ಭವನ, ಸಲ್ಲಿಸಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಸವರಾಜ ವಿ. ಬಳ್ಳಾರಿ ತಿಳಿಸಿದ್ದಾರೆ.

ವಿಶ್ವ ಪರಿಸರ ದಿನಾಚರಣೆ ನಾಳೆ

ಮುಂಡರಗಿ: ಕಪ್ಪತಗುಡ್ಡ ಪರಿಸರ ಸಂರಕ್ಷಣಾ ವೇದಿಕೆ, ಕಪ್ಪತಹಿಲ್ಸ ವಲಯ ಅರಣ್ಯ ಇಲಾಖೆ, ಸಾಮಾಜಿಕ ಅರಣ್ಯ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಪುರಸಭೆ , ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಎಸ್.ಬಿ.ಎಸ್.ಆಯುರ್ವೇದ ಮೆಡಿಕಲ್ ಕಾಲೇಜು ಹಾಗೂ ತಾಲೂಕು ಆಡಳಿತ ಇವುಗಳ ಸಂಯುಕ್ತ ಆಶ್ರಯದಲ್ಲಿ ಜೂ.5ರಂದು ಬೆಳಗ್ಗೆ 10 ಕ್ಕೆ ಶಾಸಕರ ಮಾದರಿ ಶಾಲೆಯ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ವನ್ಯಜೀವಿ ಪರಿಪಾಲಕ ಸಿ.ಎಸ್.ಅರಸನಾಳ ತಿಳಿಸಿದ್ದಾರೆ.

ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಪರಿಸರ ದಿನಾಚರಣೆಯ ಅಂಗವಾಗಿ ಸಹಸ್ರವೃಕ್ಷ ನೆಡುವ ಅಭಿಯಾನ ಹಾಗೂ 20ಕ್ಕೂ ಹೆಚ್ಚು ಪಂಚವಟಿ ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಪಟ್ಟಣದ ಗದಗ ರಸ್ತೆಗೆ ಹೊಂದಿಕೊಂಡಿರುವ ರುದ್ರಭೂಮಿಯಲ್ಲಿ ನೂರಾರು ಗಿಡಗಳನ್ನು ನೆಡುವುದರೊಂದಿಗೆ, ಹೆಸ್ಕಾಂನಿಂದ ಹೆಸರೂರ ಕ್ರಾಸ್ ವರೆಗೆ ಇರುವ ರಸ್ತೆಯ ಡಿವೈಡರ್‌ನಲ್ಲಿ ಅಲಂಕಾರಿಕ ಸಸಿಗಳನ್ನು ನಡೆಲಾಗುವುದು. ಪಟ್ಟಣದ ವಿವಿಧ ಕಡೆ ಇರುವ 6 ಉದ್ಯಾನವನಗಳಲ್ಲಿ ಮತ್ತು ಪಂಚಮಸಾಲಿ ಸಮಾಜದ ಸಮುದಾಯ ಭವನದಲ್ಲಿ ಸುತ್ತಲೂ ಸಸಿನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ವಿಶ್ವಪರಿಸರ ದಿನಾಚರಣೆಯ ಅಂಗವಾಗಿ ಒಂದೆರಡು ಕಡೆ ಕೆಲವು ಸಸಿಗಳನ್ನು ನೆಟ್ಟು ಜಾಗೃತಿ ಕಾರ್ಯಕ್ರಮವನ್ನು ಮಾಡಲಾಗುವುದು. ಬರುವ ದಿನಗಳಲ್ಲಿ ಮತ್ತು ಮಳೆಯ ಲಭ್ಯತೆಯನ್ನು ನೋಡಿಕೊಂಡು ಸಹಸ್ರ ಗಿಡಗಳನ್ನು ನೆಡಲಾಗುವುದು. ಜಾಗೃತ ಕಾರ್ಯಕ್ರಮವು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಳ ಸಾನ್ನಿಧ್ಯದಲ್ಲಿ ನಡೆಯುವುದು. ನ್ಯಾಯಮೂರ್ತಿಗಳು, ವಿವಿಧ ಇಲಾಖೆಯ ಅಧಿಕಾರಿಗಳು, ಮುಖಂಡರು ಆತಿಥಿಗಳಾಗಿ ಭಾಗವಹಿಸುವರು ಎಂದು ತಿಳಿಸಿದರು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜೆ ಶೇಂಗಾ	7950-7407
ಅಜವಾನ	10470-10470
ಅಲಸಂದಿ	4617-4551
ಕಡಲೆ	6225-5791
ಉದ್ದು	5014-4219
ಹೆಸರು	6733-4807
ಹುರಳಿ	4464-4395
ಜೋಳ	4733-3882
ಕುಸುಬಿ	5329-5246
ಸೂರ್ಯಕಾಂತಿ	7239-7074
ತೊಗರಿ	4112-3589
ಗೋಧಿ	4521-2626
ಬೆಲ್ಲ	3915-3915
ಗೋವಿನಜೋಳ	2050-2050
ವಟಾಣಿ	4639-4639



ಲಕ್ಷ್ಮೇಶ್ವರ: ಸರ್ಕಾರ ನಿಗದಿ ಪಡಿಸಿದ ದರಕ್ಕಿಂತ ಹೆಚ್ಚಿನ ದರಕ್ಕೆ ರೈತರಿಗೆ ರಸಗೊಬ್ಬರ ಮಾರಾಟ ಮಾಡುತ್ತಿದ್ದಾರೆ ಎಂದು ಆರೋಪಿಸಿ ಪಟ್ಟಣದ ಪಾದಗಟ್ಟಿ ಹತ್ತಿರ ಕರವೇಯಿಂದ ಬಜಾರ ರಸ್ತೆ ತಡೆದು ಪ್ರತಿಭಟನೆ ನಡೆಸಲಾಯಿತು.

ನೀರು ಬಿಟ್ಟರೆ ಮಾತ್ರ ಬಿಲ್ ಕಟ್ಟುವೆವು

ಲಕ್ಷ್ಮೇಶ್ವರ: ನೀರು ಬಿಟ್ಟರೆ ಅಷ್ಟೇ ನೀರಿನ ಬಿಲ್ ಕಟ್ಟೋದು. ಇಲ್ಲವಾದರೆ ಇಲ್ಲ ಎಂದು ಕರವೇ ನಾರಾಯಣಗೌಡ ಬಣದ ಜಿಲ್ಲಾ ಪ್ರಕಾರ್ಯದರ್ಶಿ ಬಸವರಾಜ ಹೊಗೆಸೊಪ್ಪಿನ ಹೇಳಿದರು.

ಅವರು ಕರವೇದಿಂದ ಪುರಸಭೆಗೆ ಮುತ್ತಿಗೆ ಹಾಕಿ ಪ್ರತಿಭಟನೆಯಲ್ಲಿ ಮಾತನಾಡಿ, ಕಳೆದ ಒಂದು 17ನೇ ವಾರ್ಡ್ ಸೇರಿದಂತೆ ಉಳಿದ ವಾರ್ಡ್‌ಗಳಲ್ಲಿ ತಿಂಗಳಿನಿಂದ ಪಟ್ಟಣಕ್ಕೆ ನೀರು ಬಂದಿಲ್ಲ ಅಧಿಕಾರಗಳನ್ನು ಈ ಬಗ್ಗೆ ಕೇಳಿದರೆ ಬೇಜವಾಬ್ದಾರಿ ಉತ್ತರ ನೀಡುತ್ತಾರೆ. ಸಮಸ್ಯೆ ಕೇಳಲು ಬಂದರೆ ಪುರಸಭೆಯಲ್ಲಿ ಅಧಿಕಾರಿಗಳು ಇಲ್ಲ, ನೀರು ಬಿಡಲು ಆಗೋದಿಲ್ಲ ಅಂದಾದರೆ ಜನರಿಂದ ಯಾಕೆ ನೀರಿನ ಬಿಲ್ ಕಟ್ಟಿಸಿಕೊಳ್ಳುತ್ತಿರಿ? ಕುಡಿಯುವ ನೀರು ಇಲ್ಲ ಬೋರವೆಲ್ ನೀರು ಇಲ್ಲ ಜನರು ಕಂಗಾಲು ಆಗೋವುದರೊಳಗೆ ಸಮಸ್ಯೆ ಬಗೆಹರಿಸಿ ಇಲ್ಲವಾದರೆ ಪುರಸಭೆ ಎದುರು ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆ ನಡೆಸಿದ ಕಾರ್ಯಕರ್ತರು ನಂತರ ಪುರಸಭೆ ಮುಖ್ಯಾಧಿಕಾರಿ ಪರಶುರಾಮ ಗುಡದಾರಿ ಆಗಮಿಸುತ್ತಿದಂತೆ ಅವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ನಂತರ ಮುಖ್ಯಾಧಿಕಾರಿ ಪರಶುರಾಮ ಗುಡದಾರಿ ಅವರು ಸಮಸ್ಯೆ ಇರುವ ವಾರ್ಡ್‌ಗಳಲ್ಲಿ ಟ್ಯಾಂಕರ್ ನೀರಿನಿಂದ ಸರಬರಾಜು ಮಾಡಲಾಗುವುದು. ಇನ್ನು ಎರಡು ದಿನದಲ್ಲಿ ಸಮಸ್ಯೆ ಬಗೆಹರಿಸುತ್ತಿವೆ ಎಂದ ಮೇಲೆ ಪ್ರತಿಭಟನಾಕಾರರು ಪ್ರತಿಭಟನೆಯಿಂದ ಹಿಂದೆ ಸರಿದರು.



ಲಕ್ಷ್ಮೇಶ್ವರ: ನೀರು ಸಮರ್ಪಕವಾಗಿ ಒದಗಿಸಲು ಆಗ್ರಹಿಸಿ ಕರವೇದಿಂದ ಪುರಸಭೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಯಿತು. ತಾಲೂಕು ಅಧ್ಯಕ್ಷ ಲೋಕೇಶ ಸುತಾರ, ಗೌರವಾಧ್ಯಕ್ಷ ಪ್ರವೀಣ ಗಾಣಗೇರ, ಬಸವರಾಜ ಮಲ್ಲೂರ, ಅರುಣ ಮೆಕ್ಕಿ, ಗಂಗಾಧರ ಕರ್ಜಕಣ್ಣವರ, ಗಂಗಾಧರ ಕೊಂಚಿಗೇರಿಮಠ, ಮಂಜುನಾಥ ಕೊಡಳ್ಳಿ, ಫಕೀರೇಶ ಅಣ್ಣಿಗೇರಿ, ಚನ್ನಬಸಯ್ಯ ಗಡ್ಡದೇವರಮಠ, ಶಂಕರಗೌಡ ಪಾಟೀಲ, ತಾಲೂಕು ಮಹಿಳಾ ಘಟಕ ಅಧ್ಯಕ್ಷೆ ಸಾವಿತ್ರಿ ಅತ್ತಿಗೇರಿ, ಹುಲಿಗೆಮ್ಮ ಮೇವುಂಡಿ, ಜಯಮ್ಮ ತುಪ್ಪದ, ಲಕ್ಷ್ಮಕ್ಕ ಪಶುಪತಿಹಾಳ, ರೇಷ್ಮಾ ಜಾದವ, ಸಾವಕ್ಕ ಮಳ್ಳೋಳ್ಳಿ, ಕೆಂಚಮ್ಮ ಶೇರಸೂರಿ, ರತ್ನವ್ವ ವಗ್ಗರ, ರಜೆಯಾ ಮಕಾನದಾರ, ರೇಣಕ್ಕ ಮಲ್ಲೂರ, ಲಕ್ಷ್ಮವ್ವ ಗದ್ದಿ, ಜಯಮ್ಮ ತುಪ್ಪದ ಇತರರಿದ್ದರು.

ಪರಿಹಾರ ವಿತರಣೆಯಲ್ಲಿ ವಿಳಂಬ ಸಲ್ಲ



ಶೋಕಾಸ ನೋಟಿಸ್

ಸಭೆಯಲ್ಲಿ ಅಂತರ್ಜಲ ಇಲಾಖೆಯ ಹಿರಿಯ ಭೂವಿಜ್ಞಾನಿಗಳು ಗೈರಾಗಿದ್ದಲ್ಲದೇ ಅಗತ್ಯ ಮಾಹಿತಿಯನ್ನು ಸಮರ್ಪಕವಾಗಿ ಒದಗಿಸದಿರುವುದನ್ನು ಜಿಲ್ಲಾಧಿಕಾರಿಗಳು ಗಂಭೀರವಾಗಿ ಪರಿಗಣಿಸಿದರು. ಈ ಹಿನ್ನೆಲೆಯಲ್ಲಿ ಅವರಿಗೆ ಶೋಕಾಸ್ ನೋಟಿಸ್ ಜಾರಿಗೊಳಿಸುವಂತೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಗದಗ: ಜಿಲ್ಲೆಯಲ್ಲಿ ಮುಂಗಾರು ಮಳೆ ಆರಂಭವಾಗಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರ ಸುರಕ್ಷತೆ, ಕುಡಿಯುವ ನೀರಿನ ಪೂರೈಕೆ, ಮಳೆ ಹಾನಿ ಪರಿಹಾರ, ಕೃಷಿ ಚಟುವಟಿಕೆಗಳಿಗೆ ಅಗತ್ಯ ಬೀಜ ಹಾಗೂ ಗೊಬ್ಬರಗಳ ಲಭ್ಯತೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಅಧಿಕಾರಿಗಳು ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಅಧಿಕಾರಿಗಳಿಗೆ ಸೂಚಿಸಿದರು.

ಅವರು ಜಿಲ್ಲಾಡಳಿತ ಭವನದ ಕೋರ್ಟ್ ಹಾಲ್‌ನಲ್ಲಿ ಬುಧವಾರ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿವಿಧ ಇಲಾಖೆಗಳ ಅಧಿಕಾರಿಗಳು ನೀಡಿದ ಮಾಹಿತಿಯ ಪ್ರಕಾರ, ಮೇ 18ರಂದು ಸುರಿದ ಭಾರೀ ಮಳೆ ಹಾಗೂ ಬಿರುಗಾಳಿಯಿಂದ ಗದಗ ಮತ್ತು ಲಕ್ಷ್ಮೇಶ್ವರ ತಾಲೂಕುಗಳಲ್ಲಿ ತಲಾ ಒಬ್ಬರಂತೆ ಒಟ್ಟು 2 ಜನರು ಮೃತಪಟ್ಟಿದ್ದು, ಮೃತರ ಕುಟುಂಬಗಳಿಗೆ ತಲಾ 5 ಲಕ್ಷದಂತೆ ಪರಿಹಾರ ವಿತರಿಸಲಾಗಿದೆ. ಮಳೆಯಿಂದ ಮೃತಪಟ್ಟ 31 ಸಣ್ಣ ಸಾಕು ಪ್ರಾಣಿಗಳ ಮಾಲೀಕರಿಗೆ ಒಟ್ಟು 1.52 ಲಕ್ಷ ರೂ. ಪರಿಹಾರ ನೀಡಲಾಗಿದೆ. ಪ್ರಸಕ್ತ ಸಾಲಿನ ಪೂರ್ವ ಮುಂಗಾರು ಮಳೆಯಿಂದ ಜಿಲ್ಲೆಯಲ್ಲಿ ಇದುವರೆಗೆ 14 ಮನೆಗಳು ಭಾಗಶಃ ಹಾನಿಗೀಡಾಗಿದ್ದು, ಸಂಬಂಧಿಸಿದ ಕುಟುಂಬಗಳಿಗೆ ಒಟ್ಟು 91 ಸಾವಿರ ರೂ. ಪರಿಹಾರ ವಿತರಿಸಲಾಗಿದೆ. ಅಲ್ಲದೇ 96 ಮನೆಗಳಿಗೆ ನೀರು ನುಗ್ಗಿ ಹಾನಿಯಾಗಿದ್ದು, ಆ ಕುಟುಂಬಗಳಿಗೆ ಒಟ್ಟು 4.80 ಲಕ್ಷ ರೂ. ಪರಿಹಾರ ನೀಡಲಾಗಿದೆ. ಮಳೆಯಿಂದ ಜಿಲ್ಲೆಯ ವಿವಿಧ ಭಾಗಗಳಲ್ಲಿ 907 ವಿದ್ಯುತ್ ಕಂಬಗಳು ಹಾಗೂ 10 ಶಾಲಾ ಕೊಠಡಿಗಳು ಹಾನಿಗೀಡಾಗಿವೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ ಮಾನದಂಡಗಳ ಪ್ರಕಾರ ಈ ಹಾನಿಯ ಅಂದಾಜು ಮೊತ್ತ 69.35 ಲಕ್ಷ ರೂ. ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಜಿಲ್ಲೆಯ 92 ರೈತರಿಗೆ ಸೇರಿದ 34.58 ಎಕರೆ ತೋಟಗಾರಿಕೆ ಪ್ರದೇಶ ಮಳೆಯಿಂದ ಹಾನಿಗೀಡಾಗಿದ್ದು, ಇದರ ಹಾನಿಯ ಮೌಲ್ಯವನ್ನು6.70 ಲಕ್ಷ ಎಂದು ಅಂದಾಜಿಸಲಾಗಿದೆ. ಮುಂಗಾರು ಹಂಗಾಮಿಗೆ ಜಿಲ್ಲೆಯಲ್ಲಿ ಯೂರಿಯಾ, ಡಿಎಪಿ ಸೇರಿದಂತೆ ಒಟ್ಟು 67,536 ಮೆಟ್ರಿಕ್ ಟನ್ ರಸಗೊಬ್ಬರಗಳ ಬೇಡಿಕೆಯಿದ್ದು, ಇದುವರೆಗೆ 18,963 ಮೆಟ್ರಿಕ್ ಟನ್ ರಸಗೊಬ್ಬರ ಮಾರಾಟವಾಗಿದೆ. ಪ್ರಸ್ತುತ 14,688 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಲಭ್ಯವಿದ್ದು, ರೈತರಿಗೆ ಅಗತ್ಯ ಪ್ರಮಾಣದಲ್ಲಿ ಗೊಬ್ಬರ ಪೂರೈಕೆಗೆ ಯಾವುದೇ ಸಮಸ್ಯೆ ಇಲ್ಲ ಎಂದು ಕೃಷಿ ಇಲಾಖೆ ಅಧಿಕಾರಿಗಳು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಡಾ. ಕೆ.ಆರ್. ದುರಗೇಶ್, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಸಿ.ಆರ್. ಮುಂಡರಗಿ, ಡಿವೈಎಸ್‌ಪಿ ಮುರ್ತುಜಾ ಖಾದ್ರಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೋಟೂರ, ಡಿಡಿಪಿಐ ಆರ್.ಎಸ್. ಬುರಡಿ, ಪಶು ಸಂಗೋಪನಾ ಇಲಾಖೆ ಉಪನಿರ್ದೇಶಕ ಡಾ. ಎಚ್.ಬಿ. ಹುಲಗಣ್ಣನವರ, ನಗರಸಭೆ ಪೌರಾಯುಕ್ತ ರಾಜಾರಾಮ್ ಪವಾರ, ಕಾರ್ಮಿಕ ಇಲಾಖೆ ಜಿಲ್ಲಾ ಅಧಿಕಾರಿ ಶ್ರೀಶೈಲ ಸೋಮನಕಟ್ಟಿ ಇದ್ದರು.

> ಮುಂಗಾರು ಹಂಗಾಮು ಆರಂಭವಾಗಿರುವುದರಿಂದ ರೈತರಿಗೆ ಅಗತ್ಯವಿರುವ ಬೀಜ ಹಾಗೂ ರಸಗೊಬ್ಬರಗಳು ಯಾವುದೇ ಕೊರತೆಯಾಗದಂತೆ ನೋಡಿಕೊಳ್ಳಬೇಕು. ಯೂರಿಯಾ ಸೇರಿದಂತೆ ಯಾವುದೇ ರಸಗೊಬ್ಬರ ವಿತರಣೆ ವೇಳೆ ರೈತರಿಗೆ ಅನಗತ್ಯವಾಗಿ ಇತರೆ ಗೊಬ್ಬರಗಳನ್ನು ಖರೀದಿಸುವಂತೆ ಒತ್ತಾಯ ಮಾಡಬಾರದು.
> ■ ಸಿ.ಎನ್. ಶ್ರೀಧರ್, ಜಿಲ್ಲಾಧಿಕಾರಿ

90 ದಿನಗಳವರೆಗೆ ನೀರು ಪೂರೈಕೆ ಸಾಧ್ಯ

ಜಿಲ್ಲೆಯ ಕುಡಿಯುವ ನೀರಿನ ಸ್ಥಿತಿಗತಿಯ ಕುರಿತು ಮಾಹಿತಿ ನೀಡಿದ ಅಧಿಕಾರಿಗಳು, ನವಿಲುತೀರ್ಥ ಜಲಾಶಯದಲ್ಲಿ ಪ್ರಸ್ತುತ 5.905 ಟಿಎಂಸಿ, ಭದ್ರಾ ಜಲಾಶಯದಲ್ಲಿ 16.497 ಟಿಎಂಸಿ ಹಾಗೂ ಹಮ್ಮಿಗಿ ಬ್ಯಾರೇಜ್‌ನಲ್ಲಿ 1.978 ಟಿಎಂಸಿ ನೀರು ಸಂಗ್ರಹವಿದೆ. ಲಭ್ಯವಿರುವ ನೀರಿನ ಸಂಗ್ರಹದಿಂದ ಮುಂದಿನ 90 ದಿನಗಳವರೆಗೆ ಜಿಲ್ಲೆಯ ಜನರಿಗೆ ಕುಡಿಯುವ ನೀರು ಪೂರೈಸಲು ಸಾಧ್ಯವಿದೆ ಎಂದು ಹೇಳಿದರು. ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಸಾಧ್ಯತೆ ಇರುವ 63 ಗ್ರಾಮಗಳನ್ನು ಜಿಲ್ಲಾಡಳಿತ ಗುರುತಿಸಿದ್ದು, ಅಲ್ಲಿ ವಿಶೇಷ ನಿಗಾವಹಿಸಿ ನೀರು ಪೂರೈಕೆ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು. ನಗರ ಪ್ರದೇಶಗಳಲ್ಲಿ ಗದಗ-ಬೆಟಗೇರಿ ನಗರಸಭೆಯ 35 ವಾರ್ಡುಗಳು ಸೇರಿದಂತೆ ಜಿಲ್ಲೆಯ ಒಟ್ಟು 69 ವಾರ್ಡುಗಳನ್ನು ಸಮಸ್ಯಾತ್ಮಕ ಪ್ರದೇಶಗಳೆಂದು ಗುರುತಿಸಲಾಗಿದೆ. ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ 204 ವಾರ್ಡುಗಳಲ್ಲಿ ಒಟ್ಟು 1,196 ಬೋರ್‌ವೆಲ್‌ಗಳಿದ್ದು, ಅವುಗಳಲ್ಲಿ 923 ಬೋರ್‌ವೆಲ್‌ಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯ 51 ಆರ್‌ಒ ಕುಡಿಯುವ ನೀರಿನ ಶುದ್ಧೀಕರಣ ಘಟಕಗಳ ಪೈಕಿ 35 ಘಟಕಗಳು ಕಾರ್ಯನಿರ್ವಹಿಸುತ್ತಿವೆ ಎಂದು ಸಭೆಗೆ ಮಾಹಿತಿ ನೀಡಲಾಯಿತು.

ಜೂ.12ಕ್ಕೆ ಬಾಲಕಾರ್ಮಿಕರ ವಿರೋಧಿ ದಿನ

ಗದಗ: ವಿಶ್ವ ಬಾಲಕಾರ್ಮಿಕರ ವಿರೋಧಿ ದಿನಾಚರಣೆಯ ಜೂ.12 ರಂದು ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಅರ್ಥಪೂರ್ಣವಾಗಿ ಹಾಗೂ ಅಚ್ಚುಕಟ್ಟಾಗಿ ಆಚರಿಸಲು ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ವಿಶ್ವ ಬಾಲಕಾರ್ಮಿಕರ ಪದ್ಧತಿ ವಿರೋಧಿ ದಿನಾಚರಣೆಯ ನಿಮಿತ್ತ ಜರುಗಿದ ಪೂರ್ವಭಾವಿ ಸಭೆ ಮತ್ತು ಜಿಲ್ಲಾ ಮಟ್ಟದ ಟಾಸ್ಕ್‌ಫೋರ್ಸ್ ಕಮಿಟಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಾವು ಕೆಲಸ ಮಾಡುವ ಸರ್ಕಾರಿ ಕಚೇರಿಗಳಲ್ಲಿ ವಿಶ್ವ ಬಾಲ ಕಾರ್ಮಿಕರ ಪದ್ಧತಿ ವಿರೋಧಿ ದಿನ ಕುರಿತು ಪ್ರಮಾಣ ವಚನ ಸ್ವೀಕಾರ ಮಾಡಬೇಕು. ಶಾಲಾ ಕಾಲೇಜುಗಳಲ್ಲಿ ಜಾತಾ ಕಾರ್ಯಕ್ರಮ ಏರ್ಪಡಿಸಬೇಕು. ಪ್ರಬಂಧ ಸ್ಪರ್ಧೆ, ಚಿತ್ರಕಲೆ, ಭಾಷಣ ಏರ್ಪಡಿಸಿ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತ 9 ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ಜರುಗುವುದು. ಜಿಲ್ಲೆಯಾದ್ಯಂತ ಜೂ. 13 ರಿಂದ ಜೂ. 30 ರವರೆಗೆ ಬಾಲ ಹಾಗೂ ಕಿಶೋರ ಕಾರ್ಮಿಕರ ರಕ್ಷಣಾ ಅಭಿಯಾನ ಕಾರ್ಯಕ್ರಮವನ್ನು ಆಯೋಜಿಸುವುದು, ಬಾಲ ಕಾರ್ಮಿಕರ ಪದ್ಧತಿ ವಿರೋಧಿ ದಿನಾಚರಣೆ ಕುರಿತು ಉಪನ್ಯಾಸ ಕಾರ್ಯಕ್ರಮವು ಜರುಗುವುದು ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ.ಆರ್., ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ, ಡಿ.ವೈ.ಎಸ್.ಪಿ ಮುರ್ತುಜಾ ಖಾದ್ರಿ, ಜಿಲ್ಲಾ ಕಾರ್ಮಿಕ ಅಧಿಕಾರಿ ಶ್ರೀಶೈಲ ಎಸ್.ಸೋಮನಕಟ್ಟಿ, ಶಾಲಾ ಶಿಕ್ಷಣಾ ಇಲಾಖೆಯ ಉಪನಿರ್ದೇಶಕ ಆರ್.ಎಸ್ ಬುರಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಮಣ್ಣೂರ, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಜಯಶ್ರೀ ತೊಟಗೇರ, ನಗರಾಭಿವೃದ್ಧಿ ಯೋಜನೆ ನಿರ್ದೇಶಕ ಬಸವರಾಜ ಕೊಟೂರು, ಬಾಲ ಕಾರ್ಮಿಕ ಇಲಾಖೆಯ ಯೋಜನೆ ನಿರ್ದೇಶಕ ಸಂದೇಶ ಪಾಟೀಲ್, ಗದಗ ಬೆಟಗೇರಿ ನಗರಸಭೆ ಪೌರಯುಕ್ತ ರಾಜಾರಾಮ್ ಪವಾರ, ಸ್ಪಂದನ ಸಂಸ್ಥೆಯ ಎನ್.ಜಿ.ಓ ಅಶ್ವಿನಿ ಹಿರೇಮಠ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

ಮರು ಮುದ್ರಣಕ್ಕೆ ಕ್ರಮ

ಗದಗ: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಹಿಂದೆ ಮುದ್ರಿತವಾಗಿ ಹಾಲಿ ಲಭ್ಯವಿಲ್ಲದಿರುವ ಕೆಲವು ಪ್ರಮುಖ ಕೃತಿಗಳನ್ನು ಮರು ಮುದ್ರಣ ಮಾಡಲು ಕ್ರಮಕ್ಕೈಗೊಳ್ಳಲಾಗಿದೆ.

ಮರು ಮುದ್ರಿಸಬೇಕಾದ ಕೃತಿಗಳ ಸಂಬಂಧ ಸಾರ್ವಜನಿಕರಿಂದಲೂ ಕೋರಿಕೆ ಮತ್ತು ಅಭಿಪ್ರಾಯ ಪಡೆಯಲು ಇಲಾಖೆಯ ವೆಬ್‌ಸೈಟ್: kannadasiri.karnataka.gov.in ನಲ್ಲಿ ಅವಕಾಶ ಕಲ್ಪಿಸಲಾಗಿದೆ. ಸಾರ್ವಜನಿಕರು ಪ್ರಮುಖ ಮುದ್ರಣ ಮತ್ತು ಕೃತಿಗಳಿಗೆ ಕೋರಿಕೆ ಮತ್ತು ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಸವರಾಜ ವಿ. ಬಳ್ಳಾರಿ ತಿಳಿಸಿದ್ದಾರೆ.

ಭೀಮಾಂಬಿಕಾ ದೇವಿಗೆ ದೀರ್ಘ ದಂಡ ನಮಸ್ಕಾರ

ಗಜೇಂದ್ರಗಡ: ರೋಣ ಶಾಸಕ ಜಿ.ಎಸ್.ಪಾಟೀಲರಿಗೆ ಎರಡನೇ ಅವಧಿಯಲ್ಲಿ ಸಚಿವ ಸ್ಥಾನ ನೀಡಬೇಕೆಂದು ತಾಲೂಕಿನ ಇಟಗಿ ಗ್ರಾಮದಲ್ಲಿನ ಕಾಂಗ್ರೆಸ್ ಮುಖಂಡರಾದ ಇಸ್ಮಾಯಿಲ್ ಹೋರಪೇಟಿ, ಮಲ್ಲಿಕಾರ್ಜುನ ಕೋಮಾರ, ಶೇಖಪ್ಪ ಕೊಡಗಾನೂರ, ಭೀಮಪ್ಪ ಸೀಮಿಕೇರಿ, ಭೀಮಾಬಿಕಾ ಕಂಬಳಿ ಅವರು ಧರ್ಮದೇವತೆ ಭೀಮಾಂಬಿಕಾ ದೇವಿಗೆ ದೀರ್ಘ ದಂಡ ನಮಸ್ಕಾರ ಹಾಕಿ ಹರಕೆಯ ಕಾಯಿ ಕಟ್ಟಿದ್ದಾರೆ.

ಕಾಂಗ್ರೆಸ್ ಮುಖಂಡ ಇಸ್ಮಾಯಿಲ್ ಹೋರಪೇಟಿ ಮಾತನಾಡಿ, ತಾಯಿ ಭೀಮಾಂಬಿಕಾ ದೇವಿಗೆ ರೋಣ ಶಾಸಕರು ಸಚಿವರಾಗಲಿ ಎಂದು ಗ್ರಾಮಸ್ಥರ ಜೊತೆಗೂಡಿ ದೀರ್ಘ ದಂಡ ನಮಸ್ಕಾರ ಹಾಕಿ ತಾಯಿಗೆ ಹರಕೆಯ ಕಾಯಿಯನ್ನು ಕಟ್ಟಿದ್ದೇವೆ. ನಮ್ಮ ಶಾಸಕರು ಹಿರಿಯ ನಾಯಕರಾಗಿದ್ದಾರೆ. ಅವರು ಅಧಿಕಾರ ಇದ್ದರು,ಇಲ್ಲದಿದ್ದರೂ ಪಕ್ಷವನ್ನು ಸಂಘಟಿಸುವಲ್ಲಿ ತಾಲೂಕಿನ್ಯಾದಂತ ಸಂಚರಿಸಿ ಪಕ್ಷವನ್ನು ಬಲಪಡಿಸಿದ್ದಾರೆ. 40 ವರ್ಷದ ರಾಜಕೀಯ ರಂಗದಲ್ಲಿ ಅಜಾತ ಶತ್ರುವಿನನಂತೆ ರಾಜಕಾರಣ ಮಾಡುತ್ತಾ ಬಂದಿದ್ದಾರೆ. ಕ್ಷೇತ್ರಕ್ಕೆ ಚುನಾವಣಾ ಪ್ರಚಾರ ವೇಳೆಯಲ್ಲಿ ಆಗಮಿಸಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಮಾತಿನಂತೆ ನಮ್ಮ ಶಾಸಕರು ಸಚಿವರಾಗಲು ಅರ್ಹರು ಎಂದಿದ್ದಾರೆ. ಅದರಂತೆ ನಿಕಟಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡಾ ಜಿ.ಎಸ್.ಪಾಟೀಲರು ಸಚಿವ ಸ್ಥಾನಕ್ಕೆ ಯೋಗ್ಯರು, ಮುಂಬರುವ ದಿನಗಳಲ್ಲಿ ಸಚಿವರಾಗಿಸುವ ಭರವಸೆ ನೀಡಿದ್ದನ್ನು ಹೈಕಮಾಂಡ್ ಮರೆಯಬಾರದು. ಮೊದಲನೇ ಅವಧಿಯಲ್ಲಿ ನೀಡಿಲ್ಲ, ಒಂದು ವೇಳೆ ಎರಡನೇ ಅವಧಿಯಲ್ಲೂ ಸಚಿವ ಸ್ಥಾನ ನೀಡದೆ ಇದ್ದರೆ ಮುಂದಿನ ದಿನಗಳಲ್ಲಿ ತಾಲೂಕಿನಾದ್ಯಂತ ಹೋರಾಟ ಮಾಡಬೇಕಾಗುತ್ತದೆ ಎಂದರು.

ಮಲ್ಲಿಕಾರ್ಜುನ ಕೋಮಾರ, ಪ್ರಭು ಮೇಟಿ ಮಾತನಾಡಿ, ಜಿ.ಎಸ್.ಪಾಟೀಲರಿಗೆ ಹೈಕಮಾಂಡ್ ಸಚಿವ ಸ್ಥಾನ ನೀಡದೆ ಕ್ಷೇತ್ರದ ಜನತೆಗೆ ಅನ್ಯಾಯ ಮಾಡಿದೆ. ಈಗಾಗಲೇ 4 ಬಾರಿ ಶಾಸಕರಾಗಿ, ಅನೇಕ ಅಭಿವೃದ್ಧಿ ನಿಗಮ ಮಂಡಳಿಗಳ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ಅವರ ಪಕ್ಷ ನಿಷ್ಠೆ, ಸೇವೆ ಹಾಗೂ ಹಿರಿತನ ಮನನ ಮಾಡಿ ಸಚಿವ ಸ್ಥಾನ ನೀಡಬೇಕಿದೆ ಎಂದರು. ಯಮನೂರಪ್ಪ ವಡಗೇರಿ, ಶರಣಪ್ಪ ಕೋಮಾರ, ಯಲ್ಲಪ್ಪ ಕಟ್ಟಿಮನಿ, ಪ್ರಭು ಜಾಲಾಪೂರ, ಶಾಂತವೀರಯ್ಯ ಹಿರೇಮಠ, ಮುತ್ತಪ್ಪ ಹೊಸಮನಿ, ಯಲ್ಲಪ್ಪ ಕಟ್ಟಿಮನಿ, ಉಮೇಶ ಜಾಲಾಪೂರ, ಕರಿಯಪ್ಪ ತೋಪಲಕಟ್ಟಿ, ಭೀಮಪ್ಪ ಕೋರಿ ಭೀಮಪ್ಪ ಚಳಗೇರಿ, ದುರಗಪ್ಪ ಮಾದರ ಸೇರಿದಂತೆ ಅನೇಕರು ಇದ್ದರು.



ಜೀವನ ದರ್ಶನ ತೋರುವ ಭಗವದ್ಗೀತೆ

ಗದಗ: ಡಿ.ವಿ. ಗುಂಡಪ್ಪನವರ ಮಂಕುತಿಮ್ಮನ ಕಗ್ಗ ಕನ್ನಡದ ಭಗವದ್ಗೀತೆಯಾಗಿದ್ದು ಜೀವನ, ಧರ್ಮ, ನೈತಿಕತೆ, ಮಾನವಸ್ವಭಾವದಕುರಿತು ತಿಳಿಸುವ ಮಹಾಗ್ರಂಥವಾಗಿದೆ. ಬದುಕಿನಲ್ಲಿ ಬರುವ ಕಷ್ಟ ಸುಖಗಳನ್ನು ಸಮಚಿತ್ತದಿಂದ ಸ್ವೀಕರಿಸಿ ಸ್ಥಿತಪ್ರಜ್ಞನಾಗಿ ಬದುಕನ್ನು ಮುನ್ನಡೆಸುವ ದಾರಿಗಳನ್ನು ಸೂಚಿಸುತ್ತವೆ ಎಂದು ಹೂವಿನ ಹಡಗಲಿಯ ಅಧ್ಯಾಪಕ ದ್ವಾರಕೀಶರೆಡ್ಡಿ ಹೇಳಿದರು.

ಕನ್ನಡ ತೋಂಟದ ಸಿದ್ಧಲಿಂಗೇಶ್ವರ ಸಾಹಿತ್ಯ ಭವನದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮಂಕು ತಿಮ್ಮನ ಕಗ್ಗದಲ್ಲಿರುವ ಜೀವನ ಮೌಲ್ಯಗಳು ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ಕನ್ನಡ ಕಾವ್ಯಗಳಲ್ಲಿ ಮಂಕುತಿಮ್ಮನ ಕಗ್ಗ ಮಹೋನ್ನತ ಕೃತಿಯಾಗಿ ಕನ್ನಡಿಗರ ಮನಸ್ಸನ್ನು ಗೆದ್ದಿದೆ. ಜೀವನದ ಯಾವುದೇ ಸಂದರ್ಭಕ್ಕೂ, ಸಮಸ್ಯೆಗಳಿಗೂ ಪರಿಹಾರವನ್ನು, ಸಾಂತ್ವನ ,ಸಮಾಧಾನವನ್ನು ನೀಡುವ ಶಕ್ತಿ ಈ ಕೃತಿಯಲ್ಲಿದೆ ಎಂದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಜಿಲ್ಲಾ ಸಂಯೋಜಕ ಡಾ. ನಿಂಗು ಸೊಲಗಿ ಮಾತನಾಡಿದರು. ರಾಹುಲ ಗಿಡ್ನಂದಿ ನಿರೂಪಿಸಿದರು. ದತ್ತಪ್ರಸನ್ನ ಪಾಟೀಲ ಸ್ವಾಗತಿಸಿದರು. ಡಿ.ಎಸ್.ಬಾಪುರಿ ವಂದಿಸಿದರು. ಶ್ರದ್ಧಾ ಸ್ವರ ಸಂಗೀತ ವೆಲ್ಫೇರ್ ಟ್ರಸ್ಟ್‌ನ ಶ್ರದ್ಧಾ ಉಜ್ವಲ ಕಬಾಡಿ ಇವರಿಂದ ಸುಗಮ ಸಂಗೀತ ಕಾರ್ಯಕ್ರಮ ಜರುಗಿತು. ಕೆ.ಎಚ್. ಬೇಲೂರ, ಅನ್ನದಾನಿ ಹಿರೇಮಠ, ಸತೀಶ ಚನ್ನಪ್ಪಗೌಡರ, ಅಂದಾನಪ್ಪ ವಿಭೂತಿ, ಬಿ.ಜಿ.ಗಿರಿತಮ್ಮಣ್ಣವರ, ರವಿ ದೇವರಡ್ಡಿ, ಶಾರದಾ ಬಾಣದ, ರಾಜೇಶ್ವರಿ ಬಡ್ನಿ, ಉಮಾ ಪಾಟೀಲ, ಜ್ಯೋತಿ ಕಬಾಡಿ, ಹೇಮಲತಾ ಬೇಗೂರ, ನಂದೀಶ ಕಲ್ಮಠ, ಸಲೀಂ ಬಳಬಟ್ಟಿ, ಸಿ.ಎಂ. ಮಾರನಬಸರಿ, ಗಿರಿಯಪ್ಪ ಮಡಿವಾಳರ, ಶಶಿಕಾಂತ ಕೊರ್ಲಹಳ್ಳಿ, ಸುಧಾ ಬಳ್ಳಿ, ಅಶೋಕ ಗಿರಡ್ಡಿ, ಪರಶುರಾಮ ಜಂಬಗಿ, ಸತೀಶ ಕುಲಕರ್ಣಿ, ಎಸ್.ಪಿ.ಹೊಂಬಳ, ಶೈಲಜಾ ಗಿಡ್ನಂದಿ, ರತ್ನಾ ಪುರಂತರ, ಜೆ.ಎ.ಪಾಟೀಲ, ವಿಜಯ ಕಿರೇಸೂರ ಇದ್ದರು.

ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

ಗದಗ: ಅಂಚೆ ಇಲಾಖೆ ವತಿಯಿಂದ ಜಿಲ್ಲೆಯಲ್ಲಿ ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಅಂಚೆ ಜೀವ ವಿಮೆ ಉತ್ಪನ್ನಗಳನ್ನು ಮಾರಾಟ ಮಾಡಲು ಅರ್ಹ ಅಭ್ಯರ್ಥಿಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಜೂ.16 ರಂದು ಬೆಳಗ್ಗೆ 10ಕ್ಕೆ ಎ.ಪಿ.ಎಂ.ಸಿ. ಯಾರ್ಡ್ ಚೇಂಬರ್ ಆಫ್ ಕಾಮರ್ಸ್ ಎದುರುಗಡೆ ಇರುವ ಅಧೀಕ್ಷಕರ ಕಾರ್ಯಾಲಯದಲ್ಲಿ ನೇರ ಸಂದರ್ಶನ ನಡೆಯುವುದು. ಅರ್ಹ ಅಭ್ಯರ್ಥಿಗಳು ತಮ್ಮ ಇತ್ತೀಚಿನ ಭಾವಚಿತ್ರ ಮತ್ತು ಶೈಕ್ಷಣಿಕ ಪ್ರಮಾಣ ಪತ್ರಗಳೊಂದಿಗೆ ಹಾಜರಾಗಬಹುದು. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಅಂಚೆ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಗದಗ ವಿಭಾಗದ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ದರಕ್ಕೆ ರಸಗೊಬ್ಬರ ಮಾರಾಟ: ಸುತಾರ

ಲಕ್ಷ್ಮೇಶ್ವರ: ತಾಲೂಕಿನ ಕೆಲ ಕೃಷಿ ಕೇಂದ್ರ, ಅಂಗಡಿಗಳಲ್ಲಿ ಸರ್ಕಾರ ನಿಗದಿ ಪಡಿಸಿದ ದರಕ್ಕಿಂತ ಹೆಚ್ಚಿನ ದರಕ್ಕೆ ರೈತರಿಗೆ ರಸಗೊಬ್ಬರ ಮಾರಾಟ ಮಾಡುತ್ತಿದ್ದಾರೆ. ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಕರವೇ ನಾರಾಯಣಗೌಡ ಜಿಲ್ಲಾ ಪ್ರಕಾರ್ಯದರ್ಶಿ ಬಸವರಾಜ ಹೊಗೆಸೊಪ್ಪಿನ ಹಾಗೂ ತಾಲೂಕು ಅಧ್ಯಕ್ಷ ಲೊಕೇಶ ಸುತಾರ ಆರೋಪಿಸಿದರು.

ಅವರು ಪಟ್ಟಣದ ಪಾದಗಟ್ಟಿ ಹತ್ತಿರ ಕರವೆಯಿಂದ ಬಜಾರ ರಸ್ತೆ ತಡೆದು ಪ್ರತಿಭಟನೆ ನಡೆಸಿ ಮಾತನಾಡಿ, ಗೊಬ್ಬರ ಅಂಗಡಿಗಳಲ್ಲಿ ಡಿ.ಎ.ಪಿ. ಗೊಬ್ಬರ ಇದ್ದರೂ ಇಲ್ಲಾ ಅಂತಾ ಹೇಳಿ ರೈತರಿಗೆ ವಿತರಣೆ ಮಾಡುತ್ತಿಲ್ಲ. ಗೊಬ್ಬರದ ಅಂಗಡಿಯ ಮಾಲೀಕರು ಡಿ.ಎ.ಪಿ. ಗೊಬ್ಬರ ಜೊತೆಗೆ ಬೇರೆ ಗೊಬ್ಬರಗಳ ಲಿಂಕನ್ನು ಕೊಡುತ್ತಿದ್ದಾರೆ ಹಾಗೂ ಸರ್ಕಾರ ನಿಗದಿ ಪಡಿಸಿದ ದರಕ್ಕಿಂತ ಹೆಚ್ಚಿನ ಬೇಲೆಗೆ ಮಾರಾಟ ಮಾಡುತ್ತಿದ್ದಾರೆ. ಕೆಲವೊಂದು ಅಂಗಡಿ ಮಾಲಿಕರು ಬೇರೆ ಬೇರೆ ಜಾಗದಲ್ಲಿ ಗೊಬ್ಬರಗಳನ್ನು ಇಟ್ಟಿರುತ್ತಾರೆ. ಆದ್ದರಿಂದ ಕೃಷಿ ಇಲಾಖೆ ಅನುಮತಿ ಪಡೆದ ಅಂಗಡಿಗಳು ಸರ್ಕಾರ ನಿಗದಿ ಪಡಿಸಿದ ದರಗಳ ಪಟ್ಟಿಯ ನಾಮಫಲಕವನ್ನು ಅಂಗಡಿಯ ಮುಂಭಾಗದಲ್ಲಿ ಹಾಕಬೇಕು ಹಾಗೂ ಕೆಲ ಅಂಗಡಿ ಮಾಲಕರು ನಕಲಿ ಬಿಲ್ಲುಗಳನ್ನು ಕೊಡುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ಅವರ ಮೇಲೆ ಸೂಕ್ತ ಕ್ರಮಗೊಂಡು ಅವರ ಲೈಸೆನ್ಸ್ ರದ್ದು ಪಡಿಸಬೇಕು. ಲೈಸೆನ್ಸ್ ಯಾವ ಅಂಗಡಿಗೆ ತೆಗೆದುಕೊಂಡಿರುತ್ತಾರೆ ಅದೇ ಅಂಗಡಿಯಲ್ಲಿ ಗೊಬ್ಬರ ಇಡಬೇಕು. 7 ದಿನಗಳ ಒಳಗಾಗಿ ಸಮಸ್ಯೆ ಬಗೆಹರಿಯದಿದ್ದರೆ ರಾಜ್ಯ ಹೆದ್ದಾರಿ ಬಂದ್ ಮಾಡಿ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದರು.

ಇದೆ ವೇಳೆ ಶಿರಹಟ್ಟಿ ಸಹಾಯಕ ನಿರ್ದೇಶಕ ಶಿವಕುಮಾರ ಕಾಶಪ್ಪನವರ ವಿರುದ್ಧ ಕಾರ್ಯಕರ್ತರು ಆಕ್ರೋಶವ್ಯಕ್ತಪಡಿಸಿ, ಇಷ್ಟು ದಿನ ರಸಗೊಬ್ಬರ ದರ ಹೆಚ್ಚಿಗೆ ಮಾರಾಟ ಮಾಡುತ್ತಿರುವುದು ಗೊತ್ತಿದ್ದರೂ ಇದರ ಬಗ್ಗೆ ಯಾಕೆ ಕ್ರಮ ಕೈಗೊಂಡಿಲ್ಲ? ಗೊಬ್ಬರ ಅಂಗಡಿಗಳಿಗೆ ಭೇಟಿ ಯಾಕೆ ಕೊಟ್ಟಿಲ್ಲ? ಎಂದು ಪ್ರಶ್ನಿಸಿದರು.

ಸ್ಥಳಕ್ಕೆ ಆಗಮಿಸಿದ ಗ್ರೇಡ್ 2 ತಹಶೀಲ್ದಾರ್ ಮಂಜುನಾಥ ಅಮಾಸಿ ಮನವಿ ಸ್ವೀಕರಿಸಿದರು. ತಾಲೂಕು ಗೌರವಾಧ್ಯಕ್ಷ ಪ್ರವೀಣ ಗಾಣಗೇರ, ಬಸವರಾಜ ಮಲ್ಲೂರ, ಅರುಣ ಮೆಕ್ಕಿ, ಗಂಗಾಧರ ಕರ್ಜಕಣ್ಣವರ, ಗಂಗಾಧರ ಕೊಂಚಿಗೇರಿಮಠ, ಮಂಜುನಾಥ ಕೊಡಳ್ಳಿ, ಫಕೀರೇಶ ಅಣ್ಣಿಗೇರಿ, ಚನ್ನಬಸಯ್ಯ ಗಡ್ಡದೇವರಮಠ, ಶಂಕರಗೌಡ ಪಾಟೀಲ, ತಾಲೂಕು ಮಹಿಳಾ ಘಟಕ ಅಧ್ಯಕ್ಷೆ ಸಾವಿತ್ರಿ ಅತ್ತಿಗೇರಿ, ಹುಲಿಗೆಮ್ಮ ಮೇವುಂಡಿ, ಜಯಮ್ಮ ತುಪ್ಪದ, ಲಕ್ಷ್ಮಕ್ಕ ಪಶುಪತಿಹಾಳ, ರೇಷ್ಮಾ ಜಾದವ, ಸಾವಕ್ಕ ಮಳ್ಳೋಳ್ಳಿ, ವೀರೇಶ ಸಾಸಲವಾಡ, ಶಂಕರಗೌಡ ಪಾಟೀಲ್ ಅನೇಕರು ಇದ್ದರು.

ವರುಣನ ಅಬ್ಬರಕ್ಕೆ ರಸ್ತೆಗಳ ಮೇಲೆ ಹರಿದ ಚರಂಡಿ ನೀರು



- ಕಸ ಹಾಗೂ ಪ್ಲಾಸ್ಟಿಕ್ ತ್ಯಾಜ್ಯದಿಂದ ಮುಚ್ಚಿಹೋಗಿದ್ದ ಚರಂಡಿಗಳು ಮಳೆಯ ನೀರನ್ನು ತಡೆದುಕೊಳ್ಳಲಾಗದೆ ಕಸದ ಕಲಿಲದೊಂದಿಗೆ ರಸ್ತೆಯ ಮೇಲೆ ಉಕ್ಕಿ ಹರಿದವು
- ದುರ್ವಾಸನೆ ಯುಕ್ತ ಮಲೀನ ನೀರು ರಸ್ತೆ ದಾಟಿ ಹತ್ತಿರದ ಅಂಗಡಿ ಮುಂಗಟ್ಟುಗಳು ಹಾಗೂ ತಗ್ಗು ಪ್ರದೇಶದ ಮನೆಗಳಿಗೆ ನುಗ್ಗಿದೆ
- ಮನೆಯೊಳಗಿನ ನೀರು ಹೊರಹಾಕಲು ಜನರ ಹರಸಾಹಸ



ಸೀತಲ ಓಲೇಕಾರ

ಗಜೇಂದ್ರಗಡ: ನಗರದಲ್ಲಿ ಸುರಿದ ಮುಂಗಾರು ಮಳೆಗೆ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಕೇವಲ ಎರಡು ಗಂಟೆಗಳು ಸುರಿದ ಧಾರಾಕಾರ ಮಳೆಗೆ ಪ್ರಮುಖ ರಸ್ತೆಗಳು ಸಂಪೂರ್ಣವಾಗಿ ಜಲಾವೃತಗೊಂಡಿದ್ದು, ವಾಹನ ಸವಾರರು ಮತ್ತು ಸಾರ್ವಜನಿಕರು ತೀವ್ರ ಸಂಕಷ್ಟ ಎದುರಿಸುವಂತಾಗಿದೆ.

ಮಳೆಯ ಆರ್ಭಟಕ್ಕೆ ನಗರದ ತಗ್ಗು ಪ್ರದೇಶಗಳು ಹಾಗೂ ಮುಖ್ಯ ರಸ್ತೆಗಳು ಜಲಾವೃತಗೊಂಡು ಕೆರೆಯಂತಾಗಿದ್ದವು. ರಸ್ತೆ ಮತ್ತು ಫುಟ್‌ಪಾತ್‌ಗಳ ನಡುವಿನ ವ್ಯತ್ಯಾಸವೇ ತಿಳಿಯದಂತೆ ನೀರು ನಿಲ್ಲುವಂತಾಯಿತು. ಹವಾಮಾನ ಇಲಾಖೆಯು ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಮಳೆಯಾಗುವ ಮುನ್ಸೂಚನೆ ನೀಡಿದ್ದು, ಸಂಬಂಧಪಟ್ಟ ಅಧಿಕಾರಿಗಳು ಇನ್ನಾದರೂ ಎಚ್ಚೆತ್ತುಕೊಂಡು ರಾಜಕಾಲುವೆ ಹಾಗೂ ಚರಂಡಿಗಳ ದುರಸ್ತಿಗೆ ಮುಂದಾಗಬೇಕಿದೆ.

ಸಂಪೂರ್ಣ ವೈಫಲ್ಯ

ಇದು ಕೇವಲ ಪ್ರಾಕೃತಿಕ ವಿಕೋಪವಲ್ಲ, ಬದಲಿಗೆ ಗಜೇಂದ್ರಗಡ ಪುರಸಭೆಯ ಸಂಪೂರ್ಣ ವೈಫಲ್ಯ. ಪ್ರತಿ ವರ್ಷ ಚರಂಡಿ ಸ್ವಚ್ಛತೆ ಮತ್ತು ಹೂಳು ಎತ್ತುವ ಹೆಸರಿನಲ್ಲಿ ಲಕ್ಷಾಂತರ ರೂಪಾಯಿ ವೆಚ್ಚ ಮಾಡಲಾಗುತ್ತಿದೆ ಎಂದು ಕಾಗದದ ಮೇಲೆ ತೋರಿಸಲಾಗುತ್ತಿದೆ. ಆದರೆ ವಾಸ್ತವದಲ್ಲಿ ಕೇವಲ ಒಂದು ಸಾಧಾರಣ ಮಳೆ ಬಂದರೂ ಇಡೀ ಗಜೇಂದ್ರಗಡ ಪಟ್ಟಣ ಮುಳುಗಡೆಯಾಗುತ್ತದೆ. ಕಳಪೆ ಕಾಮಗಾರಿಗಳೇ ಇದಕ್ಕೆ ನೇರ ಕಾರಣ ಎಂದು ಕರ್ನಾಟಕ ಅಭಿವೃದ್ಧಿ ವೇದಿಕೆಯ ರಾಜ್ಯಾಧ್ಯಕ್ಷ ವಿನಾಯಕ ಜರತಾರಿ ಆರೋಪಿಸಿದರು.

ಚರಂಡಿಗಳಲ್ಲಿ ಕಸ ಹಾಕದಿರಿ

ಪಟ್ಟಣದಲ್ಲಿ ಅತೀ ಕಡಿಮೆ ಅವಧಿಯಲ್ಲಿ ಭಾರೀ ಪ್ರಮಾಣದ ಮಳೆಯಾಗಿದೆ. ಮಳೆಯ ನೀರು ಸರಾಗವಾಗಿ ಹರಿದು ಹೋಗಲು ಇದ್ದ ಪ್ರಮುಖ ಚರಂಡಿಗಳಲ್ಲಿ ಕೆಲವು ಕಡೆ ಪ್ಲಾಸ್ಟಿಕ್ ಹಾಗೂ ಘನತ್ಯಾಜ್ಯ ಸಿಲುಕಿಕೊಂಡಿದ್ದರಿಂದ ನೀರು ರಸ್ತೆಯ ಮೇಲೆ ಉಕ್ಕಿ ಹರಿದಿದೆ. ಸಾರ್ವಜನಿಕರ ದೂರು ಬಂದ ತಕ್ಷಣವೇ ಪುರಸಭೆಯ ಸ್ವಚ್ಛತಾ ಸಿಬ್ಬಂದಿ ಬ್ಲಾಕ್ ಆಗಿದ್ದ ಚರಂಡಿಗಳನ್ನು ತೆರವಿಗೆ ಕ್ರಮಕೈಗೊಳ್ಳಲಾಗಿದೆ. ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗದಂತೆ ತಡೆಯಲು ಮುಂಜಾಗ್ರತಾ ಕ್ರಮವನ್ನು ಕೈಗೊಳ್ಳಲಾಗುವುದು. ಸಾರ್ವಜನಿಕರು ಚರಂಡಿಗಳ ಮೇಲೆ ಕಟ್ಟಿಗೆ ಇಡುವುದು, ಕಸ ಮತ್ತು ಪ್ಲಾಸ್ಟಿಕ್ ಹಾಕಬಾರದು ಎಂದು ಪುರಸಭೆ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ ಸೂಚಿಸಿದ್ದಾರೆ.

ಕೃತಕ ಅಭಾವ ಸೃಷ್ಟಿಸಿದರೆ ಕಠಿಣ ಕ್ರಮ: ಡಿಸಿ

ಗದಗ: ಜಿಲ್ಲೆಯಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಪೂರೈಕೆಯಲ್ಲಾಗುವ ವ್ಯತ್ಯಯವನ್ನು ಸಂಬಂಧಿಸಿದವರು ಸಮರ್ಪಕವಾಗಿ ನಿರ್ವಹಿಸಬೇಕು. ಸಾರ್ವಜನಿಕರು ವದಂತಿಗಳಿಗೆ ಕಿವಿಗೊಟ್ಟು ಆತಂಕದಿಂದ ಇಂಧನ ಸಂಗ್ರಹಿಸುವ ಅಗತ್ಯವಿಲ್ಲ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಹೇಳಿದರು.



ಜಿಲ್ಲಾಡಳಿತ ಭವನದ ಕೋರ್ಟ್ ಹಾಲ್‌ನಲ್ಲಿ ಬುಧವಾರ ಜರುಗಿದ ಪೆಟ್ರೋಲ್ ಬಂಕ್ ಮಾಲೀಕರು, ತೈಲ ಕಂಪನಿಗಳ ಪ್ರತಿನಿಧಿಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಇತ್ತೀಚೆಗೆ ಇಂಧನ ಕೊರತೆ ಕುರಿತು ಸಾರ್ವಜನಿಕರಲ್ಲಿ ಗೊಂದಲ ಉಂಟಾಗಿರುವುದು ಹಾಗೂ ಕೆಲವು ಬಂಕ್‌ಗಳಲ್ಲಿ ಜನದಟ್ಟಣೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಭೆ ಕರೆಯಲಾಗಿತ್ತು. ತೈಲ ಕಂಪನಿಗಳು ಸಮಯಕ್ಕೆ ಸರಿಯಾಗಿ ಇಂಧನ ಪೂರೈಸುವಂತೆ ಕ್ರಮವಹಿಸಬೇಕು. ಪೆಟ್ರೋಲ್ ಬಂಕ್‌ಗಳಲ್ಲಿ ಸಾಕಷ್ಟು ದಾಸ್ತಾನು ಇದ್ದರೂ ಸಾರ್ವಜನಿಕರಿಗೆ ಇಂಧನ ನೀಡದೆ ಬಂಕ್ ಮುಚ್ಚುವುದು ಅಥವಾ ಇಂಧನ ಲಭ್ಯವಿಲ್ಲ ಎಂಬ ಫಲಕ ಹಾಕಿ ಕೃತಕ ಅಭಾವ ಸೃಷ್ಟಿಸುವುದನ್ನು ಯಾವುದೇ ಕಾರಣಕ್ಕೂ ಸಹಿಸಲಾಗುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಿದರು.

ಇಲಾಖೆಯ ಆಟೋಮೇಷನ್ ವ್ಯವಸ್ಥೆಯ ಮೂಲಕ ಬಂಕ್‌ಗಳ ದಾಸ್ತಾನು ಸ್ಥಿತಿಯನ್ನು ಆನ್‌ಲೈನ್‌ನಲ್ಲೇ ಪರಿಶೀಲಿಸಲು ಅವಕಾಶವಿದ್ದು, ನಿಯಮ ಉಲ್ಲಂಘಿಸುವ ಡೀಲರ್‌ಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು.

ಸಭೆಯಲ್ಲಿ ಭಾಗವಹಿಸಿದ್ದ ಪೆಟ್ರೋಲ್ ಬಂಕ್ ಮಾಲೀಕರು ಮತ್ತು ಪ್ರತಿನಿಧಿಗಳು ತಮ್ಮ ಸಮಸ್ಯೆಗಳು ಹಾಗೂ ಬೇಡಿಕೆಗಳನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರು. ವಿಶೇಷವಾಗಿ ಹುಬ್ಬಳ್ಳಿಯಿಂದ ಇಂಧನ ಟ್ಯಾಂಕರ್‌ಗಳು ಬರುವಾಗ ಸಂಚಾರ ದಟ್ಟಣೆಯಿಂದ ಉಂಟಾಗುವ ತೊಂದರೆಗಳನ್ನು ನಿವಾರಿಸಲು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

> ಕ್ಯಾನ್ ಹಾಗೂ ಬ್ಯಾರೆಲ್‌ಗಳಲ್ಲಿ ಇಂಧನ ಮಾರಾಟ ಮಾಡುವುದನ್ನು ನಿರ್ಬಂಧಿಸಲಾಗಿದೆ. ಆಸ್ಪತ್ರೆಗಳು, ಎಟಿಎಂ ಕೇಂದ್ರಗಳು, ಮೊಬೈಲ್ ಟವರ್‌ಗಳು ಹಾಗೂ ಇತರೆ ಅಗತ್ಯ ಸೇವೆಗಳ ಜನರೇಟರ್‌ಗಳಿಗೆ ಡೀಸೆಲ್ ಅನಿವಾರ್ಯವಾಗಿದ್ದಲ್ಲಿ ಮಾತ್ರ ಸಂಬಂಧಪಟ್ಟವರು ಸ್ಥಳೀಯ ತಹಶೀಲ್ದಾರ್ ಅಥವಾ ಜಿಲ್ಲಾಡಳಿತದಿಂದ ಅನುಮತಿ ಪತ್ರ ಪಡೆದುಕೊಳ್ಳಬೇಕು. ಆಹಾರ ಇಲಾಖೆ ಅಥವಾ ಕಂದಾಯ ಇಲಾಖೆಯ ಅನುಮೋದನೆ ಪಡೆದವರಿಗೆ ಮಾತ್ರ ಕ್ಯಾನ್ ಅಥವಾ ಬ್ಯಾರೆಲ್ ಮೂಲಕ ಇಂಧನ ವಿತರಿಸಿ.
> ■ ಸಿ.ಎನ್. ಶ್ರೀಧರ, ಜಿಲ್ಲಾಧಿಕಾರಿ

ಪ್ರಮುಖ ರಸ್ತೆಗಳು ಜಲಾವೃತ | ಜನಜೀವನ ಅಸ್ತವ್ಯಸ್ತ

ಧಾರವಾಡದಲ್ಲಿ ವರುಣನ ಆರ್ಭಟ

ಧಾರವಾಡ: ಜಿಲ್ಲೆಯಲ್ಲಿ ಗುಡುಗು, ಮಿಂಚು ಸಹಿತ ಸುರಿದ ಧಾರಾಕಾರ ಸುರಿದ ಮಳೆಗೆ ಜಿಲ್ಲೆ ತತ್ತರಿಸಿದೆ. ಎರಡು ಗಂಟೆಗೂ ಹೆಚ್ಚು ಕಾಲ ಎಡೆಬಿಡದೆ ಸುರಿದ ಭಾರೀ ಮಳೆಗೆ ನಗರದ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದ್ದು, ಸಾರ್ವಜನಿಕರು ತೊಂದರೆಗೆ ಸಿಲುಕಿದರು.

ಮಳೆಯಿಂದ ನಗರದ ಪ್ರಮುಖ ರಸ್ತೆಗಳು ಜಲಾವೃತಗೊಂಡಿದ್ದವು. ಸಮರ್ಪಕ ಹೂಳೆತ್ತದ ಹಿನ್ನಲೆ ಬಹುತೇಕ ಚರಂಡಿಗಳು ಕಸ-ಕಡ್ಡಿಗಳಿಂದ ಬ್ಲಾಕ್ ಆಗಿ, ಚರಂಡಿಗಳು ತುಂಬಿ ಮಳೆಯ ನೀರು ರಸ್ತೆಗಳ ಮೇಲೆಯೇ ನದಿಯಂತೆ ಹರಿಯಿತು.

ಎನ್‌ಟಿಟಿಎಫ್, ಟೋಲ್ ನಾಕಾ, ಜುಬ್ಲಿ ವೃತ್ತ ಮತ್ತು ವಿದ್ಯಾಗಿರಿ ಭಾಗದಲ್ಲಿ ರಸ್ತೆಗಳ ಮೇಲೆ ಮೊಣಕಾಲುದ್ದ ನೀರು ನಿಂತಿದ್ದರಿಂದ ವಾಹನ ಸವಾರರು ಪರದಾಡಿದರು. ದ್ವಿಚಕ್ರ ವಾಹನ ನೀರಿನಲ್ಲೇ ಆಫ್ ಆಗಿ ಸವಾರರು ತಳ್ಳಿಕೊಂಡು ಹೋಗುವ ದೃಶ್ಯಗಳು ಕಂಡುಬಂದವು.

ವಿದ್ಯುತ್ ಕಣ್ಣಾಮುಚ್ಚಾಲೆ: ಮಳೆ ಆರಂಭವಾಗುತ್ತಿದ್ದಂತೆ ನಗರದಾದ್ಯಂತ ಹೆಸ್ಕಾಂನ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿತು. ಬಿರುಗಾಳಿಗೆ ಕೆಲವು ಕಡೆ ಮರದ ಕೊಂಬೆಗಳು ವಿದ್ಯುತ್ ತಂತಿಗಳ ಮೇಲೆ ಬಿದ್ದಿದ್ದರಿಂದ ತಾಂತ್ರಿಕ ದೋಷ ಉಂಟಾಗಿ ಗಂಟೆಗಟ್ಟಲೆ ಪವರ್ ಕಟ್ ಆಗಿತ್ತು.

ರೈತರಲ್ಲಿ ಹರ್ಷ: ಒಂದೆಡೆ ಈ ಮಳೆಯು ಮುಂಗಾರು ಹಂಗಾಮಿನ ಬಿತ್ತನೆಗೆ ಸಜ್ಜಾಗುತ್ತಿರುವ ಜಿಲ್ಲೆಯ ಗ್ರಾಮೀಣ ಭಾಗದ ರೈತರಲ್ಲಿ ಸಂತಸ ತಂದಿದ್ದರೆ, ಮತ್ತೊಂದೆಡೆ ಮಹಾನಗರ ಪಾಲಿಕೆಯ ಪ್ರಿ-ಮಾನ್ಸೂನ್ ಕಾಮಗಾರಿಗಳ ವೈಫಲ್ಯಕ್ಕೆ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೊದಲ ಮಳೆಗೇ ಧಾರವಾಡದ ಪರಿಸ್ಥಿತಿ ಹೀಗಾದರೆ, ಇನ್ನುಂದಿನ ದಿನಗಳು ಹೇಗೆ? ಎಂದು ಜನ ಪಾಲಿಕೆಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಹವಾಮಾನ ಇಲಾಖೆಯ ವರದಿಯಂತೆ ಜಿಲ್ಲೆಯಲ್ಲಿ ಮಳೆಯಾಗುವ ಸಾಧ್ಯತೆ ಇದ್ದು, ಜನರು ಎಚ್ಚರಿಕೆಯಿಂದ ಇರಲು ಸೂಚಿಸಿದೆ.



ರೈತರ ಮೊಗದಲ್ಲಿ ಹರ್ಷ ಮೂಡಿಸಿದ ರೋಹಿಣಿ

ಲಕ್ಷ್ಮೇಶ್ವರ: ಕಳೆದ ಹಲವು ದಿನಗಳಿಂದ ಕಣ್ಣಾಮುಚ್ಚಾಲೆ ಆಡುತ್ತಾ ರೈತರಲ್ಲಿ ಆತಂಕ ಮೂಡಿಸಿದ್ದ ರೋಹಿಣಿ ಮಳೆಯು ತಾಲೂಕಿನಾದ್ಯಂತ ಉತ್ತಮವಾಗಿ ಸುರಿಯುವ ಮೂಲಕ ರೈತರು ಮೊಗದಲ್ಲಿ ಮಂದಹಾಸ ಮೂಡಿಸಿದೆ.

ಮುಂಗಾರು ಹಂಗಾಮಿನಲ್ಲಿ ಬಿತ್ತನೆಗೆ ರೈತರು ತಮ್ಮ ಹೊಲಗಳನ್ನು ಹಸನು ಮಾಡಿ ಮಳೆಗಾಗಿ ಕಾಯುತ್ತಿದ್ದರು. ಕಳೆದ ಹಲವು ದಿನಗಳಿಂದ ಮಳೆಯು ಸಮರ್ಪಕವಾಗಿ ಬಾರದೆ ಇರುವುದರಿಂದ ರೈತರು ಬಿತ್ತನೆಗೆ ಹಿಂದೇಟು ಹಾಕುವಂತಾಗಿತ್ತು. ಆದರೆ, ಕಳೆದ ಎರಡು-ಮೂರು ದಿನಗಳಲ್ಲಿ ಅಲ್ಲಲ್ಲಿ ಅಲ್ಪ ಪ್ರಮಾಣದಲ್ಲಿ ಸುರಿದ ಮಳೆಯು ರೈತರಿಗೆ ಬಿತ್ತನೆ ಮಾಡುವುದೋ ಅಥವಾ ಬಿಡುವುದೋ ಎನ್ನುವ ಗೊಂದಲದಲ್ಲಿ ಇದ್ದರು. ಆದರೆ, ಬುಧವಾರ ಮಧ್ಯಾಹ್ನ ಆರಂಭವಾದ ಮಳೆಯು ತಾಲೂಕಿನ ರೈತರ ಮೊಗದಲ್ಲಿ ಮಂದಹಾಸ ಮೂಡುವಂತೆ ಮಾಡಿದೆ.

ತಾಲೂಕಿನ ಹಲವು ಭಾಗಗಳಲ್ಲಿ ರೈತರು ಈಗಾಗಲೇ ಹೆಸರು, ಗೆಜ್ಜೆ ಶೇಂಗಾ, ಬಿಟಿ ಹತ್ತಿ, ಗೋವಿನ ಜೋಳವನ್ನು ಬಿತ್ತನೆ ಮಾಡಿ



ಮಳೆಗಾಗಿ ಮುಗಿಲು ನೋಡುವಂತಾಗಿತ್ತು. ರೋಹಿಣಿಯ ಆಗಮನದಿಂದ ಈಗಾಗಲೇ ಬಿತ್ತನೆ ಮಾಡಿರುವ ರೈತರ ಹರ್ಷಕ್ಕೆ ಕಾರಣವಾಗಿದೆ.

ತಾಲೂಕಿನ ಲಕ್ಷ್ಮೇಶ್ವರ, ಗೊಜನೂರ, ಶಿಗ್ಲಿ, ಅಕ್ಕಿಗುಂದ, ಬಟ್ಟೂರ, ಯಳವತ್ತಿ, ಮಾಡಳ್ಳಿ, ಗೋವನಾಳ, ರಾಮಗೇರಿ, ಸೂರಣಗಿ, ಪು.ಬಡ್ನಿ, ಆದರಳ್ಳಿ ಗ್ರಾಮಗಳಲ್ಲಿ ಉತ್ತಮ ಮಳೆಯಾಗಿದ್ದು, ರೈತರ ಕೃಷಿ ಚಟುವಟಿಕೆಗಳಿಗೆ ಈ ಮಳೆ ಇಂಬು ನೀಡಿದೆ ಎಂದು ರೈತ ಚನ್ನಪ್ಪ ಷಣ್ಮುಖಿ ಹರ್ಷ ವ್ಯಕ್ತಪಡಿಸಿದರು.

ಧರೆಗುರುಳಿದ ಮರಗಳು

ಬಳ್ಳಾರಿ: ಕಳೆದ ಸುಮಾರು ದಿನಗಳಿಂದ ಬೇಸಿಗೆ ಬಿಸಿಲಿನ ಪ್ರತಾಪಕ್ಕೆ ಹೈರಾಣರಾಗಿದ್ದ ಗಣಿನಾಡು ಬಳ್ಳಾರಿಯ ಜನರಿಗೆ ಬುಧವಾರ ಸಂಜೆ ಸುರಿದ ಮಳೆಗೆ ನಿಟ್ಟುಸಿರು ಬಿಟ್ಟರು.

ನಗರ ಸೇರಿದಂತೆ ಜಿಲ್ಲೆಯಾದ್ಯಂತ ಕಳೆದ ಎರಡು ದಿನಗಳಿಂದ ಬಿರುಗಾಳಿ, ಗುಡುಗು, ಸಿಡಿಲು ಮಿಶ್ರಿತ ಮಳೆ ಸುರಿದಿದೆ. ಬೆಳಗ್ಗೆಯಿಂದ ಎಂದಿನಂತೆ ಬಿಸಿಲಿನ ಪ್ರತಾಪ ಮುಂದುವರಿದಿತ್ತು. ದಿಢೀರ್ ಸಂಜೆ ವಾತಾವರಣ ಬದಲಾಗಿ ಬಿರುಗಾಳಿ ಸಹಿತ ಮಳೆ ಸುರಿಯಿತು.

ನಗರ ಸೇರಿದಂತೆ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಸುರಿದ ಮಳೆಗೆ ರಸ್ತೆ ಬಳಿ ಮರಗಳು ಧರೆಗೆ ಉರುಳಿದ ಹಿನ್ನೆಲೆ ವಾಹನ ಸವಾರರು ಪರದಾಡಿದರು. ವಿದ್ಯುತ್ ಕಂಬಗಳು, ವೈರ್‌ಗಳು ತುಂಡರಿಸಿದ್ದು, ರಾತ್ರಿಯಿಡೀ ವಿದ್ಯುತ್ ಸಮಸ್ಯೆಯನ್ನು ಜನರು ಎದುರಿಸಿದರು.

ನಗರದ ನಾನಾ ಪ್ರಮುಖ ರಸ್ತೆಗಳು, ಕೆಳ ಸೇತುವೆ, ಮೇಲ್ಸೇತುವೆ ಮೇಲೆ ಮರಗಳು ಉರುಳಿ ಬಿದ್ದ ಹಿನ್ನೆಲೆ ದ್ವಿಚಕ್ರ ವಾಹನ ಸವಾರರು, ಸಾರ್ವಜನಿಕರು ಪರದಾಡಿದರು. ಸುಮಾರು 2 ಗಂಟೆಗೂ ಹೆಚ್ಚು ಕಾಲ ಸುರಿದ ಮಳೆಗೆ ನಗರದ ಪ್ರಮುಖ ರಸ್ತೆಗಳು, ತಗ್ಗು ಪ್ರದೇಶಗಳು ಜಲಾವೃತಗೊಂಡವು. ರಾಯಲ್ ಕಾಲೋನಿ, ಬಸವೇಶ್ವರ ನಗರ, ಎಸ್ಪಿ ವೃತ್ತದ ಪ್ರದೇಶದ ನಾನಾ ಕಡೆ, ಜಿಲ್ಲಾಡಳಿತ ಭವನದ ಬಳಿ ಗಿಡಮರಗಳು ಉರುಳಿದ್ದು, ಆಟೋ, ಕಾರು, ದ್ವಿಚಕ್ರ ವಾಹನಗಳು ಜಖಂಗೊಂಡ ದೃಶ್ಯ ಸಾಮಾನ್ಯವಾಗಿತ್ತು.

ನಿತ್ಯ ಜನಜಂಗುಳಿಯಿಂದ ಕೂಡಿರುವ ಬೆಂಗಳೂರು ರಸ್ತೆ ಜಲಾವೃತಗೊಂಡ ಹಿನ್ನೆಲೆ ಬೀದಿ ಬದಿ ವ್ಯಾಪಾರಿಗಳಿಗೆ, ಹಣ್ಣು, ಹೂವು ವ್ಯಾಪಾರಸ್ಥರು ತಮ್ಮ ಸರಕುಗಳನ್ನು ರಕ್ಷಿಸಿಕೊಳ್ಳಲು ಪರದಾಡಿದರು.

ಬುಧವಾರ ಸಂಜೆ ಸುರಿದ ಮಳೆ ಹಿನ್ನೆಲೆ ಮುಂಜಾಗ್ರತ ಕ್ರಮವಾಗಿ ನಗರದಾದ್ಯಂತ ವಿದ್ಯುತ್ ಕಡಿತಗೊಳಿಸಲಾಗಿತ್ತು. ನಗರ ಸೇರಿದಂತೆ ಗ್ರಾಮೀಣ ಭಾಗದಲ್ಲಿ ರಸ್ತೆ ಬದಿಯ ವಿದ್ಯುತ್ ಕಂಬಗಳು ಬಾಗಿವೆ.



ಹುಬ್ಬಳ್ಳಿಯಲ್ಲಿ ಧಾರಾಕಾರ ಮಳೆ

ಹುಬ್ಬಳ್ಳಿ: ನಗರ ಸೇರಿದಂತೆ ತಾಲೂಕಿನ ವಿವಿಧೆಡೆ ಬುಧವಾರ ಧಾರಾಕಾರ ಮಳೆ ಸುರಿಯಿತು. ಬಿತ್ತನೆ ಮಾಡಲು ಸಿದ್ಧತೆ ನಡೆಸಿದ್ದ ರೈತರ ಮುಖದಲ್ಲಿ ಸಂತಸ ಮೂಡಿತು. ಅರ್ಧ ಗಂಟೆಗೂ ಹೆಚ್ಚು ಸಮಯ ಮಳೆ ಸುರಿದಿದ್ದರಿಂದ ಮಾರುಕಟ್ಟೆ ಪ್ರದೇಶದಲ್ಲಿ ಸಾರ್ವಜನಿಕರು, ವ್ಯಾಪಾರಿಗಳು ಪರದಾಡಬೇಕಾಯಿತು. ಮಳೆಯಿಂದಾಗಿ ಪ್ರಮುಖ ರಸ್ತೆಗಳಲ್ಲಿ ನೀರು ಸಂಗ್ರಹವಾಗಿದ್ದರಿಂದ ವಾಹನ ಸವಾರರು ಹರಸಾಹಸ ಪಟ್ಟರು. ನಗರದ ಸ್ಟೇಷನ್ ರಸ್ತೆ ಅಂಬೇಡ್ಕರ್ ವೃತ್ತದ ಬಿಆರ್‌ಟಿಎಸ್ ಬಸ್ ನಿಲ್ದಾಣ, ಲ್ಯಾಮಿಂಗ್ಟನ್ ರಸ್ತೆ, ಉಣಕಲ್‌ನ ಪ್ರೆಸಿಡೆಂಟ್ ಹೋಟೆಲ್ ಎದುರಿನ ರಸ್ತೆ, ಉಣಕಲ್ ವೃತ್ತ, ಕೇಶ್ವಾಪುರ, ಶಿರೂರ ಪಾರ್ಕ್, ಗಣೇಶನಗರ ಸೇರಿದಂತೆ ಹಲವು ಪ್ರದೇಶಗಳಲ್ಲಿ ನೀರು ಸಂಗ್ರಹವಾಗಿತ್ತು. ರಸ್ತೆ ಹಾಗೂ ಚರಂಡಿಗಳು ಜಲಾವೃತವಾದವು. ಮುಂಗಾರು ಬಿತ್ತನೆ ತಾಲೂಕಿನಾದ್ಯಾಂತ ರೈತರು ಸಿದ್ಧತೆ ಮಾಡಿಕೊಂಡಿದ್ದು, ಮಳೆರಾಯನಿಗೆ ಕಾಯುತ್ತಿದ್ದರು. ಕೆಲವು ದಿನಗಳಿಂದ ಮೊಡ ಕವಿದು ಮಳೆಯಾಗಿದಿಲ್ಲ. ಇದರಿಂದ ರೈತರಲ್ಲಿ ಆತಂಕ ವ್ಯಕ್ತವಾಗಿತ್ತು. ಗುರುವಾರ ಸಂಜೆ ಸುರಿದ ಮಳೆಯಿಂದ ರೈತರ ಮುಖದಲ್ಲಿ ಸಂತಸ ಮೂಡಿದೆ. ಶುಕ್ರವಾರದಿಂದ ಬಿತ್ತನೆ ಕಾರ್ಯ ನಡೆಸಬಹುದು. ಮಳೆಯಿಂದ ಈಗಾಗಲೇ ಬಿತ್ತಿದ ಬೆಳೆಗೆ ಅನುಕೂಲವಾಗಿದೆ ಎಂದು ರೈತರೊಬ್ಬರು ತಿಳಿಸಿದರು.

ಜೈನ ಮುನಿಗಳಿಗೆ ರಕ್ಷಣೆ ಒದಗಿಸಲು ಆಗ್ರಹ



ಹುಬ್ಬಳ್ಳಿ: ಜೈನ ಸಾಧುಗಳು ಹಾಗೂ ಸ್ವಾಮೀಜಿಗಳಿಗೆ ತಕ್ಷಣ ರಕ್ಷಣೆ, ಪ್ರತ್ಯೇಕ ಪಾದಚಾರಿ ಮೂಲಸೌಕರ್ಯ ಒದಗಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಬೇಕು ಎಂದು ಆಗ್ರಹಿಸಿ ಸಮಸ್ತ ಜೈನ ಸಮುದಾಯ ವತಿಯಿಂದ ನರಗದಲ್ಲಿ ಬೃಹತ್ ಮೌನ ಪ್ರತಿಭಟನೆ ನಡೆಸಲಾಯಿತು.

ನಗರದ ಕಂಚಗಾರಗಲ್ಲಿ ಶಾಂತಿನಾಥ ಜೈನ ಮಂದಿರ ಎದುರು ಸಮಾವೇಶಗೊಂಡ ಪ್ರತಿಭಟನಾಕಾರರು ಜೈನ ಮುನಿಗಳಿಗೆ ರಕ್ಷಣೆ ನೀಡಬೇಕು. ಪಾದಯಾತ್ರೆ ಮಾಡುವಾಗ ರಸ್ತೆಯಲ್ಲಿ ಅನೇಕ ಅಪಘಾತಗಳಾಗಿದ್ದು, ಈ ಕುರಿತು ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಶಂಕರಮಠ, ಬಾಬಾಸಾನ ಗಲ್ಲಿ, ದುರ್ಗದಬೈಲ್, ಬ್ರಾಡ್‌ವೇ, ಕೊಪ್ಪಿಕರ್ ರಸ್ತೆ, ಲ್ಯಾಮಿಂಗ್ಟನ್ ರಸ್ತೆ ಮೂಲಕ ತಹಶೀಲ್ದಾರ್ ಕಚೇರಿ ತಲುಪಿತು. ಈ ವೇಳೆ ತಹಶೀಲ್ದಾರ್ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಜೈನ ಸ್ವಾಮೀಜಿಗಳು ಹಾಗೂ ಮುನಿಗಳು ಪವಿತ್ರ ಪಾದಯಾತ್ರೆ ಸಮಯದಲ್ಲಿ ಅಪಘಾತಗಳು ಹೆಚ್ಚು ನಡೆಯುತ್ತಿವೆ. ಇನ್ನೂ ಕೆಲವು ಬಾರಿ ಉದ್ದೇಶ ಪೂರ್ವಕವಾಗಿ ಜೈನ ಮುನಿಗಳ ಮೇಲೆ ವಾಹನ ಹರಿಸಿ ಹತ್ಯೆ ಮಾಡುವ ಕೃತ್ಯಗಳು ನಡೆಯುತ್ತಿವೆ. ಇದನ್ನು ತಡೆಯಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಯಲ್ಲಿ ಪಕ್ಕದಲ್ಲಿ ಪ್ರತ್ಯೇಕ ಸಂರಕ್ಷಿತ ಪಾದಚಾರಿ ಮಾರ್ಗಗಳು ಹಾಗೂ ಕಾರಿಡಾರ್‌ಗಳನ್ನು ತಕ್ಷಣ ನಿರ್ಮಿಸಬೇಕು. ರಸ್ತೆಗಳಲ್ಲಿ ಸಂಚಾರ ನಿಯಮಗಳ ಕುರಿತು ಫಲಕಗಳ ಅಳವಡಿಸಬೇಕು. ಅಗತ್ಯವಿರುವ ಕಡೆ ಸೂಚನಾ ಫಲಕ ಅಳವಡಿಸುವುದರಿಂದ ವೇಗ ನಿಯಂತ್ರಣ ಹಾಗೂ ಸುಧಾರಿತ ಕ್ರಮಗಳ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪಾದಯಾತ್ರೆಗಳ ಸಮಯದಲ್ಲಿ ಜೈನ ಸನ್ಯಾಸಿಗಳು ಹಾಗೂ ಸ್ವಾಮಿಗಳ ಮರುಕಳಿಸುವ ಸಾವುಗಳ ಬಗ್ಗೆ ಸಮಗ್ರ, ಪಾರದರ್ಶಕ ಹಾಗೂ ಸಮಯದ ಮಿತಿಯೊಳಗೆ ತನಿಖೆ ನಡೆಸಬೇಕು. ಪ್ರಾದೇಶಿಕ ಸಾರಿಗೆ ಕಚೇರಿ (ಆರ್‌ಟಿಒ) ಮೂಲಕ ಕಾಲ್ನಡಿಗೆಯಲ್ಲಿ ಪ್ರಯಾಣಿಸುವ ಜೈನ ಸನ್ಯಾಸಿಗಳು ಮತ್ತು ಸಂತರ ಉಪಸ್ಥಿತಿಯ ಬಗ್ಗೆ ವ್ಯಾಪಕ ಸಾರ್ವಜನಿಕ ಜಾಗೃತಿಯನ್ನು ಮೂಡಿಸಬೇಕು. ಚಾಲನಾ ಪರವಾನಗಿ ನೀಡುವ ವೇಳೆ ಈ ವಿಷಯವನ್ನು ಪರಿಗಣಿಸಿ ವಿತರಿಸಬೇಕು, ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಯಲ್ಲಿ ವಿವಿಧ ಪ್ರಮುಖ ಸ್ಥಳಗಳಲ್ಲಿ, ಸನ್ಯಾಸಿಗಳು ದಾಟುವ ಹಾಗೂ ವಲಯಗಳಲ್ಲಿ ಸ್ಪಷ್ಟವಾದ ಎಚ್ಚರಿಕೆ ಫಲಕಗಳನ್ನು ಕಾಯಂ ಆಗಿ ಅಳವಡಿಸಬೇಕು ಎಂದು ಆಗ್ರಹಿಸಿದರು.

ಗುರುದೇವ ಚಂದ್ರಭೂಷಣ ಸೂರಿಶ್ವರಜಿ ಮಹಾರಾಜ್, ಜೈನ ಮರುಧರ್ ಸಂಘ ಹುಬ್ಬಳ್ಳಿ ಅಧ್ಯಕ್ಷ ಜಯಂತಿಲಾಲ್ ಪರಮಾರ್, ಸ್ಥಾನಕವಾಸಿ ಸಮಾಜ ಅಧ್ಯಕ್ಷ ಊಕಚಂದ್ ಬಾಫ್ನಾ, ದಿಗಂಬರ ಜೈನ್ ಸಮಾಜ ಅಧ್ಯಕ್ಷ ರಾಜೇಂದ್ರ ಬೀಳಗಿ, ಮಹೇಂದ್ರ ಸಿಂಘಿ, ಅಮೃತ್ ಪೋರವಾಲ್, ವಿಮಲ್ ತಾಳಿಕೋಟಿ, ಲಲಿತ್ ಜೈನ, ಸಂತೋಷ್ ಡೂಮಾವತ್ ಮನೋಜ್ ಕೋಠಾರಿ, ಶೈಲೇಶ್ ಜೈನ, ನಿಲೇಶ್ ಜೈನ, ವಿಮಲ್ ಮಂಡೋತ್, ಅಮಿತ್ ಜೈನ, ತರುಣ್ ಜೈನ, ಮನೋಜ್ ಜೈನ, ಎಮಲ್ ಜೈನ, ಧರ್ಮೇಂದ್ರ ಜೈನ, ಜಿತೇಂದ್ರ ಜೈನ, ಸುಭಾಷ್ ಡಂಕ್ ಇದ್ದರು.

ನಾಡ ಕಚೇರಿಯಿಂದ ತ್ವರಿತ ಸೇವೆ
ರಾಜ್ಯದಲ್ಲಿಯೇ ಕಲಬುರಗಿ ನಂಬರ್-1

ಕಲಬುರಗಿ: ಅಟಲ್‌ಜೀ ಜನಸ್ನೇಹಿ ಕೇಂದ್ರದ ಮೂಲಕ ಮೇ-2026ರಲ್ಲಿ ಸ್ವೀಕರಿಸಿದ 39,363 ಅರ್ಜಿಗಳಲ್ಲಿ 38,551 ಅರ್ಜಿಗಳನ್ನು



ಕಾಲಮಿತಿಯಲ್ಲಿಯೇ ವಿಲೇವಾರಿ ಮಾಡಿ ಶೇ.97.94ರಷ್ಟು ಪ್ರಗತಿ ಸಾಧಿಸುವ ಮೂಲಕ ರಾಜ್ಯದಲ್ಲಿಯೇ ಅರ್ಜಿ ವಿಲೇವಾರಿಯಲ್ಲಿ ಕಲಬುರಗಿ ಜಿಲ್ಲೆ ಮತ್ತೆ ನಂಬರ್-1 ಸ್ಥಾನ ಪಡೆದಿದೆ.

ನಾಡ ಕಚೇರಿಯಿಂದ ಕಂದಾಯ ಇಲಾಖೆಯ 43 ಸೇವೆ ನೀಡಲು ಮೇ -2026ರಲ್ಲಿ ಸ್ವೀಕರಿಸಲಾಗಿರುವ ಅರ್ಜಿಗಳನ್ನು ನಿಗದಿತ ಅವಧಿಯಲ್ಲಿ 9.48 ವಿಲೇವಾರಿ ಸೂಚ್ಯಂಕದ ಪ್ರಕಾರ ವಿಲೇವಾರಿ ಮಾಡುವ ಮೂಲಕ ಈಶಾನ್ಯದ ತುದಿಯಲ್ಲಿರುವ ಕಲಬುರಗಿ ಜಿಲ್ಲೆ ಸಾರ್ವಜನಿಕರ ಸೇವೆ ವಿಲೇವಾರಿ ಮತ್ತು ಮಾದರಿ ಆಡಳಿತದ ಮೂಲಕ ಮತ್ತೆ ರಾಜ್ಯದ ಗಮನ ಸೆಳೆದಿದೆ.

ಕಳೆದ 2025ರ ಜುಲೈ, ಡಿಸೆಂಬರ್ ತಿಂಗಳಿನಲ್ಲಿಯೂ ಕಲಬುರಗಿ ಜಿಲ್ಲೆ ಅಟಲ್‌ಜೀ ಜನಸ್ನೇಹಿ ಕೇಂದ್ರದಿಂದ ಅರ್ಜಿ ವಿಲೇವಾರಿಯಲ್ಲಿ ಮೊದಲನೇ ಸ್ಥಾನ ಪಡೆದಿತ್ತು. ಇದೀಗ ಮತ್ತೆ ವಿಲೇವಾರಿಯಲ್ಲಿ ಅಗ್ರ ಸ್ಥಾನ ಪಡೆದುಕೊಂಡಿದ್ದು, ಕಲಬುರಗಿ ಜಿಲ್ಲಾಡಳಿತ ಕಾರ್ಯವೈಖರಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ.

ಕಲಬುರಗಿ ಜಿಲ್ಲೆಯ ಅಫಜಲಪೂರ ತಾಲೂಕಿನಲ್ಲಿ ಸ್ವೀಕೃತ 3,572ರಲ್ಲಿ 3,516, ಆಳಂದನಲ್ಲಿ 4,203 ರಲ್ಲಿ 4,116, ಚಿಂಚೋಳಿಯಲ್ಲಿ ಸ್ವೀಕೃತ 3,326ರಲ್ಲಿ 3,297, ಚಿತ್ತಾಪುರನಲ್ಲಿ ಸ್ವೀಕೃತ 3,355ರಲ್ಲಿ 3,324, ಜೇವರ್ಗಿಯಲ್ಲಿ ಸ್ವೀಕೃತ 2,078ರಲ್ಲಿ 2,009, ಕಲಬುರಗಿಯಲ್ಲಿ ಸ್ವೀಕೃತ 10,557ರಲ್ಲಿ 10,212, ಕಾಳಗಿಯಲ್ಲಿ ಸ್ವೀಕೃತ 2,096ರಲ್ಲಿ 2,056, ಕಮಲಾಪುರನಲ್ಲಿ ಸ್ವೀಕೃತ 2,754ರಲ್ಲಿ 2,709, ಸೇಡಂನಲ್ಲಿ ಸ್ವೀಕೃತ 3,806ರಲ್ಲಿ 3,750, ಶಹಾಬಾದನಲ್ಲಿ ಸ್ವೀಕೃತ 1,781ರಲ್ಲಿ 1,761, ಯಡ್ರಾಮಿಯಲ್ಲಿ ಸ್ವೀಕೃತ 1,835ರಲ್ಲಿ 1,801 ಅರ್ಜಿ ವಿಲೇವಾರಿ ಮಾಡುವ ಜಿಲ್ಲೆಯ ಜನತೆಗೆ ನಾಡ ಸೇವೆ ಕಚೇರಿ ತ್ವರಿತವಾಗಿ ಸ್ಪಂದಿಸಿದಿರುವುದು ಅಂಕಿ ಅಂಶಗಳು ಖಚಿತಪಡಿಸಿವೆ.

ಜಿಲ್ಲೆಯಲ್ಲಿನ ಈ ಕಾರ್ಯ ಸಾಧನೆಗೆ ನಾಡ ಕಛೇರಿ ಮತ್ತು ಆಟಲ್‌ಜೀ ಜನಸ್ನೇಹಿ ಕೇಂದ್ರದ ಸಿಬ್ಬಂದಿಗಳ ಸಹಕಾರ, ಕಾರ್ಯತತ್ಪರತೆ ಕಾರಣವಾಗಿರುತ್ತದೆ. ಇದಕ್ಕಾಗಿ ಶ್ರಮಿಸಿದ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಅಭಿನಂದನೆ ಸಲ್ಲಿಸಿರುವ ಡಿ.ಸಿ ಇಕ್ರಮ್ ಶರೀಫ್ ಅವರು, ಮುಂದಿನ ದಿನಗಳಲ್ಲಿ ಇದೇ ರೀತಿಯ ಸಾಧನೆ ಮಾಡುವಂತೆ ಹುರಿದುಂಬಿಸಿದಲ್ಲದೆ ಸಾರ್ವಜನಿಕರ ಸಮಸ್ಯೆಗೆ ತ್ವರಿತವಾಗಿ ಸ್ಪಂದಿಸುವ ಮನೋಭಾವ ಬೆಳೆಸಿಕೊಳ್ಳುವಂತೆ ಸಿಬ್ಬಂದಿಗಳಿಗೆ ಸಲಹೆ ನೀಡಿದ್ದಾರೆ.

ಟಾಪ್ 10ರಲ್ಲಿ ಕಲ್ಯಾಣದ 4 ಜಿಲ್ಲೆಗಳು

ಇನ್ನು ರಾಜ್ಯಾದ್ಯಂತ ಜಿಲ್ಲಾವಾರು ಅರ್ಜಿ ವಿಲೇವಾರಿ ಪಟ್ಟಿ ಅವಲೋಕಿಸಿದಾಗ ಅಗ್ರ 10ರಲ್ಲಿ ಕಲಬುರಗಿ ನಂಬರ್ 1 ಸ್ಥಾನದಲ್ಲಿದರೆ, ಶೇ.8.71 ವಿಲೇವಾರಿ ಸೂಚ್ಯಂಕದೊಂದಿಗೆ ವಿಜಯನಗರ ಜಿಲ್ಲೆ ಮೂರನೇ, ಶೇ.8.29 ವಿಲೇವಾರಿ ಸೂಚ್ಯಂಕದೊಂದಿಗೆ ಬಳ್ಳಾರಿ ಜಿಲ್ಲೆ ನಾಲ್ಕನೇ ಹಾಗೂ ಶೇ.6.52 ವಿಲೇವಾರಿ ಸೂಚ್ಯಂಕದೊಂದಿಗೆ ರಾಯಚೂರು ಜಿಲ್ಲೆ ಏಳನೇ ಸ್ಥಾನ ಪಡೆದಿದೆ. ಈ ಮೂಲಕ ಕಲ್ಯಾಣ ಕರ್ನಾಟಕ ಭಾಗದ 4 ಜಿಲ್ಲೆಗಳು ಸಾರ್ವಜನಿಕ ಸೇವೆ ನೀಡುವಲ್ಲಿ ಮುಂಚೂಣಿಯಲ್ಲಿ ಕಾಣಿಸಿಕೊಂಡಂತಾಗಿದೆ.

ಬರ್ಚಿ ರಸ್ತೆಯಲ್ಲಿ ಕಾಡಾನೆ ಪ್ರತ್ಯಕ್ಷ

ದಾಂಡೇಲಿ: ತಾಲೂಕಿನ ಅಂಬೇವಾಡಿ-ಬರ್ಚಿ ರಸ್ತೆಯಲ್ಲಿ ಕಾಡಾನೆಯೆಂದು ಪ್ರತ್ಯಕ್ಷವಾದ ಘಟನೆ ಬುಧವಾರ ನಸುಕಿನ ವೇಳೆ ನಡೆದಿದೆ. ಮಿತ್ರ ರಾಹುಲ್ ಎಂಬುವರು ಗಣೇಶಗುಡಿಯಿಂದ ದಾಂಡೇಲಿಗೆ ಬರುತ್ತಿರುವ ಸಂದರ್ಭದಲ್ಲಿ ಬರ್ಚಿ ರಸ್ತೆಯಲ್ಲಿ ಕಾಡಾನೆ ಪ್ರತ್ಯಕ್ಷವಾಗಿದೆ. ಯಾವುದೇ ಭಯವಿಲ್ಲದೆ ಆಹಾರವನ್ನರಸಿ ಆನೆ ರಸ್ತೆ ಬದಿಗೆ ಬಂದಿದೆ ಎಂದು ತಿಳಿದು ಬಂದಿದೆ.



ಹುಬ್ಬಳ್ಳಿ ಶೂಟಿಂಗ್ ಅಕಾಡೆಮಿಗೆ 15 ಪದಕ



ಹುಬ್ಬಳ್ಳಿ: ಮಂಗಳೂರು ಓಪನ್ ಶೂಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಹುಬ್ಬಳ್ಳಿ ಶೂಟಿಂಗ್ ಅಕಾಡೆಮಿ ಶೂಟರ್ಸ್ 15 ಪದಕಗಳ ಪಡೆಯುವ ಮೂಲಕ ಸಾಧನೆ ಮಾಡಿದ್ದಾರೆ.

ಪಿಸ್ತೂಲ್ ವೈಯಕ್ತಿಕ ವಿಭಾಗದಲ್ಲಿ ಐಶ್ವರ್ಯ ಬಾಲೆಹೊಸೂರ ಚಿನ್ನದ ಪದಕ, ಜೂನಿಯರ್‌ನಲ್ಲಿ ಕಂಚು, ಯೂಥ್ ವಿಭಾಗದಲ್ಲಿ ಕಂಚು ಪದಕ ಪಡೆದಿದ್ದಾರೆ. ಖುಷ್ ಪರಮಶೆಟ್ಟಿ ಮೂರು ಬೆಳ್ಳಿ ಪದಕ, ಪಿಸ್ತೂಲ್ ಸಿನಿಯರ್ ತಂಡದ ಪೃಥ್ವಿರಾಜ ಬಾಲೆಹೊಸೂರ್, ಖುಷ್ ಪರಮಶೆಟ್ಟಿ ಹಾಗೂ ಮೃತ್ಯುಂಜಯ ಮನಕವಾಡ ಚಿನ್ನದ ಪದಕ ಪಡೆದಿದ್ದಾರೆ.

ಐಎಸ್‌ಎಸ್‌ಎಫ್ ರೈಫಲ್ ವಿಭಾಗದಲ್ಲಿ ಹರ್ಷ ಭದ್ರಾಪುರ ಯೂಥ್‌ನಲ್ಲಿ ಬೆಳ್ಳಿ ಹಾಗೂ ಸಿನಿಯರ್ ನಲ್ಲಿ ಕಂಚು, ಶ್ರೀಕರ್ ಸಬನಿಸ್ ಯೂಥನಲ್ಲಿ ಕಂಚು ಪದಕ ಪಡೆದಿದ್ದಾರೆ. ಎನ್‌ಆರ್ ರೈಫಲ್ ವಿಭಾಗದಲ್ಲಿ ಕೇಶವ್ ಆದಿತ್ಯ ಬಸರಿಕೊಪ್ಪ ಅಂಡರ್ 19 ನಲ್ಲಿ ವಯಕ್ತಿಕ ಚಿನ್ನ, ಅಂಡರ್ 19 ತಂಡದಲ್ಲಿ ಕೇಶವಾದಿತ್ಯ ಬಸರಿಕೊಪ್ಪ, ನೀಲ ಫಡ್ನವೀಸ್, ಅನಿರುದ್ಧ ರೆಡ್ಡಿ ಚಿನ್ನದ ಪದಕ ಪಡೆದಿದ್ದಾರೆ.

ಸಬ್ ಯೂಥ್ ತಂಡದ ಕೇಶವಾದಿತ್ಯ ಬಸರಿಕೊಪ್ಪ, ನೀಲ ಫಡ್ನವೀಸ್ ಹಾಗೂ ಪುನೀತ್ ಕಿರೇಸೂರ ಚಿನ್ನದ ಪದಕ ಪಡೆದಿದ್ದಾರೆ. ಪಿಸ್ತೂಲ್ ಎನ್‌ಆರ್ ವಿಭಾಗ ಸಬ್ ಯೂಥ್‌ನಲ್ಲಿ ಧೈರ್ಯ ಕುಲಕರ್ಣಿ ಬೆಳ್ಳಿ ಹಾಗೂ ಪ್ರಶಾಂತ ಪವಸ್ಕರ್ ಮಾಸ್ಟರ್ ವಿಭಾಗದಲ್ಲಿ ಕಂಚು ಪಡೆದಿದ್ದಾರೆ.

ಪ್ರಥಮ ಬಾರಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಯ್ಕೆಯಾಗಿರುವ ಐಶ್ವರ್ಯ ಬಾಲೆಹೊಸೂರ್ ಮತ್ತು ವರ್ಷದ ಖುಷಿ ಪರಮಶೆಟ್ಟಿ ಮತ್ತು ಹರ್ಷ ಭದ್ರಾಪುರ ಸಿನಿಯರ್ ವಿಭಾಗದ ಫೈನಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದರು. ಅವರೆಲ್ಲರಿಗೂ ಮಾಜಿ ಸೈನಿಕರದ ರವಿಚಂದ್ರ ಬಾಲೆಹೊಸೂರ ತರಬೇತಿಯನ್ನು ನೀಡಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ನೋಡಲ್ ಅಧಿಕಾರಿ ನೇಮಕ

ಕಾರವಾರ: ಉತ್ತರ ಕನ್ನಡ ಜಿಲ್ಲೆಯಲ್ಲಿ ಜೂನ್ 6 ರಿಂದ ಜೂನ್ 10 ರ ವರೆಗೆ ಭಾರೀ ಮಳೆಯಾಗುವ ಸಾಧ್ಯತೆ ಕುರಿತಂತೆ ಭಾರತೀಯ ಹವಾಮಾನ ಇಲಾಖೆ ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಕೇಂದ್ರದಿಂದ ಮುನ್ಸೂಚನೆ ನೀಡಲಾಗಿದ್ದು ಸಾರ್ವಜನಿಕರು ಎಚ್ಚರಿಕೆಯಿಂದ ಇರುವಂತೆ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ವತಿಯಿಂದ ಸೂಚಿಸಲಾಗಿದೆ.ಜೂನ್ 4 ಮತ್ತು,5 ರಂದು ಸಾಧಾರಣ ಮಳೆಯಾಗಲಿದ್ದು ಜೂನ್ 6 ರಂದು ಮಳೆ ತೀವ್ರಗೊಳ್ಳಲಿದೆ ಎಂದು ತಿಳಿಸಲಾಗಿದೆ.
ಮಳೆ ಹಿನ್ನೆಲೆಯಲ್ಲಿ ಮುಂಗಾರು ಪೂರ್ವದ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ 294 ಕಾಳಜಿ ಕೇಂದ್ರಗಳನ್ನು ಗುರುತಿಸಿ ಪ್ರತಿ ಕಾಳಜಿ ಕೇಂದ್ರಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.
ಜಿಲ್ಲೆಯಲ್ಲಿ 439 ಸಂಭವನೀಯ ಭೂಕುಸಿತ ಸ್ಥಳಗಳ ಪಟ್ಟಿಯನ್ನು ಜಿ.ಎಸ್.ಐ ನಿಂದ ನೀಡಲಾಗಿದ್ದು, ಸಂಭವನೀಯ ಭೂಕುಸಿತ ಪ್ರದೇಶಗಳ ನಿರಂತರ ಮೇಲ್ವಿಚಾರಣೆಗೆ ಸಿಬ್ಬಂದಿಗಳ ನೇಮಕ ಮಾಡಿ ಅವರಿಗೆ ಸೂಕ್ತ ತರಬೇತಿ ನೀಡಲಾಗಿದೆ.
ಸಾರ್ವಜನಿಕರು ತುರ್ತು ಸಂದರ್ಭದಲ್ಲಿ ಜಿಲ್ಲಾಡಳಿತದ ಸಹಾಯ ಸಂಖ್ಯೆ 08382229857, 9483511015, 9480805200, ಪೊಲೀಸ್ ಕಂಟ್ರೋಲ್ ರೂಮ್ ದೂ.08382226550 ಗೆ ಸಂಪರ್ಕಿಸುವಂತೆ ಜಿಲ್ಲಾ ವಿಪತ್ತು ನಿರ್ವಹಣ ಪ್ರಾಧಿಕಾರದ ಅಧ್ಯಕ್ಷೆ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮನೆಯೊಂದರಲ್ಲಿ ಭಾರೀ ಗಾತ್ರದ ಹೆಬ್ಬಾವು ಪತ್ತೆ

ಅಂಕೋಲಾ: ತಾಲೂಕಿನ ಹಾರವಾಡ ಗ್ರಾಮದ ಮನೆಯೊಂದರ ಕೋಳಿಗೂಡಿಗೆ ನುಗ್ಗಿ ಎರಡು ಕೋಳಿಗಳನ್ನು ನುಂಗಿ ಮಲಗಿದ್ದ ಭಾರೀ ಗಾತ್ರದ ಹೆಬ್ಬಾವೊಂದನ್ನು ರಕ್ಷಣೆ ಮಾಡಿ ಸುರಕ್ಷಿತವಾಗಿ ಅರಣ್ಯ ಪ್ರದೇಶಕ್ಕೆ ಬಿಡಲಾಗಿದೆ.



ಹಾರವಾಡ ನಿವಾಸಿ ಪ್ರಶಾಂತ ವಿಷ್ಣು ನಾಯ್ಕ ಎನ್ನುವವರ ಮನೆಯ ಕೋಳಿ ಗೂಡಿನಲ್ಲಿದ್ದ ಕೋಳಿಗಳನ್ನು ನುಂಗಿದ ಹೆಬ್ಬಾವು ಕೋಳಿ ಗೂಡಿನಲ್ಲೇ ಸುತ್ತು ಹಾಕಿ ಮಲಗಿರುವುದನ್ನು ಕಂಡ ಮನೆಯವರು ಆತಂಕಗೊಂಡು ಉರಗ ಸಂರಕ್ಷಕ ಪ್ರಶಾಂತ ಕಳಸ್ ಅವರಿಗೆ ಕರೆ ಮಾಡಿ ವಿಷಯ ತಿಳಿಸಿದ್ದು, ತಕ್ಷಣ ಸ್ಥಳಕ್ಕೆ ದಾವಿಸಿದ ಪ್ರಶಾಂತ ಕಳಸ್ ಸ್ಥಳೀಯ ಜನರಸಹಕಾರದಿಂದ ಹೆಬ್ಬಾವನ್ನು ಸುರಕ್ಷಿತವಾಗಿ ಹಿಡಿದು ಅರಣ್ಯ ಇಲಾಖೆಗೆ ಹಸ್ತಾಂತರಿಸಿದರು.
ಇಲಾಖೆಯ ಸಿಬ್ಬಂದಿಗಳು ಹೆಬ್ಬಾವನ್ನು ಸುರಕ್ಷಿತವಾಗಿ ಅರಣ್ಯ ಪ್ರದೇಶದಲ್ಲಿ ಬಿಟ್ಟಿದ್ದಾರೆ.

ಯುವತಿ ಪರ್ಸ್ ಕಳ್ಳತನ

ಅಂಕೋಲಾ: ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಯುವತಿಯ ಪರ್ಸ್, ಮೊಬೈಲ್ ಮತ್ತಿತರ ವಸ್ತುಗಳನ್ನು ಅಪರಿಚಿತ ವ್ಯಕ್ತಿಯೋರ್ವ ಕಳ್ಳತನ ಮಾಡಿರುವ ಘಟನೆ ಅಂಕೋಲಾ ರೈಲ್ವೆ ನಿಲ್ದಾಣದ ಸಮೀಪ ಸಂಭವಿಸಿದ್ದು ಕೊಂಕಣ ರೈಲ್ವೆಯ ಠಾಣೆಯಿಂದ ಉತ್ತರ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠರಿಗೆ ಕಳುಹಿಸಿರುವ ದೂರಿನನ್ವಯ ಅಂಕೋಲಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೇರಳದ ಕೋಲಮ್ ಕರುಂಗಪಲ್ಲಿ ನಿವಾಸಿ ಐಶ್ವರ್ಯ ಪ್ರಭಾಲನ್(26) ಕಾಯನಕೊಲಮ ರೈಲ್ವೆ ನಿಲ್ದಾಣ ದಿಂದ ಪ್ರಯಾಣಿಸುತ್ತಿದ್ದ ಸಂದರ್ಭದಲ್ಲಿ ಅಪರಿಚಿತ ವ್ಯಕ್ತಿಯೋರ್ವ ಕಳ್ಳತನ ಘಟನೆ ನಡೆದಿದೆ.
1 ಸಾವಿರ ರೂ. ನಗದು ಹಣ, 21 ಸಾವಿರ ಮೌಲ್ಯದ ಮೊಬೈಲ್ ಮತ್ತು 3 ಆಧಾರ್ ಕಾರ್ಡ್‌ಗಳು ಅಪರಿಚಿತ ವ್ಯಕ್ತಿಯ ಪಾಲಾಗಿವೆ.
ಯುವತಿ ನೀಡಿರುವ ದೂರು ದಾಖಲಿಸಿದ ಕೊಂಕಣ ರೈಲ್ವೆ ಪೊಲೀಸರು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ಪೊಲೀಸ್ ಠಾಣೆಗೆ ಘಟನಾ ಸ್ಥಳದ ಆಧಾರದ ಮೇಲೆ ದೂರು ಹಸ್ತಾಂತರಿಸಿದ್ದು, ಅಂಕೋಲಾ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	57479	69300
ಬಿಳಿಗೋಟು	25200	35729
ಕೆಂಪುಗೋಟು	30211	35199
ಬೆಟ್ಟೆ	40869	48689
ರಾಶಿ	50261	53299
ಚಾಲಿ	44111	49099
ಬಿ.ಕಾಳುಮೆಣಸು	88010	91076



ಭಟ್ಕಳ: ನೂತ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಡಿ.ಕೆ.ಶಿವಕುಮಾರ ಅವರಿಗೆ ಒಳಿತಾಗುವಂತೆ ಅಳ್ವೇಕೋಡಿ ಶ್ರೀ ದುರ್ಗಾಪರಮೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ದೇವಸ್ಥಾನದ ಅಧ್ಯಕ್ಷ ತಿಮ್ಮಪ್ಪ ಹೊನ್ನಿಮನೆ, ಮುಖಂಡರಾದ ರಾಮಾ ಮೊಗೇರ, ನಾಗೇಶ ದೇವಡಿಗ ಸೇರಿದಂತೆ ದೇವಸ್ಥಾನದ ಧರ್ಮದರ್ಶಿಗಳು, ಊರ ಪ್ರಮುಖರು, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

ಶಾಲಾ ಪ್ರಾರಂಭೋತ್ಸವ: ನೋಟುಬುಕ್, ಪೆನ್ ವಿತರಣೆ

ಮುಂಡಗೋಡ: ಉತ್ತಮ ಕಲಿಕೆ,ಉಜ್ವಲ ಭವಿಷ್ಯ ಎಂಬ ಧ್ಯೇಯವಾಕ್ಯದಡಿ ತಾಲೂಕಿನ ಕುರ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2026-27ನೇ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋತ್ಸವ ಹಾಗೂ ಪಾಲಕ-ಪೋಷಕರ ಮಹಾಸಭೆ ವಿಜೃಂಭಣೆಯಿಂದ ಜರುಗಿತು.
ಶಾಲಾ ಪ್ರಾರಂಭೋತ್ಸವದ ಅಂಗವಾಗಿ ವಿದ್ಯಾರ್ಥಿಗಳನ್ನು ವಿಶೇಷವಾಗಿ ಸ್ವಾಗತಿಸಲಾಯಿತು. ಬಲೂನ್ ಹಿಡಿದು ಸಂಭ್ರಮದಿಂದ ಶಾಲೆಗೆ ಆಗಮಿಸಿದ ಮಕ್ಕಳಿಗೆ. ಪುಷ್ಪ ವೃಷ್ಟಿಗೆರೆದು ಆರತಿ ಬೆಳಗಿ, ಕುಂಕುಮ ತಿಲಕವಿಟ್ಟು, ನೋಟುಬುಕ್, ಪೆನ್ ನೀಡಿ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು.
ಊರಿನ ಹಿರಿಯರಾದ ಶಿವಪ್ಪ ನಾಯ್ಕ್ ದಂಪತಿಗಳು ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರಗು ತಂದರು. ಎಸ್‌ಡಿಎಂಸಿ ಅಧ್ಯಕ್ಷ ನಾಗರಾಜ ಕೊರ್ಸಿ ಹಾಗೂ ಸದಸ್ಯರಾದ ಪ್ರಶಾಂತ ಮೇಲಿನಕೇರಿ, ಹನುಮಂತ ನಾಯ್ಕ್, ಜಯ ಸುಂಟಿ, ಲೋಕೇಶ ದಳ್ಳಿನಕೇರಿ, ನವೀನ ನಾಯ್ಕ್, ಮಹೇಶ ನಾಯ್ಕ್, ರಘು ನಾಯ್ಕ್, ಸತ್ಯನಾರಾಯಣ ಹೆಗಡೆ, ಪ್ರಭಾಕರ್ ಭಾಸಿ, ದಯಾನಂದ ನಾಯ್ಕ್, ಸಂಗೀತ ನಾಯ್ಕ್ ಅನೇಕ ಪಾಲಕರು ಉಪಸ್ಥಿತರಿದ್ದು, ಕಾರ್ಯಕ್ರಮದ ಯಶಸ್ಸಿಗೆ ಕೈಜೋಡಿಸಿದರು.
ಗ್ರಾಪಂ ಮಾಜಿ ಅಧ್ಯಕ್ಷ ಮುಕುಂದ ನಾಯ್ಕ್ ವಿದ್ಯಾರ್ಥಿಗಳಿಗೆ ಪಟ್ಟಿ ಹಾಗೂ ಪೆನ್ನು ದಾನವಾಗಿ ನೀಡಿ ಮಕ್ಕಳನ್ನು ಪ್ರೋತ್ಸಾಹಿಸಿದರು. ಸಭೆಯಲ್ಲಿ ಮಕ್ಕಳ ಶೈಕ್ಷಣಿಕ ಪ್ರಗತಿ, ಶಾಲೆಯ ಅಭಿವೃದ್ಧಿ ಹಾಗೂ ಮುಂದಿನ ಶೈಕ್ಷಣಿಕ ಚಟುವಟಿಕೆಗಳ ಕುರಿತು ಚರ್ಚಿಸಿದರು. ಈ ವೇಳೆ ಮುಖ್ಯ ಶಿಕ್ಷಕಿ ಮಮತಾ ರಾಘವೇಂದ್ರ, ಶಿಕ್ಷಕಿ ವಾಣಿ ಭಟ್ಟ ಹಾಗೂ ಸಂಧ್ಯಾ ಭಂಡಾರಿ ಇದ್ದರು.



ಮುಂಡಗೋಡ: ಉತ್ತಮ ಕಲಿಕೆ,ಉಜ್ವಲ ಭವಿಷ್ಯ ಎಂಬ ಧ್ಯೇಯವಾಕ್ಯದಡಿ ತಾಲೂಕಿನ ಕುರ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2026-27ನೇ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋತ್ಸವ ಹಾಗೂ ಪಾಲಕ-ಪೋಷಕರ ಮಹಾಸಭೆ ವಿಜೃಂಭಣೆಯಿಂದ ಜರುಗಿತು. ಪುಷ್ಪ ವೃಷ್ಟಿಗೆರೆದು ಆರತಿ ಬೆಳಗಿ, ಕುಂಕುಮ ತಿಲಕವಿಟ್ಟು, ನೋಟುಬುಕ್, ಪೆನ್ ನೀಡಿ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು.

ಡಿಕೆಶಿ ಸಚಿವ ಸಂಪುಟದ ಮೊದಲ ಪಟ್ಟಿಯಲ್ಲಿ ಉ.ಕನ್ನಡಕ್ಕೆ ಸ್ಥಾನವಿಲ್ಲ

ಮುಂದಿನ ಸಚಿವ ಸಂಪುಟ ವಿಸ್ತರಣೆಯತ್ತ ಜಿಲ್ಲೆಯ ಚಿತ್ತ

ಕಾರವಾರ: ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರ ಸಚಿವ ಸಂಪುಟದಲ್ಲಿ ಮೊದಲ ಹಂತದಲ್ಲಿ ಉತ್ತರ ಕನ್ನಡ ಜಿಲ್ಲೆಯ ಯಾವ ಶಾಸಕರ ಹೆಸರೂ ಇಲ್ಲದಿರುವುದು ಜಿಲ್ಲೆಯ ಜನರಲ್ಲಿ ಚರ್ಚೆಗೆ ಕಾರಣವಾಗಿದ್ದು, ಜಿಲ್ಲೆಯಲ್ಲಿ ಒಬ್ಬರಿಗೆ ಮಾತ್ರ ಸಚಿವ ಸ್ಥಾನ ನೀಡದೆ ಇರುವುದರಿಂದ ಕಾದು ನೋಡುವ ತಂತ್ರಗಾರಿಕೆ ಅನುಸರಿಸಲಾಯಿತೇ ಎನ್ನುವ ಮಾತುಗಳು ಕೇಳಿ ಬರತೊಡಗಿದೆ.
ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ ಅವರು ಪ್ರಮಾಣವಚನ ಸ್ವೀಕರಿಸುವ ಸಂದರ್ಭದಲ್ಲಿ ಪ್ರಮಾಣವಚನ ಸ್ವೀಕರಿಸುವ ಸಚಿವರುಗಳಲ್ಲಿ ಜಿಲ್ಲೆಯ ಯಾವ ಶಾಸಕರನ್ನೂ ಪರಿಗಣಿಸದಿರುವುದು ಜಿಲ್ಲೆಯ ಕಾಂಗ್ರೆಸ್ ಶಾಸಕರು ಮತ್ತು ಜನತೆ ಮುಂದಿನ ಪಟ್ಟಿಯ ಬಿಡುಗಡೆಗೆ ಎದುರು ನೋಡುವಂತಾಗಿದೆ.
ಈ ಹಿಂದೆ ಸಿದ್ದರಾಮಯ್ಯ ಅವರ ಸಚಿವ ಸಂಪುಟದಲ್ಲಿ ಬಂದರು ಮತ್ತು ಮೀನುಗಾರಿಕೆ ಸಚಿವರಾಗಿದ್ದ ಮಂಕಾಳ ವೈದ್ಯರ ಜೊತೆಗೆ ಜಿಲ್ಲೆಗೆ ಮತ್ತೊಂದು ಮಂತ್ರಿಗಿರಿ ಒದಗಿಬರಲಿದೆ ಎಂಬ ನಿರೀಕ್ಷೆ ಜಿಲ್ಲೆಯ ರಾಜಕೀಯ ವಲಯದಲ್ಲಿ ಕೇಳಿ ಬರತೊಡಗಿತ್ತು.



ಮಾಜಿ ಸಚಿವ ಹಿರಿಯ ಅನುಭವಿ ರಾಜಕಾರಣಿ ಆಗಿರುವ ಆರ್.ವಿ.ದೇಶಪಾಂಡೆಯವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ಸಿಗಲಿದೆ ಎನ್ನುವ ಅಭಿಪ್ರಾಯ ಕಾಂಗ್ರೆಸ್ ಪಕ್ಷದಪ್ರಮುಖರೂಸೇರಿದಂತೆಹಲವರಲ್ಲಿತ್ತು ಆದರೆ ಇದೀಗ ಡಿ.ಕೆ.ಶಿ ಸಚಿವ ಸಂಪುಟದಲ್ಲಿ ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ ಸೇರಿದಂತೆ 13 ಜನರನ್ನು ಸಚಿವ ಸ್ಥಾನಕ್ಕೆ ಪರಿಗಣಿಸಲಾಗಿದೆ ಅವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹಿರಿಯರೇ ಇದ್ದು ದೇಶಪಾಂಡೆ ಅವರ ಹೆಸರು ಇರದಿರುವುದು ಅವರ ಅಭಿಮಾನಿ ವಲಯದಲ್ಲೂ ಅಚ್ಚರಿಗೆ ಕಾರಣವಾಗಿದೆ.
ಮಂಕಾಳ ವೈದ್ಯ ಸೇರಿದಂತೆ ಜಿಲ್ಲೆಯ ಯಾವುದೇ ಶಾಸಕರು ಡಿಕೆಶಿ ಸಚಿವ ಸಂಪುಟದ ಮೊದಲ ಪಟ್ಟಿಯಲ್ಲಿ ಇಲ್ಲದಿರುವುದರಿಂದ ಸಚಿವ ಸಂಪುಟ ವಿಸ್ತರಣೆಯವರೆಗೆ ಜಿಲ್ಲೆಯ ಕಾಂಗ್ರೆಸ್ ಶಾಸಕರು ಕಾಯಬೇಕಾಗಿದ್ದು ಮುಂದಿನ ಹಂತದ ಸಂಪುಟ ವಿಸ್ತರಣೆಯಲ್ಲಿ ಜಿಲ್ಲೆಗೆ ಆದ್ಯತೆ ಸಿಗಲಿದೆ ಎಂಬ ಮಾತುಗಳು ಕೇಳಿ ಬರುತ್ತಿದ್ದು ಪಕ್ಷ ಸಂಘಟನೆಗೆ ಯಾವುದೇ ರೀತಿಯ ದಕ್ಕೆ ಬರದಂತೆ ಜಿಲ್ಲೆಯ ಶಾಸಕರೊಂದಿಗೆ ಚರ್ಚೆ ನಡೆಸಿ ಸಚಿವ ಸ್ಥಾನದ ನಿರ್ಧಾರ ನಡೆಯಲಿದೆ ಎಂದು ಹೇಳಲಾಗುತ್ತಿದೆ. ಯಾವುದಕ್ಕೂ ಜಿಲ್ಲೆಯ ಶಾಸಕರು ಮುಂದಿನ ಸಚಿವ ಸಂಪುಟ ವಿಸ್ತರಣೆಯವರೆಗೆ ಕಾಯಲೇಬೇಕಿದೆ.

ವಿದ್ಯುತ್ ವ್ಯತ್ಯಯ ಜೂ.5ರಂದು

ಮುಂಡಗೋಡ: 110/11 ಕೆವಿ ಉಪಕೇಂದ್ರದ ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುವುದರಿಂದ ಜೂ.5ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಮುಂಡಗೋಡ ಪಟ್ಟಣ, ಟಿಬೆಟಿಯನ್ ಕಾಲನಿ, ಬಾಚಣಕಿ, ನಂದಿಕಟ್ಟಾ, ಇಂದೂರ, ಹುನಗುಂದ, ಮೈನಳ್ಳಿ, ಚೌಡಳ್ಳಿ, ಗುಂಜಾವತಿ, ಚಿಗಳ್ಳಿ, ಸಾಲಗಾಂವ ಹಾಗೂ ಕಾತೂರ ಗ್ರಾಮ ಪಂಚಾಯತಿಗಳಿಗೆ ಸಂಬಂಧಪಟ್ಟ ಎಲ್ಲ ಗ್ರಾಮಗಳು, ಸನವಳ್ಳಿ ಕುಡಿಯುವ ನೀರಿನ ಘಟಕ ಮತ್ತು ನಾಗನೂರ ಪಂಚಾಯತಿಯ ಕೆಲವು ಗ್ರಾಮಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ಹೆಸ್ಕಾಂನೊಂದಿಗೆ ಸಹಕರಿಸಬೇಕು ಎಂದು ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಶಾಸಕ ಭೀಮಣ್ಣರಿಂದ ಜನತೆಗೆ ದ್ರೋಹ: ಹೆಗಡೆ

ಶಿರಸಿ: ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಂಜೂರಾಗಿದ್ದ 142 ರೂ. ಕೋಟಿ ವೆಚ್ಚದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮೂಲ ಸ್ವರೂಪವನ್ನು ಹಾಳುಗೆಡವಿ, ಶಾಸಕ ಭೀಮಣ್ಣ ನಾಯ್ಕ ಅವರು ಜನತೆಗೆ ದ್ರೋಹ ಎಸಗಿದ್ದಾರೆ ಎಂದು ಬಿಜೆಪಿ ರೈತಮೋರ್ಚಾ ಜಿಲ್ಲಾಧ್ಯಕ್ಷ ಅನಂತಮೂರ್ತಿ ಹೆಗಡೆ ಆರೋಪಿಸಿದರು.
ಬುಧವಾರ ನಗರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಈ ವೈಫಲ್ಯವನ್ನು ಖಂಡಿಸಿ ತಾವು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿರುವುದಾಗಿ ಅವರು ತಿಳಿಸಿದರು.
ಕಾರ್ಡಿಯೋಲಾಜಿ, ನ್ಯೂರೋಲಾಜಿ ಹಾಗೂ ನೆಫ್ರೋಲಾಜಿಯಂತಹ ವಿಭಾಗಗಳಿಗಾಗಿ 30 ರೂ. ಕೋಟಿ ಸಲಕರಣೆ ಮೀಸಲಿಡಲಾಗಿತ್ತು. ಆದರೆ, ಪ್ರಸ್ತುತ26ಕೋಟಿಯಪ್ರಸ್ತಾವನೆಯನ್ನು 5.20 ಕೋಟಿ ರೂ.ಗೆ ಇಳಿಸುವ ಮೂಲಕ ಬಡವರಿಗೆ ಉಚಿತವಾಗಿ ಸಿಗಬೇಕಿದ್ದ ಎಂಆರ್‌ಐ ಹಾಗೂ ಸಿಟಿ ಸ್ಕ್ಯಾನ್ ಮಷಿನ್‌ಗಳನ್ನು ಮಾಯ ಮಾಡಲಾಗಿದೆ. ಕಟ್ಟಡ ಶೇ.80ರಷ್ಟು ಮುಗಿದರೂ ವೈದ್ಯರ ನೇಮಕಾತಿ ಮತ್ತು ಯಂತ್ರೋಪಕರಣಗಳಿಗೆ ಟೆಂಡರ್ ಕರೆಯದೆ ಶಾಸಕರು ಮೌನ ವಹಿಸಿದ್ದಾರೆ ಎಂದು ದೂರಿದರು.
ಆಸ್ಪತ್ರೆಯ ಸಿಬ್ಬಂದಿ ಕೊರತೆ ಕುರಿತು ಆತಂಕ ವ್ಯಕ್ತಪಡಿಸಿದ ಅವರು, 250 ಹಾಸಿಗೆಗೆ ಅಗತ್ಯವಿರುವ 197 ಸಿಬ್ಬಂದಿ ಪೈಕಿ ಕೇವಲ 90 ಜನರಿದ್ದಾರೆ. ಈಗ ಮಾಡಿರುವ ನೇಮಕಾತಿಗಳು ಕೇವಲ ತಾಲೂಕು ಆಸ್ಪತ್ರೆ ಮಟ್ಟದ ವೈದ್ಯರದ್ದಾಗಿದ್ದು, ಸೂಪರ್ ಸ್ಪೆಷಲಿಸ್ಟ್‌ಗಳಿಲ್ಲದೆ ಆಸ್ಪತ್ರೆ ಕೇವಲ ಕಾಗದದ ಮೇಲಿನ ಯೋಜನೆಯಾಗಿದೆ. ಆರೋಗ್ಯ ಮಂತ್ರಿಗಳು ಜಿಲ್ಲಾ ಆಸ್ಪತ್ರೆಯ ಭರವಸೆ ನೀಡಿ ಜನರಿಗೆ ಟೋಪಿ ಹಾಕುತ್ತಿದ್ದಾರೆ. ಟ್ರಾಮಾ ಸೆಂಟರ್ ಹಾಗೂ ಕ್ಯಾಥ್ ಲ್ಯಾಬ್ ಸೌಲಭ್ಯಗಳನ್ನು ಹಾಳುಮಾಡಿರುವ ಶಾಸಕರಿಗೆ ತಾಕತ್ತಿದ್ದರೆ ಈ ಆರೋಪದಲ್ಲಿ ಹುರುಳಿಲ್ಲ ಎಂದು ಶ್ವೇತಪತ್ರ ಹೊರಡಿಸಲಿ ಎಂದು ಸವಾಲು ಹಾಕಿದರು.
ಸುದ್ದಿಗೋಷ್ಠಿಯಲ್ಲಿ ಬಿಜೆಪಿ ನಗರ ಅಧ್ಯಕ್ಷ ಆನಂದ ಸಾಲೇರ್, ಉಷಾ ಹೆಗಡೆ, ರಮೇಶ್ ನಾಯ್ಕ್, ನಾಗರಾಜ ನಾಯ್ಕ್, ರವಿ ಗಾವಂಕರ್, ರಾಘವೇಂದ್ರ ನಾಯ್ಕ, ಶಿವಕುಮಾರ ನಾಯ್ಕ್ ಕೊಂಡ್ಲಿ, ಶ್ರೀರಾಮ್ ನಾಯ್ಕ್ ಹಾಗೂ ರವಿ ಶೆಟ್ಟಿ ಉಪಸ್ಥಿತರಿದ್ದರು.



ಜೂ.5ರಂದು ಮೂರಿನಕಟ್ಟೆ ಧ್ವಂಸ ಖಂಡಿಸಿ ಪ್ರತಿಭಟನೆ: ನಾಮಧಾರಿ ಒಕ್ಕೂಟ ಬೆಂಬಲ



ಭಟ್ಕಳ: ಮೂರಿನಕಟ್ಟೆಯ ಪ್ರದೇಶದಲ್ಲಿ ನೂತನವಾಗಿ ನಿರ್ಮಿಸಿದ ಕಟ್ಟೆಯನ್ನು ಧ್ವಂಸ ಮಾಡಿರುವುದನ್ನು ತೀವ್ರವಾಗಿ ಖಂಡಿಸಿದ ಭಟ್ಕಳ ಮತ್ತು ಸಾರದಹೊಳೆ ನಾಮಧಾರಿ ಅಭಿವೃದ್ಧಿ ಸಂಘದ ಪದಾಧಿಕಾರಿಗಳು ಜೂನ್ 5 ರಂದು ಹಿಂದೂ ಸಂಘಟನೆಗಳ ಒಕ್ಕೂಟ ಮುರಿನಕಟ್ಟೆ ಧ್ವಂಸದ ಕುರಿತು ನಡೆಸುತ್ತಿರುವ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿದರು.
ಈ ಕುರಿತು ಮಂಗಳವಾರ ಆಸರಕೇರಿಯ ನಿಚ್ಚಲಮಕ್ಕಿ ತಿರುಮಲ ವೆಂಕಟ್ರಮಣ ದೇವಸ್ಥಾನದ ಸಭಾಗೃಹದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಭಟ್ಕಳ ನಾಮಧಾರಿ ಅಭಿವೃದ್ಧಿ ಸಂಘ ಮತ್ತು ಗುರುಮಠದ ಅಧ್ಯಕ್ಷ ಅರುಣ ನಾಯ್ಕ, ಮುರಿನಕಟ್ಟೆಗೆ ತನ್ನದೇ ಆದ ಇತಿಹಾಸ ಇದೆ. ಇಲ್ಲಿ ಹಿಂದೂಗಳು ಮಾರಿಹೊರೆಯನ್ನು ಇಟ್ಟು ಪೂಜಿಸುವ ಸ್ಥಳವಾಗಿದೆ. ಹೆದ್ದಾರಿ ಅಗಲೀಕರಣದಿಂದಾಗಿ ನೂತನವಾಗಿ ನಿರ್ಮಿಸಲಾದ ಕಟ್ಟೆಯನ್ನು ಧ್ವಂಸ ಮಾಡಿರುವುದು ಖಂಡನೀಯ. ಕಟ್ಟೆ ಧ್ವಂಸ ಮಾಡಿದವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಮುಂದೆ ಇಂತಹ ಕೃತ್ಯ ಎಸಗದಂತೆ ಜಿಲ್ಲಾಡಳಿತ ಮುತುವರ್ಜಿ ವಹಿಸಬೇಕು ಎಂದು ಆಗ್ರಹಿಸಿದ ಅವರು ಹಿಂದೂ ಸಂಘಟನೆಗಳ ಒಕ್ಕೂಟ ಜೂನ್ 5 ರಂದು ಮೂರಿನಕಟ್ಟೆ ಧ್ವಂಸ ಖಂಡಿಸಿ ನಡೆಸುತ್ತಿರುವ ಬೃಹತ್ ಪ್ರತಿಭಟನೆಗೆ ಭಟ್ಕಳ ನಾಮಧಾರಿ ಒಕ್ಕೂಟ ಮತ್ತು ಸಾರದಹೊಳೆಯ ನಾಮಧಾರಿ ಒಕ್ಕೂಟದ ಸಂಪೂರ್ಣ ಬೆಂಬಲ ಇದೆ. ಮೂರಿನಕಟ್ಟೆಯನ್ನು ಶೀಘ್ರವಾಗಿ ನಿರ್ಮಾಣ ಮಾಡಬೇಕು. ಭಟ್ಕಳದಲ್ಲಿ ಶಾಂತಿ ಸುವ್ಯವಸ್ಥೆ ಹಾಳು ಮಾಡುವವರ ವಿರುದ್ಧ ಕಠಿಣ ಕಾನೂನು ಕ್ರಮಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.
ಈ ಸಂದರ್ಭದಲ್ಲಿ ಭಟ್ಕಳ ನಾಮಧಾರಿ ಒಕ್ಕೂಟದ ಗೌರವಾಧ್ಯಕ್ಷ ಕೃಷ್ಣಾ ನಾಯ್ಕ, ಉಪಾಧ್ಯಕ್ಷ ಎಂ.ಕೆ.ನಾಯ್ಕ, ಕಾರ್ಯದರ್ಶಿ ಡಿ.ಎಲ್.ನಾಯ್ಕ, ಸಾರದಹೊಳೆ ನಾಮಧಾರಿ ಒಕ್ಕೂಟದ ಅಧ್ಯಕ್ಷ ನಾಗೇಂದ್ರ ನಾಯ್ಕ, ಉಪಾಧ್ಯಕ್ಷ ರಾಜು ನಾಯ್ಕ, ಕಾರ್ಯದರ್ಶಿ ರವೀಂದ್ರ ನಾಯ್ಕ, ಪ್ರಮುಖರಾದ ವಿಠ್ಠಲ ನಾಯ್ಕ, ಮಹೇಶ ನಾಯ್ಕ, ಕೆ.ಆರ್.ನಾಯ್ಕ, ಮಹಾಬಲೇಶ್ವರ ನಾಯ್ಕ, ನಾಗೇಶ ನಾಯ್ಕ ಮುಂತಾದವರಿದ್ದರು.

ಪ್ಲಾಸ್ಟಿಕ್ ಬಳಕೆ ಸಂಪೂರ್ಣವಾಗಿ ನಿಷೇಧಿಸಿ: ಸ್ವಾತಿ

ಬನವಾಸಿ: ಪ್ಲಾಸ್ಟಿಕ್ ಬಳಕೆಯಿಂದ ಪರಿಸರದ ಮೇಲೆ ದುಷ್ಪರಿಣಾಮಗಳು ಬೀರುತ್ತಿರುವುದರಿಂದ ಪ್ರತಿಯೊಬ್ಬರು ಜಾಗೃತರಾಗಿ ಪ್ಲಾಸ್ಟಿಕ್ ಬಳಕೆ ಸಂಪೂರ್ಣವಾಗಿ ನಿಷೇಧಿಸಬೇಕು ಎಂದು ಗುಡ್ನಾಪುರ ಆಯುಷ್ಮಾನ್ ಆರೋಗ್ಯ ಕೇಂದ್ರದ ಸಮುದಾಯ ಆರೋಗ್ಯ ಅಧಿಕಾರಿ ಸ್ವಾತಿ ಹೇಳಿದರು.
ಅವರು ಸಮೀಪದ ಕಂತ್ರಾಜಿ ಗ್ರಾಮದ ಸಮುದಾಯ ಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ರಾಣಿ ಚೆನ್ನಮ್ಮ ಮಹಿಳಾ ಜ್ಞಾನ ವಿಕಾಸ ಕೇಂದ್ರದಲ್ಲಿ ನಡೆದ ಜ್ವಲಂತ ಮಾಹಿತಿ ಕಾರ್ಯಕ್ರಮದಲ್ಲಿ ಮಾತನಾಡಿ, ಪರಿಸರ ಸಂರಕ್ಷಣೆ ಮತ್ತು ಪರಿಸರದ ಸ್ವಚ್ಛತೆ ಆಗಬೇಕಾದರೆ ಪ್ಲಾಸ್ಟಿಕ್ ಸಂಪೂರ್ಣವಾಗಿ ನಿಷೇಧಿಸಲು ಸಾರ್ವಜನಿಕರು ಪಣ ತೊಡಬೇಕು. ಪ್ಲಾಸ್ಟಿಕ್ ಬಳಕೆಯಿಂದ ಮಣ್ಣು, ನೀರು, ನಮ್ಮ ನಮ್ಮ ಸುತ್ತ ಮುತ್ತಲಿನ ಜೀವ ಸಂಕುಲ ಮತ್ತು ಮಾನವನ ಆರೋಗ್ಯದ ಮೇಲೆ ದುಷ್ಪರಿಣಾಮಗಳು ಬೀರುತ್ತದೆ. ಪ್ಲಾಸ್ಟಿಕ್‌ನಲ್ಲಿರುವ ಹಾನಿಕಾರಕ ಅಂಶಗಳು ಮನುಷ್ಯನ ದೇಹಕ್ಕೆ ನಾನಾ ಹಂತಗಳಲ್ಲಿ ಸೇರಿಕೊಂಡು ಮಾರಕ ರೋಗಗಳಿಗೆ ಕಾರಣವಾಗುತ್ತವೆ. ಮನೆಗಳ ಮುಂದೆ ಸಸಿ ನೆಡುವ ಮೂಲಕ ಪರಿಸರ ಕಾಳಜಿ ತೋರಬೇಕು ಎಂದರು.
ಮಹಿಳಾ ಜ್ಞಾನ ವಿಕಾಸ ಕೇಂದ್ರದ ತಾಲೂಕು ಸಮನ್ವಯ ಅಧಿಕಾರಿ ಮಲ್ಲಿಕಾ ಶೆಟ್ಟಿ ಮಾತನಾಡಿ, ಅಡುಗೆ ಮನೆ ಸಾಮಾಗ್ರಿಗಳು ಪ್ಲಾಸ್ಟಿಕ್ ಮಯವಾಗುವುದನ್ನು ನಿಲ್ಲಿಸಬೇಕು. ಮಾರುಕಟ್ಟೆಗೆ ತೆರಳಿದಾಗ ಪ್ಲಾಸ್ಟಿಕ್ ಕವರ್ ನೆಚ್ಚಿಕೊಂಡಿರಬಾರದು. ಪ್ಲಾಸ್ಟಿಕ್ ಬದಲಾಗಿ ಪರಿಸರ ಸ್ನೇಹಿ ಅನುಸರಿಸಿದರೆ ಪರಿಸರ ಸಂರಕ್ಷಣೆ ಹಾಗೂ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂದರು.
ಯೋಜನೆ ವಲಯ ಮೇಲ್ವಿಚಾರಕಿ ಸುನಂದಾ ನಾಯ್ಕ್ ಮಾತನಾಡಿದರು. ರಾಣಿ ಚೆನ್ನಮ್ಮ ಮಹಿಳಾ ಜ್ಞಾನ ಕೇಂದ್ರದ ಸದಸ್ಯೆ ಸುಮಿತ್ರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.
ಈ ವೇಳೆ ಸೇವಾ ಪ್ರತಿನಿಧಿ ಶಿವಾಜಿ ಸೇರಿದಂತೆ ರಾಣಿ ಚೆನ್ನಮ್ಮ ಮಹಿಳಾ ಜ್ಞಾನ ವಿಕಾಸ ಕೇಂದ್ರದ ಸದಸ್ಯರು ಉಪಸ್ಥಿತರಿದ್ದರು.



ಜಲದುರಂತದಲ್ಲಿ ಮೃತಪಟ್ಟ ಕುಟುಂಬಕ್ಕೆ ಪ್ರಭು ಸಾಂತ್ವನ



ಭಟ್ಕಳ: ಇತ್ತೀಚಿಗೆ ತಟ್ಟಿಹಕ್ಲು ಜಲದುರಂತದಲ್ಲಿ ಅಸುನೀಗಿದವರ ಕುಟುಂಬಕ್ಕೆ ನಾಗಯಕ್ಷೆ ಧರ್ಮದೇವಿ ಸಂಸ್ಥಾನದ ಧರ್ಮದರ್ಶಿ ರಾಮದಾಸ ಪ್ರಭು ಅವರು ಭೇಟಿ ನೀಡಿ ಸಾಂತ್ವಾನ ಹೇಳಿ ಧನ ಸಹಾಯ ಮಾಡಿದರು.
ಮೃತರ ಮನೆಗಳಿಗೆ ಭೇಟಿ ನೀಡಿದ ಧರ್ಮದರ್ಶಿ ರಾಮದಾಸ ಪ್ರಭು ಕುಟುಂಬ ಸದಸ್ಯರೊಂದಿಗೆ ಮಾತನಾಡಿ, ದುಃಖದಲ್ಲಿ ಭಾಗಿಯಾದರು. ಕಷ್ಟವನ್ನು ಸಹಿಸುವ ಶಕ್ತಿ ಭಗವಂತ ನೀಡಲಿ. ದುಡ್ಡುಕೊಟ್ಟರೆ ತಂದೆ ತಾಯಿ ಬರುವದಿಲ್ಲ ನಿಜ. ಕನಿಷ್ಟ ನಿಮ್ಮ ಬಳಿ ಮತನಾಡಿ ಹೋದರೆ ದುಃಖ ಕಡಿಮೆ ಆಗಲಿದೆ ಎನ್ನುವದು ನಮ್ಮ ಧ್ಯೇಯ. ಕಷ್ಟ ಬಂತೆಂದು ದೇವರನ್ನೂ ದೂರದೆ ಇನ್ನೂ ನಾವು ಭಗವಂತನ ಹತ್ತಿರವಾಗಬೇಕು. ಸಂಕಷ್ಟದ ಈ ಸಂದರ್ಭದಲ್ಲಿ ಧೈರ್ಯ ಕಳೆದುಕೊಳ್ಳಬಾರದು ಎಂದು ಕುಟುಂಬಸ್ಥರಿಗೆ ಸಾಂತ್ವನ ಹೇಳಿದ ಅವರು, ವೈಯಕ್ತಿಕವಾಗಿ ಆರ್ಥಿಕ ಧನಸಹಾಯ ನೀಡಿ ನೆರವಾದರು.
ಮಕ್ಕಳ ಶಿಕ್ಷಣ ಹಾಗೂ ಕುಟುಂಬದ ಭವಿಷ್ಯ ಕುರಿತು ಕಾಳಜಿ ವ್ಯಕ್ತಪಡಿಸಿದ ಅವರು, ಮಕ್ಕಳ ಮುಂದಿನ ಭವಿಷ್ಯ ಉಜ್ವಲವಾಗಲಿ, ದೇವರು ಧರ್ಮ ಸಂಸ್ಕಾರ ಪಡೆದು, ಇಂತಹ ಘೋರ ದುಃಖದಿಂದ ಮಕ್ಕಳು ಹೊರಬರುವಂತಾಗಲಿ ಎಂದು ತಾಯಿ ನಾಗಯಕ್ಷೇ ಬಳಿ ಪ್ರಾರ್ಥನೆ ಇಡುವದಾಗಿ ಅವರು ಹೇಳಿದರು.
ಸಮಾಜದ ಎಲ್ಲರೂ ಇಂತಹ ಸಂದರ್ಭದಲ್ಲಿ ಮಾನವೀಯತೆ ತೋರಬೇಕು ಎಂದು ಅಭಿಪ್ರಾಯಪಟ್ಟರು.
ಈ ಸಂದರ್ಬದಲ್ಲಿ ಆರವಳಿಕೆ ತಜ್ಞೆ ಡಾ.ಸವಿತಾ ಕಾಮತ, ಅರವಿಂದ ಪೈ, ಮಾಜಿ ಶಾಸಕ ಜೆ.ಡಿ.ನಾಯ್ಕ, ಎಸ್ ಎಮ್ ನಾಯ್ಕ, ರಾಜು ನಾಯ್ಕ ಮುಂತಾದವರಿದ್ದರು.

ಹಲಸಿನ ಬೆಳೆ ಜಗತ್ತಿನಲ್ಲಿ ಪ್ರಸಿದ್ಧಿ ಪಡೆಯಲಿ: ಮೊನ್ನೋಳಿ

ಜೋಯಿಡಾ: ಜೋಯಿಡಾ ತಾಲೂಕಿನ ಕುಣಬಿ ಭವನದಲ್ಲಿ ತೋಟಗಾರಿಕಾ ಇಲಾಖೆ, ಜಿಲ್ಲಾ ಪಂಚಾಯತಿ, ತಾಲೂಕು ಆಡಳಿತ, ತಾಲೂಕು ಪಂಚಾಯತಿ, ಕೃಷಿ ಇಲಾಖೆ, ಕೆನರಾ ಬ್ಯಾಂಕ್ ದೇಶಪಾಂಡೆ ರೂಡ್‌ಸೆಟ್ ಹಳಿಯಾಳ, ಸ್ಕೋಡ್ ವೆಸ್ ಸಂಸ್ಥೆ ಶಿರಸಿ, ಕಾಳಿ ರೈತ ಉತ್ಪಾದಕ ಸಂಸ್ಥೆ, ಗ್ರೀನ್ ಎಕರ್ಸ ಸೊಸೈಟಿ, ಪ್ರೇರಣಾ ಸಂಸ್ಥೆ, ಸಂಜೀವಿನಿ ಒಕ್ಕೂಟ ಇವರ ಸಹಯೋಗದಲ್ಲಿ ಹಲಸಿನ ಮೇಳವನ್ನು ಆಯೋಜಿಸಲಾಯಿತು.
ಜೋಯಿಡಾ ತಹಶೀಲ್ದಾರ್ ಮಂಜುನಾಥ ಮೊನ್ನೋಳಿ ಉದ್ಘಾಟಿಸಿ ಮಾತನಾಡಿ, ಹಲಸು ಆರೋಗ್ಯಕರ ವಸ್ತುವಾಗಿದೆ. ಜೋಯಿಡಾ ಭಾಗದಲ್ಲಿ ಬಹಳಷ್ಟು ರೈತರು ಹಲಸನ್ನು ಬೆಳೆಯುತ್ತಾರೆ. ಕಾಡು ಪ್ರಾಣಿಗಳ ಕಾಟದಿಂದ ಹಲಸು ಬೆಳೆಯುವುದು ಕಷ್ಟವೇ. ಆದರು ಈ ಭಾಗದ ರೈತರು ಹೆಚ್ಚಾಗಿ ಬೆಳೆದು ತಮ್ಮ ಮನೆ ಬಳಕೆಗೆ ಬಳಸುತ್ತಾರೆ. ಇದರ ಪರಿಚಯ ಜಗತ್ತಿಗೆ ಆಗಬೇಕು. ಹಲಸಿನ ಬೆಳೆ ಇನ್ನೂ ಪ್ರಸಿದ್ಧಿ ಪಡೆಯಬೇಕು ಎಂದರು.
ಶಿರಸಿ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಬಿ.ಪಿ.ಸತೀಶ ಹಾಗೂ ಗ್ರೀನ್ ಎಕರ್ಸ್ ಸೊಸೈಟಿ ಅಧ್ಯಕ್ಷ ರವಿ ರೆಡ್ಕರ್, ಕೆಪಿಸಿಸಿ ಸದಸ್ಯ ಸದಾನಂದ ದಬ್ಗಾರ ಹಲಸಿನ ಉಪಯೋಗ ಮತ್ತು ನಿರ್ವಹಣೆ



ಬಗ್ಗೆ ಮಾತನಾಡಿದರು.
ರೈತರು ಹಲಸಿನಿಂದ ಮಾಡಿದ ವಿವಿಧ ರೀತಿಯ ಖಾದ್ಯಗಳನ್ನು ಮಾರಾಟಕ್ಕೆ ತಂದಿದ್ದರು. ಜನರು ಎಲ್ಲ ಬಗೆಯ ತಿಂಡಿಗಳನ್ನು ಖರೀದಿಸಿ ತಿಂದು ಸಂತಸ ಪಟ್ಟರು. ಅಲ್ಲದೇ ವಿವಿಧ ಬಗೆಯ ಹಲಸಿನ ಸಸಿಗಳು ಮಾರಾಟಗೊಂಡವು, 50ಕ್ಕೂ ಹೆಚ್ಚಿನ ಬಗೆಯ ಹಲಸಿನ ಕಾಯಿ ಪ್ರದರ್ಶನಕ್ಕೆ ಇಡಲಾಗಿತ್ತು.
ತಾಪಂ ಕಾರ್ಯನಿರ್ವಣಾಧಿಕಾರಿ ಭಾರತಿ ಎಂ., ಶಾಂತಾರಾಮ್ ಕಾಮತ, ಪ್ರೇರಣಾ ಸಂಸ್ಥೆ ಅಧ್ಯಕ್ಷೆ ಸುಕನ್ಯಾ ದೇಸಾಯಿ, ತೋಟಗಾರಿಕಾ ಇಲಾಖೆ ಸಹಾಯಕ ನಿರ್ದೇಶಕ ಸಂತೋಷ ಎಕ್ಕಳ್ಳಿಕರ ಇದ್ದರು.
ಜೋಯಿಡಾದ ಹಿರಿಯ ಸಹಾಯಕತೋಟಗಾರಿಕೆ ನಿರ್ದೇಶಕ ರಮೇಶ ತುರಮರಿ ನೇತೃತ್ವದಲ್ಲಿ, ತೋಟಗಾರಿಕಾ ಸಹಾಯಕ ಆಧಿಕಾರಿಗಳಾದ ಅಬ್ದುಲ್ ದಳವಾಯಿ, ಯಲ್ಲಾರಲಿಂಗ್ ಮಲ್ಲಾಪೂರ, ಲಕ್ಷಣ ಕಾಂಬಳೆ ಕಾರ್ಯಕ್ರಮವನ್ನು ಆಯೋಜಿಸಿದರು.

ನೂತನ ಸಿಎಂ ಡಿಕೆಶಿ ಪ್ರಮಾಣವಚನ ಸ್ವೀಕಾರ: ಸಿಹಿ ಹಂಚಿ ಸಂಭ್ರಮ

ಹೊನ್ನಾವರ: ರಾಜ್ಯದ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ ಪ್ರಮಾಣವಚನ ಸ್ವೀಕರಿಸುತ್ತಿದ್ದಂತೆ ಪಟ್ಟಣದ ಶರಾವತಿ ವೃತ್ತದ ಬಳಿ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.
ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಸಂಘಟನೆ ಮಾಡಿ 2023ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಜಯಭೇರಿ ಸಾಧಿಸಿತ್ತು. ಕಳೆದ ಮೂರು ವರ್ಷದಲ್ಲಿ ಚುನಾವಣಾ ಪೂರ್ವ ನೀಡಿದ ಗ್ಯಾರಂಟಿ ಯೋಜನೆ ಅನುಷ್ಠಾನ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿ ನಡೆದಿದೆ. ಮುಂದಿನ ಎರಡು ವರ್ಷ ಮತ್ತಷ್ಟು ಅಭಿವೃದ್ಧಿ ಕಾರ್ಯ ನಡೆಯಲಿದೆ ಎಂದು ಇದೇ ವೇಳೆ ಸಂಭ್ರಮ ವ್ಯಕ್ತಪಡಿಸಿದರು.
ಈ ವೇಳೆ ಮಾಜಿ ಜಿ.ಪಂ.ಸದಸ್ಯ ಕೃಷ್ಣಗೌಡ, ಮುಖಂಡರಾದ ಶಿವರಾಮ ಸಂಗುಮನೆ, ಚಂದ್ರಶೇಖರ ಗೌಡ, ಯೊಗೀಶ ರಾಯ್ಕರ್, ಗಂಗಾಧರಗೌಡ, ಹರೀಶಗೌಡ, ತಿಮ್ಮಪ್ಪಗೌಡ, ಮಹಾಬಲಗೌಡ, ಅಣ್ಣಪ್ಪಗೌಡ, ಪ್ರಮೋದ ನಾಯ್ಕ, ಕಾಂಗ್ರೆಸ್ ಕಾರ್ಯಕರ್ತರು ಇದ್ದರು.



ಶ್ರೀಶಾಂತಾದುರ್ಗಾ ದೇವಿ ಮಂತ್ರ ಪುಷ್ಪಾಂಜಲಿ ಕೃತಿ ಲೋಕಾರ್ಪಣೆ

ಅಂಕೋಲಾ: ಲೇಖಕಿ, ನಿವೃತ್ತ ಪ್ರಾಚಾರ್ಯೆ ಡಾ.ಸ್ಮಿತಾ (ಸ್ನೇಹಾ) ಜಯಂತ ನಾರ್ವೇಕರ್(ಫಾತರಪೇಕರ್) ಅವರು ಹೊರ ತಂದಿರುವ ಭೂಮ್ತಾಯಿ ಶ್ರೀ ಶಾಂತಾದುರ್ಗಾ ದೇವಿ ಮಂತ್ರ ಪುಷ್ಪಾಂಜಲಿ ಕೃತಿ ಶ್ರೀಶಾಂತಾದುರ್ಗಾ ದೇವಸ್ಥಾನದಲ್ಲಿ ಲೋಕಾರ್ಪಣೆಗೊಂಡಿತು.
ಕಾರ್ಯಕ್ರಮವನ್ನು ಹಿರಿಯ ಅರ್ಚಕ ವಿಠ್ಠಲ ಭಟ್ಟ ದೀಪ ಬೆಳಗಿಸಿ ಉದ್ಘಾಟಿಸಿ ಶುಭ ಕೋರಿದರಲ್ಲದೇ ನಾರ್ವೇಕರ್ ಅವರ ದೈವಭಕ್ತಿ, ನಿಷ್ಠೆಯ ಫಲವಾಗಿ ಈ ಕೃತಿ ಮೂಡಿಬಂದಿದೆ ಎಂದರು.
ಕೃತಿ ಕೆಎಲ್ಇ ಅಂಕೋಲಾ ಸಮೂಹ ಸಂಸ್ಥೆಗಳ ಸಲಹಾ ಸಮಿತಿ ಸದಸ್ಯ ಡಾ.ಮಿನಲ್ ನಾರ್ವೇಕರ್ ಬಿಡುಗಡೆಗೊಳಿಸಿ ಶುಭಕೋರಿದರು.
ಮುಖ್ಯತಿಥಿ ಹಿರಿಯ ನ್ಯಾಯವಾದಿ ಸುಭಾಸ ನಾರ್ವೇಕರ್ ಮಾತನಾಡಿ, ಶ್ರೀಶಾಂತಾದುರ್ಗೇಯ ಶ್ಲೋಕ, ಕವನಗಳ ಕೃತಿ ಇದುವರೆಗೂ ಲಭ್ಯವಿರಲಿಲ್ಲ. ಡಾ.ಸ್ಮಿತಾ (ಸ್ನೇಹಾ) ಜಯಂತ ನಾರ್ವೇಕರ್ ಅವರು ಇದನ್ನು ಪುಸ್ತಕ ರೂಪದಲ್ಲಿ ಹೊರ ತಂದಿರುವುದು ಭಕ್ತರಿಗೆ ಅನುಕೂಲವಾಗಲಿದೆ ಎಂದರು.



ಪತ್ರಕರ್ತ ವಿಠ್ಠಲದಾಸ ಕಾಮತ್ ಮಾತನಾಡಿ, ಕೃತಿಕಾರರು ಉತ್ತಮ ಗಾಯಕರಾಗಿರುವ ಹಿನ್ನೆಲೆಯಲ್ಲಿ ಈ ಕೃತಿಯಲ್ಲಿ ಇರುವ ಶ್ಲೋಕ ಮತ್ತು ಕವನಗಳನ್ನು ಹಾಡುಗಳಾಗಿ ಸಿಡಿಯ ರೂಪದಲ್ಲಿ ಹೊರ ತರುವ ಕಾರ್ಯ ಕೃತಿಕಾರರಿಂದ ಆಗಬೇಕು ಎಂದರು.
ಪ್ರಮುಖ ಭಾಸ್ಕರ ನಾರ್ವೇಕರ್ ಮಾತನಾಡಿ, ಭಕ್ತರು ಕೃತಿಯನ್ನು ಖರೀದಿಸಿ ಪ್ರೋತ್ಸಾಹಿಸಬೇಕು ಎಂದರು.
ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದೇವಸ್ಥಾನದ ಧರ್ಮದರ್ಶಿ, ನಿವೃತ್ತ ಶಿಕ್ಷಕ ಎನ್.ಬಿ.ಮಹಾಲೆ ಶುಭಕೋರಿದರು. ಅತಿಥಿಗಳಾಗಿ ಧರ್ಮದರ್ಶಿ ಅಶೋಕ ಮಹಾಲೆ, ಲೇಖಕ ವಿಘ್ನೇಶ್ವರ ಗುನಗಾ, ಅರ್ಚಕ ಗಣಪತಿ ಭಟ್ಟ, ಪ್ರಮುಖ ಜಯಂತ ನಾರ್ವೇಕರ್ ಉಪಸ್ಥಿತರಿದ್ದರು.
ದಿನಕರ ಅಂಕೋಲೇಕರ್ ಪ್ರಾರ್ಥನೆ ಮಾಡಿದರು. ಗಾಯಕ ಗಣೇಶ ನಾರ್ವೇಕರ್ ಸ್ವಾಗತಿಸಿ, ಕಾರ್ಯಕ್ರಮ ನಿರ್ವಹಿಸಿದರು. ಲೇಖಕಿ ಡಾ.ಸ್ಮಿತಾ (ಸ್ನೇಹಾ) ಜಯಂತ ನಾರ್ವೇಕರ್ ಪ್ರಾಸ್ತಾವಿಕ ಮಾತನಾಡಿ, ಕೃತಿ ರಚನೆ ಹಿಂದಿನ ಕನಸನ್ನು ತೆರೆದಿಟ್ಟರು. ಕಾರ್ಯಕ್ರಮದ ಮಧ್ಯೆ ಕೃತಿಯಲ್ಲಿ ಇರುವ ಕವನಗಳನ್ನು ಡಾ.ಸ್ಮಿತಾ (ಸ್ನೇಹಾ) ಜಯಂತ ನಾರ್ವೇಕರ್, ಸಂಗೀತಾ ಬಾಂದೇಕರ್, ಶಾಂತಲಾ ಅರುಣ ನಾಡಕರ್ಣಿ, ವಿನಯಾ ಪ್ರಭು, ಗಾಯತ್ರಿ ಶೆಟ್ಟಿ, ಸೋನಿ ನಾಗ್ವೇಕರ್, ಗಣೇಶ ನಾಗ್ವೇಕರ್, ವಿನಯ ಫಾತರಪೇಕರ್ ಶುಶ್ರಾವ್ಯವಾಗಿ ಹಾಡಿ ಸಭಿಕರ ಮನಗೆದ್ದರು.

ಕಿರುಸುದ್ದಿ

ಬೆಳೆವಿಮೆಗೆ ದಾಖಲೆ ಸಲ್ಲಿಸಲು ಸೂಚನೆ

ಹಿರೇಕೆರೂರ: ಕಳೆದ 2024-25ನೇ ಸಾಲಿನ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ಶುಂಠಿ 174 ಮತ್ತು ಹಸಿಮೆಣಸಿನಕಾಯಿ 224 ಜನ ರೈತರು ಬೆಳೆ ಹೊಂದಾಣಿಕೆ ಆಗದೆ ಬೆಳೆವಿಮೆ ಜಮಾ ಆಗಿರುವುದಿಲ್ಲ. ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ತಾಲೂಕು, ಜಿಲ್ಲಾಮಟ್ಟದ ಕುಂದು-ಕೊರತೆ ನಿರ್ವಹಣಾ ಸಮಿತಿ ಸಭೆಯಲ್ಲಿ ತೀರ್ಮಾನಿಸಿದಂತೆ ಬೆಳೆ ವಿಮೆ ಜಮಾಗೆ ಸರ್ಕಾರ ಹಾಗೂ ಸಂಬಂಧಿಸಿದ ವಿಮಾ ಕಂಪನಿಗಳು ಒಪ್ಪಿಕೊಂಡಿರುವುದಿಲ್ಲ. ಆದ್ದರಿಂದ 2024-25 ರ ಪಹಣಿ ಪತ್ರಿಕೆಯಲ್ಲಿ ವಿಮೆಗೆ ನೊಂದಾಯಿಸಿದ ಬೆಳೆ ನಮೂದು ಆಗಿರಬೇಕು. 2024-25 ನೇ ಸಾಲಿನಲ್ಲಿ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ವಿಮೆ ನೊಂದಾಯಿತ ಉತ್ಪನ್ನವನ್ನು ಬೆಳೆ ಮಾರಾಟ ಮಾಡಿದ್ದಲ್ಲಿ ಸೂಕ್ತ ದಾಖಲೆ, 2024-25 ನೇ ಸಾಲಿನಲ್ಲಿ ವಿಮೆಗೆ ನೊಂದಾಯಿತ ಬೆಳೆಯ ಉತ್ಪನ್ನ ಎಪಿಎಂಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದ ಕಂಪ್ಯೂಟರ್ ರಶೀದಿ, ವಿಮಾ ನೊಂದಾಯಿತ ಬೆಳೆಯನ್ನು ಬೆಳೆಯಲು 2024-25 ನೇ ಸಾಲಿನಲ್ಲಿ ಬ್ಯಾಂಕ್‌ನಿಂದ ಸಾಲ ಪಡೆದಿದ್ದಲ್ಲಿ ಬ್ಯಾಂಕ್‌ನವರಿಂದ ದೃಢೀಕೃತ ಪ್ರತಿಗಳು ಇವುಗಳಲ್ಲಿ ಯಾವುದಾದರೂ ದಾಖಲಾತಿಗಳನ್ನು ಮೇಲಿನ ವರ್ಷಕ್ಕೆ ಸಂಬಂಧಿಸಿದಂತೆ ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಹಿರೇಕೆರೂರು ತೋಟಗಾರಿಕೆ ಇಲಾಖೆ ಕಚೇರಿಗೆ ಸಲ್ಲಿಸಬೇಕು ಎಂದು ಹಿರೇಕೆರೂರು ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೋಡಲ್ ಅಧಿಕಾರಿ ನೇಮಕ

ಹಾವೇರಿ: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ-2026ರ ಸಂಬಂಧ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ ಮೇಲ್ವಿಚಾರಣೆಗೆ ಜಿಲ್ಲಾಮಟ್ಟದ ನೋಡಲ್ ಅಧಿಕಾರಿಯಾಗಿ ತುಂಗಾ ಮೇಲ್ದಂಡೆ ಯೋಜನೆ ವಿಶೇಷ ಭೂಸ್ವಾಧೀನಾಧಿಕಾರಿ ನವೀನ ಹುಲ್ಲೂರು (ಮೊ.9945862004) ಅವರನ್ನು ನೇಮಕ ಮಾಡಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಆದೇಶ ಹೊರಡಿಸಿದ್ದಾರೆ.

ಗ್ರಾಮ ಒನ್ ಕೇಂದ್ರ ಸ್ಥಾಪನೆಗೆ ಅರ್ಜಿ ಆಹ್ವಾನ

ಹಾವೇರಿ: ಜಿಲ್ಲೆಯಲ್ಲಿ ಹೊಸದಾಗಿ ಗ್ರೇಡ್-1 ಗ್ರಾಮ ಪಂಚಾಯತಿಯಾಗಿ ಮಾರ್ಪಟ್ಟ ಹಲವು ಪಂಚಾಯತಿಗಳಲ್ಲಿ ಹೆಚ್ಚುವರಿಯಾಗಿ ಗ್ರಾಮ ಒನ್ ಕೇಂದ್ರ ಸ್ಥಾಪನೆಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಹಾನಗಲ್ ತಾಲೂಕು ಆಡೂರು, ಬಾಳಂಬೀಡ, ಹಾವೇರಿ ತಾಲೂಕು ಹೊಸಕಿತ್ತೂರು, ರಾಣೇಬೆನ್ನೂರು ತಾಲೂಕು ಮುದೇನೂರು, ತುಮ್ಮಿನಕಟ್ಟಿ, ಮೆಡ್ಲೇರಿ, ಹನುಮಾಪುರ, ಗುಡ್ಡದ ಆನ್ವೇರಿ, ಬೆನಕನಕೊಂಡ, ಕಜ್ಜರಿ ಸೋಮ್ಲಾಪುರ, ಹಿರೇಕೆರೂರು ತಾಲೂಕು ಹಂಸಭಾವಿ, ಬುರಡಿಕಟ್ಟಿ, ಶಿಗ್ಗಾಂವ ತಾಲೂಕು ಮಡ್ಲಿ ಚಂದಾಪುರ, ಬನ್ನೂರು ಹಾಗೂ ರಟ್ಟಿಹಳ್ಳಿ ತಾಲೂಕು ಹಿರೇಮೊರಬ ಮತ್ತು ಮಕರಿ ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಒನ್ ಕೇಂದ್ರ ಸ್ಥಾಪನೆಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಆನ್ ಲೈನ್ https//sevasindhuervices.karnataka.gov.in/ dierctApply.do?serviceId+2631 ನಲ್ಲಿ ಜೂ.15ರೊಳಗಾಗಿ ಅರ್ಜಿ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಪ್ರೊ.ಜಿ.ಬಿ.ಕಲಕೋಟಿ ನಿಧನ

ಹಾವೇರಿ: ತಾಲೂಕಿನ ಕೊರಡೂರ ಗ್ರಾಮದ ನಿವಾಸಿ, ಹುಬ್ಬಳ್ಳಿ ಪಿ.ಸಿ.ಜಾಬಿನ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಪ್ರೊ.ಜಿ.ಬಿ.ಕಲಕೋಟಿ ನಿಧನರಾದರು. ಪ್ರೊ. ಜಿ.ಬಿ. ಕಲಕೋಟಿ ಅವರು ಕೊರಡೂರಿನ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಲ್ಲಿ ಜನಿಸಿ, ಎಂಎಸ್ಸಿ ಭೌತಶಾಸ್ತ್ರ



ಪದವಿ ಪೂರೈಸಿ ಹುಬ್ಬಳ್ಳಿಯ ಕೆಎಲ್ಇ ಸಂಸ್ಥೆಯ ಪಿ.ಸಿ.ಜಾಬಿನ ಕಾಲೇಜಿನಲ್ಲಿ ಉಪನ್ಯಾಸಕರಾಗಿ 1980ರಲ್ಲಿ ಸೇವೆಗೆ ಸೇರಿ, ಪ್ರಾಧ್ಯಾಪಕರಾಗಿ ನಿವೃತ್ತಿ ಹೊಂದಿದ್ದರು. ಸೇವೆಯಲ್ಲಿದ್ದಾಗಲೇ ಎನ್‌ಸಿಸಿ ಕ್ಯಾಪ್ಟನ್ ಆಗಿ ಹಲವಾರು ಜನರನ್ನ ಶಿಸ್ತು ಬದ್ಧ ಜೀವನ ರೂಪಿಸಿಕೊಳ್ಳಲು ನೆರವಾಗಿದ್ದರು. ತಮ್ಮ ನಿವೃತ್ತಿ ಜೀವನವನ್ನ ಹುಬ್ಬಳ್ಳಿ ನಗರದಲ್ಲಿ ಕಳೆದರು. ಮೃತರ ಪಾರ್ಥಿವ ಶರೀರವನ್ನು ಗುರುವಾರ ಹುಬ್ಬಳ್ಳಿಯ ಚಂದ್ರಗಿರಿ ಲೇಔಟ್‌ನಲ್ಲಿರುವ ಅವರ ಸ್ವಗೃಹದಲ್ಲಿ ಸಾರ್ವಜನಿಕ ದರ್ಶನಕ್ಕೆ ಇಡಲಾಗುವುದು. ನಂತರ 9 ಗಂಟೆಗೆ ಹಾವೇರಿ ತಾಲೂಕಿನ ಕೊರಡೂರಿನ ಸ್ವಗ್ರಾಮಕ್ಕೆ ತೆಗೆದುಕೊಂಡು ಬಂದು ಮಧ್ಯಾಹ್ನ 1 ಗಂಟೆಗೆ ಅಂತಿಮ ವಿಧಿವಿಧಾನಗಳನ್ನು ಪೂರೈಸಲಾಗುವುದು ಎಂದು ಕುಟುಂಬ ಮೂಲಗಳು ತಿಳಿಸಿವೆ.



ಹಾವೇರಿ: ಸಾರ್ವಜನಿಕರ ನೆಮ್ಮದಿಗೆ ಭಂಗ ತರುತ್ತಿದ್ದ ಕರ್ಕಶ ಶಬ್ದ ಮಾಡುವ ಬೈಕ್‌ಗಳಲ್ಲಿರುವ ಸೈಲೆನ್ಸರ್‌ಗಳನ್ನು ಬುಧವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ನೇತೃತ್ವದಲ್ಲಿ ನಗರದ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಎದುರು ಜೆಸಿಬಿ ಮೂಲಕ ಒಡೆದು ನಾಶಪಡಿಸುವ ಮೂಲಕ ಕರ್ಕಶ ಶಬ್ದಕ್ಕೆ ಬ್ರೇಕ್ ಹಾಕಲಾಯಿತು.

ಜೂ.6ಕ್ಕೆ ಗುದ್ಲೆಪ್ಪ ಹಳ್ಳಿಕೇರಿ ಜಯಂತ್ಯುತ್ಸವ

ಹಾವೇರಿ: ಕರ್ನಾಟಕದ ಉಕ್ಕಿನ ಮನುಷ್ಯ ಗುದ್ಲೆಪ್ಪ ಹಳ್ಳಿಕೇರಿ ಅವರ 121ನೇ ಜಯಂತ್ಯುತ್ಸವ ಪ್ರಯುಕ್ತ ಜೂ.6ರಂದು ಬೆಳಗ್ಗೆ 11ಕ್ಕೆ ತಾಲೂಕಿನ ಹೊಸರಿತ್ತಿ ಗ್ರಾಮದಲ್ಲಿರುವ ಗಾಂ ಗ್ರಾಮೀಣ ಗುರುಕುಲದ ಗಾಂ ಸ್ಮಾರಕ ಭವನದಲ್ಲಿ ಗುದ್ಲೆಪ್ಪ ಹಳ್ಳಿಕೇರಿ ಸೇವಾ ಗೌರವ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎ.ಎಂ.ಖಾನ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಹುಬ್ಬಳ್ಳಿಯ ಹಿರಿಯ ಸಂಪಾದಕ ರಾಹುಲ ಬೆಳಗಲಿ ಅತಿಥಿಗಳಾಗಿ ಆಗಮಿಸುವರು. ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಕೆ.ಎಸ್.ಕೌಜಲಗಿ ಗುದ್ಲೆಪ್ಪ ಹಳ್ಳಿಕೇರಿಯವರಿಗೆ ನುಡಿನಮನ ಸಲ್ಲಿಸಲಿದ್ದಾರೆ. ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಲಿಂಗರಾಜ ಅಂಗಡಿ ಅಧ್ಯಕ್ಷತೆ ವಹಿಸಲಿದ್ದಾರೆ.

ವಿಶ್ರಾಂತ ಪೊಲೀಸ್ ವರಿಷ್ಠಾಕಾರಿ ವಿಜಯಕುಮಾರ ರಾಜಶೇಖರ ಬಿಸನಳ್ಳಿ ಅವರಿಗೆ ಗುದ್ಲೆಪ್ಪ ಹಳ್ಳಿಕೇರಿ ಸೇವಾ ಗೌರವ ಪ್ರಶಸ್ತಿ ನೀಡಿ ಗೌರವಿಸಲಾಗುವುದು.

ಈ ವೇಳೆ ಗುದ್ಲೆಪ್ಪ ಹಳ್ಳಿಕೇರಿ ಸ್ಮಾರಕ ಪ್ರತಿಷ್ಠಾನದ ಗುರುಕುಲ ಹಾಗೂ ರಾಷ್ಟ್ರೀಯ ಶಿಕ್ಷಣ ಸಮಿತಿ ವತಿಯಿಂದ ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ ಹಾಗೂ ಪದವಿಯಲ್ಲಿ ಹೆಚ್ಚು ಅಂಕಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಲಿದೆ. ಗುದ್ಲೆಪ್ಪ ಹಳ್ಳಿಕೇರಿಯವರ ಫೋಟೋಗ್ಯಾಲರಿ ಮ್ಯೂಜಿಯಂ ವೀಕ್ಷಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.



ಹಾವೇರಿ: ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ ಪ್ರಮಾಣವಚನ ಸ್ವೀಕರಿಸಿದ ಹಿನ್ನೆಲೆ ನಗರದ ಹುತಾತ್ಮ ಮೈಲಾರ ಮಹದೇವಪ್ಪ ವೃತ್ತದಲ್ಲಿ ಬುಧವಾರ ಸಂಜೆ ಜಿಲ್ಲಾ ಕಾಂಗ್ರೆಸ್‌ನ ಮುಖಂಡರು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ, ಪರಸ್ಪರ ಸಿಹಿ ತಿನ್ನಿಸುವ ಮೂಲಕ ಸಂಭ್ರಮಾಚರಣೆ ನಡೆಸಿದರು.

ಕ್ರಿಯಾ ಯೋಜನೆ ತರಬೇತಿ | ಜಿಪಂ ಉಪಕಾರ್ಯದರ್ಶಿ ಡಾ.ಪುನೀತ್ ಸಲಹೆ

ಪರಿಸರ ಸಂರಕ್ಷಣೆಗೆ ಒತ್ತು ಕೊಡಿ

ಹಾವೇರಿ: ಪರಿಸರ ಸಂರಕ್ಷಣೆಯ ಬಗ್ಗೆ ಶಿಕ್ಷಣ ಇಲಾಖೆ ಹೆಚ್ಚಿನ ಒತ್ತು ನೀಡಬೇಕು. ಪರಿಸರ ಸಂರಕ್ಷಣೆ ಕೇವಲ ಕರ್ತವ್ಯವಾಗಿರದೆ, ಬಾಲ್ಯದಿಂದಲೇ ಮನೆಮನೆಗಳಲ್ಲಿ ಬೆಳೆಸುವ ಸಂಸ್ಕಾರ ಬೆಳೆಯಬೇಕು ಎಂದು ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಡಾ.ಪುನೀತ್ ಬಿ.ಆರ್. ಅವರು ಹೇಳಿದರು.

ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಬುಧವಾರ ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆ ಕುರಿತು ಕ್ರಿಯಾ ಯೋಜನೆ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ಹೊಸದಾಗಿ ಜಾರಿಯಾಗಿರುವ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು-2026ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದು ಅಧಿಕಾರಿಗಳಿಗೆ ಕರೆ ನೀಡಿದರು.

ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ)ಯು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆಯಾಗಿದೆ. ಕರ್ನಾಟಕ ಸರ್ಕಾರದ ನಿರ್ದೇಶನದಂತೆ ಎಂಪ್ರಿ ಸಂಸ್ಥೆಯು ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆಯ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿದ್ದು, 2024ರಲ್ಲಿ ಕೇಂದ್ರ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಅನುಮೋದನೆ ಪಡೆದಿದೆ ಎಂದರು.

ಈ ಯೋಜನೆಯಡಿ ಹವಾಮಾನ ಬದಲಾವಣೆಗೆ ಸಂಬಂಧಿಸಿದ ವಿವಿಧ ಕಾರ್ಯಾಂಶಗಳ ಆಧಾರದ ಮೇಲೆ ರಾಜ್ಯದ ವಿವಿಧ ಇಲಾಖೆಗಳು 2025-2030ರ ಅವಧಿಗೆ ಪ್ರಮುಖ ಕಾರ್ಯಕ್ಷಮತಾ ಸೂಚಕಗಳನ್ನು ಹಾಗೂ ಗುರಿಗಳನ್ನು ನಿಗದಿಪಡಿಸಿವೆ. ಈ ಗುರಿಗಳ



> **ಎಂಪ್ರಿ ಸಂಸ್ಥೆಯು ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯ ಸಹಯೋಗದೊಂದಿಗೆ 2025-26ನೇ ಸಾಲಿನಲ್ಲಿ ರಾಜ್ಯದ 22 ಜಿಲ್ಲೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಿತ್ತು. ಇದರ ಮುಂದುವರಿದ ಭಾಗವಾಗಿ 2026-27ನೇ ಸಾಲಿನಲ್ಲಿ ರಾಜ್ಯದ ಎಲ್ಲಾ 31 ಜಿಲ್ಲೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ವಿಸ್ತರಿಸಲಾಗಿದೆ.**
>
> ■ **ಡಾ.ಪುನೀತ್, ಹಾವೇರಿ ಜಿಪಂ ಉಪಕಾರ್ಯದರ್ಶಿ**

ಪರಿಣಾಮಕಾರಿ ಅನುಷ್ಠಾನಕ್ಕಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಇತರೆ ಪಾಲುದಾರ ಸಂಸ್ಥೆಗಳ ಸಾಮರ್ಥ್ಯ ವೃದ್ಧಿ ಅಗತ್ಯವಾಗಿದೆ ಎಂದು ಹೇಳಿದರು.

ಜಿಲ್ಲಾ ಪಂಚಾಯತಿ ಮುಖ್ಯ ಯೋಜನಾಧಿಕಾರಿ ಎಚ್.ವೈ.ಮೀಸಿ ಅವರು ಹವಾಮಾನ ಬದಲಾವಣೆಯ ಪ್ರತಿಕೂಲ ಪರಿಣಾಮಗಳು ಹಾಗೂ ತರಬೇತಿ ಕಾರ್ಯಕ್ರಮದ ಉದ್ದೇಶವನ್ನು ವಿವರಿಸಿದರು. ತರಬೇತಿಯ ಪ್ರಯೋಜನಗಳನ್ನು ತಮ್ಮ ಕಾರ್ಯಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳುವಂತೆ ಅಧಿಕಾರಿಗಳಿಗೆ ಸಲಹೆ ನೀಡಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಎಂಪ್ರಿ ಸಂಸ್ಥೆಯ ಸಂಶೋಧನಾ ವಿಜ್ಞಾನಿಗಳಾದ ಡಾ.ಪವಿತ್ರಾ ನಾಯಕ್ ಅವರು ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆಯ ಕ್ರಿಯಾ ಯೋಜನೆ ಕುರಿತು ಹಾಗೂ ಜಲಸಂಪನ್ಮೂಲ ವಲಯಕ್ಕೆ ಸಂಬಂಧಿಸಿದ ಹವಾಮಾನ ಕ್ರಿಯಾ ಯೋಜನೆ ಕುರಿತು ಜಲ ಸಂಪನ್ಮೂಲ ತಜ್ಞರು, ಎಸಿಐಡಬ್ಲ್ಯುಆರ್‌ಎಂ, ಡಾ.ಉಷಾ ಅವರು ಉಪನ್ಯಾಸ ನೀಡಿದರು. ಎನ್.ಆರ್.ಡಿ.ಎಂ.ಎಸ್. ಅಧಿಕಾರಿ ಬಸವರಾಜ ಬಾರ್ಕಿ, ಎಂಪ್ರಿ ಸಂಸ್ಥೆಯ ತರಬೇತಿ ಅಸೋಸಿಯೇಟ್ ರುಚಿತಾ ಹಾಗೂ ತರಬೇತಿ ಸಹಾಯಕ ರಾಘವೇಂದ್ರ ಎನ್. ಇತರರು ಉಪಸ್ಥಿತರಿದ್ದರು.

ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಂಘ-ಸಂಸ್ಥೆಗಳ ಪ್ರತಿನಿಧಿಗಳು, ಶಿಕ್ಷಣ ಸಂಸ್ಥೆಗಳ ಸದಸ್ಯರು ಹಾಗೂ ಇತರರು ಭಾಗವಹಿಸಿದ್ದರು.

ಸಿಎಂ ಡಿಕೆಶಿ ಪ್ರಮಾಣವಚನ ಸ್ವೀಕಾರ

ಹಾವೇರಿಯಲ್ಲಿ ಸಂಭ್ರಮ

ಹಾವೇರಿ: ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ ಪ್ರಮಾಣವಚನ ಸ್ವೀಕರಿಸಿದ ಹಿನ್ನೆಲೆ ನಗರದ ಹುತಾತ್ಮ ಮೈಲಾರ ಮಹದೇವಪ್ಪ ವೃತ್ತದಲ್ಲಿ ಬುಧವಾರ ಸಂಜೆ ಜಿಲ್ಲಾ ಕಾಂಗ್ರೆಸ್‌ನ ಮುಖಂಡರು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ, ಪರಸ್ಪರ ಸಿಹಿ ತಿನ್ನಿಸುವ ಮೂಲಕ ಸಂಭ್ರಮಾಚರಣೆ ನಡೆಸಿದರು.

ಈ ವೇಳೆ ಮಾತನಾಡಿದ ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಎಂ.ಎಂ ಹಿರೇಮಠ, ಕಾಂಗ್ರೆಸ್ ಪಕ್ಷದ ಕಟ್ಟಾಳು ಹಾಗೂ ಸಂಘಟನಾ ಚತುರ ಡಿ.ಕೆ ಶಿವಕುಮಾರ ಅವರು ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿರುವುದು ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರು ಹೆಮ್ಮೆಪಡುವಂತಹ ವಿಷಯವಾಗಿದೆ. ಡಿಕೆಶಿ ಅವರು ಎನ್‌ಎಸ್‌ಯುಐ ವಿದ್ಯಾರ್ಥಿ ಸಂಘಟನೆಯಿಂದಲೇ ನಾಯಕತ್ವ ಗುಣಗಳನ್ನು ಬೆಳೆಸಿಕೊಂಡಿದ್ದರು. ಶಾಸಕರಾಗಿ, ಸಚಿವರಾಗಿ, ಉಪಮುಖ್ಯಮಂತ್ರಿಗಳಾಗಿ ಜನಸೇವೆ ಮಾಡಿ, ಇದೀಗ ರಾಜ್ಯದ ಮುಖ್ಯಮಂತ್ರಿಯಾಗಿ ಇನ್ನೂ ಹೆಚ್ಚಿನ ಜನಸೇವೆ ಮಾಡಲು ಸಿದ್ಧರಾಗಿರುವುದು ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚಿನ ಬಲ ತಂದಿದೆ. ಡಿಕೆಶಿ ಅವರ ಮಾರ್ಗದರ್ಶನದಲ್ಲಿ ಎಲ್ಲರೂ ಮುನ್ನಡೆಯೋಣ ಎಂದರು.

ಹಾವೇರಿ ನಗರಾಭಿವೃದ್ಧಿ ಪ್ರಾಕಾರದ ಅಧ್ಯಕ್ಷ ಎಸ್‌ಎಫ್‌ಎನ್ ಗಾಜೀಗೌಡ್ರ ಮಾತನಾಡಿ, ಕಾಂಗ್ರೆಸ್ ಪಕ್ಷದ ಹೈಕಮಾಂಡ ಸೂಚನೆ ಮೇರೆಗೆ ಅಹಿಂದ ನಾಯಕ ಸಿದ್ದರಾಮಯ್ಯನವರು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿ, ಮುಖ್ಯಮಂತ್ರಿ ಹುದ್ದೆಯನ್ನು ಬಿಟ್ಟುಕೊಟ್ಟು ತ್ಯಾಗರಾಮಯ್ಯ ಎನಿಸಿಕೊಂಡಿದ್ದಾರೆ. ಇದೀಗ ಕಾಂಗ್ರೆಸ್ ಪಕ್ಷದ ಕಟ್ಟಾಳು, ಸಂಘಟನಾಕಾರ ಡಿ.ಕೆ ಶಿವಕುಮಾರ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಿರುವುದು ಸಂತಸ ತಂದಿದೆ. ಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ರಾಜ್ಯದ ಸೇವೆ ಮಾಡುವಂತಹ ಶಕ್ತಿಯನ್ನು ಭಗವಂತ ನೀಡಲಿ ಎಂದರು.

ಈ ವೇಳೆ ಕೆಸಿಸಿ ಬ್ಯಾಂಕಿನ ನಿರ್ದೇಶಕ ಕೊಟ್ರೇಶಪ್ಪ ಬಸೇಗಣ್ಣಿ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ಎಂ.ಎಂ ಮೈದೂರ, ಡಿ.ಕೆ ಶಿವಕುಮಾರ್ ಅಭಿಮಾನಿ ಬಳಗ ಮುಖಂಡರಾದ ಅಲ್ತಾಫ್ ಚೋಪದಾರ, ವೀರಣ್ಣ ಪಾಟೀಲ, ನೂರ್‌ಅಹ್ಮದ್ ಬೋರಗಲ್, ಜಿಲ್ಲಾ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಶಂಕರ ಮೆರವಾಡೆ, ಶಹರ ಘಟಕದ ಅಧ್ಯಕ್ಷ ಪ್ರಭುಗೌಡ ಬಿಷ್ಟನಗೌಡ್ರ, ಉಮರ ಇನಾಮದಾರ, ಸುಭಾಷ್ ಚವ್ಹಾಣ, ಗದಿಗೆಪ್ಪ ನೆಲೋಗಲ್ಲ, ಮಹಾಲಿಂಗಯ್ಯ ಪಾಟೀಲ, ಜಮೀರ್ ಜಿಗರಿ, ರಾಧಾ ಸವಣೂರ, ಮಮತಾ ಜಾಬಿನ್, ಬಸವರಾಜ್ ಬಳ್ಳಾರಿ, ಪ್ರಸನ್ನ ಹಿರೇಮಠ, ಕರಬಸಪ್ಪ ಹಲಗಣ್ಣನವರ, ಬಸವರಾಜ್ ಜಾಬಿನ, ರಮೇಶ್ ಮಾಳವಾದೆ, ರಾಜು ಡೊಳ್ಳಿನ್, ಚನ್ನಬಸಪ್ಪ ಅಂಗರಗಟ್ಟಿ, ಜಾಫರ ಅತ್ತಾರ, ಶೋಯಬ್ ಬಡಿಗೇರ್ ಸೇರಿದಂತೆ ಅನೇಕ ಕಾರ್ಯಕರ್ತರು ಹಾಜರಿದ್ದರು.

ಶಿಕ್ಷಕರ ಕೊರತೆ: ಶಾಲೆ ಬಂದ್ ಮಾಡಿ ಪ್ರತಿಭಟನೆ

ರಾಣೇಬೆನ್ನೂರ: ಗ್ರಾಮದ ಸರ್ಕಾರಿ ಶಾಲೆಯಲ್ಲಿ ಸಮರ್ಪಕ ಸಂಖ್ಯೆಯಲ್ಲಿ ಶಿಕ್ಷಕರಿಲ್ಲದ ಕಾರಣ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಂದರೆಯಾಗುತ್ತಿದೆ ಎಂದು ಆರೋಪಿಸಿ ಗ್ರಾಮಸ್ಥರು, ಪೋಷಕರು, ವಿದ್ಯಾರ್ಥಿಗಳು, ಎಸ್‌ಡಿಎಂಸಿ ಸದಸ್ಯರು ಬುಧವಾರದಂದು ಶಾಲೆ ಬಂದ್ ಮಾಡಿ ನಾಲ್ಕು ಗಂಟೆಗಳ ಕಾಲ ಪ್ರತಿಭಟನೆ ನಡೆಸಿದ ಘಟನೆ ತಾಲೂಕಿನ ಚಿಕ್ಕ ಅರಳಿಹಳ್ಳಿ ಗ್ರಾಮದ ಸರ್ಕಾರಿ ಶಾಲೆಯಲ್ಲಿ ನಡೆದಿದೆ.

ಶಾಲೆಯಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕು. ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಶಿಕ್ಷಕರ ಕೊರತೆಯ ವಿಚಾರವಾಗಿ ಶಾಸಕ ಪ್ರಕಾಶ ಕೋಳಿವಾಡ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ, ಶಿಕ್ಷಕರ ನೇಮಕ ಮಾಡುವವರೆಗೂ ಪ್ರತಿಭಟನೆ ಹಿಂಪಡೆಯೋಲ್ಲ ಎಂದು ಪ್ರತಿಭಟನಾಕಾರರು ಪಟ್ಟು ಹಿಡಿದರು.

ಪ್ರತಿಭಟನೆ ಸುದ್ದಿ ತಿಳಿದ ತಕ್ಷಣ ಸ್ಥಳಕ್ಕೆ ಆಗಮಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಶ್ಯಾಮಸುಂದರ ಅಡಿಗ ಹಾಗೂ ಸಿಬ್ಬಂಧಿಯವರನ್ನು ಗ್ರಾಮಸ್ಥರು ಹಾಗೂ ಪಾಲಕರು ತರಾಟೆಗೆ ತೆಗೆದುಕೊಂಡರು.

ಶ್ಯಾಮಸುಂದರ ಅಡಿಗ ಮಾತನಾಡಿ, ಶಿಕ್ಷಕರ ಕೊರತೆ ಸಮಸ್ಯೆಯನ್ನು ಪರಿಹರಿಸಲು ಮೇಲಾಧಿಕಾರಿಗಳ ಗಮನಕ್ಕೆ ತಂದು ಶೀಘ್ರ ಪರಿಹಾರ ಕಲ್ಪಿಸುವ ಭರವಸೆ ನೀಡಿದರು. ಓರ್ವ ಶಿಕ್ಷಕರನ್ನು ನೇಮಿಸುತ್ತೇವೆ. ಎಲ್ಲರೂ ಸಹಕರಿಸಬೇಕೆಂದು ಪ್ರತಿಭಟನಾಕಾರರ ಮನವೊಲಿಸಿದರು. ನಂತರ ಪ್ರತಿಭಟನಾಕಾರರು ಪ್ರತಿಭಟನೆಯನ್ನು ಹಿಂಪಡೆದರು.

ಎಸ್‌ಡಿಎಂಸಿ ಅಧ್ಯಕ್ಷ ಶಿವಾಜಿ ನನ್ನೂರಿ, ಉಪಾಧ್ಯಕ್ಷ ಬಸವರಾಜ ಮಡಿವಾಳರ, ಸದಸ್ಯರಾದ ಮುತ್ತೇಶ ಲಮಾಣಿ, ಬಸವರಾಜ ಮೇವುಂಡಿ, ಅಜ್ಜಪ್ಪ ಲಮಾಣಿ, ಬಸವರಾಜ ಮೇವುಂಡಿ, ವಿಜಯ ಹುಲ್ಯಾಳ, ಲಲಿತಾ ಬಜ್ಜಳ್ಳಿ, ದೇವಿರವ್ವ ಕಜ್ಜರಿ, ನಿಂಗರಾಜ ಮೇವುಂಡಿ, ಗೋಣೆಪ್ಪ ಕತ್ತೆಬೆನ್ನೂರ, ದಿನೇಶ ಬೂದಗಟ್ಟಿ ಗ್ರಾಮಸ್ಥರಾದ ಪ್ರಕಾಶ ಶಿವಪುರ, ಲಕ್ಷ್ಮಣ ಲಮಾಣಿ, ಸೋಮಶೇಖರ ಲಮಾಣಿ, ರಾಮಣ್ಣ ರಡ್ಡೇರ, ಚಂದ್ರು ಲಮಾಣಿ, ಪರಮೇಶ ಬೂದಗಟ್ಟಿ, ಹುಸೇನಸಾಬ ಕೂರಗುಂದ, ನಾಗರಾಜ ಲಮಾಣಿ, ಮಾರುತಿ ಇಟಗಿ ಸೇರಿದಂತೆ ಪಾಲಕರು ಪೋಷಕರು ಮತ್ತು ಮಕ್ಕಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಇಲಾಖೆಯ ಅಕಾರಿಗಳಾದ ಮಂಜಾನಾಯಕ ಮತ್ತು ಗಂಗಪ್ಪ ಇದ್ದರು.



ಶಾಲಾ ಪ್ರಾರಂಭೋತ್ಸವ: ವಿದ್ಯಾರ್ಥಿಗಳ ಭವ್ಯ ಮೆರವಣಿಗೆ

ಬ್ಯಾಡಗಿ: ತಾಲೂಕಿನ ಛತ್ರ ಗ್ರಾಮದಲ್ಲಿ ಹೊಸ ಶೈಕ್ಷಣಿಕ ವರ್ಷದ ಆರಂಭವನ್ನು ಸ್ಮರಣೀಯವಾಗಿಸುವ ಉದ್ದೇಶದಿಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ರಂಭೋತ್ಸವ ಕಾರ್ಯಕ್ರಮ ಅತ್ಯಂತ ಅದ್ದೂರಿಯಾಗಿ ಹಾಗೂ ಸಂಭ್ರಮದಿಂದ ಜರುಗಿತು. ಶಾಲೆಯ ಮೊದಲ ದಿನವೇ ಮಕ್ಕಳಲ್ಲಿ ಕಲಿಕೆಯ ಬಗ್ಗೆ ಆಸಕ್ತಿ ಮತ್ತು ಉತ್ಸಾಹ ಮೂಡಿಸುವ ಉದ್ದೇಶದಿಂದ ವಿವಿಧ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮಕ್ಕೂ ಮುನ್ನ ಗ್ರಾಮದ ಪ್ರಮುಖ ಬೀದಿಗಳಲ್ಲಿ



ವಿದ್ಯಾರ್ಥಿಗಳ ಭವ್ಯ ಮೆರವಣಿಗೆ ನಡೆಸಿ, ಶಾಲೆಯ ಮುಖ್ಯ ದ್ವಾರದಲ್ಲಿ ಅತಿಥಿಗಳು ಹಾಗೂ ಶಿಕ್ಷಕರು ಸೇರಿ ಮಕ್ಕಳ ಮೇಲೆ ಪುಷ್ಪವೃಷ್ಟಿ ಮಾಡುವ ಮೂಲಕ ಶಾಲೆಗೆ ಆತ್ಮೀಯವಾಗಿ ಬರಮಾಡಿಕೊಂಡರು.

ಎಸ್ ಡಿಎಂಸಿ ಅಧ್ಯಕ್ಷೆ ಚೈತ್ರಾ ಅಂಗರಗಟ್ಟಿ ಮಾತನಾಡಿ, ಶಿಕ್ಷಣವು ಪ್ರತಿಯೊಬ್ಬ ಮಗುವಿನ ಮೂಲಭೂತ ಹಕ್ಕಾಗಿದ್ದು, ಸರ್ಕಾರ ಮತ್ತು ಸಂವಿಧಾನದ ಆಶಯವೂ ಎಲ್ಲ ಮಕ್ಕಳಿಗೆ ಗುಣಮಟ್ಟದ ಹಾಗೂ ಸಮಾನ ಶಿಕ್ಷಣ ಒದಗಿಸುವುದಾಗಿದೆ ಎಂದು ಹೇಳಿದರು.

ಪ್ರಧಾನ ಶಿಕ್ಷಕಿ ಜಿ.ಸಿ.ಬೇತುರಮಠ ಮಾತನಾಡಿ, ಪ್ರತಿ ಶೈಕ್ಷಣಿಕ ವರ್ಷದ ಚಟುವಟಿಕೆಗಳನ್ನು ಪೂರ್ವಯೋಜಿತವಾಗಿ ರೂಪಿಸಿ ಅನುಷ್ಠಾನಗೊಳಿಸುವುದೇ ಶಾಲಾರಂಭೋತ್ಸವದ ಪ್ರಮುಖ ಉದ್ದೇಶವಾಗಿದೆ. ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೊಳಿಸಿದ್ದು, ಸರ್ಕಾರಿ ಶಾಲೆಗಳು ಇಂದು ಯಾವುದೇ ಖಾಸಗಿ ಶಾಲೆಗಳಿಗಿಂತ ಕಡಿಮೆ ಇಲ್ಲ ಎಂಬುದನ್ನು ಸಮಾಜ ಅರಿಯಬೇಕು ಎಂದು ತಿಳಿಸಿದರು.

ಈ ವೇಳೆ ಎಸ್‌ಡಿಎಂಸಿ ಉಪಾಧ್ಯಕ್ಷ ಸುರೇಶ ಹಂಚಿನಮನಿ, ರಾಜೀವ ರಡ್ಡಿ, ಎ.ಎಂ.ಸೌದಾಗಾರ, ಜಿ.ಎಲ್. ರಾಠೋಡ, ಕೆ.ವಿ.ಬಳಿಗಾರ, ಕೆ.ವಿ. ಬಳ್ಳಾರಿ, ಎಂ.ಸಿ.ಹಾಲಮ್ಮ ಸೇರಿದಂತೆ ಎಸ್ಡಿಎಂಸಿ ಸದಸ್ಯರು, ಮತ್ತಿತರರಿದ್ದರು.

ಸರ್ಕಾರಿ ಸೌಲಭ್ಯ ಪಡೆದು ಉತ್ತಮ ಜೀವನ ರೂಪಿಸಿಕೊಳ್ಳಿ

ರಾಣೇಬೆನ್ನೂರ: ಸರ್ಕಾರಿ ಶಾಲೆಯಲ್ಲಿ ಸಿಗುವ ಎಲ್ಲಾ ಸೌಲಭ್ಯಗಳನ್ನು ಸ್ವೀಕರಿಸಿ, ವಿದ್ಯಾರ್ಥಿಗಳು ಉತ್ತಮ ಗುಣಮಟ್ಟದ ಕಲಿಕೆ ಪಡೆದು, ಉಜ್ವಲ ಭವಿಷ್ಯ ನಿರ್ಮಾಣ ಮಾಡಿಕೊಳ್ಳಬೇಕು ಎಂದು ನಗರಸಭಾ ಮಾಜಿ ಸದಸ್ಯ ಪುಟ್ಟಪ್ಪ ಮರಿಯಮ್ಮನವರ ಹೇಳಿದರು.

ಇಲ್ಲಿನ ಮಾರುತಿ ನಗರದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ.17 ರಲ್ಲಿ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋತ್ಸವ ಉದ್ಘಾಟಿಸಿ ಮಾತನಾಡಿ, ಸರ್ಕಾರ



ಉಚಿತವಾಗಿ ನೀಡುವ ಪಠ್ಯಪುಸ್ತಕ, ಸಮವಸ್ತ್ರ, ಶ್ಯೂ ಮತ್ತು ಸಾಕ್ಸ್, ಅಕ್ಷರ ದಾಸೋಹ ಸೇರಿದಂತೆ ಹಲವು ಸೌಲಭ್ಯಗಳನ್ನು ಒದಗಿಸುತ್ತಿದ್ದು, ಅದನ್ನು ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಂಡು ಉತ್ತಮ ಜೀವನ ರೂಪಿಸಿಕೊಳ್ಳಬೇಕು ಎಂದರು.

ಶಾಲಾ ಮುಖ್ಯೋಪಾಧ್ಯಾಯ ಬಿ.ಪಿ.ಶಿಡೇನೂರು, ಉಮಾ ಗೌಡ್ರ, ಪದ್ಮಶ್ರೀ ಕೋಳೂರು, ಲಕ್ಷ್ಮಿ ವಗ್ಗಾ, ಲಕ್ಷ್ಮಿ ಹಳೆಮನೆ, ಫಕ್ಕೀರಪ್ಪ ಛಬ್ಬಿಮಠ, ಆನಂದ ನಾಜರೆ, ಶಿಕ್ಷಕರಾದ ಆರ್.ಬಿ.ಚಲವಾದಿ, ವನಜಾಕ್ಷಿ ಪಾಟೀಲ, ಕುಸುಮಾ ಹಲಗೇರಿ, ಪ್ರತಿಭಾ ಮೈಲಾರಕಳ್ಳಿಮಠ, ಸುಮಾ ಎ.ಜೆ., ಶ್ವೇತಾ ಎಚ್.ಬಿ., ರಂಜನಾ ಗಡ್ಡಿ ಸೇರಿದಂತೆ ಮತ್ತಿತರರಿದ್ದರು.

ಆರೋಗ್ಯ ಕೇಂದ್ರ ಮಂಜೂರು: ಶಾಸಕರಿಗೆ ಅಭಿನಂದನೆ

ಬ್ಯಾಡಗಿ: ತಾಲೂಕಿನಲ್ಲಿ ದೊಡ್ಡ ಗ್ರಾಮವಾಗಿರುವ ದೊಡ್ಡ ಗ್ರಾಮ ಪಂಚಾಯಿತಿ ಹೊಂದಿರುವ ಮೋಟೆಬೆನ್ನೂರು ಗ್ರಾಮಕ್ಕೆ ಶಾಸಕ ಬಸವರಾಜ ಶಿವಣ್ಣವರ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾತಿ ಮಾಡಿಸಿದ್ದಾರೆ ಎಂದು ಗ್ರಾಮದ ಹಿರಿಯರಾದ ಪುಟ್ಟನಗೌಡ ಪಾಟೀಲ್ ಹಾಗೂ ಗ್ರಾಮದ ಎಲ್ಲ ಪಕ್ಷದ ಮುಖಂಡರು ಗ್ರಾಮಸ್ಥರು ಅಭಿನಂದನೆ ಸಲ್ಲಿಸಿದರು.

ಗ್ರಾಪಂ ಕಾರ್ಯಾಲಯದಲ್ಲಿ ಗ್ರಾಮದ ಮುಖಂಡರು ಹಾಗೂ ಗ್ರಾಮದ ಧುರೀಣರು ಸಭೆ ಸೇರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಂಜೂರಾತಿಗೆ ಶ್ರಮಿಸಿದ ಶಾಸಕ ಬಸವರಾಜ ಶಿವಣ್ಣನ ಹಾಗೂ ಮಾಜಿ ಶಾಸಕರು ವಿರೂಪಾಕ್ಷಪ್ಪ ಬಳ್ಳಾರಿ ಅವರಿಗೆ ಗ್ರಾಮಸ್ಥರು ಅಭಿನಂದನೆ ಸಲ್ಲಿಸುವುದರಲ್ಲದೆ ಸರ್ಕಾರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಂಜೂರಾತಿ ನೀಡಿ 4.25 ಲಕ್ಷ ಕ್ಕಿಂತಲೂ ಹೆಚ್ಚು ಹಣವನ್ನು ಬಿಡುಗಡೆಗೊಳಿಸಿದ್ದಾರೆ.

ಗ್ರಾಮದ ಮುಖಂಡ ಸತೀಶ ಪಾಟೀಲ ಮಾತನಾಡಿ, ಬಹುದಿನಗಳ ಈ ಭಾಗದ ಜನರ ನಿರೀಕ್ಷೆಯಂತೆ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಪಿಎಚ್‌ಸಿ ಮಂಜೂರು ದೊರೆತಿದು, ಹರ್ಷ ತಂದಿದೆ ಎಂದರು.



ನ್ಯಾಯವಾದಿ ನಿಂಗಪ್ಪ ಬತ್ತಲಕಟ್ಟಿ ಮಾತನಾಡಿ, ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾಗಿದ್ದು ಸಂತೋಷದ ಸಂಗತಿ ಆದರೆ ನಮ್ಮ ಮೋಟೆಬೆನ್ನೂರು ಗ್ರಾಮಕ್ಕೆ ಎನ್ ಎಚ್ 4 ಹೈವೇ ಹೊಂದಿದ್ದು, ಇಲ್ಲಿ ಸಾಕಷ್ಟು ಅಪಘಾತಗಳು ಸಂಭವಿಸಿವೆ ಕಾರಣ ಚಿಕಿತ್ಸೆಗೆ ಗ್ರಾಮದಿಂದ ಬ್ಯಾಡಗಿಗೆ 5 ಕಿಮಿ ಹಾಗೂ ಹಾವೇರಿ 12 ಕಿಲೋಮೀಟರ್ ಹೋಗಬೇಕು. ಪ್ರಥಮ ಚಿಕಿತ್ಸೆ ನೀಡಲು ಈ ಆಸ್ಪತ್ರೆ ತೆರೆಯಲಾಗುತ್ತಿದೆ. ಆದರೆ ಕಾನೂನಿನ ಪ್ರಕಾರ ಹೈವೇ ಪಕ್ಕದಲ್ಲಿರುವ ಗ್ರಾಮಕ್ಕೆ ಸುಮಾರು 100 ಕಿಮೀ ಒಳಗೆ ಟ್ರೋಮೊ ಸೆಂಟರ್ ಕೇಂದ್ರವನ್ನು ತೆರೆಯಲು ಅವಕಾಶವಿದೆ ಶಾಸಕರಿಗೆ ಮನವಿ ಮಾಡಿದರು.

ಶಿವಪುತ್ರಪ್ಪ ಅಗಡಿ ಶಿವಬಸಪ್ಪ ಷ.ಕುಳೇನೂರ್, ನಾಗರಾಜ ಆನ್ವೇರಿ, ವಿಜಯಭರತ ಬಳ್ಳಾರಿ, ಮಂಜಣ್ಣ ಎಲಿ, ಮಂಜಣ್ಣ ಬೆಳಕಿನ, ಕೊಂಡಮ ನಾಗನಗೌಡ ಪಾಟೀಲ್, ಶಿವಕುಮಾರ್ ಪಾಟೀಲ, ಸಂಜಯ್ ಹಿತ್ತಲಮನೆ, ಸಂಜಯ್ ಶಿಗ್ಲಿ, ಅಡಿವೆಪ್ಪ ಕುರಿಯವರ್ ಇದ್ದರು.

ನಿವೃತ್ತಿ ಅಂತ್ಯವಲ್ಲ, ಹೊಸ ಅನುಭವಗಳ ಅಧ್ಯಾಯದ ಆರಂಭ

ಹಾವೇರಿ: ನಿವೃತ್ತಿ ಸೇವೆಯ ಅಂತ್ಯವಲ್ಲ, ಹೊಸ ಅನುಭವಗಳ ಅಧ್ಯಾಯದ ಆರಂಭ. ಆಡಳಿತದಲ್ಲಿ ಶಿಸ್ತು, ಸಮಯಪ್ರಜ್ಞೆ ಹಾಗೂ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸಿದ ಅಶೋಕ ಶಾಸ್ತ್ರೀಯವರು ಜಿಲ್ಲೆಯ ಎಲ್ಲ ಪ್ರಾಚಾರ್ಯರು ಹಾಗೂ ಉಪನ್ಯಾಸಕ ಬಳಗದ ಗೌರವಕ್ಕೆ ಪಾತ್ರರಾಗಿದ್ದಾರೆ ಎಂದು ಜಿಲ್ಲಾ ಪ್ರಾಚಾರ್ಯರ ಸಂಘದ ಅಧ್ಯಕ್ಷ ಡಾ.ನಾಗರಾಜ ದ್ಯಾಮನಕೊಪ್ಪ ಹೇಳಿದರು.

ದಾನೇಶ್ವರಿ ನಗರದ ಪದವಿಪೂರ್ವ ಕಾಲೇಜುಗಳ ನೌಕರರ ಭವನದಲ್ಲಿ ಜಿಲ್ಲಾ ಪ್ರಾಚಾರ್ಯರ ಸಂಘ, ಉಪನ್ಯಾಸಕರ ಸಂಘ, ನೌಕರರ ಸಂಘ ಹಾಗೂ ಪದವಿಪೂರ್ವ ಕಾಲೇಜುಗಳ ವಿವಿಧ ಸಂಘಟನೆಗಳ ವತಿಯಿಂದ ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ಡಿಡಿಪಿಯು ಆಗಿ ಸೇವೆ ಸಲ್ಲಿಸಿ ನಿವೃತ್ತರಾದ ಶಾಸ್ತ್ರೀಯವರಿಗೆ ಹಮ್ಮಿಕೊಂಡಿದ್ದ ಆತ್ಮೀಯ ಸನ್ಮಾನ ಹಾಗೂ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಅಶೋಕ ಶಾಸ್ತ್ರೀಯವರು ನೀಡಿದ ಕೊಡುಗೆ ಮಾದರಿಯಾಗಿದೆ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಅಶೋಕ ಶಾಸ್ತ್ರೀಯವರು, ತಮ್ಮ ದೀರ್ಘ ಸೇವಾವಧಿಯ ಅನುಭವಗಳನ್ನು ಹಂಚಿಕೊಂಡು, ನಾನು



ನಿರ್ವಹಿಸಿದ ಪ್ರತಿಯೊಂದು ಜವಾಬ್ದಾರಿಯಲ್ಲೂ ವಿದ್ಯಾರ್ಥಿ ಹಾಗೂ ಶಿಕ್ಷಣದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಿದ್ದೇನೆ. ಸಹೋದ್ಯೋಗಿಗಳು, ಪ್ರಾಚಾರ್ಯರು ಹಾಗೂ ಉಪನ್ಯಾಸಕರಿಂದ ದೊರೆತ ಸಹಕಾರವೇ ನನ್ನ ಸೇವಾ ಯಶಸ್ಸಿನ ಮೂಲ ಕಾರಣ ಎಂದು ಕೃತಜ್ಞತೆ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ನಿಕಟಪೂರ್ವ ಉಪನಿರ್ದೇಶಕ ಆನಂದ ಮುದಕಮ್ಮನವರ, ಉಪನ್ಯಾಸಕರ ಸಂಘದ ಅಧ್ಯಕ್ಷ ಎಸ್.ಎಸ್. ನಿಸ್ಸೀಮಗೌಡ್ರ, ಪ್ರಭಾರ ಉಪನಿರ್ದೇಶಕ ಬಸವರಾಜ ಇಟ್ಟಿಗುಡಿ ಮಾತನಾಡಿದರು.

ವೇಳೆ ವಿವಿಧ ಪದವಿ ಪೂರ್ವ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಿ.ಪಿ. ಹರವಿ, ರಮೇಶ ಲಮಾಣಿ, ಪ್ರಮೋದ ನಲವಾಗಲ, ರವಿಕುಮಾರ ಅಂಭೋರೆ, ಎಸ್.ಬಿ. ಸಂಗಾಪುರ, ಶಿವಾನಂದ ಬೆನ್ನೂರ, ರಾಜೇಂದ್ರ ಕರಿಗೌಡ್ರ, ಕೆ.ಪಿ. ಬ್ಯಾಡಗಿ, ಶೇಖರಪ್ಪ ಭಜಂತ್ರಿ, ಎಂ.ಎನ್. ಹತ್ತಿಯವರ, ಎಂ.ಬಿ. ಸತೀಶ, ಜಿ.ಪಿ. ಪೂಜಾರ, ಎಂ.ಆರ್. ಚೂರಿ ಹಾಗೂ ಎಸ್.ಸಿ. ಪಾಟೀಲ ಇತರರು ಇದ್ದರು. ಪ್ರಾಚಾರ್ಯ ಜೆ.ಆರ್. ಶಿಂಧೆ ಸ್ವಾಗತಿಸಿದರು. ರವಿಕುಮಾರ ಅಂಭೋರೆ ನಿರೂಪಿಸಿದರು. ವಿ.ಎನ್. ಆಲದಕಟ್ಟಿ ವಂದಿಸಿದರು.

ಕಿರುಸುದ್ದಿ

ನಾಳೆ ವಿದ್ಯುತ್ ನಿಲುಗಡೆ

ಬೆಳಗಾವಿ : ಉಚಗಾಂವ ಉಪಕೇಂದ್ರದಲ್ಲಿ ಮೊದಲನೇಯ ತ್ರೈಮಾಸಿಕ ನಿರ್ವಹಣೆ ಹಾಗೂ ಇತರೆ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ ಜೂ.5ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯವರೆಗೆ 33 ಕೆ.ವ್ಹಿ. ಹಿಂಡಲಗಾ ಉಪಕೇಂದ್ರದಿಂದ ವಿತರಣೆಯಾಗುವ ಹಿಂಡಲಗಾ ಪಂಪ್ಹೌಸ್, ಗಣೇಶಪೂರ, ಹಿಂಡಲಗಾ, ಮನ್ನೂರ, ಸರಸ್ವತಿ ನಗರ, ಲಕ್ಷ್ಮೀ ನಗರ, ವಿಜಯ ನಗರ, ಡಿಫೆನ್ಸ್, ಕಾಲನಿ, ಕ್ರಾಂತಿ ನಗರ, ಮಾಸ್ತಿ ನಗರ, ಶಿವಂ ನಗರ, ಗೋಜಗಾ ಹಾಗೂ ಅಂಬೇವಾಡಿ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್ಸೆಟ್ಗಳ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂಬ ಕಾರ್ಯನಿರ್ವಾಹಕ ಎಂಜಿನೀಯರ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಜೂ.7ರಂದು ಪ್ರತಿಭಾ ಪುರಸ್ಕಾರ

ಗೋಕಾಕ: ನಗರದ ಜೆಸಿಐ ಸಂಸ್ಥೆಯಿಂದ ಚಿಕ್ಕೋಡಿ ಹಾಗೂ ಬೆಳಗಾವಿ ಶೈಕ್ಷಣಿಕ ಜಿಲ್ಲೆಯ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ 90% ಪ್ರತಿಶತಕ್ಕಿಂತ ಹೆಚ್ಚಿನ ಅಂಕ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ಜೂ.7ರಂದು ಬೆಳಿಗ್ಗೆ 10ಗಂಟೆಗೆ ಇಲ್ಲಿಯ ಹೆಮರೆಡ್ಡಿ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ. ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಅಂಕಪಟ್ಟಿಯ ಝರಾಕ್ಸ್, ಭಾವಚಿತ್ರ ಹಾಗೂ ಸಂಪೂರ್ಣ ವಿಳಾಸದೊಂದಿಗೆ ಅರ್ಜಿಯನ್ನು ಜೂ.6ರ ಒಳಗಾಗಿ ನೇರವಾಗಿ ಶ್ರೀರಾಮ ಪೌಂಡೇಷನ್, ಲಾತೂರ ಕಂಪ್ಯೂಟರ ಸೆಂಟರ್ ಕೋರ್ಟ ಸರ್ಕಲ್ (ಕೆನರಾ ಬ್ಯಾಂಕ ಕೆಳಗೆ) ಖುದ್ದಾಗಿ ಅಥವಾ ಅಂಚೆಯ ಮೂಲಕ ಕಳಿಸುವಂತೆ ಜೆಸಿಐ ರಾಷ್ಟ್ರೀಯ ಸಂಯೋಜಕ ವಿಷ್ಣು ಲಾತೂರ ಹಾಗೂ ಅಧ್ಯಕ್ಷ ಕಿರಣ ಗಂಗರೆಡ್ಡಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಖಾನಾಪುರ: ತೋಟಗಾರಿಕೆ ಇಲಾಖೆಯಿಂದ 2026–27ನೇ ಸಾಲಿನಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್‌ನಡಿ ಮಾವು, ಗೋಡಂಬಿ, ಬಾಳೆ, ರಾಮ್ ಬೂತಾನ, ಹೈಬ್ರಿಡ್ ತರಕಾರಿ ಪ್ರದೇಶ ವಿಸ್ತರಣೆ, ಹಳೆಯ ಮರಗಳ ಪುನಶ್ಚೇತನ, ಸಮಗ್ರ ಪೋಶಕಾಂಶಗಳ ನಿರ್ವಹಣೆ, ವೈಯುಕ್ತಿಕ ಕೃಷಿ ಹೊಂಡ, ಪ್ಲಾಸ್ಟಿಕ್ ಹೊದಿಕೆ, ಕಳೆ ಚಾಪೆ, ಫಾರ್ಮ್ ಗೇಟ್, ಪ್ಯಾಕ್ ಹೌಸ್, ತೋಟಗಾರಿಕೆಯಲ್ಲಿ ಯಾಂತ್ರಿಕರಣ, ಎರೆಹುಳು ಗೊಬ್ಬರ ಘಟಕಗಳಿಗೆ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ರಾಷ್ಟ್ರೀಯ ಖಾದ್ಯತೈಲ ಅಭಿಯಾನದಡಿ ತಾಳೆ ಬೆಳೆ, ಪ್ರದೇಶ ವಿಸ್ತರಣೆ, ನಿರ್ವಹಣೆ, ಪಂಪಸೆಟ್/ಕೊಳವೆಬಾವಿಗಳಿಗೆ ಸಹಾಯಧನ, ಕೃಷಿ ಹೊಂಡ, ತಾಳೆ ಹಣ್ಣು ಕಟಾವು ಯಂತ್ರ, ಚಾಪ್ ಕಟರ್, ಟ್ರಾಕ್ಟರ್/ಟ್ರಾಲಿ, ಅಂತರ ಬೆಳೆಗಳಿಗೆ ಸಹಾಯಧನ ಲಭ್ಯವಿರುತ್ತದೆ. ಪ್ರಧಾನ ಮಂತ್ರಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಹನಿ ನೀರಾವರಿ ಘಟಕಗಳಿಗೆ ಸಹಾಯಧನ ಪಡೆಯಲು ಆಸಕ್ತ ತೋಟಗಾರಿಕೆ ಬೆಳೆಗಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂನ್ 30 ಕೊನೆಯ ದಿನ. ಹೆಚ್ಚಿನ ಮಾಹಿತಿಗೆ ರೈತ ಸಂಪರ್ಕ ಕೇಂದ್ರ ಅಥವಾ ತೋಟಗಾರಿಕೆ ಇಲಾಖೆಯ ತಾಲೂಕು ಕಚೇರಿಯನ್ನು ಸಂಪರ್ಕಿಸುವಂತೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಕಿರಣ ಉಪಾಳೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಬಿಬಿಜಾನ ಮುಲ್ಲಾ



ಸವದತ್ತಿ : ನಗರದ ಮುಸ್ಲಿಂ ಸಮಾಜದ ಹಿರಿಯರಾದ ಬಿಬಿಜಾನ ಹುಸೇನಸಾಬ ಮುಲ್ಲಾ (54) ಬುಧವಾರ ನಿಧನರಾಗಿದ್ದಾರೆ. ಮೃತರು ಓರ್ವ ಪುತ್ರಿ ,ಅಳಿಯ ಮೊಮ್ಮಕ್ಕಳು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ರಾಮಚಂದ್ರ ಹಲಗಿ



ಗೋಕಾಕ: ಇಲ್ಲಿಯ ಆದಿ ಜಾಂಭವ ನಗರದ ನಿವಾಸಿ ರಾಮಚಂದ್ರ ಬಸವಣ್ಣೆಪ್ಪ ಹಲಗಿ (56) ಬುಧವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ವಾಗ್ದಾನದಂತೆ ಅವರ ಕುಟುಂಬಸ್ಥರು ಲಯನ್ಸ್ ಸಂಸ್ಥೆಯ ಸಹಕಾರದೊಂದಿಗೆ ಬೆಳಗಾವಿ ಕೆಎಲ್‌ಇ ಆಸ್ಪತ್ರೆಗೆ ದೇಹದಾನ ಮಾಡಿದರು. ಈ ಸಂದರ್ಭದಲ್ಲಿ ಲಯನ್ಸ ಸಂಸ್ಥೆಯ ಅಧ್ಯಕ್ಷ ಎಸ್ ಎಮ್ ಹಂಜಿ, ಅಶೋಕ ಲಗಮಪ್ಪಗೋಳ, ಸುರೇಶ ಶಿಂಧಿಹಟ್ಟಿ, ಶಂಕರ ದೊಡಮನಿ ಸೇರಿದಂತೆ ಅನೇಕರು ಇದ್ದರು.



ಬೆಳಗಾವಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾ ಘಟಕ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ತಾಲೂಕಾ ಆರೋಗ್ಯಾಧಿಕಾರಿಗಳ ಕಛೇರಿ, ಪ್ರಾಥಮಿಕ ಆರೋಗ್ಯ ಕೇಂದ್ರ ಶಿಂದೋಳ್ಳಿ ಹಾಗೂ ಭರತೇಶ ಹೋಮಿಯೋಪಥಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಸಂಯಕ್ತಾತ್ರಯದಲ್ಲಿ ಬೆಳಗಾವಿ ಭರತೇಶ ಹೋಮಿಯೋಪಥಿ ವೈದ್ಯಕೀಯ ಮಹಾವಿದ್ಯಾಲಯ ಶಿಂದೊಳ್ಳಿಯಲ್ಲಿ ವಿಶ್ವ ತಂಬಾಕು ರಹಿತ ದಿನ ಆಚರಣೆ ಮಾಡಲಾಯಿತು.

ಧರ್ಮದ ಹಾದಿಯಲ್ಲಿ ನಡೆಯಿರಿ

ಯರಗಟ್ಟಿ: ಮಾನವನ ನೆಮ್ಮದಿ ಬದುಕಿಗೆ ಧರ್ಮ ಮತ್ತು ದೇವರು, ದೇವಾಲಯಗಳು, ಮಠ ಮಂದಿರಗಳು ತುಂಬಾ ಅವಶ್ಯಕ. ಪ್ರತಿಯೊಬ್ಬರು ಧರ್ಮದ ಹಾದಿಯಲ್ಲಿ ನಡೆಯುವ ಮೂಲಕ ಬದುಕು ಹಸನಾಗಿಸಿಕೊಳ್ಳಬೇಕು ಎಂದು ಮುರಗೋಡ ಮಹಾಂತ ದುರದುಂಡೇಶ್ವರ ಮಠದ ನೀಲಕಂಠ ಸ್ವಾಮೀಜಿ ಹೇಳಿದರು. ಸಮೀಪದ ತಲ್ಲೂರ ಗ್ರಾಮದ ತೊರಗಲ್ಲಮಠದಲ್ಲಿ ಅಧಿಕ ಮಾಸದ ಅಂಗವಾಗಿ ಮಂಗಳವಾರ ಹಮ್ಮಿಕೊಂಡಿದ್ದ ಧರ್ಮ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಪೂರ್ವಿಕರು ಧರ್ಮ ಮಾರ್ಗದಲ್ಲಿ ನಡೆದು ದೇವರನ್ನು ಭಯ ಭಕ್ತಿಯಿಂದ ಪೂಜಿಸುತ್ತಾ ಬದುಕಿನಲ್ಲಿ ನೆಮ್ಮದಿ ಕಂಡುಕೊಂಡಿದ್ದರು. ಆದ್ದರಿಂದ ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲೆ ಸಂಸ್ಕೃತಿ, ಸಂಸ್ಕಾರಗಳನ್ನು ಕಲಿಸಿಕೊಟ್ಟು ಸಮಾಜವನ್ನು ಕಟ್ಟುವ ಧರ್ಮ ದೇವರು, ಮಠಮಾನ್ಯಗಳನ್ನು ಗೌರವದಿಂದ ಕಾಣುವ ಮನೋಭಾವ ರೂಢಿಸಬೇಕಿದೆ ಎಂದು ಹೇಳಿದರು.ಸೊಗಲ ಅವಧೂತ ಚಿದಾನಂದ ಸ್ವಾಮೀಜಿ ಮಾತನಾಡಿದರು. ತೊರಗಲ್ಲಮಠದ ದೀಪಕ ಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ವಿನಯಕುಮಾರ ದೇಸಾಯಿ, ನಿವೃತ್ತ ಪಂಚಾಯತ ಅಭಿವೃದ್ಧಿ ಅಧಿಕಾರಿ ವಿರುಪಾಕ್ಷ ಪೂಜೇರ, ಕರ್ನಾಟಕ ಗ್ರಾಮೀಣ ಬ್ಯಾಂಕ ವ್ಯವಸ್ಥಾಪಕ ಪಿ.ಕೊಟೇಶ್ವರಾವ, ಮುಖಂಡ ಶಂಕರಗೌಡ ಪಾಟೀಲ, ಈರಣ್ಣ ಹುದ್ದಾರ, ಜಗದೀಶ ಹೊಸಮಠ, ಮಹಾಂತೇಶ ಮುನೆಪ್ಪನ್ನವರಮಠ, ಶಂಕರ ಬಡಿಗೇರ, ಸಿ.ವಿ.ಮಾಸ್ತಮರಡಿ, ಬಸವರಾಜ ಬಡಿಗೇರ, ಮಹಾಂತೇಶ ಯಡಳ್ಳಿ, ಬಸವಂತಪ್ಪ ಕರಿಕಟ್ಟಿ ಮತ್ತಿತರಿದ್ದರು.



ಯರಗಟ್ಟಿ: ಸಮೀಪದ ತಲ್ಲೂರ ಗ್ರಾಮದ ತೊರಗಲ್ಲಮಠದಲ್ಲಿ ಅಧಿಕ ಮಾಸದ ಅಂಗವಾಗಿ ಮಂಗಳವಾರ ಧರ್ಮ ಸಭೆ ನಡೆಯಿತು.

ಪ್ರಾದೇಶಿಕ ಆಯುಕ್ತರಿಗೆ ಕರವೇ ಮನವಿ

ಕರ್ನಾಟಕ ಪರವಾದ ಗೊತ್ತುವಳಿ ಅಂಗೀಕರಿಸಿ

ಬೆಳಗಾವಿ: ಇಲ್ಲಿನ ಮಹಾನಗರ ಪಾಲಿಕೆಯಲ್ಲಿ ಕರ್ನಾಟಕ ಪರವಾದ ಗೊತ್ತುವಳಿ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ. ಗಡಿವಿವಾದಕ್ಕೆ ಮಹಾಜನ ಆಯೋಗದ ವರದಿಯೇ ಅಂತಿಮ ಎಂಬ ಗೊತ್ತುವಳಿ ಅಂಗೀಕರಿಸಬೇಕೆಂದು ಆಗ್ರಹಿಸಿ ಪ್ರಾದೇಶಿ ಆಯುಕ್ತರ ಮೂಲಕ ರಾಜ್ಯ ಸರ್ಕಾರಕ್ಕೆ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಮನವಿ ಸಲ್ಲಿಸಿದರು.

ಬುಧವಾರ ಬೆಳಗಾವಿ ನಗರದ ಪ್ರಾದೇಶಿಕ ಆಯುಕ್ತರ ಕಛೇರಿಕೆ ವಿವಿಧ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ತೆರಳಿ, ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂದು ಘೋಷಿಸಿಸಬೇಕೆಂದು ಆಗ್ರಹಿಸಿದರು.

ವಿವಿಧ ಕನ್ನಡಪರ ಸಂಘಟನೆಗಳ 20 ಕ್ಕೂ ಹೆಚ್ಚು ಸಂಘಟನೆಗಳು ಕಳೆದ ಮಾರ್ಚ 26 'ರಿಂದ ಹೋರಾಟ ನಡೆಸಿದ್ದವು. 2005 ರ ಅಕ್ಟೋಬರ್ 27 ರಂದು ಬೆಳಗಾವಿ ಪಾಲಿಕೆಯಲ್ಲಿ ಮಹಾರಾಷ್ಟ್ರ ಪರವಾಗಿ ಗೊತ್ತುವಳಿ ಸ್ವೀಕರಿಸಲಾಗಿದೆ. ಬೆಳಗಾವಿಯನ್ನು ಮಹಾರಾಷ್ಟಕ್ಕೆಸೇರಿಸುವ ಮೂಲಕ ಗಡಿವಿವಾದ ಬಗೆಹರಿಸಬೇಕೆಂದು ಒತ್ತಾಯಿಸುವ ಗೊತ್ತುವಳಿಯನ್ನು ಅಂಗೀಕರಿಸಲಾಗಿದೆ.

2004 ರಿಂದ ಸುಪ್ರೀಂ ಕೋರ್ಟಿನಲ್ಲಿ ಸ್ವೀಕಾರವಾಗದೆ ಹೊಸ್ತಿಲಲ್ಲಿರುವ ಗಡಿವಿವಾದ ಪ್ರಕರಣದಲ್ಲಿ ಮಹಾರಾಷ್ಟ್ರ ಸರಕಾರವು ಬೆಳಗಾವಿ ಪಾಲಿಕೆಯ ಗೊತ್ತುವಳಿಯನ್ನು ಪೂರಕ ದಾಖಲೆಯನ್ನಾಗಿ ಬಳಸುತ್ತಿರುವುದು ಕನ್ನಡಿಗರಿಗೆ ಕೆಂಗಣ್ಣಿಗೆ ಗುರಿಯಾಗಿದೆ.

ಇದೀಗ ಕರ್ನಾಟಕ ಪರವಾದ ಗೊತ್ತುವಳಿ ಸ್ವೀಕರಿಸಬೇಕೆಂದು ಕನ್ನಡ ಸಂಘಟನೆಗಳು ಹೋರಾಟ ನಡೆಸಿದಕ್ಕೆ ಪ್ರತಿಫಲ ಸಿಗುವ ನಿರೀಕ್ಷೆವೆ. ಆದರೆ ಈ ವಿಚಾರವಾಗಿ ತಿಂಗಳಿಂದ ಹೋರಾಟ ನಡೆಸಿದ್ರು ಸಹ ಪಾಲಿಕೆಯಲ್ಲಿ 35 ಸದಸ್ಯರ ಬಹುಮತ ಹೊಂದಿರುವ ಬಿಜೆಪಿ ನಾಯಕರು ಗೊತ್ತುವಳಿ ಸ್ವೀಕರಿಸಿಲ್ಲ ಇದರಿಂದಾಗಿ ಪಾಲಿಕೆಯ ನಡೆಯಿದ್ದ ಕನ್ನಡಿಗರಿಗೆ ನಿರಾಸೆಯನುಂಟು ಮಾಡುತ್ತಿರುವುದಲ್ಲದೆ. ಕನ್ನಡ ನಾಡು, ನುಡಿಗೆ ಬಗೆದ ದ್ರೋಹವಾಗಿದೆ.

ಈ ವೇಳೆ ಶರೀಫ್ ಇ ಸನದಿ, ನಾಗೇಶ್ ಕೊಪ್ಪದ, ಸಲೀಮ್ ಕಾಲೇಖಾನ್, ಸಲಮಾನ ಮಕಂದಾರ, ಮಹಮ್ಮದ್ ಹನೀಫ್ ಸೇರಿದಂತೆ ಹಲವು ಕನ್ನಡಪರ ಸಂಘಟನೆಯ ಕಾರ್ಯಕರ್ತರು ಪಾಲ್ಗೊಂಡಿದ್ದರು.



▸▸ ಬೆಳಗಾವಿ ಗಡಿ ವಿವಾದವನ್ನು ಪ್ರಾದೇಶಿಕ ಆಯಕ್ತರು ಗಂಭೀರವಾಗಿ ತೆಗೆದುಕೊಳ್ಳಬೇಕು ಪಾಲಿಕೆಯ ಈ ನಡವಳಿಕೆಯ ಬಗ್ಗೆ ರಾಜ್ಯ ಸರ್ಕಾರದ ಗಮನ ಸೆಳೆಯಬೇಕೆಂದು ಕನ್ನಡಪರ ಸಂಘಟನೆಗಳು ಆಗ್ರಹಿಸಿವೆ.

ಕಾಂಗ್ರೆಸ್ ಕಾರ್ಯಕರ್ತರ ಅದ್ದೂರಿ ವಿಜಯೋತ್ಸವ

ಬೆಳಗಾವಿ: ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರು ಪ್ರಮಾಣವಚನ ಸ್ವೀಕರಿಸುತ್ತಿದ್ದಂತೆಯೇ ಗಡಿನಾಡು ಬೆಳಗಾವಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಅದ್ದೂರಿ ವಿಜಯೋತ್ಸವ ಆಚರಿಸಿದರು.

ಕಾಂಗ್ರೆಸ್ ಯುವ ಮುಖಂಡ ಮೃಣಾಲ್ ಹೆಬ್ಬಾಳ್ಕರ್ ಅವರ ನೇತೃತ್ವದಲ್ಲಿ ನಡೆದ ಸಂಭ್ರಮಾಚರಣೆಯು ನಗರದಲ್ಲಿ ಹಬ್ಬದ ವಾತಾವರಣವನ್ನು ನಿರ್ಮಿಸಿತು.

ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅಧಿಕಾರದ ಚುಕ್ಕಾಣಿ ಹಿಡಿದಿರುವುದು ಬೆಳಗಾವಿ ಕಾಂಗ್ರೆಸ್ ಪಾಳಯದಲ್ಲಿ ಹೊಸ ಉತ್ಸಾಹ ಮೂಡಿಸಿದ್ದು, ಕಾರ್ಯಕರ್ತರು ಈ ಐತಿಹಾಸಿಕ ಕ್ಷಣವನ್ನು ವಿಶೇಷವಾಗಿ ಸಂಭ್ರಮಿಸಿದರು. ನಗರದ ಕಾಂಗ್ರೆಸ್ ಭವನದ ಆವರಣದಲ್ಲಿ ಪ್ರಮಾಣವಚನ ಸ್ವೀಕಾರ ಸಮಾರಂಭದ ನೇರಪ್ರಸಾರವನ್ನು ವೀಕ್ಷಿಸಲು ಭಾರಿ ಸಂಖ್ಯೆಯಲ್ಲಿ ಕಾರ್ಯಕರ್ತರು, ಮುಖಂಡರು ಹಾಗೂ ಅಭಿಮಾನಿಗಳು ಸೇರಿದ್ದರು.

ಪ್ರಮಾಣವಚನ ಸಮಾರಂಭದ ಬಳಿಕ ಕಾರ್ಯಕರ್ತರು ನಗರದ ಹೃದಯಭಾಗವಾದ ರಾಣಿ ಚನ್ನಮ್ಮ ವೃತ್ತಕ್ಕೆ ತೆರಳಿ ಭರ್ಜರಿ ವಿಜಯೋತ್ಸವ ನಡೆಸಿದರು. ಈ ಸಂದರ್ಭದಲ್ಲಿ ಮೃಣಾಲ್ ಹೆಬ್ಬಾಳಕರ್ ಅವರು ವೀರರಾಣಿ ಚನ್ನಮ್ಮಾಜಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ಬಳಿಕ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಸಿಹಿ ಹಂಚಿ ಪರಸ್ಪರ ಶುಭಾಶಯ ಕೋರಿದ ಅವರು, ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ರಾಜ್ಯ ಮತ್ತಷ್ಟು ಅಭಿವೃದ್ಧಿಯತ್ತ ಸಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಹಲವರು ನೃತ್ಯ ಮಾಡಿ ಸಂತಸ ವ್ಯಕ್ತಪಡಿಸಿದರು.

ಕಾರ್ಯಕರ್ತರ ಕೈಯಲ್ಲಿ ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಹಿರಿಯ ಸಚಿವ ಸತೀಶ್ ಜಾರಕಿಹೊಳಿ ಹಾಗೂ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರ ಭಾವಚಿತ್ರಗಳಿರುವ ಪೋಸ್ಟರ್ ಗಳು ಗಮನ ಸೆಳೆದವು. ಕಾಂಗ್ರೆಸ್ ಧ್ವಜಗಳನ್ನು ಹಿಡಿದು ಕಾರ್ಯಕರ್ತರು ಮೆರವಣಿಗೆ ನಡೆಸಿ ವಿಜಯೋತ್ಸವದ ಮೆರುಗು ಹೆಚ್ಚಿಸಿದರು.



ಜೈನ ಸೇವಾ ಸಂಘಕ್ಕೆ ಸಹಾಯಧನ ವಿತರಣೆ



ಗೋಕಾಕ: ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ತಾಲೂಕಿನ ಧುಪದಾಳ ಗ್ರಾಮದ ಹಿಂದು ರುದ್ರಭೂಮಿ ಅಭಿವೃದ್ದಿಗಾಗಿ ಶ್ರೀ 1008 ಪಾರ್ಶ್ವನಾಥ ತೀರ್ಥಂಕರ ದಿಗಬಂರ ಜೈನ ಸೇವಾ ಸಂಘಕ್ಕೆ ಡಾ.ವಿರೇಂದ್ರ ಹೆಗಡೆಯವರು ನೀಡಿದ ರೂ 1,51,630 ಸಹಾಯಧನ ಚೇಕನ್ನು ಯೋಜನಾ ಜಿಲ್ಲಾ ನಿರ್ದೇಶಕ ಎಚ್ ಆರ್ ಲವಕುಮಾರ ಮಂಗಳವಾರದಂದು ವಿತರಿಸಿದರು. ಈ ಸಂದರ್ಭದಲ್ಲಿ ಶ್ರೀಮಂತ ಬೆಳವಿ, ಲಗಮಣ್ಣ ನಾಗನ್ನವರ, ಭರತೇಶ ಪರಪ್ಪನವರ, ಭರಮಪ್ಪ ಚಿಗತಮ್ಮನವರ, ವಿಜಕುಮಾರ ಪಾಟೀಲ, ಶೀತಲ ದೇಮನ್ನವರ, ಮಲ್ಲೇಶಿ ಪರಪ್ಪನವರ, ಅಶೋಕ ಚಿಗತಮ್ಮನವರ, ಜೀನಪ್ಪ ಕಮತೆ, ವಿಜಯ ಪರಪ್ಪನವರ, ಯೋಜನಾಧಿಕಾರಿ ರೋಹಿತ. ಎಚ್ ಸೇರಿದಂತೆ ಅನೇಕರು ಇದ್ದರು.

ಕೆಪಿಎ ಆಸರೆ ಯೋಜನೆಯ ಭಿತ್ತಿಪತ್ರ ಬಿಡುಗಡೆ

ಯಮಕನಮರಡಿ : ಕರ್ನಾಟಕ ಛಾಯಾಚಿತ್ರ ಗ್ರಾಹಕರ ಜಿಲ್ಲಾ ಮತ್ತು ತಾಲೂಕು ಸಂಘಗಳ ಸಹಯೋಗದಲ್ಲಿ ಸ್ಥಳೀಯ ಪುಣ್ಯ ಸಂಪಾದನ ಹುರಿಸಿಕೊಳ್ಳ ಮಠದಲ್ಲಿ ಕೆಪಿಎ ಆಸರೆ ಯೋಜನೆಯ ಭಿತ್ತಿಪತ್ರ ಬಿಡುಗಡೆ ಸಮಾರಂಭ ನಡೆಯಿತು.

ಶ್ರೀಮಠದ ಸಿದ್ದ ಬಸವ ದೇವರು ಸಾನ್ನಿಧ್ಯದಲ್ಲಿ ಬಿಡುಗಡೆ ಮಾಡಲಾಯಿತು.ಸಂದರ್ಭದಲ್ಲಿ ಹುಕ್ಕೇರಿ ತಾಲೂಕು ಛಾಯಾಗ್ರಾಹಕರ ಸಂಘದ ಅಧ್ಯಕ್ಷರಾದ ಅಪ್ಪು ಹುಕ್ಕೇರಿ, ಉಪಾಧ್ಯಕ್ಷರಾದ ಶಿವಾನಂದ ಪಾಟೀಲ ಹಾಗೂ ಕಾರ್ಯದರ್ಶಿಗಳಾದ ಬಸವರಾಜ ದಾರೋಜಿ ಸ್ಥಳೀಯ ಹಿರಿಯ ಛಾಯಾಚಿತ್ರಗಾರರಾದ ಗೋಪಾಲ್ ಚಪನಿ, ಶಷಿಕಾಂತ್ ಮೀಸರಿಕೋಟಿ ಉಪಸ್ಥಿತರಿದ್ದರು.



ಕೊನೆಗೂ ಸೆರೆ ಸಿಕ್ಕ ಮಂಗ!



ಕಕಮರಿ: ಕಳೆದ ಸುಮಾರು ಎರಡು ತಿಂಗಳಿನಿಂದ ಗ್ರಾಮದ ಜನರಿಗೆ ತಲೆನೋವಾಗಿ ಪರಿಣಮಿಸಿದ್ದ ಕೋತಿ ಬುಧವಾರ ಕೊನೆಗೂ ಬಲೆಗೆ ಬಿದ್ದಿದೆ. ಮಂಗದ ಕಾಟಕ್ಕೆ ಜನ ತತ್ತರಿಸಿದ್ದರು. ಗ್ರಾಮದಲ್ಲಿ ಹಲವಾರು ಜನರಿಗೆ ಕಚ್ಚಿ ಗಾಯಗೊಳಿಸಿದ್ದು ಮಾತ್ರವಲ್ಲದೆ, ಮಕ್ಕಳು, ಮಹಿಳೆಯರು ಹಾಗೂ ವೃದ್ದರಲ್ಲಿ ಭಯದ ವಾತಾವರಣವನ್ನೇ ಸೃಷ್ಟಿಸಿತ್ತು. ಸುಮಾರು ಇಪ್ಪತ್ತು ದಿನಗಳಿಂದ ಅರಣ್ಯ ಇಲಾಖೆ ಸಿಬಂದಿ ಮಂಗನನ್ನು ಹಿಡಿಯಲು ಹಗಲು ರಾತ್ರಿ ಎನ್ನದೇ ಅವಿರತ ಪ್ರಯತ್ನ ನಡೆಸುತ್ತಿದ್ದರು. ಕೊನೆಗೂ ಗ್ರಾಮಸ್ಥರ ಸಹಕಾರದಿಂದ ಮಂಗನನ್ನು ಹಿಡಿಯಲು ಸಹಕಾರಿಯಾಯಿತು. ಗ್ರಾಮಸ್ಥರು ನಿಟ್ಟುಸಿರು ಬಿಡುವಂತಾಯಿತು.ಅರಣ್ಯ ಇಲಾಖೆ ಸಿಬ್ಬಂದಿಗಳಾದ ಮುರಗೇಶ ಠಕ್ಕಣ್ಣವರ, ಸಿದ್ದಪ್ಪ ಶಿರೂರ, ಗ್ರಾಪಂ ಅಭಿವೃದ್ಧಿ ಅಧಿಕಾರಿ ಪುಷ್ಪಾ ಜನಗೌಡ, ಬಾಳು ಕೋಳಿ, ಮಾಜಿ ಸೈನಿಕ ಗದಿಗೆಪ್ಪ ಚಮಕೇರಿ, ಪ್ರಶಾಂತ ವಾಲಿ, ಮಲ್ಲಪ್ಪ ದಾಶ್ಯಾಳ, ಸಂಗಪ್ಪ ಜನಗೌಡ, ಇತರರಿದ್ದರು.

ನೇತ್ರಾವತಿ ಕೇಂದ್ರ ಉದ್ಘಾಟನೆ

ರಾಯಬಾಗ: ತಾಲೂಕಿನ ಬೆಕ್ಕೇರಿ ವಲಯ ನಿಡಗುಂದಿ ಕಾರ್ಯ ಕ್ಷೇತ್ರ ಮಹಿಳಾ ಜ್ಞಾನವಿಕಾಸ ಕಾರ್ಯಕ್ರಮದ ಅಡಿಯಲ್ಲಿ ಹೊಸಕೇಂದ್ರ ನೇತ್ರಾವತಿ ಕೇಂದ್ರ ಉದ್ಘಾಟನೆ ಕಾರ್ಯಕ್ರಮ ನಡೆಯಿತು. ವಾಸಣ್ಣ ಲಟ್ಟೆ , ಸಿದ್ರಾಮ್, ನಿಂಗಪ್ಪ, ಹರೀಶ, ಜಿನೇಂದ್ರ ಖೇಮಲಾಪುರೆ, ಹಿರಿಯರು ಹಾಲಪ್ಪ, ಲಗಮಣ್ಣ, ವಲಯ ಮೇಲ್ವಿಚಾರಕರು ಸಾವಿತ್ರಿ,ತಾಲೂಕು ಜ್ಞಾನವಿಕಾಸ ಸಮನ್ವಯ ಅಧಿಕಾರಿ ಸುರೇಖಾ ಸೇರಿದಂತೆ ಮತ್ತಿತರರು ಇದ್ದರು.

ಸಂಪನ್ಮೂಲ ವ್ಯಕ್ತಿಯವರಾದ ರಾಯಬಾಗ ತಾಲೂಕಿನ ಸಾರ್ವಜನಿಕ ನರ್ಸಿಂಗ್ ಆಫೀಸರ್ ಶ್ರೀಶೈಲ ಡಿ ಅವರು ಪೌಷ್ಟಿಕ ಆಹಾರ ಸೇವನೆ ಮತ್ತು ಬಿಪಿ ಶುಗರ್, ಥೈರಾಯ್ಡ ಮತ್ತು ಸಾಂಕ್ರಾಮಿಕ ರೋಗಗಳು ಬರದಂತೆ ಹಾಗೂ ವೈಯಕ್ತಿಕ ಸ್ವಚ್ಛತೆ ಬಗ್ಗೆ ಮಾಹಿತಿ ನೀಡಿದರು.



ಶಾಲಾ ಪ್ರರಂಭೋತ್ಸವಕ್ಕೆ ಚಾಲನೆ



ಯಮಕನಮರಡಿ: ಉತ್ತಮ ಶಿಕ್ಷಣ ಪಡೆದು ಉತ್ತಮ ವಿದ್ಯಾರ್ಥಿಗಳಾಗಿ ಎಂದು ಜೆ. ಎನ್. ಅವಾಡೆ ಹೇಳಿದರು.ಅವರು ಯ.ವಿ. ಸಂಘದ ಪ್ರಾಥಮಿಕ ಶಾಲೆಯಲ್ಲಿ ಪುಸ್ತಕ ವಿತರಿಸಿ ಮಾತನಾಡಿದರು.ಆರ್. ಎಲ್. ಮಲಾಜಿ ಸರಸ್ವತಿ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಶಾಲಾ ಪ್ರರಂಭೋತ್ಸವಕ್ಕೆ ಚಾಲನೆ ನೀಡಿದರು. ವಿ.ಬಿ. ಜಿಂಡ್ರಾಲಿ, ಕುಶಾಲ ಶಿಂಗ್ ರಜಪುತ, ಯು ಎಂ ಅಂಬಿ, ಎ ಎಸ್ ಮುಗಳಿ ಇನ್ನುಳಿದ ಶಿಕ್ಷಕರು ವಿದ್ಯಾರ್ಥಿ ಗಳು ಉಪಸ್ಥಿತರಿದ್ದರು.

ರಸ್ತೆ, ಚರಂಡಿ ನಿರ್ಮಾಣಕ್ಕೆ ಚಾಲನೆ



ರಾಯಬಾಗ: ಪಟ್ಟಣ ಪಂಚಾಯತಿ ವ್ಯಾಪ್ತಿಯ ಪರಿಶಿಷ್ಟ ಜಾತಿ ಕಾಲೊನಿಗಳಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ ಸಂಸದೆ ಪ್ರೀಯಂಕಾ ಜಾರಕಿಹೊಳಿ, ಶಾಸಕ ದುರ್ಯೋಧನ ಐಹೊಳೆ ಚಾಲನೆ ನೀಡಿದರು.

ಸುಮಾರು 1 ಕೋಟಿ ರೂ. ವೆಚ್ಚದ ಕಾಮಗಾರಿಗೆ ಭೂಮಿಪೂಜೆ ಕೈಗೊಳ್ಳುವ ಮೂಲಕ ಚಾಲನೆ ನೀಡಲಾಯಿತು. ಈ ವೇಳೆ ಶಾಸಕ ದುರ್ಯೋಧನ ಐಹೊಳೆ ಮಾತನಾಡಿ, ಈಗಾಗಲೇ ರಾಯಬಾಗ ಪಟ್ಟಣದ ಅಭಿವೃದ್ಧಿಗಾಗಿ ಅನೇಕ ಮೂಲಸೌಕರ್ಯಗಳನ್ನು ಒದಗಿಸಲಾಗಿದೆ. ಆದ್ಯತೆ ಮೇರೆಗೆ ಇನ್ನೂ ಹೆಚ್ಚಿನ ಕೆಲಸಗಳನ್ನು ಮಾಡಲಾಗುವುದೆಂದು ಭರವಸೆ ನೀಡಿದರು.ಈ ವೇಳೆ ಮಹಾವೀರ ಮೊಹಿತೆ, ಹಾಜೀ ಮುಲ್ಲಾ, ಹರೀಶ ಕುಲಗುಡೆ, ಅರ್ಜುನ್ ಬಂಡಗಾರ, ಸದಾಶಿವ ಗೊರ್ಪಡೆ, ಅಣ್ಣಾಸಾಹೇಬ ಖೇಮಲಾಪುರೆ, ತಮ್ಮಾಣಿ ನಿಂಗನೂರೆ, ಸದಾನಂದ ಹಳಿಂಗಳಿ, ಜ್ಯೋತಿ ಕೆಂಪಟ್ಟಿ, ಕಿರಣ ಕಾಂಬಳೆ, ಮಹೇಶ ಕರಮಡಿ, ದಿಲೀಪ ಪಾಯನ್ನವರ, ಇಲಾಹಿ ಶೇಖ, ಸದಾಶಿವ ಮುರಗುಡೆ, ಕಾಡೇಶ ಐಹೊಳೆ ಲೋಕೇಶ ಕಾಂಬಳೆ, ಚೇತನ್ ಕಾಂಬಳೆ, ಉದಯ ಕುಳ್ಳೋಳಿ, ತನುಜಾ ಶಿಂಗೆ, ದಿಲೀಪ್ ಜಮಾದಾರ, ಭಾರತಿ ಲೋಹಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಎಚ್‌ಪಿವ್ಹೆ ಲಸಿಕೆ ಹಾಕಿಸಿಕೊಳ್ಳಿ

ಅಡಹಳ್ಳಿ: 14 ರಿಂದ 15 ವರ್ಷದ ಒಳಗಿನ ಪ್ರತಿ ಹೆಣ್ಣು ಮಕ್ಕಳು ಹ್ಯೂಮನ್ ಪ್ಯಾಪಿಲೋಮ್ ವೈರಸ್ ಲಸಿಕೆಯನ್ನು ತಪ್ಪದೇ ಹಾಕಿಸಿಕೊಳ್ಳಬೇಕೆಂದು ಅಡಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಎಮ್. ಬಿ. ಬಾಲಪ್ಪನ್ನವರ ಹೇಳಿದರು. ಅವರು ಬುಧವಾರ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 14 –15 ವರ್ಷದ ಒಳಗಿನ ಹೆಣ್ಣುಮಕ್ಕಳಿಗೆ ಲಸಿಕೆಯನ್ನು ಹಾಕಿ ಮಾತನಾಡಿ, ಹ್ಯೂಮನ್ ಪ್ಯಾಪಿಲೋಮ್ ವೈರಸ್ ಲಸಿಕೆಯೂ ಹೆಣ್ಣು ಮಕ್ಕಳ ಗರ್ಭಕಂಠದ ಕ್ಯಾನ್ಸರ್ ಮತ್ತು ಜನನಾಂಗದ ನರಹುಲಿಗಳನ್ನು ಉಂಟು ಮಾಡುವ ವೈರಸ್‌ನಿಂದ ಹೆಣ್ಣು ಮಕ್ಕಳಿಗೆ ರಕ್ಷಣೆಯನ್ನು ನೀಡುತ್ತದೆ. ಇದನ್ನು ಹೆಣ್ಣು ಮಕ್ಕಳಿಗೆ ಭವಿಷ್ಯದಲ್ಲಿ ಬರುವ ಸೋಂಕುಗಳನ್ನು ತಡೆಯಲು ಅತ್ಯಂತ ಉಪಯುಕ್ತವಾಗಿದೆ. ಆದ್ದರಿಂದ ಎಲ್ಲರೂ ಈ ಲಸಿಕೆಯನ್ನು ಪ್ರತಿ 14 ರಿಂದ 15 ವರ್ಷದ ಹೆಣ್ಣು ಮಕ್ಕಳು ತಪ್ಪದೇ ಹಾಕಿಸಿಕೊಳ್ಳಬೇಕೆಂದು ಹೇಳಿದರು.ಈ ವೇಳೆ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಮ್. ವಿ. ಕೊಪ್ಪ, ಹಿರಿಯ ಶುಶ್ರೋಷಕಿ ಸವಿತಾ ಕಾಂಬಳೆ, ಆರೋಗ್ಯ ಸುರಕ್ಷಣಾಧಿಕಾರಿ ಎಂ. ಎಫ್. ಸಿಂಧೂ, ಎಸ್. ಆರ್. ಶಿಳ್ಳಿನ, ಪಿ. ಎ. ಅಥಣಿ, ಎಫ್. ಎ. ಕೊಲಕಾರ, ಎಮ್. ಖಿ. ಶೇಖ, ನಾಗಪ್ಪ ಬನಹಟ್ಟಿ, ಬಸವರಾಜ ತೋಟಗಿ, ರೂಪಾ ಲಕ್ಕಪ್ಪಗೋಳ ಸೇರಿದಂತೆ ಆಶಾ ಕಾರ್ಯಕರ್ತೆಯರು ಹಾಗೂ ವಿಧ್ಯಾರ್ಥಿನಿಯರು ಪಾಲ್ಗೊಂಡಿದ್ದರು.



ಅಪರೂಪದ ಕಾನೂನು ಪುಸ್ತಕಗಳ ಪ್ರದರ್ಶನ



ಬೆಳಗಾವಿ: ಕೆಎಲ್‌ಎಸ್ ರಾಜಾ ಲಖಮಗೌಡ ಕಾನೂನು ಕಾಲೇಜು, ಬೆಳಗಾವಿಯ ಹಾಬಿ ಕ್ಲಬ್ ಮತ್ತು ಜಿಮ್ಖಾನಾ ವಿಭಾಗವು ಸಂಸ್ಥೆಯ ಸಮೃದ್ಧ, ಶಿಕ್ಷಣ ಮತ್ತು ಕಾನೂನು ಪರಂಪರೆಯನ್ನು ಒತ್ತಿ ಹೇಳುವ ವಿಶಿಷ್ಟ ಅಪರೂಪದ ಪುಸ್ತಕಗಳ ಪ್ರದರ್ಶನ ಆಯೋಜಿಸಿತು.

ಪ್ರದರ್ಶನದಲ್ಲಿ 1939ರಿಂದ ಕಾಲೇಜು ಸಂರಕ್ಷಿಸಿದ ಅಪರೂಪದ ಸಂಹಿತೆಗಳು, ಐತಿಹಾಸಿಕ ಕಾನೂನು ಪುಸ್ತಕಗಳು ಮತ್ತು ಸೂಚಕ ವಸ್ತುಗಳ ಭರ್ಜರಿ ಸಂಗ್ರಹವನ್ನು ಪ್ರದರ್ಶಿಸಲಾಯಿತು. ಒಟ್ಟು 250 ಪುಸ್ತಕಗಳು ಪ್ರದರ್ಶನಕ್ಕೆ ಇಡಲಾಗಿ ವಿದ್ಯಾರ್ಥಿಗಳು, ಅಧ್ಯಾಪಕರು, ಕಾನೂನು ವೃತ್ತಿಪರರು ಮತ್ತು ಭೇಟಿ ನೀಡಿದವರು ಹಲವು ದಶಕಗಳಲ್ಲಿ ಕಾನೂನು ಶಿಕ್ಷಣ ಮತ್ತು ಗುಲಾಮತನದ ಅಭಿವೃದ್ಧಿಯ ಕಡೆಗಿನ ನೋಟವನ್ನು ಪಡೆದುಕೊಂಡರು. ಅಪರೂಪದ ಪುಸ್ತಕಗಳು ಮತ್ತು ಐತಿಹಾಸಿಕ ದಾಖಲೆಗಳನ್ನು ಸಂರಕ್ಷಿಸುವ ಮಹತ್ವ ಕುರಿತು ಜಾಗೃತಿ ಉಂಟುಮಾಡಲು ಮತ್ತು ವಿದ್ಯಾರ್ಥಿಗಳಿಗೆ ಕಾನೂನು ಸಂಶೋಧನೆ ಹಾಗೂ ಓದಿನ ಮೇಲೆ ಆಸಕ್ತಿ ಬೆಳೆಸಲು ಈ ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮ ಪುಸ್ತಕಾಲಯಗಳ ಕೊಡುಗೆಗಳನ್ನು ಜ್ಞಾನ ಮತ್ತು ಬೌದ್ಧಿಕ ವೃದ್ಧಿಗೆ ಉತ್ತೇಜನ ನೀಡುವುದಾಗಿ ನೆನಪಿಸಿಸಿತು.ಪ್ರದರ್ಶನವು ಭೇಟಿ ನೀಡಿದವರಿಂದ ಹೆಚ್ಚಿನ ಮೆಚ್ಚುಗೆಯನ್ನು ಪಡೆದಿದ್ದು ಭಾಗವಹಿಸಿದವರಿಗೆ ಸಮೃದ್ಧ ಶಿಕ್ಷಣಾತ್ಮಕ ಅನುಭವವನ್ನು ನೀಡಿತು.

ವಿದ್ಯಾರ್ಥಿಗಳಿಗೆ ನೋಟಬುಕ್ ವಿತರಣೆ

ಬಾವನಸೌಂದತ್ತಿ: ಗ್ರಾಮದ ಸುಮಾರು ಆರು ಜನರ ಜನ್ಮದಿನದ ನಿಮಿತ್ತ ಸರಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ನೋಟಬುಕ್, ಪೆನ್ ನೀಡುವ ಮೂಲಕ ವಿಶೇಷವಾಗಿ ಹುಟ್ಟುಹಬ್ಬವನ್ನು ಆಚರಿಸಿದರು. ಕುಮಾರ ಕೋಷ್ಟಿ, ರಮೇಶ್ ಗಿರಿ, ಸತೀಶ ಮಂಗಸುಳೆ, ಪಾಂಡುರಂಗ ದೇಸಾಯಿ, ಕುಮಾರ ಮಾನೆ, ಸಂತೋಷ ಗಿರಿ ಹುಟ್ಟುಹಬ್ಬವನ್ನು ಆಚರಿಸಿಕೊಂಡರು. ಈ ವೇಳೆ ಶಿಕ್ಷಕಿಯಾದ ಎಂ ವೈ ಬೈಲ್ವಾಡ್ ಎಸ್ ಡಿ ಪಾಟೀಲ ಅರ್ಜುನ ಚೌಹಾಣ ಅನೇಕರು ಇದ್ದರು ಸರ್ಕಾರಿ ಶಾಲಾ ಸಿಬ್ಬಂಧಿಗಳು, ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು



ಕಿರುಸುದ್ದಿ

ಅಧಿಕಮಾಸ ಸಂಕಷ್ಟಿ: ಗಣೇಶನಿಗೆ ವಿಶೇಷ ಪೂಜೆ



ಸವದತ್ತಿ: ನಗರದ ಮಧ್ಯ ಭಾಗದಲ್ಲಿರುವ ಕಟ್ಟಿ ಓಣಿ ದೇಸಾಯಿ ಗಲ್ಲಿಯ ಗಜಾನನ ದೇವಸ್ಥಾನದಲ್ಲಿ ಅಧಿಕಮಾಸ ಸಂಕಷ್ಟಿ ನಿಮಿತ್ತ ವಿಶೇಷ ಪೂಜೆ ಸಲ್ಲಿಸಲಾಯಿತು. ಗಣೇಶನಿಗೆ ಪಂಚಾಮೃತ ಅಭಿಷೇಕ ಪುಷ್ಪಾಲಂಕಾರ ಮಹಾನವೇದ್ಯ ಮುಂತಾದ ಧಾರ್ಮಿಕ ಕಾರ್ಯಕ್ರಮಗಳನ್ನು ದೇವಸ್ಥಾನದ ಅರ್ಚಕರಾದ ಧೀರೇಂದ್ರ ಕಾನಡೆಯವರು ನಡೆಯಿಸಿ ಕೊಟ್ಟರು. ಸಂಜೆ 9: 36 ನಿಮಿಷಕ್ಕೆ ಚಂದ್ರೋದಯದ ನಂತರ ಮಹಾಮಂಗಳಾರತಿಯೊಂದಿಗೆ ಕಾರ್ಯಕ್ರಮಗಳನ್ನು ಮುಕ್ತಾಯಗೊಳಿಸಲಾಯಿತು ನಗರದ ಎಲ್ಲಾ ಸದ್ಭಕ್ತರು ದೇವಸ್ಥಾನಕ್ಕೆ ಆಗಮಿಸಿ, ದರುಶನಾಶೀರ್ವಾದ ಪಡೆದರು.

ಸಚಿವ ಜಾರಕಿಹೊಳಿ: ಅಭಿಮಾನಿಗಳ ಸಂಭ್ರಮಾಚರಣೆ

ಬೆಳಗಾವಿ : ರಾಜ್ಯ ರಾಜಕಾರಣದ ಮಹತ್ವದ ಬೆಳವಣಿಗೆಯೊಂದರಲ್ಲಿ, ಡಿ.ಕೆ. ಶಿವಕುಮಾರ್ ನೇತೃತ್ವದ ಸಚಿವ ಸಂಪುಟಕ್ಕೆ ಪ್ರಭಾವಿ ನಾಯಕ ಸತೀಶ್ ಜಾರಕಿಹೊಳಿ ಅವರು ಅಧಿಕೃತವಾಗಿ ಸೇರ್ಪಡೆಗೊಂಡಿದ್ದಾರೆ. ಸತೀಶ್ ಜಾರಕಿಹೊಳಿ ಅವರು ಸಚಿವರಾಗಿ ಅಧಿಕಾರ ವಹಿಸಿಕೊಳ್ಳುತ್ತಿದ್ದಂತೆ, ಇತ್ತ ಅವರ ತವರು ಜಿಲ್ಲೆಯಾದ ಬೆಳಗಾವಿಯಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗಿದ್ದು, ಕಾರ್ಯಕರ್ತರು ಹಾಗೂ ಅಭಿಮಾನಿಗಳ ಸಡಗರ ಮುಗಿಲು ಮುಟ್ಟಿದೆ.

ಪ್ರಮಾಣ ವಚನ ಸ್ವೀಕಾರದ ಸುದ್ದಿ ಹೊರಬೀಳುತ್ತಿದ್ದಂತೆ ಬೆಳಗಾವಿಯ ಕಿತ್ತೂರು ರಾಣಿ ಚನ್ನಮ್ಮ ವೃತ್ತದಲ್ಲಿ ಜಮಾಯಿಸಿದ ಅಭಿಮಾನಿ ಬಳಗ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಭರ್ಜರಿ ವಿಜಯೋತ್ಸವ ಆಚರಿಸಿದರು.

ಅಭಿಮಾನಿಗಳು ಮತ್ತು ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಭರ್ಜರಿಯಾಗಿ ಸಂಭ್ರಮಾಚರಣೆ ನಡೆಸಿದರು.

ಸಿಹಿ ಹಂಚಿ ಸಂಭ್ರಮ: ನೆರೆದಿದ್ದ ಸಾರ್ವಜನಿಕರಿಗೆ, ಪಾದಚಾರಿಗಳಿಗೆ ಹಾಗೂ ವಾಹನ ಸವಾರರಿಗೆ ಸಿಹಿ ತಿನ್ನಿಸುವ ಮೂಲಕ ಸತೀಶ್ ಜಾರಕಿಹೊಳಿ ಅವರ ಸಚಿವ ಸ್ಥಾನದ ಸಂತೋಷವನ್ನು ಹಂಚಿಕೊಳ್ಳಲಾಯಿತು.

ನಾಯಕನಿಗೆ ಜಯಘೋಷ: ಕೈಯಲ್ಲಿ ಸತೀಶ್ ಜಾರಕಿಹೊಳಿ ಅವರ ಭಾವಚಿತ್ರವಿರುವ ಧ್ವಜಗಳನ್ನು ಹಿಡಿದು, ನಮ್ಮ ನಾಯಕನಿಗೆ ಜಯವಾಗಲಿ, ಬೆಳಗಾವಿ ಸಾಹುಕಾರ್ ಗೆ ಜೈ ಎಂಬ ಘೋಷಣೆಗಳು ವೃತ್ತದಾದ್ಯಂತ ಮೊಳಗಿದವು.ಈ ವೇಳೆ ಸಚಿವರ ಅಭಿಮಾನಿ ಬಳಗದವರಾದ ಮುಸ್ತಾಕ್ ಜಮಾದಾರ್ , ಸತೀಶ ಯರಗಂಬಳಿಮಠ, ಜ್ಯೋತಿಬಾ ಗುತ್ತೆನ್ನವರ, ತೇಜಸ್ ಕೊಳ್ಳಂಕರ್ ಸೇರಿದಂತೆ ಹಲವು ಅಭಿಮಾನಿಗಳು ಪಾಲ್ಗೊಂಡಿದ್ದರು.

ಐಐಟಿಗೆ ಆಯ್ಕೆ



ಅಡಹಳ್ಳಿ : ಭಾರತ ಸರ್ಕಾರದ ಉನ್ನತ ಶಿಕ್ಷಣ ಸಚಿವಾಲಯದಡಿ ದೇಶಾದ್ಯಂತ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯವರು ನಡೆಸುವ ಜೆಇಇ ಅಡ್ವಾನ್ಸ್ ಪರೀಕ್ಷೆಯಲ್ಲಿ ಗ್ರಾಮದ ವಿದ್ಯಾರ್ಥಿ ಆದಿತ್ಯಾ ಅನೀಲ ಕೆಂಚಣ್ಣವರ ಆಲ್ ಇಂಡಿಯಾ ರ್‍ಯಾಂಕಿಂಗನಲ್ಲಿ 1803 ರ್‍ಯಾಂಕ್ ಪಡೆದು ಐಐಟಿಗೆ ಆಯ್ಕೆಯಾಗಿದ್ದಾನೆ. ಆದಿತ್ಯಾ ಕೆಂಚಣ್ಣವರ ಇತನು ಮೂಡಬಿದರಿಯ ಕಲ್ಲಬೆಟ್ಟ ನ್ಯೂ ವೈಬ್ರೆಂಟ್ ಪಿಯು ಕಾಲೇಜ ವಿದ್ಯಾರ್ಥಿಯಾಗಿದ್ದಾನೆ. ವಿದ್ಯಾರ್ಥಿಯ ಈ ಸಾಧನೆಗೆ ಗ್ರಾಮಸ್ಥರು ಅಭಿನಂದಿಸಿದ್ದಾರೆ.

ಯಶಸ್ವಿ ಸಿಎಂ ಆಗುವುದರಲ್ಲಿ ಸಂದೇಹವಿಲ್ಲ: ಗುಡಸಿ



ಹಾರೂಗೇರಿ: ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕರ್ನಾಟಕದ ಆರ್ಥಿಕ ಸಂಕಷ್ಟದ ನಡುವೆಯೂ ಆಡಳಿತದಲ್ಲಿ ಗಿಮಿಕ್ ಮಾಡುತ್ತಾರೆ .ವಿರೋಧ ಪಕ್ಷದ ಸರ್ಕಾರ ಕೇಂದ್ರದಲ್ಲಿದ್ದರೂ , ಕೇಂದ್ರದಿಂದ ಅನುದಾನ ಪಡೆಯುವಲ್ಲಿ ಯಶಸ್ವಿಯಾಗುತ್ತಾರೆ. 25ನೇ ಮುಖ್ಯಮಂತ್ರಿಗಳು ರಾಜ್ಯದ ಆರ್ಥಿಕ ಶಿಸ್ತು ತರಲು ಮತ್ತು ತನ್ನ ನಾಡಿನ ಅಭಿವೃದ್ಧಿಪಡಿಸಲು ಪರಿಸ್ಕೃತ ಬಜೆಟ್ ಮಂಡಿಸಬೇಕು ಎಂದು ಆಧಾರ ಹಿರಿಯ ನಾಗರಿಕರ ಕಲ್ಯಾಣ ಸಂಸ್ಥೆ ಅಧ್ಯಕ್ಷ ಹಾಗೂ ಆರ್ಥಿಕ ತಜ್ಞ ಡಾ.ಚಂದ್ರಶೇಖರ ಗುಡಸಿ ತಿಳಿಸಿದ್ದಾರೆ.



ಬೆಳಗಾವಿ: ಸತೀಶ ಜಾರಕಿಹೊಳಿ ಅವರು ಸಚಿವರಾಗಿ ಅಧಿಕಾರ ಸ್ವೀಕರಿಸುತ್ತಿದ್ದಂತೆ ಕಿತ್ತೂರು ರಾಣಿ ಚನ್ನಮ್ಮ ವೃತ್ತದಲ್ಲಿ ಜಮಾಯಿಸಿದ ಅಭಿಮಾನಿ ಬಳಗ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಭರ್ಜರಿ ವಿಜಯೋತ್ಸವ ಆಚರಿಸಿದರು.

ಆರೋಗ್ಯ ಭಾರತಿಯಿಂದ ವಿಭಾಗ ಅಭ್ಯಾಸ ವರ್ಗ

ಬೆಳಗಾವಿ: ಆರೋಗ್ಯ ಭಾರತಿ ಜಿಲ್ಲಾ ಬೆಳಗಾವಿ ಶಾಖೆ ಮತ್ತು ಜಿಲ್ಲಾ ಚಿಕ್ಕೋಡಿ ಶಾಖೆ ಕಾರ್ಯಕರ್ತರಿಗಾಗಿ ಒಂದು ದಿನದ ವಿಭಾಗ ಅಭ್ಯಾಸ ವರ್ಗವನ್ನು ಇತ್ತೀಚೆಗೆ ಬೆಳಗಾವಿಯ ಮಹಿಳಾ ವಿದ್ಯಾಲಯದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕರ್ನಾಟಕ ಉತ್ತರ ಪ್ರಾಂತ ಉಪಾಧ್ಯಕ್ಷರಾದ ವಾಸುದೇವ್ ಇನಾ ಮದಾರ್, ಕರ್ನಾಟಕ ಉತ್ತರ ಪ್ರಾಂತ ಮಹಿಳಾ ಘಟಕದ ಉಪಾಧ್ಯಕ್ಷೆಯಾದ ಶ್ವೇತಾ ದೀಕ್ಷಿತ್, ಚಿಕ್ಕೋಡಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ಅನಗಲ್, ಬೆಳಗಾವಿ ಜಿಲ್ಲಾ ಉಪಾಧ್ಯಕ್ಷೆ ಹೇಮಾ ಅಂಬೇವಾಡಿಕರ, ಚಿಕ್ಕೋಡಿ ಜಿಲ್ಲಾ ಕಾರ್ಯದರ್ಶಿ ಮಕರಂದ ಕುಲಕರ್ಣಿ, ಖ್ಯಾತ ಆಯುರ್ವೇದ ತಜ್ಞ ಡಾ.ಗಾಯತ್ರಿ ಯೆಲ್ಲಾಪುರ್ಕರ್, ಚಿಕ್ಕ ಮಕ್ಕಳ ತಜ್ಞ ಡಾ.ಮಿಲಿಂದ್ ಹಲ್ಗೆಕರ್, ಡಾ.ಅಡಿವೇಶ ಹೊಳಯಾಚೆ,ಆರೋಗ್ಯ ಭಾರತಿಯ ಅಖಿಲ ಭಾರತೀಯ ಸಹ ಸಂಘಟನೆ ಕಾರ್ಯದರ್ಶಿ ಡಾ.ಮುರಳಿ ಕೃಷ್ಣಸೌ. ಮಾಯಾ ಕೋಷ್ಠಿಯವರು ಭಗವಾನ್ ಧನವಂತರಿ ಸ್ತವನ ಪಠಿಸಿದರು. ಸಂಯುಕ್ತ ಗೋಖಲೆ ಯವರು ವೈಯಕ್ತಿಕ ಗೀತೆ ಹಾಡಿದರು. ಬೆಳಗಾವಿ ಜಿಲ್ಲಾ ಅಧ್ಯಕ್ಷ ಡಾ.ದತ್ತಪ್ರಸಾದ ಗಿಜರೆ ಎಲ್ಲರನ್ನೂ ಸ್ವಾಗತಿಸಿದರು. ಬೆಳಗಾವಿ ವಿಭಾಗ ಸಂಯೋಜಕಮುಕುಂದ ಗೋಖಲೆ ಹಾಗೂ ಕಾರ್ಯದರ್ಶಿ ಲಕ್ಷ್ಮಣ ಶೆಟ್ಟಿ ನಿರೂಪಿಸಿದರು. ಸಂಜಯ್ ಕುಲಕರ್ಣಿ ಅಭಾರ ಮನ್ನಣೆ ತಿಳಿಸಿದರು. ಶ್ರೀದೇವಿ ಬುಡವಿ ಯವರು ಶಾಂತಿಮಂತ್ರ ಭೋದಿಸಿ ಕಾರ್ಯಕ್ರಮ ಸಂಪನ್ನಗೊಳಿಸಿದರು.



ಬೆಳಗಾವಿ: ಆರೋಗ್ಯ ಭಾರತಿ ಜಿಲ್ಲಾ ಬೆಳಗಾವಿ ಶಾಖೆ ಮತ್ತು ಜಿಲ್ಲಾ ಚಿಕ್ಕೋಡಿ ಶಾಖೆ ಕಾರ್ಯಕರ್ತರಿಗಾಗಿ ಒಂದು ದಿನದ ವಿಭಾಗ ಅಭ್ಯಾಸ ವರ್ಗವನ್ನು ಇತ್ತೀಚೆಗೆ ಬೆಳಗಾವಿಯ ಮಹಿಳಾ ವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು.

ಮುಗಳಖೋಡ ಇಂದಿರಾ ಕ್ಯಾಂಟೀನ್‌ನಲ್ಲಿ ಕೊಳೆತ ತರಕಾರಿ ಬಳಕೆ

ಗ್ರಾಮಸ್ಥರಿಂದ ಕ್ಯಾಂಟೀನ್‌ಗೆ ಬೀಗ !

ಮುಗಳಖೋಡ : ಪಟ್ಟಣದ ಪುರಸಭೆ ಎದುರಿಗೆ ಇರುವ ಇಂದಿರಾ ಕ್ಯಾಂಟೀನ್ ನಲ್ಲಿ ಆಹಾರ ತಯಾರಿಕಾ ಸಿಬ್ಬಂದಿಯಿಂದ ಕೊಳೆತ ತರಕಾರಿ ಬಳಕೆ ಮಾಡುತ್ತಿರುವುದನ್ನು ಕಂಡು ಗ್ರಾಮಸ್ಥರು ವಿರೋಧ ವ್ಯಕ್ತಪಡಿಸಿದಾಗ ಸಮಜಾಯಿಸಲು ಮುಂದಾದ ಸಿಬ್ಬಂದಿಗಳಿಗೆ ತರಾಟೆ ತೆಗೆದುಕೊಂಡರು. ನಂತರ ಜನರು ಹೆಚ್ಚು ಜಮಾಯಿಸತೊಡಗಿದರು. ಜನರ ಆಕ್ರೋಶದ ಕಟ್ಟೆ ಒಡೆದಿದ್ದನ್ನು ಗಮನಿಸಿದ ಓರ್ವ ಪುರುಷ ಸಿಬ್ಬಂದಿ ಓಡಿ ಹೋದ ಘಟನೆಯೂ ನಡೆಯಿತು. ಜನರು ತಂಡೋಪ ತಂಡವಾಗಿ ಇಂದಿರಾ ಕ್ಯಾಂಟೀನ್ ಗೆ ಬರುತ್ತಿರುವುದನ್ನು ಕಂಡು ಸಿಬ್ಬಂದಿಗಳು ಓಡಿಹೋದರು. ನಂತರ ಪುರಸಭೆ ಪೌರಕಾರ್ಮಿಕರು ಹಾಗೂ ಸಿಬ್ಬಂದಿ ವರ್ಗದವರನ್ನು ಕರೆಯಿಸಿ ಮುಖ್ಯಾಧಿಕಾರಿಗಳು ಬರುವವರಿಗೆ ಚೇತನ ಯಡವನ್ನವರ , ರೈತ ಮುಖಂಡರಾದ ಶ್ರೀಶೈಲ ಅಂಗಡಿ , ಸುರೇಶ ಹೊಸಪೇಟಿ, ಕರೆಪ್ಪ ಮಂಟೂರ, ದುಂಡಪ್ಪ ಹಿಪ್ಪರಗಿ , ಅಶೋಕ ಕದಂ, ಅಣ್ಣಪ್ಪ ನಾವಿ, ಮಾರುತಿ ನಾವಿ, ಭೀಮಪ್ಪ ಯಡವನ್ನವರ ಮುಂತಾದವರ ಮುಂದಾಳತ್ವದಲ್ಲಿ ಜನರು ಕ್ಯಾಂಟೀನ್ ಗೆ ಬೀಗ ಹಾಕಿದರು.

ಜಾಣ ಕುರುಡರಾದ ಪುರಸಭೆ ಸಿಬ್ಬಂದಿ ಹಾಗೂ ಪುರಸಭೆ ಸದಸ್ಯರು : ಇಂದಿರಾ ಕ್ಯಾಂಟೀನ್ ಅನ್ನು ಬಡ, ದೀನ ದಲಿತರು, ಕಾರ್ಮಿಕರು, ಶ್ರಮಿಕ ವರ್ಗದ ಜನಾಂಗದವರಿಗೆ ಹಾಗೂ ಹಸಿದವರಿಗೆ ಒಂದು ತುತ್ತು ಅನ್ನ ದೊರೆಯಲಿ ಹಸಿವು ಮುಕ್ತ ಕರ್ನಾಟಕ ನಿರ್ಮಾಣಕ್ಕಾಗಿ ರಾಯಬಾಗ ತಾಲೂಕಿನ ಕುಡಚಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮುಗಳಖೋಡ , ಹಾರೂಗೇರಿ ಕುಡಚಿ ಪುರಸಭೆ ವ್ಯಾಪ್ತಿಯಲ್ಲಿ ಪ್ರಾರಂಭಗೊಂಡಿವೆ. ಆದರೆ ಮುಗಳಖೋಡ ಮಾತ್ರ ಅವುಗಳ ನಿರ್ವಹಣೆ ಹಾಗೂ ಆಡಳಿತದ ಜವಾಬ್ದಾರಿಯು ಪುರಸಭೆ ಸಿಬ್ಬಂದಿ ಹಾಗೂ ಸದಸ್ಯರ ಹೊಣೆಯಾಗಿರುತ್ತದೆ ಎಂಬ ಅರಿವು ಅವರಿಗೆ ಇಲ್ಲದಾಗಿದೆ. ಪುರಸಭೆ ಸದಸ್ಯರು ಮತ್ತು ಮುಖ್ಯಾಧಿಕಾರಿಗಳು ಸಿಬ್ಬಂದಿ ವರ್ಗ ಜಾಣ ಕುರುಡರಂತೆ ನಡೆದುಕೊಳ್ಳುತ್ತಿದ್ದಾರೆಂದು ಆರೋಪಿಸಿ ರೈತ ಮುಖಂಡ ಶ್ರೀಶೈಲ ಅಂಗಡಿ ಹಾಗೂ ಸುರೇಶ ಹೊಸಪೇಟಿ ಆಕ್ರೋಶ ವ್ಯಕ್ತಪಡಿಸಿದರು.



ಸುಕ್ಷೇತ್ರ ಮುಗಳಖೋಡ ಒಂದು ಪುಣ್ಯಕ್ಷೇತ್ರವಗಿರುವುದರಿಂದ ದಾಸೋಹದ ಮಹಿಮೆಯನ್ನು ಶ್ರೀ ಯಲ್ಲಾಲಿಂಗ ಮಹಾಪ್ರಭುಗಳು , ಶ್ರೀ ಸಿದ್ಧರಾಮ ಶಿವಯೋಗಿಗಳು ನಾಡಿಗೆ ತೋರಿಸಿದ್ದಾರೆ. ಈ ಕ್ಷೇತ್ರದಲ್ಲಿರುವ ಇಂದಿರಾ ಕ್ಯಾಂಟೀನ್ ನಲ್ಲಿ ಸೇವಿಸುವ ಆಹಾರವು ಸ್ವಚ್ಛತೆಯಿಂದ ಪರಿಶುದ್ಧವಾಗಿರಬೇಕು. ಆಹಾರ ಶುದ್ಧವಾಗಿರದೆ ಹೋದರೆ ಮುಂದೆ ಉಗ್ರ ಹೋರಾಟ ನಡೆಸಲಾಗುವುದು.

■ **ಚೇತನ ಯಡವನ್ನವರ ,** ಸದಸ್ಯರು ಪುರಸಭೆ ಮುಗಳಖೋಡ

ಗುತ್ತಿಗೆದಾರರನ್ನು ಕರೆಯಿಸಿ ಇಂದಿರಾ ಕ್ಯಾಂಟೀನ್ ಗೆ ಬರುವ ಗ್ರಾಹಕರಿಗೆ ಪರಿಶುದ್ಧವಾದ ಆಹಾರ ನೀಡಬೇಕು ಇಲ್ಲದೇ ಹೋದರೆ ಟೆಂಡರ್ ರದ್ದು ಪಡಿಸಲಾಗುವುದು. ಈ ಬಗ್ಗೆ ಪುರಸಭೆಯಲ್ಲಿ ಸಭೆ ನಡೆಸುತ್ತೇನೆ .

■ **ಮಹೇಶ ಪವಾಡಿಶೆಟ್ಟಿ,** ಮುಖ್ಯಾಧಿಕಾರಿ ಪುರಸಭೆ ಮುಗಳಖೋಡ.

ಮಾತೃಭಾಷೆ ಶಿಕ್ಷಣಕ್ಕೆ ಒತ್ತು ನೀಡಿ

ಕುಡಚಿ: ಮಕ್ಕಳು ತಮ್ಮ ಮನೆಯಲ್ಲೇ ಮಾತನಾಡುವ ಮಾತೃಭಾಷೆಯಲ್ಲಿ ಶಿಕ್ಷಣ ಪಡೆದರೆ ವಿಷಯ ಬೇಗ ಹಾಗೂ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುತ್ತಾರೆ. ಇದರಿಂದ ಕಲಿಕೆ ಸುಲಭವಾಗುತ್ತದೆ. ಆದ್ದರಿಂದ ಪಾಲಕರು ತಮ್ಮ ಮಕ್ಕಳಿಗೆ ಮಾತೃಭಾಷೆಯಲ್ಲಿ ಶಿಕ್ಷಣ ನೀಡಲು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಮುಖ್ಯೋಪಾಧ್ಯಾಯ ಮರಗುಬ ಜಲಾಲಖಾನ ಹೇಳಿದರು.

ತಾಲೂಕಿನ ಕುಡಚಿ ಪಟ್ಟಣದ ಸರ್ಕಾರಿ ಉರ್ದು ಹಾಗೂ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಸಸಿಗೆ ನೀರುಣಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಮಗುವಿನ ಜನನವಾದ ಕ್ಷಣದಿಂದಲೇ ಅದರ ಕಿವಿಗೆ ಮೊದಲಾಗಿ ಮಾತೃಭಾಷೆಯ ಶಬ್ದಗಳು ಕೇಳಿಸುತ್ತವೆ. ಹೆಚ್ಚಿನ ಹಣ ವ್ಯಯ ಮಾಡುವ ಬದಲು ಸರ್ಕಾರಿ ಶಾಲೆಗಳಲ್ಲಿ ಉಚಿತವಾಗಿ ದೊರೆಯುವ ಬಟ್ಟೆ, ಊಟ ಸೇರಿದಂತೆ ವಿವಿಧ ಸೌಲಭ್ಯಗಳೊಂದಿಗೆ ಅರ್ಹ ಶಿಕ್ಷಕರಿಂದ ಶಿಕ್ಷಣ ಪಡೆಯಲು ಅವಕಾಶ ಇದೆ. ಇದರಿಂದ ಉಳಿದ ಹಣವನ್ನು ಉನ್ನತ ಶಿಕ್ಷಣಕ್ಕೆ ಬಳಸಬಹುದಾಗಿದ್ದು, ಕುಟುಂಬದ ಮೇಲಿನ ಆರ್ಥಿಕ ಒತ್ತಡವೂ ಕಡಿಮೆಯಾಗುತ್ತದೆ ಎಂದು ಅವರು ಸಲಹೆ ನೀಡಿದರು.

ಸಿಆರ್‌ಸಿ ಮುಜಕ್ಕಿರ ಬಾಗೆ ಹಾಗೂ ಕೆಎಚ್‌ಪಿಎಸ್ ಮುಖ್ಯೋಪಾಧ್ಯಾಯೆ ರೇಖಾ ಗುಪ್ತೆ ಅವರು ಸರ್ಕಾರಿ ಶಾಲೆಗಳಲ್ಲಿ ದೊರೆಯುವ ಸೌಲಭ್ಯಗಳ ಕುರಿತು ವಿವರಿಸಿದರು.

ಶಾಲಾ ಮುಖ್ಯೋಪಾಧ್ಯಾಯ ಅಶ್ಫಾಕ್ ಜಹಾಂಗೀರ್ ಅವರ ನೇತೃತ್ವದಲ್ಲಿ ಎಲ್ಲಾ ಶಿಕ್ಷಕ ಸಿಬ್ಬಂದಿ ಹಾಗೂ ಶಾಲಾ ಸುಧಾರಣಾ ಸಮಿತಿಯವರು ತಮ್ಮ ಸ್ವಂತ ಹಣದಿಂದ ಸುಮಾರು 620 ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್‌ಗಳನ್ನು ವಿತರಿಸಿದರು.

ಈ ವೇಳೆ ಪಟ್ಟಣದ ಸಿಆರ್‌ಪಿ ಮುಜಕ್ಕೀರ ಬಾಗೆ, ಗ್ರಾಮೀಣ ಸಿಆರ್‌ಪಿ ಶಾನವಾಜ್ ಪಟೇಲ್, ಮುಖ್ಯೋಪಾಧ್ಯಾಯರಾದ ಅಶ್ಫಾಕ್ ಜಹಾಂಗೀರ್, ಎಸ್‌ಡಿಎಮ್‌ಸಿ ಅಧ್ಯಕ್ಷ ನಜೀರಹ್ಮದ ಬಾಗಶಿರಾಜ್, ಬಿಲಾಲ್ ಪಟೇಲ್, ಮರಗುಬ ಜಲಾಲಖಾನ, ಮಹ್ಮದಲಿ ಪಟೇಲ್, ರೇಖಾ ಗುಪ್ತೆ, ಶಿರಾಜುದ್ದೀನ್ ಚಮನಮಲಿಕ್, ಮುದಶೀರ್ ಚಮನಮಲಿಕ್, ನಾಯಿಕವಾಡಿ, ಮಾರುಫ್, ಖಾದ್ರಿ ಸರ್ ಸೇರಿದಂತೆ ಶಾಲಾ ಸಿಬ್ಬಂದಿ ಹಾಗೂ ಪಾಲಕರು ಉಪಸ್ಥಿತರಿದ್ದರು.



ತಂಬಾಕು ಉತ್ಪನ್ನಗಳಿಂದ ದೂರವಿರಿ

ಯಮಕನಮರಡಿ: ತಂಬಾಕು ಸೇವನೆಯು ವ್ಯಕ್ತಿಯ ಆರೋಗ್ಯ, ಕುಟುಂಬ ಹಾಗೂ ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತದೆ. ಯುವಜನತೆ ತಂಬಾಕು ಉತ್ಪನ್ನಗಳಿಂದ ದೂರವಿದ್ದು ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು ಎಂದು ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜಣ್ಣ ಸಂಕಣ್ಣನವರ ಹೇಳಿದರು.

ತಾಲೂಕು ಕಾನೂನು ಸೇವಾ ಸಮಿತಿ, ನ್ಯಾಯವಾದಿಗಳ ಸಂಘ ಹುಕ್ಕೇರಿ, ಹಿಂಡಾಲ್ಕೋ, ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಮಹಿಳಾ ಕಲ್ಯಾಣ ಸಂಸ್ಥೆ ಬೆಳಗಾವಿ ಹಾಗೂ ವಿವಿಧ ಸರ್ಕಾರಿ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ವಿಶ್ವ ತಂಬಾಕು ವಿರೋಧಿ ದಿನದ ಅಂಗವಾಗಿ ಜಾಥಾ, ಬೀದಿ ನಾಟಕ ಹಾಗೂ ತಂಬಾಕು ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಸಮಾಜದಲ್ಲಿ ತಂಬಾಕು ಹಾಗೂ ಮದ್ಯಪಾನ ಸೇವನೆಯಿಂದ ಅನೇಕ ಕುಟುಂಬಗಳು ಅವನತಿಯ ಹಾದಿಯನ್ನು ತಲುಪುತ್ತಿವೆ. ಕಾರಣ, ಪ್ರಜ್ಞಾವಂತರಾದ ನಾವು ದುಶ್ಚಟಗಳಿಂದ ದೂರವಿರಬೇಕೆಂದು ಅಭಿಪ್ರಾಯ ಪಟ್ಟರು.

ಕಾರ್ಯಕ್ರಮದಲ್ಲಿ, ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜೆಎಂಎಫ್‌ಸಿ ನ್ಯಾಯಾಲಯದ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಆದಿತ್ಯ ಆರ್. ಕಲಾಲ್ , ತಾಲೂಕು ಆರೋಗ್ಯ ಅಧಿಕಾರಿ ಡಾ. ಉದಯ ಕುಡಚಿ

ಮುಖ್ಯ ಉಪನ್ಯಾಸ ನೀಡಿದ ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಬೆಂಗಳೂರಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ. ಗುರು ಸುಹಾಸ, ನ್ಯಾಯವಾದಿಗಳ ಸಂಘದ ಅಧ್ಯಕ್ಷರಾದ ಕೆ. ಬಿ. ಕುರಬೆಟ ಮಾತನಾಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಪ್ರಭಾವತಿ ಪಾಟೀಲ, ಮಹಿಳಾ ಕಲ್ಯಾಣ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ವೈಜಯಂತಿ ಎಂ. ಚೌಗಲಾ, ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಪ್ರಾಂತೀಯ ವ್ಯವಸ್ಥಾಪಕರಾದ ಸಂತಾನಿ ದಂಡಿನ, ಹುಕ್ಕೇರಿ ತಾಲೂಕ ಕಾನೂನು ಸೇವಾ ಸಮೀತಿಯ ಸದಸ್ಯರುಗಳು, ನ್ಯಾಯವಾದಿಗಳು, ವಿವಿಧ ಇಲಾಖೆಯ ಅಧಿಕಾರಿಗಳು, ಶಾಲಾ ವಿದ್ಯಾರ್ಥಿಗಳು, ಆಶಾ ಕಾರ್ಯಕರ್ತೆಯರು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

ನಮ್ಮೂರ ಬಾನುಲಿ ಸಮುದಾಯ ರೇಡಿಯೋ ಕೇಂದ್ರದ ಉದ್ಘೋಷಕರಾದ ಚೇತನ ಕುಲಕರ್ಣಿ ನಿರೂಪಿಸಿದರು.



ಹುಕ್ಕೇರಿ ಕುಟುಂಬಕ್ಕೆ ಸಚಿವ ಸ್ಥಾನ ನೀಡಲು ಒತ್ತಾಯಿಸಿ ಪ್ರತಿಭಟನೆ

ಚಿಕ್ಕೋಡಿ: ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ, ವಿಧಾನ ಪರಿಷತ್ ಸದಸ್ಯ ಪ್ರಕಾಶ ಹುಕ್ಕೇರಿ ಅಥವಾ ಚಿಕ್ಕೋಡಿ-ಸದಲಗಾ ಶಾಸಕ ಗಣೇಶ ಹುಕ್ಕೇರಿ ಅವರಿಗೆ ನೂತನ ಮುಖ್ಯಮಂತ್ರಿ ಡಿ ಕೆ ಶಿವಕುಮಾರ ಅವರ ಸಚಿವ ಸಂಪುಟದಲ್ಲಿ ಸ್ಥಾನ ನೀಡುವಂತೆ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಒತ್ತಾಯಿಸಿದರು.

ಪಟ್ಟಣದ ಪ್ರವಾಸಿ ಮಂದಿರದಿಂದ ಬಸವೇಶ್ವರ ವೃತ್ತದವರೆಗೆ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಮೆರವಣಿಗೆ ನಡೆಸಿ, ಬಸವೇಶ್ವರ ವೃತ್ತದಲ್ಲಿ ಕೆಲ ಕಾಲ ಮಾನವ ಸರಪಳಿ ನಿರ್ಮಿಸಿ ಆಗ್ರಹಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸತೀಶ ಕುಲಕರ್ಣಿ, ಗ್ರಾಮೀಣ ಅಧ್ಯಕ್ಷ ಅನಿಲ ಪಾಟೀಲ ಅವರಿಗೆ ಈ ಕುರಿತು ಕಾರ್ಯಕರ್ತರು ಮನವಿ ಸಲ್ಲಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಕಾಂಗ್ರೆಸ್ ಮುಖಂಡ ರವಿ ಮಿರ್ಜೆ ಮಾತನಾಡಿ, 2014ರಲ್ಲಿ ಹೈಕಮಾಂಡ್ ಸೂಚನೆ ಮೇರೆಗೆ ಪ್ರಕಾಶ ಹುಕ್ಕೇರಿ ಅವರು ಸಚಿವ ಸ್ಥಾನ ತ್ಯಜಿಸಿ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಕಾಂಗ್ರೆಸ್ ಪಕ್ಷ ಗೆಲ್ಲಿಸಿದ್ದರು. ಆಪರೇಷನ್ ಕಮಲ ಸಂದರ್ಭದಲ್ಲಿ ಆಮಿಷಕ್ಕೊಳಗಾಗದೇ ಶಾಸಕ ಗಣೇಶ ಹುಕ್ಕೇರಿ ಕಾಂಗ್ರೆಸ್ ಪಕ್ಷದೊಂದಿಗೆ ಉಳಿದುಕೊಂಡು ಪಕ್ಷ ನಿಷ್ಠೆ ಮೆರೆದಿದ್ದರು ಎಂದು ಪ್ರತಿಭಟನೆ ಉದ್ದೇಶಿಸಿ ಮಾತನಾಡಿದರು.



ಈ ಸಂದರ್ಭದಲ್ಲಿ ಮುಖಂಡರಾದ ಅನಿಲ ಮಾನೆ, ನರೇಂದ್ರ ನೇರ್ಲೆಕರ, ಅಣ್ಣಾಸಾಹೇಬ ಹವಲೆ, ಪ್ರಭಾಕರ ಐ ಕೋರೆ, ಶಾಬೀರ ಜಮಾದಾರ, ಶ್ಯಾಮ ರೇವಡೆ, ಮುದ್ದುಸಾರ್ ಜಮಾದಾರ, ರಂಜಿತ ಶಿರಸೇಟ್, ಎಚ್ ಹೆಚ್ ನಸಲಾಪೂರೆ, ರಮೇಶ ಪಾಟೀಲ, ವಿನೋದ ಕಾಗೆ, ಪರಶುರಾಮ ಕಾಳೆ, ಮಲ್ಲಿಕಾರ್ಜುನ ಪಾಟೀಲ ಇತರರು ಇದ್ದರು.

ಸಂತೋಷ ಲಾಡ್‌ಗೆ ಸಚಿವ ಸ್ಥಾನ ನೀಡಲು ಒತ್ತಾಯ

ಚಿಕ್ಕೋಡಿ: ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಸಚಿವ ಸಂಪುಟದಲ್ಲಿ ಮರಾಠಾ ಸಮುದಾಯದ ಪ್ರಭಾವಿ ನಾಯಕ, ಮಾಜಿ ಸಚಿವ ಸಂತೋಷ ಲಾಡ್ ಅವರಿಗೆ ಮತ್ತೊಮ್ಮೆ ಸಚಿವ ಸ್ಥಾನ ನೀಡುವ ಮೂಲಕ ಮರಾಠಾ ಸಮುದಾಯದ ಅಭಿವೃದ್ಧಿಗೆ ಆದ್ಯತೆ ನೀಡುವಂತೆ ಚಿಕ್ಕೋಡಿ ತಾಲೂಕು ಮರಾಠಾ ಸಮಾಜದ ಮುಖಂಡರು ಒತ್ತಾಯಿಸಿದ್ದಾರೆ.

ಪಟ್ಟಣದಲ್ಲಿ ಚಿಕ್ಕೋಡಿ ತಾಲೂಕು ಮರಾಠಾ ಸಮಾಜದ ಅಧ್ಯಕ್ಷ ಬಿ ಆರ್ ಯಾದವ ಬುಧವಾರ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯದಲ್ಲಿ 60-70 ಲಕ್ಷಕ್ಕೂ ಹೆಚ್ಚು ಮರಾಠಾ ಸಮುದಾಯದವರು ಇದ್ದು, ಮರಾಠಾ ಸಮುದಾಯದ ಸಮಸ್ಯೆಗಳಿಗೆ ಸ್ಪಂದಿಸಿ ಲಾಡ್ ಹೆಸರಾಗಿದ್ದಾರೆ. ರಾಜ್ಯದ ಜನತೆ ವಿವಿಧ ವಿಪತ್ತುಗಳಲ್ಲಿ ಸಿಲುಕಿದ ಸಂದರ್ಭದಲ್ಲಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ನಡುವೆ ಕೊಂಡಿಯಾಗಿ ಕಾರ್ಯನಿರ್ವಹಿಸಿದ್ದಾರೆ ಎಂದರು.



ಚಿಕ್ಕೋಡಿ-ಸದಲಗಾ ಶಾಸಕ ಗಣೇಶ ಹುಕ್ಕೇರಿ ಅಥವಾ ವಿಧಾನ ಪರಿಷತ್ ಸದಸ್ಯ ಪ್ರಕಾಶ ಹುಕ್ಕೇರಿ ಅವರಿಗೂ ಸಚಿವ ಸ್ಥಾನವನ್ನು ನೀಡುವ ಮೂಲಕ ಚಿಕ್ಕೋಡಿ ಭಾಗದ ಜನರ ಹಲವು ದಿನಗಳ ಬೇಡಿಕೆಯನ್ನು ಈಡೇರಿಸುವಂತೆ ಸುದ್ದಿಗೋಷ್ಠಿಯಲ್ಲಿ ಮುಖಂಡರು ಅಭಿಪ್ರಾಯ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಚಿಕ್ಕೋಡಿ ತಾಲೂಕು ಮರಾಠಾ ಸಮಾಜದ ಗೌರವಾಧ್ಯಕ್ಷ ರಾಮಾ ಮಾನೆ, ಉಪಾಧ್ಯಕ್ಷ ಅನಿಲ ಮಾನೆ, ಬಾಳಾಸಾಹೇಬ ಪಾಟೀಲ, ಜ್ಯೋತಿಬಾ ಖಾಮಕರ ಮುಂತಾದವರು ಇದ್ದರು.

ಯುವಜನತೆ ವ್ಯಸನದಿಂದ ದೂರವಿರಿ

ತೆಲಸಂಗ: ಇವತ್ತಿನ ದಿನಗಳಲ್ಲಿ ದೇಶದ ಹೆಮ್ಮೆಯಾಗಬೇಕಿದ್ದ ಯುವಕರು ಮಾದಕ ವಸ್ತುಗಳಿಗೆ ಬಲಿಯಾಗುತ್ತಿರುವುದು ಕಳವಳಕಾರಿ ಸಂಗತಿ ಎಂದು ಶ್ರೀ.ಕ್ಷೇ.ಗ್ರಾ.ಯೋ. ಬಿ.ಸಿ ಟ್ರಸ್ಟ್ ಅಥಣಿ ತಾಲೂಕಾ ಯೋಜನಾಧಿಕಾರಿ ಜಗದೀಶ ಕೆ. ಹೆಚ್ ಹೇಳಿದರು.

ಬುಧವಾರ ಗ್ರಾಮದ ಜ್ಞಾನಭಾರತಿ ಶಾಲೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಅಥಣಿ ತಾಲೂಕು ವತಿಯಿಂದ ವಿಶ್ವ ತಂಬಾಕು ವಿರೋಧಿ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಆರಂಭದಲ್ಲಿ ಕೇವಲ ಸ್ನೇಹಿತರ ಒತ್ತಾಯಕ್ಕೋ, ಫ್ಯಾಷನ್‌ಗಾಗಿಯೋ ಅಥವಾ ಮಜಾ ಮಾಡಲೆಂದು ಆರಂಭವಾಗುವ ಈ ದುಶ್ಚಟಗಳು, ನಂತರದ ದಿನಗಳಲ್ಲಿ ಮನುಷ್ಯನನ್ನು ಸಂಪೂರ್ಣ ವ್ಯಸನಿಯನ್ನಾಗಿ ಮಾಡಿಬಿಡುತ್ತವೆ ಎಂದು ಹೇಳೀದರು.



ಅಖೀಲ ಕರ್ನಾಟಕ ಜನಜಾಗೃತಿ ವೇದಿಕೆಯ ಅಥಣಿ ಜಿಲ್ಲಾ ಸದಸ್ಯರಾದ ಅಪ್ಪಾಸಾಹೇಬ ಪಾಟೀಲ ಮಾತನಾಡಿ, ಹಲವಾರು ಯುವಕರು ಸಂಬಂಧಗಳಿಗಿಂತ ಹೆಚ್ಚಾಗಿ ಚಟಕ್ಕೆ ದಾಸರಾಗಿ, ಅದರಲ್ಲಿ ಬಿದ್ದು ವಾಪಸ್ ಬರಲಾಗದ ಪರಿಸ್ಥಿತಿಗೆ ತಲುಪಿದ್ದಾರೆ. ಹೆತ್ತ ತಾಯಿ-ತಂದೆ, ಅಕ್ಕ-ತಂಗಿ, ಹೆಂಡತಿ-ಮಕ್ಕಳ ಪ್ರೀತಿಗಿಂತ ಅವರಿಗೆ ತಂಬಾಕು, ಮಾದಕ ವಸ್ತುಗಳೇ ದೊಡ್ಡದಾಗಿ ಕಾಣಿಸುತ್ತವೆ. ಆದರೆ ನಮಗೆ ಸಂಬಂಧಗಳು ವ್ಯಸನಕ್ಕಿಂತ ಮಹತ್ವದ್ದು ಎಂಬ ಅರಿವು ಪ್ರತಿಯೊಬ್ಬ ಯುವಕನಲ್ಲೂ ಮೂಡಬೇಕಿದೆ. ಚಟಗಳಿಗೆ ಗುಲಾಮರಾಗಬೇಡಿ, ಜೀವನವನ್ನು ಪ್ರೀತಿಸಿ. ಇಂದಿನ ದಿನ ಕೇವಲ ತಂಬಾಕು ಮುಕ್ತ ಸಮಾಜ ಮಾತ್ರವಲ್ಲ, ಸರ್ವ ವ್ಯಸನ ಮುಕ್ತ ಯುವ ಭಾರತವನ್ನು ನಿರ್ಮಿಸಲು ನಾವೆಲ್ಲರೂ ಕೈಜೋಡಿಸೋಣ ಎಂದರು.ಡಾ.ಬಿ.ಎಸ್.ಕಾವನ್, ವಿಲಾಸ ಮೋರೆ, ಜಿ.ಎಸ್. ಮುಲ್ಲಾ, ಮಹಾಂತೇಶ ಪಿ.ಎಮ್. ಹಾಜಿಮಾ ಹೊನವಾಡ ಉಪಸ್ಥಿತರಿದ್ದರು.

ಖಾನಾಪುರದಲ್ಲಿ ವಿಜಯೋತ್ಸವ

ಖಾನಾಪುರ: ಬುಧವಾರ ಬೆಂಗಳೂರಿನಲ್ಲಿ ಹಿರಿಯ ಕಾಂಗ್ರೆಸ್ ನಾಯಕ ಡಿ.ಕೆ ಶಿವಕುಮಾರ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಮತ್ತು ಹಾಗೂ ಜಿಲ್ಲೆಯ ಹಿರಿಯ ಮುಖಂಡ ಸತೀಶ ಜಾರಕಿಹೊಳಿ ಸಂಪುಟ ದರ್ಜೆ ಸಚಿವರಾಗಿ ಅಧಿಕಾರ ಸ್ವೀಕರಿಸಿದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ವಿಜಯೋತ್ಸವ ಆಚರಿಸಲಾಯಿತು. ಬ್ಲಾಕ್ ಅಧ್ಯಕ್ಷ ಮಹಾಂತೇಶ ರಾಹೂತ, ''ಡಿ.ಕೆ. ಶಿವಕುಮಾರ ಅವರ ಅಧಿಕಾರಾವಧಿಯಲ್ಲಿ ಉತ್ತರ ಕರ್ನಾಟಕಕ್ಕೆ ವಿಶೇಷ ಮನ್ನಣೆ ದೊರೆಯುವ ವಿಶ್ವಾಸವಿದೆ'' ಎಂದು ಅಭಿಪ್ರಾಯ ಪಟ್ಟರು. ಇದೇ ಸಂದರ್ಭದಲ್ಲಿ ಪಕ್ಷದ ಕಾರ್ಯಕರ್ತರು ಶಿವಸ್ಮಾರಕ ವೃತ್ತದಲ್ಲಿ ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು. ವಿಜಯೋತ್ಸವದಲ್ಲಿ ಬ್ಲಾಕ್ ಅಧ್ಯಕ್ಷ ಮಹಾಂತೇಶ ರಾಹೂತ, ಗ್ರಾಮೀಣ ಅಧ್ಯಕ್ಷ ಈಶ್ವರ ಘಾಡಿ, ಮುಖಂಡರಾದ ಲಕ್ಷ್ಮಣ ಮಾದಾರ, ಸಾವಿತ್ರಿ ಮಾದಾರ, ದೀಪಾ ಪಾಟೀಲ, ಲಿಯಾಕತಲಿ ಬಿಚ್ಚುನವರ, ರಾಮಚಂದ್ರ ಪಾಟೀಲ, ಮಹಾದೇವ ಕೋಳಿ, ಜಾಕಿ ಫರ್ನಾಂಡಿಸ್ ಹಾಗೂ ಇತರರು ಇದ್ದರು.



ಕೇವಲ ಚುನಾವಣೆ ಗುರಿಯಾಗಿಟ್ಟುಕೊಂಡಿರುವ ಕಾಂಗ್ರೆಸ್

ಕುಡಚಿ: ಕಾಂಗ್ರೆಸ್ ಮೂರು ವರ್ಷಗಳ ಆಡಳಿತಾವಧಿಯಲ್ಲಿ ಕೇವಲ ಒಂದು ಮನೆ ಮಂಜೂರು ಮಾಡಲಾಗದೆ ಎಸ್.ಸಿ. ಹಾಗೂ ಎಸ್.ಟಿ ಸಮುದಾಯಗಳ ಎಸಿಪಿ, ಟಿಎಸಪಿ ಯೋಜನೆಯಡಿ ನೀಡಬೇಕಾದ ವಿಶೇಷ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳುತ್ತಿದ್ದು, ಇದರಿಂದ ಈ ಪರಿಶಿಷ್ಟ ಸಮುದಾಯಗಳಿಗೆ ಅನ್ಯಾಯ ಮಾಡುತ್ತಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಕುಡಚಿ ಮಾಜಿ ಶಾಸಕ ಪಿ.ರಾಜೀವ ಹೇಳಿದರು.

ಪಟ್ಟಣದಲ್ಲಿ ಆಯೋಜಿಸಿದ್ದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಭವಿಷ್ಯೋದ್ದೇಶಿತ ಯೋಜನೆಗಳಿಲ್ಲದೆ ಕೇವಲ ಚುನಾವಣೆಯನ್ನು ಗುರಿಯಾಗಿಟ್ಟುಕೊಂಡು ರಾಜಕೀಯ ನಡೆಸುತ್ತಿದೆ ಎಂದರು.

ಯುವ ನಾಯಕ ರಾಕೇಶ ಕಾಂಬಳೆ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷವನ್ನು ತೊರೆದು ಬಿಜೆಪಿ ತತ್ವ ಸಿದ್ಧಾಂತಗಳನ್ನು ಒಪ್ಪಿಕೊಂಡು ಭಾರತೀಯ ಜನತಾ ಪಾರ್ಟಿಗೆ ಸೇರ್ಪಡೆಗೊಂಡ 40ಕ್ಕೂ ಹೆಚ್ಚು ಕಾರ್ಯಕರ್ತರನ್ನು ಬಿಜೆಪಿ ಶಲ್ಯ ಹೊದಿಸುವ ಮೂಲಕ ಪಕ್ಷಕ್ಕೆ ಬರಮಾಡಿಕೊಂಡರು.



ರಾಕೇಶ ಕಾಂಬಳೆ, ಸಾಹೇಬಪೀರ ಚಮನಶೇಖ, ರೋಹಿತ್ ವಿಭೂತೆ, ವಿವೇಕ ಕಾಂಬಳೆ, ಸಾಗರ ಮಾನೆ, ಪ್ರಕಾಶ್ ಹನಗಂಡಿ, ಮಾರುತಿ ಕಾಂಬಳೆ, ಅಮಿತ ಹಳಿಂಗಳಿ, ಮಾರುತಿ ಕಾಂಬಳೆ, ಮಂಜುನಾಥ ಕಾಂಬಳೆ, ಕಿರಣ್ ಸಣ್ಣಕ್ಕಿ, ರೋಹನ ಸಣ್ಣಕ್ಕಿ, ರಫೀಕ್ ವಾಟೆ ಸೇರಿದಂತೆ 40ಕ್ಕೂ ಹೆಚ್ಚು ಕಾರ್ಯಕರ್ತರು ಬಿಜೆಪಿ ಪಕ್ಷಕ್ಕೆ ಸೇರ್ಪಡೆಗೊಂಡರು.

ಈ ಸಂದರ್ಭದಲ್ಲಿ ತುರಾಬುದ್ದೀನ ಜಿನಾಬಡೆ, ರಾಮಗೊಂಡ ದಳವಾಯಿ, ಸುಲ್ತಾನ್ ವಾಟೆ, ಬಾಬಾಜಾನ ಅಜೀಜಖಾನ, ಬದ್ರೊ ಜಿನಾಬಡೆ, ನ್ಯಾಯವಾದಿ ತಾನಾಜಿ ಶಿಂಧೆ, ಶ್ರೀಧರ ಕಂತ್ರಾಟೆ, ಸಫೀರ ಪೆಟಾಯಿತ, ಅಹ್ಮದ್ ಸಂದರವಾಲೆ ಕಾರ್ಯಕರ್ತರು ಇತರರು ಉಪಸ್ಥಿತರಿದ್ದರು.

ಕಿರುಸುದ್ದಿ

ಶಾಲಾ ಪ್ರಾರಂಭೋತ್ಸವ

ರನ್ನ ಬೆಳಗಲಿ: ಪಟ್ಟಣದ ಪಿಎಂಶ್ರೀ ಕರ್ನಾಟಕ ಪಬ್ಲಿಕ್ ಸ್ಕೂಲ್ ಜನತಾ ಪ್ಲಾಟ್ 2026-27ನೇ ಸಾಲಿನ ಉತ್ತಮ ಕಲಿಕೆ ಉಜ್ವಲ ಭವಿಷ್ಯ ಎಂಬ ಘೋಷ ವಾಕ್ಯದೊಂದಿಗೆ ಅದ್ದೂರಿಯಾಗಿ ಶಾಲಾ ಪ್ರಾರಂಭೋತ್ಸವ ಹಾಗೂ ಶಿಕ್ಷಕರ-ಪೋಷಕರ ಮಹಾಸಭೆಯು ಜರುಗಿತು. ಅಧ್ಯಕ್ಷತೆ ವಹಿದ್ದ ಗಿರೀಶ ಸಂಶಿಕ್ತ್ ವಿದ್ಯಾರ್ಥಿಗಳಿಗೆ ಶುಭ ಕೋರಿದರು. ಪ್ರಭಾರ ಮುಖ್ಯ ಗುರುಮಾತೆ ಎಸ್. ಎಸ್.ಉದಪುಡಿ ಮಾತನಾಡಿ, ಗೈರು ಹಾಜರಾಗದೆ ನಿರಂತರ ಶಾಲೆಗೆ ಬರುವ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆ ಮುಗಿದ ನಂತರ ವಿಶೇಷ ಬಹುಮಾನ ನೀಡಿ ಪ್ರೋತ್ಸಾಹಿಸಲಾಗುವುದು. ಈ ವರ್ಷದಿಂದ ಪಿಎಂಶ್ರೀ ಯೋಜನೆಗಳು ಶಾಲೆಗೆ ಲಭ್ಯವಾಗಿದ್ದು, ಮಕ್ಕಳ ಸರ್ವಾಂಗೀಣ ಪ್ರಗತಿಗೆ ಪೂರಕವಾಗಲಿದೆ ಎಂದು ತಿಳಿಸಿದರು. ಚಿತ್ರಕಲಾವಿದ ಮಹಾಂತೇಶ ಲೋಕಾಪುರ ವಿದ್ಯಾರ್ಥಿಗಳ ಸಹಭಾಗಿತ್ವದಲ್ಲಿ ರಂಗೋಲಿಯಲ್ಲಿ ಚಿತ್ರಿಸಿದರು. ಎಸ್ಡಿಎಂಸಿ ಸದಸ್ಯ ಅಲ್ಲಪ್ಪ ಮೇಳಾಡಿ, ಭೀಮಶಿ ಕಾನನ್ನವರ, ಬಿ.ಎಂ.ಮಾರಾಪುರ, ಮುತ್ತಪ್ಪ ಮುಗಳಖೋಡ, ವೀಣಾ ಹೊಸೂರ, ಲಕ್ಷ್ಮೀ ಜಗದಾಳ, ಎಸ್.ಎಂ.ಮೇಗಾಡಿ, ಕಿರಣ ಪವಾರ, ರವಿ ಹಿರೇಕಲ್ಲರ, ಚಿತ್ರಕಲಾ ಶಿಕ್ಷಕ ಬಾಲಕೃಷ್ಣ ಚೋಪಡೆ ಸೇರಿದಂತೆ ಪೋಷಕರು ಉಪಸ್ಥಿತರಿದ್ದರು.

ಬಿಡಾಡಿ ದನ ಬೀದಿಗೆ ಬಿಟ್ಟರೆ ದಂಡ: ಎಚ್ಚರಿಕೆ

ಗುಳೇದಗುಡ್ಡ: ಪಟ್ಟಣದ ವಿವಿಧ ಪ್ರದೇಶಗಳಲ್ಲಿ ಬಿಡಾಡಿ ದನಗಳು ಇದ್ದು, ಈ ಬಿಡಾಡಿ ದನಗಳು ಸಾರ್ವಜನಿಕ ರಸ್ತೆ ಮೇಲೆ ಕುಳಿತು ಸಾರ್ವಜನಿಕ ಸಂಚಾರಕ್ಕೆ ಅಡತಡೆ ಉಂಟು ಮಾಡುತ್ತಿವೆ ಎಂದು ಪುರಸಭೆ ಮುಖ್ಯಾಧಿಕಾರಿ ಎ.ಎಚ್.ಮುಜಾವರ ತಿಳಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿ, ಬಿಡಾಡಿ ದನಗಳು ಕಾದಾಟ ನಡೆಸಿ ಸಾರ್ವಜನಿಕರಿಗೆ ಭಯಭೀತಗೊಳಿಸುತ್ತವೆ. ಇನ್ನೂ ಕೆಲವು ದನಗಳು ಹಿಂಬದಿಯಿಂದ ಬಂದು ಸಾರ್ವಜನಿಕರಿಗೆ ಹಾಯ್ದು ಗಾಯಗೊಳಿಸುತ್ತವೆ. ಬಿಡಾಡಿ ದನಗಳ ಉಪಟಳ ಹೆಚ್ಚಾಗಿದ್ದು ಈಗಾಗಲೇ ಹಲವು ಬಾರಿ ಬಿಡಾಡಿ ದನಗಳನ್ನು ಪುರಸಭೆಗೆ ವಶಕ್ಕೆ ಪಡೆದು ಗೋಶಾಲೆಗಳಿಗೆ ಸಾಗಿಸಿ, ದನಗಳ ಮಾಲೀಕರಿಗೆ ದಂಡ ವಿಧಿಸಲಾಗಿತ್ತು. ಆದರೂ ಸಹ ಬಿಡಾಡಿ ದನಗಳ ಮಾಲೀಕರು ಪುನಃ ದನಗಳನ್ನು ಪಟ್ಟಣದಲ್ಲಿ ಬಿಡುತ್ತಿರುವುದು ಶೋಚನೀಯ ಸಂಗತಿಯಾಗಿರುತ್ತದೆ ತಪ್ಪಿದಲ್ಲಿ ಅಧಿನಿಯಮ-1964ರನ್ವಯ ಪಟ್ಟಣದಲ್ಲಿರುವ ಬಿಡಾಡಿ ದನಗಳ ಮಾಲೀಕರಿಗೆ ದಂಡ ವಿಧಿಸುವುದರೊಂದಿಗೆ ಈ ದನಗಳನ್ನು ಗೋ ಶಾಲೆಗಳಿಗೆ ಸಾಗಿಸಲಾಗುವುದು.

ಅರ್ಜಿ ಆಹ್ವಾನ

ಜಮಖಂಡಿ: ತಾಲೂಕು ಬಣಜಿಗ ಸಮಾಜದ ವತಿಯಿಂದ ನಡೆಯಲಿರುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಸಮಾಜದ ಎಸ್ಎಸ್ಎಲ್ಸಿ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಪ್ರತಿಭಾ ಪುರಸ್ಕಾರ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಜಿರಲಿ ತಿಳಿಸಿದರು. ನಗರದ ದಾನಮ್ಮ ದೇವಸ್ಥಾನದ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪರೀಕ್ಷೆಗಳಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸುವ ಕಾರ್ಯಕ್ರಮ ಜೂ.14ರಂದು ಕುಂಚನೂರು ರಸ್ತೆಯ ದಾನಮ್ಮದೇವಿ ಸಮುದಾಯ ಭವನದಲ್ಲಿ ಆಯೋಜಿಸಲಾಗಿದೆ. ಜೂ.10ರಂದು ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ಮುನಿಶ್ರೀಕಂತಿ ಹಿರೇಮಠದ ಶಿವಲಿಂಗ ಪಂಡಿತಾರಾಧ್ಯ ಸ್ವಾಮಿಗಳು ಸಾನ್ನಿಧ್ಯ ವಹಿಸಲಿದ್ದಾರೆ. ಶಾಸಕ ಜಗದೀಶ ಗುಡಗುಂಟಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಾಜಿ ಶಾಸಕ ಆನಂದ ನ್ಯಾಮಗೌಡ ಸೇರಿದಂತೆ ಸಮಾಜದ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ಅಂಗವಾಗಿ ವಿಶೇಷ ಸಾಧನೆ ಮಾಡಿದ ಸಮಾಜದ ಇಬ್ಬರು ಗಣ್ಯವ್ಯಕ್ತಿಗಳನ್ನು ಸನ್ಮಾನಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದರು. ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗೆ 9448204055, 97319 61628, 81231 57546 ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ. ಅಧ್ಯಕ್ಷ ಶಂಕರ ಜಿರಲಿ, ಉಪಾಧ್ಯಕ್ಷ ಮಲ್ಲಪ್ಪ ಜೈನಾಪುರ, ಕಾರ್ಯದರ್ಶಿ ಸಂಗಮೇಶ ಹುಲಾಯು, ಷಣ್ಮುಖಪ್ಪ ಮಹಲಿಂಗಶೆಟ್ಟಿ, ಶಂಕರ ಚಿಮ್ಮಡ,ನಿಂಗಪ್ಪ ಲಿಗಾಡಿ, ಸಚಿನ ಪಟ್ಟಣ ಶೆಟ್ಟಿ, ರಾಜು ಮಾಂಡವಿಶೆಟ್ಟಿ, ತುಷಾರ ಅಂಬಲಜೇರಿ, ಅರವಿಂದ ಗುಬ್ಬರ, ರಮೇಶ ಸಂಗಾವಿ, ಸಚಿನ್ ಇದ್ದರು.

ನಿಧನ ಸುದ್ದಿ

ಗದಿಗೆಯ್ಯ ಸಾವಳಗಿಮಠ



ಹುನಗುಂದ: ಪಟ್ಟಣದ ಲಿಂಗಾಯತ ಸಮಾಜದ ಹಿರಿಯರು, ಚಿತ್ರವಾಡಗಿ ರಸ್ತೆಯ ವಿದ್ಯಾನಗರ ನಿವಾಸಿ ನಿವೃತ್ತ ಪ್ರೊ. ಗದಿಗೆಯ್ಯ ಬಸಯ್ಯ ಸಾವಳಗಿಮಠ(86 ಬುಧವಾರ ಲಿಂಗೈಕ್ಯರಾಗಿದ್ದಾರೆ. ಮೃತರು ಮಹಾಂತೇಶ ಸಾವಳಗಿಮಠ ಅವರ ತಂದೆಯಾಗಿದ್ದರು. ಮೃತರಿಗೆ ಪತ್ನಿ, ಪುತ್ರಿ, ಮೊಮ್ಮಕ್ಕಳು, ಅಪಾರ ಬಂದು ಬಳಗ ಇದ್ದಾರೆ.



ಕೆರೂರ: ರಾಜ್ಯ ಸರ್ಕಾರ ನೂತನ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಡಿ.ಕೆ.ಶಿವಕುಮಾರ ಹಿನ್ನಲೆ ಪಟ್ಟಣದ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಣೆ ಆಚರಿಸಿದರು. ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಡಾ.ಎಂ.ಜಿ.ಕಿತ್ತಲಿ, ಮುನಿಯಪ್ಪ ಚೂರಿ, ಶ್ರೀಧರ ಕಾಂಬಳೆ, ಯೂತ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದೇವರಾಜ ಚೂರಿ, ದಾದಾಪೀರ ಅತ್ತಾರ, ಉಮೇಶ ತೆಗ್ಗಿ, ಅಯ್ಯಪ್ಪ ಪವಾರ, ಹನಮಂತ ದಾಸರ ಇತರರು ಇದ್ದರು.

ಸಾಹಿತ್ಯದ ಮೂಲಕ ಸಂಸ್ಕೃತಿ ಪ್ರಚಾರ

ಜಮಖಂಡಿ: ಭಾರತೀಯ ಮೌಲ್ಯಗಳು ಮತ್ತು ಸಂಸ್ಕೃತಿಯನ್ನು ಸಾಹಿತ್ಯದ ಮೂಲಕ ಪ್ರಚುರ ಪಡಿಸುವುದು ನಮ್ಮ ಉದ್ದೇಶವಾಗಿದೆ ಎಂದು ಅಖಿಲ ಭಾರತೀಯ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಎಸ್.ಜಿ.ಕೋಟಿ ಹೇಳಿದರು.

ನಗರದ ಭಗೀರಥ ಸಮುದಾಯ ಭವನದಲ್ಲಿ ಇತ್ತೀಚೆಗೆ ಜರುಗಿದ ಅಭಾಸಾಪ ತಾಲೂಕು ನೂತನ ಘಟಕ ಉದ್ಘಾಟಿಸಿ ಮಾತಾಡಿದರು. ಭಾರತೀಯ ಸಾಹಿತ್ಯವು ವೈದಿಕ ಮತ್ತು ಸಂಸ್ಕೃತ ಪರಂಪರೆ, ಬೌದ್ಧ-ಜೈನ ಧರ್ಮಗಳ ಪ್ರಾಕೃತ ಸಾಹಿತ್ಯ, ತಮಿಳು ಸಂಗಮ್ ಸಾಹಿತ್ಯದಿಂದ ಹಿಡಿದು ಆಧುನಿಕ ಕಾಲದವರೆಗೂ ಸಾವಿರಾರು ವರ್ಷಗಳ ಇತಿಹಾಸ ಹೊಂದಿದೆ. ಇದು ವಿವಿಧ ಭಾಷೆಗಳು ಮತ್ತು ಸ್ಥಳೀಯ ಸಂಸ್ಕೃತಿಗಳ ಸಂಯೋಜನೆಯಿಂದ ಸಮೃದ್ಧವಾಗಿದೆ ಎಂದರು. ಜಿಲ್ಲಾಧ್ಯಕ್ಷೆ ಡಾ.ಗೀತಾ ದಾನಶೆಟ್ಟಿ, ತಾಲೂಕು ಕನ್ನಡ ಜಾನಪದ ಪರಿಷತ್ತಿನ ಅಧ್ಯಕ್ಷ ಬಿ.ಎನ್.ಅಭಾಸಾಪ ಜಿಲ್ಲಾ ಸಮಿತಿ ಸಂಯೋಜಕ ವಿಕ್ರಮ ಬಸನಗೌಡರ, ಶಿವಾನಂದ ನೇಗಿನಾಳ ಮಾತನಾಡಿದರು.

ಜಿ.ಐ.ಅವರಕವಾಡಮಠ ಸಾನಿಧ್ಯ ವಹಿಸಿದ್ದರು. ಅಭಾಸಾಪ ತಾಲೂಕು ಗೌರವಾಧ್ಯಕ್ಷ ಬಿ.ವಿ.ಹಿರೇಮಠ, ತಾಲೂಕು ಅಧ್ಯಕ್ಷ ಸಾಗರ ಕಾಂಬಳೆ, ಪ್ರಧಾನ ಕಾರ್ಯದರ್ಶಿ ಸುರೇಶ ಕುಂಬಾರ, ಸಹ ಕಾರ್ಯದರ್ಶಿ ಪ್ರವೀಣ ಆರಸಗೊಂಡ, ಖಜಾಂಚಿ ಬಸವರಾಜ ಉಪ್ಪಾರ, ಸಚಿನ ಮರಾಠೆ, ಮಲ್ಲಿಕಾರ್ಜುನ ಹೊಳಿ, ಅರವಿಂದ ಕುಂಬಾರ, ಮಂಜು ಅತ್ತೆಪ್ಪನವರ ಇನ್ನಿತರರು ಇದ್ದರು. ಪ್ರಕಾಶ ಚಿಕ್ಕಲಕಿ ನಿರೂಪಿಸಿದರು.



ಕೆರೂರ: ಸಮೀಪದ ಕಲ್ಲಾಪುರ ಎಸ್.ಕೆ.ಗ್ರಾಮದಲ್ಲಿ ಶಾಲಾ ಪ್ರಾರಂಭೋತ್ಸವದ ಅಂಗವಾಗಿ ಉಚಿತ ಪುಸ್ತಕ ನೀಡಿ ವಿದ್ಯಾರ್ಥಿಗಳನ್ನು ಬರಮಾಡಿಕೊಳ್ಳಲಾಯಿತು. ಪ್ರಭಾರಿ ಮುಖ್ಯೋಪಾಧ್ಯಯ ಜಿ.ಎಲ್.ಹಟ್ಟಿ, ಶಿಕ್ಷಕರಾದ ಎಚ್ .ಬಿ.ಜೋಗಿ, ಲಕ್ಷ್ಮಣ ಉಗಲವಾಟ, ರವಿ ಕಂದಗಲ್ಲ, ಕರಡಿಗುಡ್ಡ ಎಸ್‌ಡಿಎಂಸಿ ಅಧ್ಯಕ್ಷರು, ಶಿಕ್ಷಕರು ಉಪಸ್ಥಿತರಿದ್ದರು.

ನವನಗರದಲ್ಲಿ 20 ದಿನಗಳ ಸ್ವಚ್ಛತಾ ಅಭಿಯಾನ | ತಪಶೆಟ್ಟಿ ಮನವಿ

ಸುತ್ತಲಿನ ವಾತಾವರಣ ಸ್ವಚ್ಛವಾಗಿಟ್ಟುಕೊಳ್ಳಿ

ಬಾಗಲಕೋಟೆ: ಸ್ವಚ್ಛತೆ ಇದ್ದಲ್ಲಿ ಆರೋಗ್ಯ ಇರುತ್ತದೆ. ನಮ್ಮ ಸುತ್ತಲಿನ ಪರಿಸರವನ್ನು ನಾವೇ ಹದಗೆಡಿಸಿ, ಆರೋಗ್ಯಕ್ಕಾಗಿ ಪರದಾಡುವುದು ಬೇಡ. ಇನ್ನು ಮಳೆಗಾಲ ಆರಂಭಗೊಳ್ಳುತ್ತಿದ್ದು, ನಾಗರಿಕರು ತಮ್ಮ ಸುತ್ತಲಿನ ವಾತಾವರಣವನ್ನು ಸ್ವಚ್ಛವಾಗಿಟ್ಟುಕೊಳ್ಳಲು ಸಹಕಾರ ನೀಡಬೇಕು ಎಂದು ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿ ಮನವಿ ಮಾಡಿದರು.

ಬಿಟಿಡಿಎದಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ 20 ದಿನಗಳ ಸ್ವಚ್ಛತಾ ಅಭಿಯಾನದ ವೇಳೆ ಸೆಕ್ಟರ್ ನಂ.34ರಲ್ಲಿ.. ನಾಗರಿಕರು ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ನವನಗರದ ಜನತೆಗೆ ಸ್ವಚ್ಛತೆ, ಕುಡಿಯುವ ನೀರು, ಅಗತ್ಯ ಮೂಲಭೂತ ಸೌಲಭ್ಯ ಕಲ್ಪಿಸಲು ಬಿಟಿಡಿಎ ತನ್ನದೇ ಇತಿಮಿತಿಯಲ್ಲಿ ಕೆಲಸ ಮಾಡುತ್ತಿದೆ. ಪ್ರತಿಯೊಂದು ಸೆಕ್ಟರ್‌ಗಳಲ್ಲೂ ಸ್ವಚ್ಛತೆಗೆ ಮೊದಲ ಆದ್ಯತೆ ನೀಡಲಾಗಿದೆ, ಬಿಟಿಡಿಎ ಅಧಿಕಾರಿಗಳು, ಸ್ವಚ್ಛತೆ ಜವಾಬ್ದಾರಿ ಹೊತ್ತ ಗುತ್ತಿಗೆದಾರರು ಕೆಲಸ ಮಾಡುತ್ತಿದ್ದಾರೆ, ಇದಕ್ಕೆ ಜನರ ಸಹಕಾರ ಮುಖ್ಯವಾಗಿದೆ ಎಂದರು.

ನಾನು ಪ್ರತಿದಿನ ಬಿಟಿಡಿಎ ಅಧ್ಯಕ್ಷರ ಕಚೇರಿಯಲಿ ಲಭ್ಯ ಇರುತ್ತೇನೆ. ಸಂತ್ರಸ್ತರು ತಮ್ಮ ಯಾವುದೇ ಸಮಸ್ಯೆ ಇದ್ದರೂ ನೇರವಾಗಿ ಭೇಟಿ ಮಾಡಬೇಕು, ಬಿಟಿಡಿಎ ಪುನರ್‌ವಸತಿ ಕಚೇರಿಯಲ್ಲಿ ಇ-ಸ್ವತ್ತು ಸಮಸ್ಯೆ ಬಹಳ ದಿನಗಳಿಂದ ಇತ್ತು. ಅದನ್ನು ಬಹುತೇಕ ಬಗೆಹರಿಸಲಾಗಿದೆ ಎಂದು ಹೇಳಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಬಿಟಿಡಿಎದಿಂದ ನಡೆಯುತ್ತಿರುವ ಸ್ವಚ್ಛತಾ ಅಭಿಯಾನ ಪ್ರತಿ ಸೆಕ್ಟರ್‌ನ ನಡೆದಿದೆ. ಇದಕ್ಕೆ ನಾಗರಿಕರೂ ಸ್ಪಂದನೆ ನೀಡುತ್ತಿದ್ದಾರೆ, ಬಿಟಿಡಿಎ ವಿಭಾಗ-2ರಿಂದ ನಾಗರಿಕರು ಹಸಿ ಕಸ, ಒಣ ಕಸ ಬೇರ್ಪಡಿ ಹೇಗೆ ನೀಡಬೇಕು, ಸ್ವಚ್ಛತೆ ಇಲ್ಲದಿದ್ದರೆ ಆಗುವ ದುಷ್ಪರಿಣಾಮದ ಕುರಿತು ಜಾಗೃತಿ ಮೂಡಿಸುವ ಕರಪತ್ರಗಳನ್ನು ಪರತಿಯೊಂದು ಮನೆಗೂ ಹಂಚಲಾಗಿದೆ, ಓದಿ, ಸುಮ್ಮನೇ ಬೀಸಾಕದೇ ಅವುಗಳನ್ನು ಪಾಲನೆ ಮಾಡಬೇಕು ಎಂದು ತಿಳಿಸಿದರು.



> **ನಾನು ಅಧಿಕಾರ ವಹಿಸಿಕೊಂಡ ಬಳಿಕ, ವಿಶ್ವ ಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸುವ ಉದ್ದೇಶದಿಂದ ಬಿಟಿಡಿಎ ವಿಭಾಗ-1 ಮತ್ತು 2ರಿಂದ ಸ್ವಚ್ಛತಾ ಸಪ್ತಾಹ ನಡೆಸಿದ್ದೇವೆ. ಇಡೀ ನವನಗರ ಒಂದು ವಾರದಲ್ಲಿ ಪೂರ್ಣಗೊಳಿಸಲು ಸಾಧ್ಯವಾಗಲ ಹೀಗಾಗಿ ಒಟ್ಟು 20 ದಿನಗಳ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡು ಏಕಕಾಲಕ್ಕೆ ಸ್ವಚ್ಛತಾ ಕಾರ್ಯ ನಡೆಯುತ್ತಿದೆ.**
>
> ■ **ಪ್ರಕಾಶ ತಪಶೆಟ್ಟಿ, ಅಧ್ಯಕ್ಷರು, ಬಿಟಿಡಿಎ ಬಾಗಲಕೋಟೆ**

ಪ್ರಕಾಶ ತಪಶೆಟ್ಟಿ ಅವರು, ಬಿಟಿಡಿಎ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಸಾಕಷ್ಟು ಬದಲಾವಣೆ ತರುತ್ತಿದ್ದಾರೆ. ಅಧಿಕಾರಿಗಳೂ ಕ್ರಿಯಾಶೀಲರಾಗುವಂತೆ ಮಾಡಿದ್ದಾರೆ. ಮುಖ್ಯವಾಗಿ ಪ್ರತಿ ಸೆಕ್ಟರ್‌ನಲ್ಲಿ ಸ್ವಚ್ಛತಾ ಅಭಿಯಾನ ನಡೆಸುತ್ತಿರುವುದ ಸ್ವಾಗತಾರ್ಹ ಎಂದು ಸೆಕ್ಟರ್ ನಂ.34ರ ನಿವಾಸಿಗಳು ಸಂತಸ ವ್ಯಕ್ತಪಡಿಸಿದರು.

ಸೆಕ್ಟರ್ ನಂ.34ರ ವಕೀಲ ರಮೇಶ ಹೂಗಾರ, ನೂರಂದಪ್ಪ ಮುಂಡೇವಾಡಿ, ಮುತ್ತಣ್ಣ ಕಟ್ಟಿಮನಿ, ಹೀರಾಲಾ ಅಷ್ಟಕರ, ಶಂಕರ ಮಗಜಿ ಮುಂತಾದವರು ತಪಶೆಟ್ಟಿ ಅವರನ್ನು ಸನ್ಮಾನಿಸಿದರು.

ಬಿಟಿಡಿಎ ವಿಭಾಗ-2ರ ಕಾರ್ಯನಿರ್ವಾಹಕ ಎಂಜಿನೀಯರ್ ವೈ.ಬಿ. ಪಾತ್ರೋಟಿ, ಅಧಿಕಾರಿಗಳಾದ ಸುರೇಶ ತೆಗಿ, ಶ್ರೀಕಾಂತ ಹಿರೇಗೌಡರ, ರವಿ ಅಂತರಗೊಂಡ, ಹಾಲವರ, ಪ್ರಮುಖರಾದ ಶಿವಕುಮಾರ ನಂದಿಕೋಲಮಠ ಶಂಕರ ತಪಶೆಟ್ಟಿ, ರಾಮು ರಾಕುಂಪಿ, ಲಕ್ಷ್ಮಣ ತಾಳಿಕೋಟಿ, ರಾಜು ಹುಲ್ಯಾಳ, ಸಂಜೀವ ವಾದ್ಯರ ಉಪಸ್ಥಿತರಿದ್ದರು.

ಸಾಹಿತ್ಯಕ್ಕೆ ಪ್ರೊ.ಭಜಂತ್ರಿ ಕೊಡುಗೆ ಅಪಾರ

ತೇರದಾಳ: ಪ್ರೊ.ದೊಡ್ಡಣ್ಣ ಭಜಂತ್ರಿ ಅವರು ಕವಿಗಳಾಗಿ ನಾಟಕಕಾರರಾಗಿ, ಲೇಖಕರಾಗಿ, ಪತ್ರಕರ್ತರಾಗಿ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿದವರು. ದಲಿತ ಸಮುದಾಯದ ಯಾತನೆಯ ಬದುಕು, ಅವರು ಅನುಭವಿಸಿದ ಕಷ್ಟ, ನೋವು, ತೊಂದರೆಗಳು, ಹೋರಾಟ ಕುರಿತು ಸಂಗತ ಕೃತಿ ಗಮನ ಸೆಳೆಯುತ್ತದೆ ಎಂದು ರಬಕವಿ-ಬನಹಟ್ಟಿ ತಾಲೂಕು ಕಸಾಪ ಅಧ್ಯಕ್ಷ ಮ.ಕೃ.ಮೇಗಾಡಿ ಹೇಳಿದರು.

ಕಸಾಪ ಜಿಲ್ಲಾ, ತೇರದಾಳ ಘಟಕವು ತೇರದಾಳದ ಸಾಹಿತ್ಯ ಪ್ರೇಮಿ ಮಾರುತಿ ಹೂಗಾರ ಅವರ ನಿವಾಸದಲ್ಲಿ ಹಮ್ಮಿಕೊಂಡಿದ್ದ 3ನೇ ಪುಸ್ತಕಾವಲೋಕನ ಕಾರ್ಯಕ್ರಮದಲ್ಲಿ ಸಾಹಿತ್ಯ ಸಿಂಚನ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ವಿಜಯಪುರದ ಹಿರಿಯ ಸಾಹಿತಿ ಪ್ರೊ.ದೊಡ್ಡಣ್ಣ ಭಜಂತ್ರಿ ಅವರ ಸಂಗತ ಕೃತಿ ಅವಲೋಕಿಸಿ ಮಾತನಾಡಿದ ಅವರು, ಕೃತಿಗಳನ್ನು ಕೊಂಡು ಓದುವುದರ ಮೂಲಕ ಓದುಗರು, ಸಾಹಿತ್ಯಾಸಕ್ತರು ಪ್ರೋತ್ಸಾಹಿಸಬೇಕು ಎಂದರು.

ಮುಖಂಡ ಪ್ರವೀಣ ನಾಡಗೌಡ ಅಧ್ಯಕ್ಷತೆ ವಹಿಸಿ ಕನ್ನಡ ಸಾಹಿತ್ಯ ಪರಿಷತ್ ತೇರದಾಳ ತಾಲೂಕು ಘಟಕಕ್ಕೆ ಸದಾಕಾಲ ಪ್ರೋತ್ಸಾಹಿಸುವುದಾಗಿ ತಿಳಿಸಿದರು. ರಬಕವಿಯ ಹಿರಿಯ ಸಾಹತಿ ಶಿವಾನಂದ ದಾಶಾಳ ಅವರು ಎಸ್.ಆರ್.ರಾವಳ ಅವರ ಸಾಹಿತ್ಯ ಸಿಂಚನ ಕೃತಿ ಬಿಡುಗಡೆಗೊಳಿಸಿ ಈ ಕೃತಿಯಲ್ಲಿ ವಿವಿಧ ಲೇಖಕರ ಕೃತಿಗಳ ಪರಿಚಯಿಸುವ 15 ಲೇಖನಗಳು ಗಮನ ಸೆಳೆಯಬಲ್ಲವು. ಆ ಕೃತಿಗಳ ಕುರಿತು ಸಮಗ್ರವಾಗಿ ಪರಿಚಯಿಸುವ ಕಾರ್ಯ ರಾವಳ ಅವರಿಂದ ನಡೆದಿರುವುದು ಶ್ಲಾಘನೀಯ ಎಂದರು. ಸಾಹಿತ್ಯ ಪ್ರೇಮಿ ಮಾರುತಿ ಹೂಗಾರ, ತೇರದಾಳ ತಾಲೂಕು ಕನ್ನಡ ಸಾಹಿತ್ಯ ಅಧ್ಯಕ್ಷ ಗಂಗಾಧರ ಮೋಪಗಾರ ಮಾತನಾಡಿದರು. ಪುರಸಭೆ ಮಾಜಿ ಅಧ್ಯಕ್ಷ ನಿಂಗಪ್ಪ ಮಾಲಗಾಂವಿ, ಹಿರಿಯರಾದ ಮಲ್ಲಿನಾಥ ಬೋಳಗೊಂಡ, ಡಾ.ಶೇಡಬಾಳ, ಎಲ್.ವಿ.ಹಿಡಕಲ್, ಸುರೇಶ ಕಬಾಡಗಿ, ಸುರೇಂದ್ರ ಹಟ್ಟಿ, ಸುರೇಶ ಹೂಗಾರ, ಧರೆಪ್ಪ ಕಿತ್ತೂರ, ಈಶ್ವರ ಯಲ್ಲಟ್ಟಿ, ಭೂಪಾಲ ವಾಜಂತ್ರಿ, ಎಸ್ .ಬಿ.ಕಾಂಬಳೆ, ಶಿವಾನಂದ ಗುರವ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು. ಯುವ ಬರಹಗಾರ ಪದ್ಮಸಾಗರ ನಾಗನೂರ ಅವರನ್ನು ಸನ್ಮಾನಿಸಲಾಯಿತು. ಬಸವರಾಜ ನೀಲನೂರ ಪ್ರಾರ್ಥಿಸಿದರು. ಎಸ್.ಆರ್. ರಾವಳ ಸ್ವಾಗತಿಸಿದರು. ಕಜಾಪ ಅಧ್ಯಕ್ಷ ಅಶೋಕ ಮಹಾಲಿಂಗಪುರ ನಿರೂಪಿಸಿದರು.



ಸರ್ಕಾರಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ

ಬೀಳಗಿ: ತಾಲೂಕಿನ ಅರಕೇರಿ ಗ್ರಾಮದ ಸರ್ಕಾರಿ ಬಾಲಕರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ ಹಾಗೂ ಪೋಷಕ ಮತ್ತು ಶಿಕ್ಷಕರ ಮಹಾಸಭೆಯಲ್ಲಿ ಮಕ್ಕಳಿಗೆ ಸ್ವಾಗತಿಸಲಾಯಿತು. ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳನ್ನು ವಿತರಿಸಲಾಯಿತು.

ಮುಖ್ಯೋಪಾಧ್ಯಾಯ ಮಂಜುನಾಥ ಗೊರವರ ಮಾತನಾಡಿ, ಪ್ರಸಕ್ತ ಸಾಲಿನಲ್ಲಿ 1ರಿಂದ 5ನೇ ತರಗತಿ ವರೆಗೆ ದ್ವಿಭಾಷಾ ಮಾಧ್ಯಮದಲ್ಲಿ ಬೋಧನೆ ಮಾಡಲಾಗುತ್ತದೆ. ಸರ್ಕಾರಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ ದೊರೆಯುವುದರ ಜೊತೆಗೆ ಸರ್ಕಾರಿ ಶಾಲೆಯಲ್ಲಿ ಓದುವ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ದೊರೆಯುತ್ತದೆ ಎಂದು ಹೇಳಿದರು.

ನಿವೃತ್ತ ಮುಖ್ಯೋಪಾಧ್ಯಾಯ ಎಸ್. ಕೆ.ಮಡಿಕೇಶ್ವರ ಸನ್ಮಾನ ಸ್ವೀಕರಿಸಿ ಮಾತನಾಡಿ, ಸರ್ಕಾರ ಸರ್ಕಾರಿ ಶಾಲೆಯಲ್ಲಿ ಓದುವ ಮಕ್ಕಳಿಗೆ ಸಮವಸ್ತ್ರ, ಬೂಟು, ಪಠ್ಯಪುಸ್ತಕ, ಹಾಲು, ಮೊಟ್ಟೆ, ಬಿಸಿಯೂಟ, ಬಾಳೆಹಣ್ಣು ಸೇರಿದಂತೆ ಎಲ್ಲ ಸೌಲಭ್ಯಗಳನ್ನು ಬಳಸಿಕೊಂಡು ಶೈಕ್ಷಣಿಕವಾಗಿ ಮುಂದೆ ಬರಬೇಕೆಂದು ಹೇಳಿದರು. ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ.ಎಂ.ಸಾವಕಾರ ಪ್ರಸಕ್ತ ಸಾಲಿನ ಶೈಕ್ಷಣಿಕ ಧ್ಯೇಯವಾಕ್ಯ ಅನಾವರಣ ಮಾಡಿ, ಮಕ್ಕಳಿಗೆ ಅಕ್ಷರಭ್ಯಾಸ ಮಾಡಿಸುವ ಮೂಲಕ ಶಾಲಾ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿ, ಮಕ್ಕಳ ಬೆಳವಣಿಗೆಯಲ್ಲಿ ಪಾಲಕರ ಪಾತ್ರ ಬಹುದೊಡ್ಡದಾಗಿದ್ದು, ಮಕ್ಕಳ ಮೇಲೆ ತಾಯಂದಿರು ಸೂಕ್ತ ನಿಗಾ ಇಡಬೇಕು. ಶಾಲೆಯಲ್ಲಿ ಏನು ಮಾಡಿದ್ದಾರೆ ಎಂಬುದನ್ನು ಮನೆಯಲ್ಲಿ ನೋಡಬೇಕು. ಪಾಲಕರು ಓದಲು ಮಕ್ಕಳಿಗೆ ಸಾಥ್ ಕೊಡಬೇಕು ಎಂದು ಹೇಳಿದರು.

ಎಸ್‌ಡಿಎಂಸಿ ಅಧ್ಯಕ್ಷ ಪರಶು ಮಲ್ಲಾರ ಅಧ್ಯಕ್ಷತೆ ವಹಿಸಿ ಮಾತನಾಡಿ, ಖಾಸಗಿ ಶಾಲೆಗಳಿಗೆ ಮಕ್ಕಳನ್ನು ಸೇರಿಸುವುದು ಪಾಲಕರ ಪ್ರತಿಷ್ಠೆಯಾಗಿ ಮಾರ್ಪಟ್ಟಿದೆ. ಸರ್ಕಾರಿ ಶಾಲೆಯಲ್ಲಿ ಪ್ರತಿಭಾನ್ವಿತ ಶಿಕ್ಷಕರು ಪಾಠ ಬೋಧನೆ ಮಾಡುವುದರಿಂದ ಸರ್ಕಾರಿ ಶಾಲೆಗಳು ಉಳಿಯುವುದು ಅತ್ಯಾವಶ್ಯಕವಾಗಿದ್ದು, ಓದುವ ಮನಸ್ಸು ಇರುವ ಮಕ್ಕಳು ಎಲ್ಲಿಯಾದರೂ ಓದುವರು ಎಂದರು. ನಿವೃತ್ತಿ ಹೊಂದಿದ ಮುಖ್ಯೋಪಾಧ್ಯಾಯ ಎಸ್.ಕೆ.ಮಡಿಕೇಶ್ವರ ಅವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು. ಎಸ್‌ಡಿಎಂಸಿ ಸದಸ್ಯರಾದ ನೇಮಣ್ಣ ಹಿರಕಣ್ಣವರ, ವೆಂಕಪ್ಪ ಈರಗಾರ, ಅಪ್ಪಯ್ಯ ಜಗದಾಳ, ರಮೇಶ ಹಣಮರ, ಸಕ್ಕುಬಾಯಿ ಮರೆನ್ನವರ, ಸಾವಿತ್ರಿ ಗೋಣ್ಣಾಗರ, ಭಾಗೀರಥಿ ಕಂಬಾರ, ಲಕ್ಷ್ಮೀ ಸಾವಕಾರ, ಶಿಕ್ಷಕರಾದ ಸಿದ್ದು ಮೂರಮಟ್ಟಿ, ರೇಣುಕಾ ಕಾಜೂರ, ಸವಿತಾ ನ್ಯಾಮಗೌಡ ಮತ್ತಿತರಿದ್ದರು.



ಗುರುವಂದನಾ ಶಿಕ್ಷಣ ಪರಂಪರೆಗೆ ಗೌರವದ ಸಂಕೇತ: ಚರಂತಿಮಠ

ಬಾಗಲಕೋಟೆ: ಬಿವಿವಿ ಸಂಘದ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ 2007-2008ರಲ್ಲಿ ಪಿಯುಸಿ ವ್ಯಾಸಂಗ ಮಾಡಿ ಮುಗಿಸಿದ ಕಲಾ ವಿಭಾಗದ ವಿದ್ಯಾರ್ಥಿಗಳಿಂದ ಜೀವನಕ್ಕೆ ಮಾರ್ಗದರ್ಶನ ತೋರಿದ ಗುರುಗಳಿಗೆ ಭಕ್ತಿಭಾವದ ಗುರುವಂದನಾ ಸಮರ್ಪಣಾ ಕಾರ್ಯಕ್ರಮ ನಡೆಯಿತು.

ಬಿವಿವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಸಿ.ಚರಂತಿಮಠ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಗುರುಗಳಿಗೆ ವಿಧೇಯಕರಾಗಿರುವುದು ನಮನ ಸಲ್ಲಿಸುವುದು ಭಾರತೀಯ ಸಂಸ್ಕೃತಿ. ಬದಲಾವಣೆಯ ಈ ಕಾಲದ ಪರ್ವದಲ್ಲಿ ಇಂದಿಗೂ ಸುಮಾರು 20 ವರ್ಷಗಳ ಹಿಂದಿನ ಗುರುಗಳನ್ನು ನೆನಪಿಟ್ಟುಕೊಂಡು ಎಲ್ಲರನ್ನು ಒಂದೆಡೆ ಸೇರಿಸಿ ಗುರುವಂದನಾ ಕಾರ್ಯಕ್ರಮ ಮಾಡುತ್ತಿರುವುದು ಶಿಕ್ಷಣ ಪರಂಪರೆಗೆ ಗೌರವದ ಸಂಕೇತವಾಗಿದೆ ಎಂದು ಹೇಳಿದರು. ಉಪಸ್ಥಿತರಿರುವ ಗುರುಗಳು ಎಲ್ಲರೂ ಮಾತನಾಡಿ ಸುಮಾರು 20 ವರ್ಷಗಳ ಹಿಂದೆ ವಿದ್ಯಾರ್ಥಿಗಳಿಗಿರುವ ಬಾಂಧವ್ಯ ಹಾಗೂ ನಡತೆ ಹಾಗೂ ಪ್ರಗತಿಯನ್ನು ಕಂಡು ಸಂತಸ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ.ಎಸ್.ಎಂ.ಗಾಂವಕರ ಮಾತನಾಡಿ, ವಿದ್ಯಾರ್ಥಿ ಹಾಗೂ ಗುರುಗಳ ಬಾಂಧವ್ಯ ಅಜರಾಮರವಾದದ್ದು, ಗುರು ಸದಾ ವಿದ್ಯಾರ್ಥಿಗಳ ಏಳಿಗೆಯನ್ನೇ ಬಯಸುತ್ತಾನೆ. ತಂದೆ ತಾಯಿಗಳನ್ನು ಹೊರತು ಪಡಿಸಿದರೆ ಮಕ್ಕಳ ಏಳಿಗೆಯನ್ನು ಬಯಸುವ ವ್ಯಕ್ತಿಯ ಗುರುವಾಗಿದ್ದಾನೆ ಅಂತಹ ಪರಂಪರೆ ಇಲ್ಲಿನ ಶಿಕ್ಷಕರು ಹಾಕಿಕೊಟ್ಟಿದ್ದಾರೆ. ಆದರೆ ಅಡಿಯಲ್ಲಿ ತಾವುಗಳು ಇಂದು ಅವರ ಸ್ಮರಣೆಯನ್ನು ಗೌರವ ಹಾಗೂ ಭಕ್ತಿಭಾವದಿಂದ ಮಾಡುತ್ತಿರುವುದು ನಿಜಕ್ಕೂ ಪ್ರಶಂಷನೀಯವಾದದ್ದು ಶಿಕ್ಷಣ ಎನ್ನುವುದು ಒಂದು ವ್ಯವಹಾರಿಕವಾಗಿರಬಾರದು. ಮಧುರ ಪ್ರೀತಿಯ ನೈತಿಕ ಮೌಲ್ಯದ ಸಮಾಜದ ಕಳಕಳಿಯ ಭಾಗವಾಗಬೇಕೆಂದು ಹೇಳಿದರು. ವಿದ್ಯಾರ್ಥಿಗಳು ತಮ್ಮ ಗುರುಗಳ ಸ್ಮರಣೆ ಮತ್ತು ಬಾಲ್ಯದ ನೆನಪುಗಳನ್ನು ಹಂಚಿಕೊಂಡರು. ವಿಠ್ಠಲ ಕುಂಬಾರ ಮಾತನಾಡಿದರು. ಮಾಹಾಲಿಂಗ ಚೌಹಾನ, ಅಜಯ ಹೊಸಮನಿ, ವಿಜಯ ಹೂಗಾರ, ಮುರಗೇಶ ಸಿರಗುಪ್ಪಿ, ಲಲಿತಾ ಸಾತಾನಿ, ಜ್ಯೋತಿ ಕರಿದ್ಯಾನವರ ಮತ್ತು ನಂದಿನಿ ಹೊಸಮನಿ, ಪ್ರೀತಿ ಹುಣಸಿ ಮರದ, ಮೈತ್ರಾ ಕರಡಿ ಇದ್ದರು.



ತಂಬಾಕು ಸೇವನೆ ಆರೋಗ್ಯಕ್ಕೆ ಹಾನಿಕಾರಕ: ಬಣಕಾರ

ಬಾದಾಮಿ: ತಂಬಾಕು ಸೇವನೆಯಿಂದ ಅನೇಕ ರೋಗಗಳು ಬರುತ್ತದೆ. ಇದು ಆರೋಗ್ಯಕ್ಕೆ ಹಾನಿಕಾರಕವಾಗಿದೆ ಎಂದು ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸಮಿತಿಯ ಅಧ್ಯಕ್ಷ ಚಂದ್ರಶೇಖರ ಬಣಕಾರ ಹೇಳಿದರು.

ಮಂಗಳವಾರ ತಾಲೂಕು ಆರೋಗ್ಯಾಧಿಕಾರಿಗಳ ಕಾರ್ಯಾಲಯದ ಸಭಾಭವನದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ತಾಲೂಕ ಆರೋಗ್ಯಾಧಿಕಾರಿಗಳ ಕಾರ್ಯಾಲಯ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಜನಜಾಗೃತಿ ಜಾಥಾ ಹಾಗೂ ವಿಶ್ವ ತಂಬಾಕು ರಹಿತ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ತಾಲೂಕು ಆರೋಗ್ಯ ಅಧಿಕಾರಿ ಡಾ.ಎಂ.ಬಿ.ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಪಿ.ಎಚ್. ಮಹಾಲಿಂಗಪುರ ವಿಶೇಷ ಉಪನ್ಯಾಸ ನೀಡಿದರು. ತಾಲೂಕು ವಕೀಲರ ಸಂಘದ ಅಧ್ಯಕ್ಷ ಪಿ.ಬಿ.ಕಲಾಲ ಮಾತನಾಡಿದರು. ಬಿ.ಎಂ.ಹೊರಕೇರಿ ಪ್ರ್ಯಾರಾ ಮೆಡಿಕಲ್ ಕಾಲೇಜ್ ಪ್ರಾಚಾರ್ಯ ಬಿ.ಎಸ್.ದೋತ್ರದ, ಕಾಳಿದಾಸ ಬಿಎಸ್‌ಸಿ ನರ್ಸಿಂಗ್ ಕಾಲೇಜ್ ಉಪನ್ಯಾಸಕರಾದ ವೀಣಾ ಪಿ.ಟಿ., ಆರ್‌ಬಿಎಸ್‌ಕೆ ವೈದ್ಯ ಡಾ.ಕೆ.ಟಿ.ಗಾಜಿ, ಹಿರಿಯ ಆರೋಗ್ಯ ಸುರಕ್ಷಾಧಿಕಾರಿ ಎಲ್.ಎಚ್. ಗೋಪಾಲಗೌಡರ, ತಾಲೂಕು ಆಸ್ಪತ್ರೆಯ ಆರ್.ಬಿ.ಹೊತಗಿಗೌಡರ, ಸ್ನೇಹಾ ಶಿರಹಟ್ಟಿ, ಕ್ಷಯ ರೋಗದ ಮೇಲ್ವಿಚಾರಕ ಆರ್.ಬಿ.ಅಂಬಿಗೇರ, ಮಲೇರಿಯಾ ಮೇಲ್ವಿಚಾರಕ ಮಂಜು ಅಂಗಡಿ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.



ಸರ್ಕಾರಿ ಶಾಲೆಗೆ ಮಕ್ಕಳನ್ನು ದಾಖಲಿಸಿ: ಪೆಟ್ಲೂರ

ಬಾದಾಮಿ: ಸರ್ಕಾರಿ ಶಾಲೆಗಳಲ್ಲಿ ದಾಖಲಾಗುವ ಎಲ್ಲ ಮಕ್ಕಳಿಗೆ ಪ್ರೋತ್ಸಾಹಧಕ ಸೌಲಭ್ಯ ನೀಡುತ್ತಿದ್ದು, ಪಾಲಕರು ಸದುಪಯೋಗ ಪಡೆದುಕೊಳ್ಳಬೇಕೆಂದು ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ವಾಮನ ಪೆಟ್ಲೂರ ಮನವಿ ಮಾಡಿದರು.



ಪಟ್ಟಣದ ಸರ್ಕಾರಿ ಶಾಸಕರ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ 2026-27ನೇ ಸಾಲಿನ ಶಾಲಾ ಪ್ರಾರಂಭೋತ್ಸವ ಹಾಗೂ ಶಾಲಾ ಮಕ್ಕಳಿಗೆ ಕಲಿಕಾ ಸಾಮಗ್ರಿಗಿ ವಿತರಿಸಿ ಮಾತನಾಡಿದರು. ಸರ್ಕಾರಿ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದು, ಅರ್ಹ ವಿದ್ಯಾರ್ಹತೆಯ ಶಿಕ್ಷಕರ ನೇಮಕ, ಮಕ್ಕಳಿಗೆ ಬಿಸಿಯೂಟ, ಹಾಲು, ರಾಗಿ ಮಾಲ್ಟ್, ಸಮವಸ್ತ್ರ ಶೂ ಸಾಕ್ಸಗಳನ್ನು ವಿತರಿಸಲಾಗುತ್ತಿದ್ದು, ಪಾಲಕರು ಈ ಎಲ್ಲ ಸೌಲಭ್ಯಗಳನ್ನು ಸದುಪಯೋಗಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಎಸ್‌ಡಿಎಂಸಿ ಅಧ್ಯಕ್ಷ ರಂಗಪ್ಪ ಕಳಸದ, ಮಾಜಿ ಪುರಸಭೆ ಸದಸ್ಯ ಮಹಾಂತೇಶ ತಳವಾರ, ಕ್ಷೇತ್ರ ಸಮನ್ವಯಾಧಿಕಾರಿ ಎಂ.ಬಿ.ದೊಡ್ಡಪ್ಪನ್ನವರ, ತಾಲೂಕು ಅಕ್ಷರ ದಾಸೋಹ ಯೋಜನೆಯ ಸಹಾಯಕ ನಿರ್ದೇಶಕ ಎಂ.ಎಂ.ನಾರಗಲ್, ದೈಹಿಕ ಶಿಕ್ಷಣ ಪರಿವೀಕ್ಷಕ ಬಿ.ಎಚ್.ಹಳಗೇರಿ, ಶಿಕ್ಷಣ ಸಂಯೋಜಕ ಬಿ.ಕೆ. ಚಿಮಲ್, ವೈ.ಬಿ.ಚಲವಾದಿ, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳಾದ ಜಾವೇದ ಶೇಖ್, ಕವಿತಾ ಚನ್ನಶೆಟ್ಟಿ, ಸಮೂಹ ಸಂಪನ್ಮೂಲ ವ್ಯಕ್ತಿ ಎಂ.ಕೆ.ಬಡಿಗೇರ, ಮುಖ್ಯಶಿಕ್ಷಕ ಉಮೇಶ ಗಾಣಿಗೇರ, ಶಿಕ್ಷಕ ಬಿ.ಎಸ್.ಕರಡಿ ಸೇರಿದಂತೆ ಸಹಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು, ಪಾಲಕರು, ಹಾಜರಿದ್ದರು. ಶಾಲೆಯ ಹಳೆಯ ಹಿರಿಯ ವಿದ್ಯಾರ್ಥಿ ಹುಬ್ಬಳ್ಳಿಯ ತತ್ವದರ್ಶಿ ಆಸ್ಪತ್ರೆಯ ವೈದ್ಯ ಡಾ.ರಮೇಶ ತಿಮ್ಮನಾಯ್ಕರ ಅವರು ಕೊಡಮಾಡಿದ ರೂ.50 ಸಾವಿರ ಮೌಲ್ಯದ ಕಿಟ್‌ನ್ನು ನೂತನವಾಗಿ ಎಲ್‌ಕೆಜಿ ಯಿಂದ 8ನೇ ತರಗತಿಯವರೆಗೆ ಹೊಸದಾಗಿ ದಾಖಲಾಗುವ 200 ಜನ ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್ ಕಿಟ್‌ಗಳನ್ನು ಉಚಿತವಾಗಿ ವಿತರಿಸಲಾಯಿತು.

ಸಂಭ್ರಮದ ಶಾಲಾ ಪ್ರಾರಂಭೋತ್ಸವ

ಬಾಗಲಕೋಟೆ: ಸಮಿಪದ ಮುರನಾಳ ಪುನರ್ವಸತಿ ಕೇಂದ್ರದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವನ್ನು ಅರ್ಥಪೂರ್ಣವಾಗಿ ಆರಂಭಿಸಲಾಯಿತು.

ಈ ವರ್ಷದ ಶಿಕ್ಷಣದ ಧ್ಯೇಯವಾಕ್ಯದಂತೆ ಉತ್ತಮ ಕಲಿಕೆ, ಉಜ್ವಲ ಭವಿಷ್ಯದ ಆಶಯದಂತೆ ಕಲಿಕೆಕೆ ಸೂಕ್ತ ವಾತಾವರಣ ಕಲ್ಪಿಸಲು ಶಾಲೆಯನ್ನು ತಳಿರು ತೋರಣಗಳಿಂದ ಶೃಂಗರಿಸಿ ಚಿತ್ತಾಕರ್ಷವಾದ ರಂಗೋಲಿ ಬಿಡಿಸಿ ಶಾಲೆಯನ್ನು ಮದುವಣಗಿತ್ತೆಯಂತೆ ಅಲಂಕರಿಸಲಾಗಿತ್ತು. ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು, ಮುಖ್ಯ ಗುರುಗಳು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸೇರಿ ಗ್ರಾಮದಲ್ಲಿ ಪ್ರಭಾತ ಪೇರಿ ನಡೆಸಲಾಯಿತು. ಮುಖ್ಯವಾಗಿ ಇಲಾಖೆಯು ನೂತನವಾಗಿ ಅನುಷ್ಠಾನಗೊಳಿಸಿರುವ ದ್ವಿಭಾಷಾ ಭೋಧನೆಯ ಬಗ್ಗೆ ಸರ್ಕಾರದ ಸೌಲಭ್ಯಗಳ ಕುರಿತು ಪ್ರಚಾರ ಮಾಡಲಾಯಿತು. ದಾಖಲಾತಿ ಆಂದೋಲನದ ಮೂಲಕ ಶಾಲೆಗೆ ದಾಖಲಾಗುವ ಎಲ್ಲ ಮಕ್ಕಳನ್ನು ಹೂವುಗಳ ಸುರಿಮಳೆ ಸುರಿಸುವ ಮೂಲಕ ಮಕ್ಕಳನ್ನು ಸ್ವಾಗತಿಸಿ, ಎಲ್ಲ ಮಕ್ಕಳಿಗೂ ಉಚಿತ ಪಠ್ಯ ಪುಸ್ತಕ ವಿತರಿಸಲಾಯಿತು, ಮುಖ್ಯ ಗುರುಗಳಾದ ಎಸ್.ಎಂ.ಪಲ್ಲೇದ ಅವರು ಸ್ಕೂಲ್ ಬ್ಯಾಗ್, ನೋಟ್‌ಬುಕ್, ಪೆನ್, ಪೆನ್ಸಿಲ್ ನೀಡಿದರು. ಶಾಲಾ ಪ್ರಾರಂಭೋತ್ಸವದ ಪ್ರಯುಕ್ತ ಎಲ್ಲ ಮಕ್ಕಳಿಗೂ ಪಾಲಕರಿಗೂ ಸಿಹಿ ಹಂಚಿ ಆಚರಿಸಿದರು.



ಅಧ್ಯಕ್ಷನ ರಾಜೀನಾಮೆಯಿಂದ ಹೈಡ್ರಾಮಾ ಅಂತ್ಯ

ಹುನಗುಂದ: ಪಟ್ಟಣದ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಸ್ಥಾನದ ಅಧಿಕಾರ ಹಂಚಿಕೆಯ ಸಂಬಂಧ 10 ಜನ ನಿರ್ದೇಶಕರ ರಾಜೀನಾಮೆ ವಿಷಯ ಕಳೆದ ಐದಾರು ದಿನಗಳಿಂದ ಸದ್ದು ಮಾಡಿತ್ತು. ಪಟ್ಟದ ಆಟಕ್ಕೆ ಅಧ್ಯಕ್ಷ ಮತ್ತು ನಿರ್ದೇಶಕರ ದೊಡ್ಡ ಹೈಡ್ರಾಮಾ ಸದ್ಯ ಸಂಘದ ಹಾಲಿ ಅಧ್ಯಕ್ಷ ಮಹಾಂತೇಶ ಹೊಸೂರ ತಮ್ಮ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವ ಮೂಲಕ ಅಂತ್ಯವಾಗಿದೆ.

ಪಟ್ಟಣದ ದೊಡ್ಡ ಪ್ರಮಾಣದ ಸೊಸೈಟಿ ಎಂದೇ ಹೆಸರುವಾಸಿಯಾಗಿದ್ದ ಪಿಕೆಪಿಎಸ್‌ನ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನದ ಆಯ್ಕೆಯ ಸಂದರ್ಭದಲ್ಲಿ ಅಧಿಕಾರ ಹಂಚಿಕೆಯ ಮಾತುಕತೆಯಾಗಿತ್ತು ಎನ್ನುವುದು ಅಧ್ಯಕ್ಷರ ಆದಿಯಿಂದ ಸರ್ವ ನಿರ್ದೇಶಕರಿಗೆ ಗೊತ್ತಿದ್ದ ವಿಚಾರವಾಗಿತ್ತು. ಮೊದಲ ಅವಧಿಯ ಅಧಿಕಾರ ಹಂಚಿಕೆ ಸುರಳಿತವಾಗಿಯೇ ನಡೆದು ಹೋಗಿತ್ತು. ಎರಡನೇ ಅವಧಿಗೆ ಆಯ್ಕೆಯಾದ ಅಧ್ಯಕ್ಷ ಮಹಾಂತೇಶ ಹೊಸೂರ ಅವರು ತಮ್ಮ ಅವಧಿ ಮುಗಿದರೂ ರಾಜೀನಾಮೆ ಕೊಡದೇ ಇರೋದರಿಂದ ಸಂಘದ ಉಪಾಧ್ಯಕ್ಷರಿಂದ ಹಿಡಿದು 9 ಜನ ನಿರ್ದೇಶಕರು ರಾಜೀನಾಮೆ ಸಲ್ಲಿಸಿದ್ದರು.

ಇದು ಮುಂದೆ 10 ಜನರ ರಾಜೀನಾಮೆ ಅಂಗೀಕಾರವಾಗಿ ಮತ್ತೇ ಅಷ್ಟೇ ಸ್ಥಾನಗಳಿಗೆ ಚುನಾವಣೆ ನಡೆಯುತ್ತೆ ಮತ್ತು ಅಧಿಕಾರ ಹಂಚಿಕೆ ಮಾತು ಮುರಿದು ಬೀಳುತ್ತೋ ಎನ್ನುವ ಕೌತುಕದಲ್ಲಿದ್ದ ಸಂಘದ ಸದಸ್ಯರು ಮತ್ತು ಶೇರುದಾರಿಗೆ ಹಾಗೂ ಸಾರ್ವಜನಿಕರಿಗೆ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡದ್ದು ಅಧಿಕಾರ ಹಂಚಿಕೆಯ ಸೂತ್ರ ಇನ್ನೂ ಜೀವಂತವಾಗಿದೆ.

ಒಟ್ಟಾರೆ ಅಧ್ಯಕ್ಷ ಮಹಾಂತೇಶ ಹೊಸೂರ ತಮ್ಮ ಅಧ್ಯಕ್ಷ ಸ್ಥಾನದ ರಾಜೀನಾಮೆಯಿಂದ 10 ಜನ ನಿರ್ದೇಶಕರು ರಾಜೀನಾಮೆ ಹಿಂಪಡೆಯುವಂತಾಗಿದ್ದಲ್ಲದೇ ಮರಳಿ ಚುನಾವಣೆಯಾಗುವುದು ತಪ್ಪಿತು.



> **ಸ್ವ ಇಚ್ಛೆಯಿಂದ ರಾಜೀನಾಮೆ ನೀಡಿದ್ದೇನೆ. ಸಂಘದ ಹಿತದೃಷ್ಟಿಯಿಂದ ನನ್ನಿಂದ ಚುನಾವಣೆಯಾಗಬಾರದು. ನಿರ್ದೇಶಕರಿಗೆ ತೊಂದರೆಯಾಗಬಾರದು. 10 ಜನ ನಿರ್ದೇಶಕರ ರಾಜೀನಾಮೆ ಹಿಂಪಡೆಯುವಂತೆ ಮಾಡಿದ್ದೇನೆ.**
>
> ■ **ಮಹಾಂತೇಶ ಹೊಸೂರ, ಅಧ್ಯಕ್ಷರು**

ಕಿರುಸುದ್ದಿ

ವಿಠಲ ಕಟಕಧೋಂಡಗೆ ಸಚಿವ ಸ್ಥಾನ ನೀಡಲು ಆಗ್ರಹ

ಚಡಚಣ: ಕರ್ನಾಟಕ ರಾಜ್ಯದಲ್ಲಿಯೆ ಅತಿ ದೊಡ್ಡ ಮತಕ್ಷೇತ್ರ ಯಾವುದು ಎಂದು ಹುಡುಕಿದರೆ ಅದು ನಾಗಠಾಣ ಮತಕ್ಷೇತ್ರ ಈ ಕ್ಷೇತ್ರವನ್ನು ಅಭಿವೃದ್ಧಿ ಕ್ಷೇತ್ರವಾಗಬೇಕೆಂದರೆ ನಾಗಠಾಣ ಶಾಸಕರಾದ ವಿಠ್ಠಲ ಕಟಕಧೋಂಡ ಅವರಿಗೆ ಸಚಿವ ಸ್ಥಾನದ ಅಧಿಕಾರ ಕೊಟ್ಟಾಗ ಮಾತ್ರ ಸಾಧ್ಯ. ಆನಿಟ್ಟಿನಲ್ಲಿ ಶಾಸಕ ವಿಠ್ಠಲ ಕಟಕಧೋಂಡ ಅವರಿಗೆ ನೂತನ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಅವರ ಮಂತ್ರಿ ಮಂಡಲದಲ್ಲಿ ಸಚಿವ ಸ್ಥಾನ ನೀಡಿ ಅತಿ ದೊಡ್ಡ ಮತಕ್ಷೇತ್ರ ಹಾಗೂ ಹಿಂದುಳಿದ ನಾಗಠಾಣ ವಿಧಾನಸಭಾ ಮೊದಲು ಬಳ್ಳೊಳ್ಳಿ ಮತಕ್ಷೇತ್ರವಿದ್ದರು ಆರಿಸಿಬಂದ ಯಾವೊಬ್ಬ ಶಾಸಕರಿಗೂ ಸಚಿವ ಸ್ಥಾನ ನೀಡಿಲ್ಲ ಮತ್ತು ನಾಗಠಾಣ ಮತಕ್ಷೇತ್ರಕ್ಕು ಸಚಿವ ಸ್ಥಾನ ನೀಡಿಲ್ಲ, ವಿಠ್ಠಲ ಕಟಕಧೋಂಡ ಅವರು ನಮ್ಮ ನಾಗಠಾಣ ಮತಕ್ಷೇತ್ರದಲ್ಲಿ ಎರಡನೇಯ ಬಾರಿ ಶಾಸಕರಾಗಿ ಆಯ್ಕೆ ಆಗಿದ್ದು, ಅವರಿಗೂ ರಾಜ್ಯ ಹಾಗೂ ನಮ್ಮ ನಾಗಠಾಣ ಮತ ಕ್ಷೇತ್ರದ ಅಭೀವೃದ್ಧಿಯ ಪರವಾಗಿ ಕೆಲಸ ಮಾಡಲು ಇದೊಂದು ಸಲ ಸಚಿವ ಸ್ಥಾನದ ಅಧಿಕಾರ ಹಾಗೂ ಅವಕಾಶ ನೀಡಿ ಎಂದು ಕಾಂಗ್ರೆಸ್ ಧುರಿಣ ವಾಸಿಮ್ ಮುಲ್ಲಾ ಒತ್ತಾಯಿಸಿದ್ದಾರೆ.



ದಸಾಪ ಜಿಲ್ಲಾಧ್ಯಕ್ಷರಾಗಿ ರವಿ ಕಿತ್ತೂರ ನೇಮಕ

ವಿಜಯಪುರ: ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ನಗರದ ರವಿ ಕಿತ್ತೂರ ಅವರನ್ನು ದಲಿತ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ. ಸಾಮಾಜಿಕ ಹೋರಾಟ, ದಲಿತಪರ ಚಿಂತನೆಯ ವ್ಯಕ್ತಿಯಾಗಿದ್ದರಿಂದ ರವಿ ಕಿತ್ತೂರ ಅವರನ್ನು ನೇಮಕ ಮಾಡಿ ಈ ಆದೇಶ ಹೊರಡಿಸಲಾಗಿದೆ ಎಂದು ದಲಿತ ಸಾಹಿತ್ಯ ಪರಿಷತ್ ಬೆಳಗಾವಿ ವಿಭಾಗದ ಸಂಯೋಜಕ ಮೋಹನ ಕಟ್ಟಿಮನಿ ತಿಳಿಸಿದ್ದಾರೆ.



ನೀರನ್ನು ಕುದಿಸಿ, ಆರಿಸಿ ಕುಡಿಯಿರಿ

ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಪಟ್ಟಣಕ್ಕೆ ಪೂರೈಕೆಯಾಗುತ್ತಿರುವ ಕುಡಿಯುವ ನೀರಿಗೆ ಆಲಮಟ್ಟಿ ಕೃಷ್ಣಾ ನದಿಯ ಜಲಾನಯನ ಪ್ರದೇಶದಲ್ಲಿ ಮಳೆಯಾಗುವ ಸಂಭವವಿರುವುದರಿಂದ ಹೊಸ ನೀರು ನದಿಗೆ ಸೇರ್ಪಡೆಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಹೊಸ ನೀರು ಸೇರ್ಪಡೆಗೊಳ್ಳುವುದರಿಂದ ನೀರಿನ ಗಡಸುತನ, ಕಂಡಕ್ಟಿವಿಟಿ ಮತ್ತು ಟಿಡಿಎಸ್ ಪ್ರಮಾಣವು ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಮನಗೂಳಿ ಪಟ್ಟಣದ ಜನತೆ ನೀರನ್ನು ಕುದಿಸಿ ಆರಿಸಿ ಕುಡಿಯಬೇಕೆಂದು ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ನಿಖೀಲ್ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಂಜಾಗ್ರತಾ ಕ್ರಮ ಕೈಗೊಳ್ಳಿ: ಪಾಟೀಲ

ಬಸವನಬಾಗೇವಾಡಿ: ಮಳೆಗಾಲ ಆರಂಭವಾಗುತ್ತಿರುವ ಹಿನ್ನಲೆ ಮನಗೂಳಿ ಪಟ್ಟಣದ ಸಾರ್ವಜನಿಕರು ಹಳೆಯ ಮತ್ತು ಶಿಥಿಲಗೊಂಡ ವಸತಿ ಸಮುಚ್ಚಯಗಳು, ವಾಣಿಜ್ಯ ಸಂಕೀರ್ಣಗಳು ವಾಸಿಸಲಿಕ್ಕೆ ಯೋಗ್ಯವಲ್ಲದ ಹಾಗೂ ಅಪಾಯಕಾರಿಯಾಗಿರುವ ಕಟ್ಟಡಗಳ ಮಾಲೀಕರು ಅಥವಾ ಬಳಕೆದಾರರು ಮುಂಜಾಗ್ರತಾ ಕ್ರಮವಾಗಿ ತಕ್ಷಣವೇ ಕಟ್ಟಡ ಖಾಲಿ ಮಾಡಲು ಅಥವಾ ಸೂಕ್ತ ದುರಸ್ತಿ ಕೈಗೊಳ್ಳಲು ಮನಗೂಳಿ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ನಿಖಿಲ್ ಪಾಟೀಲ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಕಮತಗಿ: ಪಟ್ಟಣದ ನಾಗರಿಕರು ರಾಜೀವ್ ಗಾಂಧಿ ವಸತಿ ನಿಗಮ ಪ್ರಧಾನಮಂತ್ರಿ ಅವಾಸ್ ಯೋಜನೆ (ನಗರ) 2.0ರಲ್ಲಿ ವಸತಿ ಸೌಲಭ್ಯ ಕಲ್ಪಿಸುವ ಸಲುವಾಗಿ ವಸತಿ ರಹಿತರ ಸಮೀಕ್ಷೆಗೆ ಅರ್ಜಿ ಸಲ್ಲಿಸಲು ಜೂ.30ರ ವರೆಗೆ ಕಾಲಾವಕಾಶ ನೀಡಿದೆ. ಈ ಯೋಜನೆಯಡಿಯಲ್ಲಿ ಇದುವರೆಗೂ ಯಾವುದೇ ವಸತಿ ಯೋಜನೆಯಡಿ ಸೌಲಭ್ಯ ಪಡೆಯದೇ ಇರುವ ಕಮತಗಿ ಪಟ್ಟಣ ಪಂಚಾಯತ ವ್ಯಾಪ್ತಿಯ ವಸತಿ ರಹಿತ (ನಿವೇಶನ, ಕಚ್ಚಾ ಮನೆ ಹೊಂದಿರುವವರು) ಮಹಿಳೆಯರುವ, ಹಿರಿಯ ನಾಗರೀಕರು, ವಿಧುರರು, ವಿಶೇಷ ಚೇತನರು ಹಾಗೂ ಮಾಜಿ ಸೈನಿಕರು ಅರ್ಜಿ ಸಲ್ಲಿಸಬಹುದಾಗಿದ್ದು, ದಾಖಲೆಗಳೊಂದಿಗೆ, https//pmay.urban.gov.in ರಲ್ಲಿ ಸ್ವಂತವಾಗಿ, ಗ್ರಾಹಕ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಜೂ.30ರೊಳಗೆ ಅರ್ಜಿ ಸಲ್ಲಿಸಲು ಹಾಗೂ ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಕಮತಗಿ ಪಪಂ ಕಾರ್ಯಾಲಯದ ವಸತಿ ಶಾಖೆ ಸಂಪರ್ಕಿಸುವಂತೆ ಮುಖ್ಯಾಧಿಕಾರಿ ಎಫ್.ಎನ್.ಹುಲಿಕೇರಿ ತಿಳಿಸಿದ್ದಾರೆ.



ಇಂಡಿ: ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಾಗಿ 10 ತಿಂಗಳು ಕಾರ್ಯನಿರ್ವಹಿಸಿ ವಿಜಯಪುರ ಡಯಟ್ ಕಾಲೇಜಿಗೆ ಹಿರಿಯ ಉಪನ್ಯಾಸಕರಾಗಿ ವರ್ಗಾವಣೆಗೊಂಡ ಸೈಯಿದಾ ಅನ್ನಿಸ್ ಮುಜಾವರ ಅವರಿಗೆ ತಾಲೂಕು ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ(ಜಿಪಿಟಿ) ಸಂಘದ ವತಿಯಿಂದ ಸನ್ಮಾನಿಸಿ, ಬೀಳ್ಕೊಡಲಾಯಿತು. ತಾಲೂಕು ಜಿಪಿಟಿ ಶಿಕ್ಷಕರ ಸಂಘದ ಅಧ್ಯಕ್ಷ ಶಂಕರ ಕೋಳಿಕರ, ಜಿಲ್ಲಾಧ್ಯಕ್ಷ ಚಂದ್ರಶೇಖರ ಹಕಾರಿ, ಕಾರ್ಯದರ್ಶಿ ಹಣಮಂತರಾಯ ಪೂಜಾರಿ, ಖಜಾಂಚಿ ಶಶಿಕುಮಾರ ವಡ್ಡರ, ಶಿಕ್ಷಕ ಸಂತೋಷ ಬಂಡೆ ಉಪಸ್ಥಿತರಿದ್ದರು.

ಉಚಿತ ಬಸ್‌ಪಾಸ್‌ಗೆ ಅರ್ಜಿ ಆಹ್ವಾನ

ವಿಜಯಪುರ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ದಿನಪತ್ರಿಕೆ, ಮಾಧ್ಯಮ ಸಂಸ್ಥೆಗಳಲ್ಲಿ ತಾಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರಿಗೆ ತಿದ್ದುಪಡಿ ಮಾಡಲಾದ ಹೊಸ ಮಾರ್ಗಸೂಚಿಯನ್ವಯ ಉಚಿತ ಬಸ್ ಪಾಸ್ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಪತ್ರಕರ್ತರು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಲ್ಲಿ ಪೂರ್ಣಾವಧಿ, ಅರೆಕಾಲಿಕ ವರದಿಗಾರರಾಗಿ ನೇಮಕವಾಗಿದ್ದಲ್ಲಿ ಆಯಾ ಮಾಧ್ಯಮ ಸಂಸ್ಥೆಯ ಸಂಪಾದಕರ, ಸ್ಥಾನಿಕ ಸಂಪಾದಕರ, ಮುಖ್ಯಸ್ಥರ ಶಿಫಾರಸ್ಸು ಪತ್ರ ಮತ್ತು ಸೇವಾ ಪ್ರಮಾಣ ಪತ್ರವನ್ನು ಲಗತ್ತಿಸಿ ಸೇವಾಸಿಂಧು ಪೋರ್ಟಲ್ https://sevasindhu.karnataka.gov.in ಮೂಲಕ ನಲ್ಲಿ ಸಲ್ಲಿಸಬಹುದು. ಆಯಾ ಮಾಧ್ಯಮ ಸಂಸ್ಥೆಯ ಸಂಪಾದಕರ, ಸ್ಥಾನಿಕ ಸಂಪಾದಕರ, ಮುಖ್ಯಸ್ಥರ ಶಿಫಾರಸ್ಸು ಪತ್ರವನ್ನು ಪರಿಗಣಿಸಲು ಅವಕಾಶ ಕಲ್ಪಿಸಲಾಗಿದೆ. ಆನ್‌ಲೈನ್‌ನಲ್ಲಿ ಸಲ್ಲಿಸಲಾದ ಅರ್ಜಿ ಮತ್ತು ಲಗತ್ತಿಸಲಾಗಿರುವ ದಾಖಲೆಗಳ ಒಂದು ಪ್ರತಿಯನ್ನು ಆಯಾ ಜಿಲ್ಲೆಯ ವಾರ್ತಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು. ಸ್ವೀಕೃತ ಅರ್ಜಿಗಳನ್ನು ಆಯ್ಕೆ ಸಮಿತಿಯ ಸಭೆಯಲ್ಲಿ ಪರಿಶೀಲಿಸಿ ಬಸ್‌ಪಾಸ್ ಮಂಜೂರು ಮಾಡಲಾಗುತ್ತದೆ. ಅರ್ಹ ಪತ್ರಕರ್ತರು ಕೂಡಲೇ ಸೇವಾಸಿಂಧು ಪೋರ್ಟಲ್ ಮೂಲಕ ಜೂನ್ 20ರೊಳಗೆ ಅರ್ಜಿ ಸಲ್ಲಿಸಬೇಕು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ ನಿಂಬಾಳ್ಕರ ತಿಳಿಸಿದ್ದಾರೆ.



ವಿಜಯಪುರ: ನಗರ ಹೊರ ವಲಯದ ಇಟ್ಟಂಗಿಹಾಳ ರಸ್ತೆಯ ವೇದ ಅಕಾಡೆಮಿಯಲ್ಲಿ ಶಾಲೆ ಪುನಾರಂಭ ಕಾರ್ಯಕ್ರಮ ಸರಸ್ವತಿ ಪೂಜೆಯೊಂದಿಗೆ ಮಕ್ಕಳನ್ನು ಸ್ವಾಗತಿಸಲಾಯಿತು. ಶಾಲೆಯ ಖಜಾಂಚಿ ಶಿವಲೀಲಾ ಕೆಲೂರ, ನಿರ್ದೇಶಕಿ ಡಾ. ನೇಹಾ ಕೆಲೂರ, ಪ್ರಾಂಶುಪಾಲೆ ಚಿತ್ರಾ ಪಾಟೀಲ, ಪ್ರಾಥಮಿಕ ವಿಭಾಗದ ಮುಖ್ಯಸ್ಥೆ ರಶ್ಮಿ ಕವಟಗಿಮಠ ಸೇರಿ ಸಿಬ್ಬಂದಿ ವರ್ಗ ವಿದ್ಯಾರ್ಥಿಗಳು ಇದ್ದರು.

ಹಿರಿಯ ಸಿವಿಲ್ ನ್ಯಾಯಾಧೀಶ ಅರವಿಂದ ಹಾಗರಗಿ ಸಲಹೆ

ದುಶ್ಚಟಗಳಿಂದ ಯುವಜನತೆ ದೂರವಿರಲಿ

ವಿಜಯಪುರ: ಯುವಜನತೆ ದುಶ್ಚಟಗಳಿಂದ ದೂರವಿರಬೇಕು. ತಂಬಾಕು ಸೇವನೆ ತ್ಯಜಿಸಿ, ಆರೋಗ್ಯಯುತ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅರವಿಂದ ಹಾಗರಗಿ ಹೇಳಿದರು.

ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಸಭಾಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ, ಕಲಬುರಗಿಯ ಇಂಡಿಯನ್ ಕ್ಯಾನ್ಸರ್ ಸೊಸೈಟಿ, ನಾಗೂರ್ ನರ್ಸಿಂಗ್ ಕಾಲೇಜು ಹಾಗೂ ವಿವಿಧ ಸಂಘ-ಸಂಸ್ಥೆಗಳ ಆಶ್ರಯದಲ್ಲಿ ಹಮ್ಮಿಕೊಂಡ ವಿಶ್ವ ತಂಬಾಕು ರಹಿತ ದಿನಾಚರಣೆಯಲ್ಲಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ದೇಶದ ಭವಿಷ್ಯ, ಯುವಜನತೆ ಯಾವುದೇ ಕಾರಣಕ್ಕೂ ಧೂಮಪಾನ, ತಂಬಾಕು ಸೇವನೆಯಂತಹ ಮಾರಕ ದುಶ್ಚಟಗಳಿಗೆ ಬಲಿಯಾಗಬಾರದು ಎಂದರು.

ಜಿಲ್ಲಾ ಆಸ್ಪತ್ರೆಯ ಡಾ.ಎಂ.ಟಿ.ಆರ್. ಕೋತ್ವಾಲ್ ಉಪನ್ಯಾಸ ನೀಡಿ ಮಾತನಾಡಿ, ಕ್ಯಾನ್ಸರ್ ಮಹಾಮಾರಿಯಾಗಿ ಬೆಳೆಯುವ ಮುನ್ನವೇ ನಾವು ಜಾಗರೂಕರಾಗಿರಬೇಕು. ಆರಂಭಿಕ ಹಂತದಲ್ಲೇ ತಪಾಸಣೆ ಮತ್ತು ಸೂಕ್ತ ಚಿಕಿತ್ಸೆ ಪಡೆದುಕೊಳ್ಳುವುದು ಅತ್ಯಗತ್ಯ. ತಂಬಾಕು ಸೇವನೆಯ ದುಷ್ಪರಿಣಾಮಗಳ ಕುರಿತು ವಿದ್ಯಾರ್ಥಿಗಳು ಕೇವಲ ತಾವಷ್ಟೇ ಜಾಗೃತರಾಗದೇ ತಮ್ಮ ಪೋಷಕರು, ಸ್ನೇಹಿತರು ಮತ್ತು ಸಂಬಂಧಿಕರಲ್ಲೂ ನೆರೆಹೊರೆಯವರಲ್ಲಿಯೂ ಜಾಗೃತಿ ಮೂಡಿಸಬೇಕು ಎಂದರು.



> ವಿದ್ಯಾರ್ಥಿಗಳು ತಮ್ಮ ಜೀವನವನ್ನು ಶಿಸ್ತುಬದ್ಧ, ಅಚ್ಚುಕಟ್ಟಾಗಿ ರೂಪಿಸಿಕೊಳ್ಳಬೇಕು. ತಂಬಾಕು ಮುಕ್ತ ಸಮಾಜ ನಿರ್ಮಾಣದಲ್ಲಿ ವಿದ್ಯಾರ್ಥಿಗಳ ಪಾತ್ರ ದೊಡ್ಡದಿದೆ.
> ■ ಅರವಿಂದ ಹಾಗರಗಿ, ಹಿರಿಯ ಸಿವಿಲ್ ನ್ಯಾಯಾಧೀಶರು

ಮನೋವೈದ್ಯ ಡಾ.ಮಂಜುನಾಥ್ ಮಸಳಿ ಮಾತನಾಡಿ, ವಿದ್ಯಾರ್ಥಿಗಳು ಸದಾ ಧನಾತ್ಮಕ ಕಲಿಕಾ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಆರೋಗ್ಯಕರ ಜೀವನಶೈಲಿಗೆ ಪೂರಕವಾದ ವಿಚಾರಗಳನ್ನು ಅಳವಡಿಸಿಕೊಂಡು, ದುಶ್ಚಟಗಳಿಂದ ಮುಕ್ತವಾದ ಉತ್ತಮ ಜೀವನ ಸಾಗಿಸಬೇಕು ಎಂದರು.

ಕಲಬುರಗಿಯ ಇಂಡಿಯನ್ ಕ್ಯಾನ್ಸರ್ ಸೊಸೈಟಿ ಪ್ರಾದೇಶಿಕ ವಿಭಾಗದ ಪ್ರತಿನಿಧಿ ಗುರುರಾಜ್ ಕುಲಕರ್ಣಿ ಮಾತನಾಡಿ, ತಂಬಾಕು ಉತ್ಪನ್ನಗಳಿಂದ ದೂರವಿರುವಂತೆ, ತಂಬಾಕು ಮುಕ್ತ ಸಮಾಜ ನಿರ್ಮಾಣಕ್ಕೆ ಶ್ರಮಿಸುವಂತೆ ಪ್ರತಿಜ್ಞಾವಿಧಿ ಬೋಧಿಸಿದರು.

ಬೃಹತ್ ಜಾಗೃತಿ ಜಾಥಾಕ್ಕೆ ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಖಾದರ್ ಸಾಬ್ ಹುಸೇನ್ ಸಾಬ್ ಬೆನಕಟ್ಟಿ, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಉಚಿತ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅರವಿಂದ ಹಾಗರಗಿ, ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದ ಅಧಿಕಾರಿ ಡಾ.ರಾಜೇಶ್ವರಿ ಗೋಲಗೇರಿ ಜಂಟಿಯಾಗಿ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಎನ್. ಆರ್.ಭಗವಾನ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಜಿ.ಎಂ. ಕೋಳೂರು, ಜಿಲ್ಲಾ ತಂಬಾಕು ನಿಯಂತ್ರಣ ಘಟಕದ ಜಿಲ್ಲಾ ಸಲಹೆಗಾರ ಡಾ. ಪ್ರಕಾಶ ಚವ್ಹಾಣ, ಶ್ರೀಕಾಂತ ಪೂಜಾರ ಇದ್ದರು.

ರೈಲ್ವೆ ನಿಲ್ದಾಣದಿಂದ ಬಸವನಬಾಗೇವಾಡಿಗೆ ಬಸ್ ಸಂಚಾರ ಆರಂಭಿಸಲು ಆಗ್ರಹ

ಬಸವನಬಾಗೇವಾಡಿ: ಬಸವನ ಬಾಗೇವಾಡಿ ರೋಡ್(ತೆಲಗಿ) ರೈಲ್ವೆ ನಿಲ್ದಾಣದಿಂದ ಬಸವನಬಾಗೇವಾಡಿ ಪಟ್ಟಣಕ್ಕೆ ರಾತ್ರಿ ಹಾಗೂ ಮುಂಜಾನೆ ವೇಳೆಯಲ್ಲಿ ಹೊಸ ಬಸ್ ಸಂಚಾರ ಆರಂಭಿಸುವಂತೆ ಆಗ್ರಹಿಸಿ ರಾಷ್ಟ್ರೀಯ ಬಸವಸೈನ್ಯ ಸಂಘಟನೆಯ ವತಿಯಿಂದ ಮಂಗಳವಾರ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಘಟಕ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಿದರು.

ಬಸವಸೈನ್ಯದ ಸಂಸ್ಥಾಪಕ ಅಧ್ಯಕ್ಷರಾದ ಶಂಕರಗೌಡ ಬಿರಾದಾರ ಮಾತನಾಡಿ, ಹುಬ್ಬಳ್ಳಿಯಿಂದ ರಾತ್ರಿ ವೇಳೆ ಬರುವ ರೈಲಿನಲ್ಲಿ ತೆಲಗಿ ನಿಲ್ದಾಣಕ್ಕೆ ಇಳಿಯುವ ಪ್ರಯಾಣಿಕರು, ಮಹಿಳೆಯರು, ರೈತರು ಹಾಗೂವಿದ್ಯಾರ್ಥಿಗಳಿಗೆಬಸವನಬಾಗೇವಾಡಿ ಪಟ್ಟಣ ಸೇರಿದಂತೆ ಮುತ್ತಗಿ, ತಾಳಿಕೋಟೆ ಮತ್ತು ಮುದ್ದೇಬಿಹಾಳ ಭಾಗಗಳಿಗೆ ತೆರಳಲು ರಾತ್ರಿ 8:30ರ ಸುಮಾರಿಗೆ ಯಾವುದೇ ಬಸ್ ಸೌಲಭ್ಯವಿರಲಿಲ್ಲ. ಇದರಿಂದಾಗಿ ಸಾರ್ವಜನಿಕರು ಅನಿವಾರ್ಯವಾಗಿ ರೈಲ್ವೆ ನಿಲ್ದಾಣದಲ್ಲೇ ಇಡೀ ರಾತ್ರಿ ಕಳೆಯಬೇಕಾದ ದುಸ್ಥಿತಿಯಿತ್ತು ಅದೇ ರೀತಿ ಮುಂಜಾನೆ ವೇಳೆ ರೈಲು ಹಿಡಿಯಲು ಪಟ್ಟಣದಿಂದ ನಿಲ್ದಾಣಕ್ಕೆ ಹೋಗುವವರಿಗೂ ಸಾರಿಗೆ ತೊಂದರೆಯಾಗಿತ್ತು ಎಂದು ತಿಳಿಸಿದರು.

ಸಾರ್ವಜನಿಕರ ಈ ಸಮಸ್ಯೆ ಮನಗಂಡ ಬಸವನಬಾಗೇವಾಡಿ ಡಿಪೋ ಮ್ಯಾನೇಜರರು ಕೇವಲ ಎರಡು ದಿನಗಳಲ್ಲಿ ಈ ನಿಯೋಜಿತ ಸಮಯಗಳಲ್ಲಿ ಹೊಸ ಬಸ್ ಸಂಚಾರವನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಲಾಗುವುದು ಎಂದು ನಿಯೋಗಕ್ಕೆ ಭರವಸೆ ನೀಡಿದರು.



ಒಂದು ವೇಳೆ ಕೊಟ್ಟ ಭರವಸೆಯಂತೆ ಎರಡು ದಿನಗಳಲ್ಲಿ ಬಸ್ ಸಂಚಾರ ಆರಂಭವಾಗದಿದ್ದರೆ, ತಾಲೂಕಿನ ಸಮಸ್ತ ಜನತೆಯೊಂದಿಗೆ ಸೇರಿ ಹೋರಾಟ ಮಾಡುವುದು ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಸಂಘಟನೆಯ ಸಂಚಾಲಕರಾದ ಶ್ರೀಕಾಂತ ಕೊಟ್ರಶೆಟ್ಟಿ, ಮನ್ನಾನ ಶಾಬಾದಿ, ಪ್ರಶಾಂತ ಮುಂಜಾನೆ, ಆನಂದ ವನರೊಟ್ಟಿ, ಸಂಗಮೇಶ ಜಾಲಗೇರಿ, ಸಂಗಮೇಶ ಮೈಲೇಶ್ವರ, ಮಹೇಶ ಹಿರೇಕುರುಬರ, ಭದ್ರಣ್ಣ ಮಣ್ಣೂರ, ರಾಜು ಹಡಪದ ಸೇರಿ ಇತರರು ಇದ್ದರು.

ಬೆಳೆ ವಿಮೆ ಪರಿಹಾರ ಅವೈಜ್ಞಾನಿಕ ಬಿಡುಗಡೆ ಖಂಡಿಸಿ ಪ್ರತಿಭಟನೆ

ವಿಜಯಪುರ: 2025-26ನೇ ಸಾಲಿನ ಮುಂಗಾರು ಹಂಗಾಮಿನ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ ತೊಗರಿ ಬೆಳೆಯ ಮಧ್ಯಂತರ ಬೆಳೆ ವಿಮೆ ಪರಿಹಾರ ಅವೈಜ್ಞಾನಿಕವಾಗಿ ಬಿಡುಗಡೆ ಮಾಡಿರುವುದನ್ನು ಮರು ಪರಿಶೀಲಿಸಬೇಕು ಎಂದು ಒತ್ತಾಯಿಸಿ ಅಖಂಡ ಕರ್ನಾಟಕ ರೈತ ಸಂಘ, ಜಿಲ್ಲೆಯ ರೈತರ ವತಿಯಿಂದ ನಗರದ ಸಿದ್ದೇಶ್ವರ ದೇವಸ್ಥಾನ ರಸ್ತೆ ಬಳಿಯ ವಿಮೆ ಕಂಪನಿ ಕಚೇರಿಯ ಎದುರು ಪ್ರತಿಭಟನೆ ನಡೆಸಲಾಯಿತು.

ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರಧಾನ ಅರವಿಂದ ಕುಲಕರ್ಣಿ ಮಾತನಾಡಿ, 2025- 26 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ವಿಜಯಪುರ ಜಿಲ್ಲೆಯಲ್ಲಿ ಸರ್ಕಾರ ಗುರುತುಪಡಿಸಿದ ಬೆಳೆ ವಿಮಾ ಕಂಪನಿಯಾದ ಓರಿಯೆಂಟಲ್ ಇನ್ಶೂರೆನ್ಸ್ ಕಂಪನಿಗೆ ಜಿಲ್ಲೆಯ ರೈತರು ಬೆಳೆವಿಮೆ ಕಂತನ್ನು ಬರೆಸಿದ್ದು, ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಾದ್ಯಂತ ಅತಿವೃಷ್ಟಿಯಿಂದಾಗಿ ಬಿತ್ತಿದ ಬೆಳೆ ಎಲ್ಲವೂ ನೀರು ಪಾಲಾಗಿ ರೈತರಿಗೆ ಭರಿಸಲಾರದ ನಷ್ಟ ಸಂಭವಿಸಿದೆ. ಇಂತಹ ತುರ್ತು ಸಂದರ್ಭದಲ್ಲಿ ಗೊತ್ತುಪಡಿಸಿದ ಬೆಳೆ ವಿಮಾ ಕಂಪನಿ ಹಾಗೂ ಸರ್ಕಾರರೈತರನೆರವಿಗೆಧಾವಿಸಬೇಕಾಗಿರುವುದು ಜವಾಬ್ದಾರಿಯಾಗಿರುತ್ತದೆ ಎಂದರು.

ಮಧ್ಯಂತರಪರಿಹಾರಜಿಲ್ಲಾಡಳಿತದಘೋಷಣೆ ಪ್ರಕಾರ ಶೇ. 25 ಪ್ರತಿಶತ ಮೊತ್ತ ಅಂದರೆ 4800 ದಿಂದ 5000 ರೂ. ವರೆಗೆ ಭರಿಸಬೇಕು. ವಿಮಾ ಕಂಪನಿ ಈಗ ಬಿಡುಗಡೆಗೊಳಿಸಿದ್ದು, ಪ್ರತಿ ಎಕರೆಗೆ 1000 ರೂ ಗಳಿಂದ 2800 ರೂ. ಗಳಿಗೆ ಮಾತ್ರ ವಿಮಾ ಕಂಪನಿಯು ವಯಕ್ತಿಕ ಸಮೀಕ್ಷೆಯನ್ನು ಪರಿಗಣಿಸದೇ ಜಿಲ್ಲಾಡಳಿತದ ಆದೇಶದ ಪ್ರಕಾರ ಜಂಟಿ ಸರ್ವೆ ಕೈಗೊಂಡಿದ್ದು, ಘೋಷಣೆಯ ಪ್ರಕಾರ ಎಲ್ಲ ರೈತರಿಗೂ ಶೇ. 25 ಪ್ರತಿಶತ ನಷ್ಟದ ಪರಿಹಾರವನ್ನು ಬಿಡುಗಡೆ ಗೊಳಿಸಬೇಕು. ಅಂದರೆ ಪ್ರತಿ ರೈತನಪ್ರತಿ ಎಕರೆಗೆ ಕನಿಷ್ಠ 5000 ರೂ. ಗಳನ್ನು ಮಧ್ಯಂತರ ಬೆಳೆ ವಿಮೆ ಪರಿಹಾರದ ಹಣವನ್ನು ಬಿಡುಗಡೆಗೊಳಿಸಬೇಕು ಎಂದು ಆಗ್ರಹಿಸಿದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ ಅವರಿಗೆ ಮನವಿ ಸಲ್ಲಿಸಲಾಯಿತು. ಓರಿಯಂಟಲ್ ಇನ್ಶೂರನ್ಸ್ ಕಂಪನಿಯ ಜಿಲ್ಲಾ ಉಸ್ತುವಾರಿ ಸಂಪತಕುಮಾರ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಜೂನ್ 15 ರೊಳಗಾಗಿ ಒಳಗಡೆ ಬಾಕಿ ಉಳಿದ ಪರಿಹಾರ ಮೊತ್ತ ಬಿಡುಗಡೆ ಮಾಡಲಾಗುವುದೆಂದು ಭರವಸೆ ನೀಡಿದರು.

ಬಾಲಪ್ಪಗೌಡ ಲಿಂಗದಳ್ಳಿ, ರಾಮನಗೌಡ ಹಾದಿಮನಿ, ವಿಠ್ಠಲ ಬಿರಾದಾರ, ಮಡಿವಾಳಪ್ಪ ಕಲಬುರ್ಕಿ, ಬಸನಗೌಡ ಪಾಟೀಲ, ಬಸವಪ್ರಭ ಪಾಟೀಲ, ಸಂಗಣ್ಣ ಉಪ್ಪಲದಿನ್ನಿ, ಮಾಳಪ್ಪ ವಾಲಿಕಾರ, ಪ್ರವೀಣ ಉಪ್ಪಲದಿನ್ನಿ ಇದ್ದರು.



ಯಶವಂತರಾಯಗೌಡಗೆ ಸಚಿವ ಸ್ಥಾನ ನೀಡಲು ಆಗ್ರಹಿಸಿ ಪ್ರತಿಭಟನೆ

ಇಂಡಿ: ಶಾಸಕ ಯಶವಂತರಾಯಗೌಡ ಪಾಟೀಲ ಅವರಿಗೆ ಸಚಿವ ಸ್ಥಾನ ನೀಡಲು ಆಗ್ರಹಿಸಿ ನಗರದ ಬಸವೇಶ್ವರ ವೃತ್ತದಲ್ಲಿ ಬ್ಲಾಕ್ ಕಾಂಗ್ರೆಸ್, ಯುವ ಕಾಂಗ್ರೆಸ್, ಮಹಿಳಾ ಕಾಂಗ್ರೆಸ್ ನೇತೃತ್ವದಲ್ಲಿ ಕಾರ್ಯಕರ್ತರು ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿ ಬೃಹತ್ ಪ್ರತಿಭಟನೆ ಮಾಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಯೋಗೆಪ್ಪ ಚನಗೊಂಡ, ಮಾಜಿ ಅಧ್ಯಕ್ಷ ಜಾವೀದ ಮೋಮಿನ, ಪ್ರಾಧಿಕಾರದ ಅಧ್ಯಕ್ಷ ಅಜೀತ ಧನಶೆಟ್ಟಿ, ಮುಖಂಡ ಹುಚ್ಚಪ್ಪ ತಳವಾರ, ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಪ್ರಶಾಂತ ಕಾಳೆ, ಮಹಿಳಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ನಿರ್ಮಲಾ ತಳಕೇರಿ, ಬಳ್ಳೊಳ್ಳಿ ಬ್ಲಾಕ್ ಅಧ್ಯಕ್ಷ ಬಿ.ಸಿ.ಸಾಹುಕಾರ, ನಗರ ಘಟಕದ ಅಧ್ಯಕ್ಷ ಶ್ರೀಕಾಂತ ಕುಡಿಗನೂರ, ಮುಖಂಡ ಮುತ್ತಪ್ಪ ಪೊತೆ ಮಾತನಾಡಿ, ಕ್ಷೇತ್ರ ಅಭಿವೃದ್ಧಿ ಕಂಡಿಲ್ಲ. ಶಾಸಕ ಯಶವಂತರಾಯಗೌಡಗೆ ಸಚಿವ ಸ್ಥಾನ ನೀಡಬೇಕು ಎಂದು ಸ್ಥಳೀಯ ಕಾಂಗ್ರೆಸ್ ಮುಖಂಡರು ಹಕ್ಕೊತ್ತಾಯ ನಡೆಸಿದರು.

ನೀಲಕಂಠಗೌಡ ಪಾಟೀಲ, ಸಿದ್ದರಾಮಗೌಡ ಬಿರಾದಾರ, ಎಂ.ಆರ್.ಪಾಟೀಲ ಗೊಳಸಾರ, ಶಿವಾನಂದ ರಾವೂರ, ಚಂದಣ್ಣ ಆಲಮೇಲ, ಹುಚ್ಚಪ ತಳವಾರ, ಪ್ರಶಾಂತ ಕಾಳೆ, ಅವಿನಾಶ ಬಗಲಿ,



ನಿರ್ಮಲಾ ತಳಕೇರಿ, ಭೀಮಾಶಂಕರ ಮೂರಮನ, ಮಲ್ಲು ಮಡ್ಡಿಮನಿ, ಸಣ್ಣಪ್ಪ ತಳವಾರ, ಶೇಖರ ನಾಯಕ, ರೈಸ್ ಅಶ್ವೇಕರ, ಬಿ.ಸಿ.ಸಾಹುಕಾರ, ನಾಗೇಂದ್ರ ಮೇತ್ರಿ, ಆಸೀಪ್ ಕಾರಬಾರಿ, ಗಣೇಶ ರಾಠೋಡ, ಸುನೀಲ ರಾಠೋಡ, ಜೀತಪ್ಪ ಕಲ್ಯಾಣಿ, ಶಿವಯೋಗಪ್ಪ ಚನಗೊಂಡ, ರಾಜಶೇಖರ ನಾಟಿಕಾರ, ಭೀಮಣ್ಣ ಕವಲಗಿ, ಚಂದು ಸೊನ್ನ, ಶ್ರೀಕಾಂತ ಕುಡಿಗನೂರ, ಲಕ್ಕಪ್ಪ ಪೂಜಾರಿ, ಜೈನುದ್ದಿನ ಬಾಗವಾನ, ಮುಸ್ತಾಕ ಇಂಡಿಕರ, ಮಹೇಶ ಹೊನ್ನಬಿಂದಗಿ,ಯಲ್ಲಪ್ಪ ಬಂಡೆನವರ, ಜಹಾಂಗೀರ ಸೌದಾಗರ, ರಾಜು ಕುಲಕರ್ಣಿ, ಮಿಲೀಂದ ಹೊಸಮನಿ ಇದ್ದರು.

ಎಲ್ಲೆಂದರಲ್ಲಿ ಕಸದ ರಾಶಿ ಹಾಕಬೇಡಿ: ಆರೋಗ್ಯ ನಿರೀಕ್ಷಕ ವಂದಾಲ

ಬಸವನಬಾಗೇವಾಡಿ: ಮನೆಯಿಂದ ತೆಗೆಯುವ ಕಸದ ರಾಶಿಯನ್ನು ಎಲ್ಲಿ ಬೇಕಾದಲ್ಲಿ ಹಾಕದೆ ಅದನ್ನು ತಗೆದು ಇಟ್ಟುಕೊಂಡು ಪುರಸಭೆಯಿಂದ ಬರುವ ಕಸ ವಿಲೇವಾರಿ ಮಾಡುವ ಗಾಡಿಗೆ ಹಾಕಿ ಪುರಸಭೆ ಸಿಬ್ಬಂದಿಗಳಿಗೆ ಸಹಕಾರ ನೀಡಬೇಕೆಂದು ಹಿರಿಯ ಆರೋಗ್ಯ ನಿರೀಕ್ಷಕ ವಿಜಯಕುಮಾರ ವಂದಾಲ ಹೇಳಿದರು.

ಪಟ್ಟಣದ ಆಲಮಟ್ಟಿ ರಸ್ತೆಯಲ್ಲಿರುವ ಎಲ್ಐಸಿ ಕಚೇರಿ ಪಕ್ಕದಲ್ಲಿ ಕಸ ತುಂಬಿದ ಜಾಗೆಯಲ್ಲಿ ಪುರಸಭೆಯವರು ಗಿಡಗಳನ್ನು ನೆಟ್ಟು ಹಾಗೂ ಒಣಗಿದ ಗಿಡಕ್ಕೆ ಹಾಗೂ ಹಾಳಾದ ವಾಹನ ಟಾಯರ್‌ಗಳಿಗೆ, ನೀರಿನ ಬಾಟಲ್ ಗಳಿಗೆ ವಿವಿಧ ತರಹದ ಬಣ್ಣಗಳನ್ನು ತುಂಬಿ ಜನರಿಗೆ ಆಕರ್ಷಿಸುವ ರೀತಿಯಲ್ಲಿ ಮಾಡಿ ಅಲ್ಲಿನ ಜನರಿಗೆ ಕಸ ವಿಲೇವಾರಿ ಕುರಿತು ಮಾಹಿತಿ ನೀಡಿ ಮಾತನಾಡಿದ ಅವರು, ಕೊಳೆಯುವ ಕಸವನ್ನು ಹಸಿ ಕಸವೆಂದು, ಕೊಳೆಯದೆ ಇರುವ ಕಸವನ್ನು ಒಣ ಕಸವೆಂದು ಬೇರ್ಪಡಿಸಿ ಕಸ ವಿಲೇವಾರಿ ಗಾಡಿಗೆ ನೀಡುವಂತೆ ಹೇಳಿ ಒಂದು ವೇಳೆ ಗಾಡಿ ಬಾರದೇ ಇದ್ದಲಿ ಕಸವನ್ನು ಕೂಡಿಯಿಟ್ಟು ಮರುದಿನ ಕಸದ ಗಾಡಿಗೆ ನೀಡಿ ನಿಮ್ಮ ಮನೆ ಅಂಗಳವನ್ನು ಸ್ವಚ್ಛವಾಗಿಟ್ಟುಕೊಂಡಲ್ಲಿ ಸುಂದರ ವಾತಾವರಣ ನಿರ್ಮಿಸಲು ಸಾಧ್ಯ ಎಂದು ಹೇಳಿದರು.



ಕಂದಾಯ ನಿರೀಕ್ಷಕ ಶಬ್ಬೀರ ರೇವೂರಕರ, ಆರೋಗ್ಯ ನಿರೀಕ್ಷಕ ಮಹೇಶ ಹಿರೇಮಠ ಮಾತನಾಡಿದರು. ವ್ಯವಸ್ಥಾಪಕ ಸುರೇಶ ಬಾಗೇವಾಡಿ, ಅಭಿಯಂತರರಾದ ಮಹಾದೇವ ಜಬಂಗಿ, ಸಮುದಾಯದ ಸಂಚಾಲಕರಾದ ಭಾಗೀರಥಿ ಕೊಡಗೂಳಿ, ವಿದ್ಯಾಶ್ರೀ ಮಸಬಿನಾಳ, ಹೇಮಾ ಹೊಸಮನಿ, ಕವಿತಾ ರಜಪೂತ, ರೇಖಾ ಭಜಂತ್ರಿ, ಆನಂದ ಮಾದರ, ರಾವುತ ಮ್ಯಾಗೇರಿ, ರಮೇಶ ಕೊಡಗೂಳಿ, ನಾಸಿರ್ ಕಡಣಿ ಸೇರಿದಂತೆ ಬಸವ ನಗರದ ನಿವಾಸಿಗಳು ಇದ್ದರು.

ನಾಗರಿಕ ಪೌರತ್ವ ತರಬೇತಿ ಶಿಬಿರ



ವಿಜಯಪುರ: ಉತ್ತಮ ನಾಗರಿಕರ ನಿರ್ಮಾಣದಲ್ಲಿ ಪೌರತ್ವ ಶಿಕ್ಷಣವು ಪ್ರಮುಖ ಪಾತ್ರ ವಹಿಸುತ್ತದೆ ಎಂದು ಮಹಿಳಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ ಹೇಳಿದರು.

ನಗರದ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಶಿಕ್ಷಣ ಅಧ್ಯಯನ ವಿಭಾಗ ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ ಮಂಗಳವಾರ ನಡೆದ ನಾಗರಿಕ ಪೌರತ್ವ ತರಬೇತಿ ಶಿಬಿರದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ದೇಶದ ನಾಗರಿಕ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಅರಿವು ಹೊಂದುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶಿಕ್ಷಣ ನಿಕಾಯದ ಡೀನ್ ಪ್ರೊ.ಸಕ್ಪಾಲ ಹೂವಣ್ಣ ಮಾತನಾಡಿ, ಪ್ರಜಾಪ್ರಭುತ್ವದ ಯಶಸ್ಸಿಗೆ ಜವಾಬ್ದಾರಿಯುತ ನಾಗರಿಕರ ಪಾತ್ರ ಮಹತ್ವದ್ದಾಗಿದ್ದು, ವಿದ್ಯಾರ್ಥಿಗಳು ಸಮಾಜಮುಖಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದರು.

ಶಿಕ್ಷಣ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ಅಶೋಕಕುಮಾರ ಸುರಪುರ ಮಾತನಾಡಿ, ಶಿಬಿರದ ಉದ್ದೇಶಗಳನ್ನು ವಿವರಿಸಿ, ಭಾವೈಕ್ಯತೆ ಹಾಗೂ ಸಮೂಹ ಜೀವನದ ಮಹತ್ವವನ್ನು ತಿಳಿಸಿದರು. ಪ್ರೊ.ಯು.ಕೆ.ಕುಲಕರ್ಣಿ, ಡಾ.ಪ್ರಕಾಶ ಸಣ್ಣಕ್ಕನವರ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

ಉಪಪ್ರಾಚಾರ್ಯರಾಗಿ ಬೂದಿಹಾಳ ಪದೋನ್ನತಿ

ತಾಳಿಕೋಟೆ: ಪಟ್ಟಣದ ಪ್ರತಿಷ್ಠಿತ ವೀರಶೈವ ವಿದ್ಯಾವರ್ಧಕ ಸಂಘದ ಎಸ್ ಕೆ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಉಪಪ್ರಾಚಾರ್ಯ ಹುದ್ದೆಗೆ ಆರ್.ಎಸ್.ಬೂದಿಹಾಳ ಅವರು ಪದೋನ್ನತಿ ಪಡೆದು ಅಧಿಕೃತವಾಗಿ ಅಧಿಕಾರ ಸ್ವೀಕರಿಸಿದರು.

ಕಳೆದ 1997ರಿಂದ ಇದೇ ಪ್ರೌಢಶಾಲೆಯಲ್ಲಿ ಅತ್ಯಂತ ಯಶಸ್ವಿಯಾಗಿ ವಿಜ್ಞಾನ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಾ ಬಂದಿರುವ ಇವರ ಸುದೀರ್ಘ ಸೇವೆಯನ್ನು ಪರಿಗಣಿಸಿ, ಈ ಜವಾಬ್ದಾರಿಯನ್ನು ನೀಡಲಾಗಿದೆ. ಈ ಹಿಂದೆ ಉಪಪ್ರಾಚಾರ್ಯರಾಗಿದ್ದ ಜೆ.ಎಸ್.ಕಟ್ಟಿಮನಿ ಅವರು ವಯೋನಿವೃತ್ತಿ ಹೊಂದಿದ್ದರಿಂದ ತೆರವಾಗಿದ್ದ ಸ್ಥಾನಕ್ಕೆ ಬೂದಿಹಾಳ ಅವರನ್ನು ನೇಮಕ ಮಾಡಲಾಗಿದೆ.

ಸಂಸ್ಥೆಯ ಉಪಾಧ್ಯಕ್ಷ ಕೆ.ಎಸ್.ಮುರಾಳ, ಕಾರ್ಯದರ್ಶಿ ಎಂ.ಎಸ್. ಸರಶೆಟ್ಟಿ, ಸಹಕಾರ್ಯದರ್ಶಿ ಆರ್.ಸಿ.ಪಾಟೀಲ, ಪದವಿ ಪೂರ್ವ ಕಾಲೇಜು ಚೇರಮನ್ ಎಂ.ಆರ್.ಕತ್ತಿ ಹಾಗೂ ಪ್ರೌಢಶಾಲಾ ಚೇರಮನ್ ಎಂ.ಸಿ.ಕತ್ತಿ, ಉಪನ್ಯಾಸಕ ಎಸ.ಎಸ್.ನೆಲ್ಲಗಿ, ಬಾಲಕಿಯರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಡಾ.ಅನಿಲಕುಮಾರ ಇರಾಜ ಸೇರಿದಂತೆ ಕಾಲೇಜಿನ ಹಾಗೂ ಶಾಲೆಯ ಶಿಕ್ಷಕರು, ಶಿಕ್ಷಕಿಯರು ಮತ್ತು ಸಿಬ್ಬಂದಿ ಇದ್ದರು.



ಪಾಲಕರ ಋಣ ತೀರಿಸುವುದು ಅಸಾಧ್ಯ



ವಿಜಯಪುರ: ತಾಯಿ-ತಂದೆ ಋಣ ತೀರಿಸುವುದು ಅಸಾಧ್ಯ, ದಾಸೋಹ ಮತ್ತು ಪರೋಪಕಾರ ಮಾಡುವುದರ ಮೂಲಕ ತಂದೆ-ತಾಯಿ, ಗುರು- ಹಿರಿಯರ ಋಣಭಾರದಿಂದ ಸ್ವಲ್ಪಮಟ್ಟಿನ ಮುಕ್ತಿ ಪಡೆಯಬಹುದು ಎಂದು ಪ್ರೊ.ಬಸವರಾಜ ಕಡ್ಡಿ ಹೇಳಿದರು.

ನಗರದ ವೀರಶೈವ ಲಿಂಗಾಯತ ಮಹಾಸಭಾ ಭವನದಲ್ಲಿ ಹಮ್ಮಿಕೊಂಡ ಲಿಂ.ಪಾರ್ವತಿ ಗುರುಪಾದಪ್ಪ ಕೋರಿ ಅವರ ಸ್ಮರಣಾರ್ಥದ ದತ್ತಿ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿ, ಮಾತನಾಡಿದರು. ಮಾನವನ ವಿಚಾರಧಾರೆ ಸಕಾರಾತ್ಮಕವಾಗಿದ್ದರೆ ಏನೆಲ್ಲ ಸಾಧನೆಯನ್ನು ಮಾಡಬಹುದು. ಲೋಕದೊಳಗೆ ಹುಟ್ಟಿ ಬಂದ ಮೇಲೆ ಸ್ತುತಿ, ನಿಂದನೆಗಳೇನೇ ಬಂದರೂ ಧನಾತ್ಮಕ ಚಿಂತನೆಯತ್ತ ಪಯಣಿಸಬೇಕೆಂದು ಹೇಳಿದರು.

ಹಿರಿಯರಾದ ವಿ.ಸಿ.ನಾಗಠಾಣ ಅಧ್ಯಕ್ಷತೆ ವಹಿಸಿದ್ದರು. ಈಶ್ವರಪ್ಪ ಕೋರಿ, ಕೋರಿ ಜಗದೀಶ, ದೊಡ್ಡಣ್ಣ ಬಜಂತ್ರಿ, ಶಶಿಕಾಂತ ಸಾತಿಹಾಳ, ಸುಜಾತಾ ಪಾಟೀಲ, ಎಸ್.ಎಸ್.ಪಾಟೀಲ, ಪ್ರೊ.ಬಿ.ಜಗದೀಶ, ಎಸ್ .ಬಿ.ದೊಡಮನಿ, ಎಸ್.ವೈ.ಗದಗ, ಡಾ.ವಿ.ಡಿ.ಐಹೊಳ್ಳಿ, ಜಂಬುನಾಥ ಕಂಚ್ಯಾಣಿ, ಈರಣ್ಣ ತೊಂಡಿಕಟ್ಟಿ, ಮ.ಗು.ಯಾದವಾಡ ಇದ್ದರು.

ಸಿಬ್ಬಂದಿ ಕೊರತೆ: ಗ್ರಾಮಸ್ಥರಿಗೆ ತೊಂದರೆ

ದೇವರಹಿಪ್ಪರಗಿ: ತಾಲೂಕಿನ ಕೊಂಡಗೂಳಿ ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಗ್ರಾಮೀಣ ಬ್ಯಾಂಕ್ ಶಾಖೆಯಲ್ಲಿ ತೀವ್ರ ಸಿಬ್ಬಂದಿ ಕೊರತೆಯಿಂದಾಗಿ ಗ್ರಾಹಕರು ಮತ್ತು ರೈತರು ಪ್ರತಿನಿತ್ಯ ಪರದಾಡುವಂತಾಗಿದೆ. ಸುಮಾರು 20 ವರ್ಷಗಳ ಇತಿಹಾಸವಿರುವ ಬ್ಯಾಂಕ್ ಶಾಖೆಯು ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರಿಗೆ ಸೂಕ್ತ ಸೇವೆ ನೀಡುವಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೊಂಡಗೂಳಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುವ ಹಂಚಲಿ, ಬಿ.ಬಿ ಇಂಗಳಗಿ, ನಾಗರಾಳ ಡೋಣ, ಅಂಬಳನೂರ, ಕಡಕೊಳ, ಬೂದಿಹಾಳ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಸುಮಾರು 25 ಸಾವಿರಕ್ಕೂ ಹೆಚ್ಚು ಗ್ರಾಹಕರು ತಮ್ಮ ಬ್ಯಾಂಕಿಂಗ್ ವ್ಯವಹಾರಗಳಿಗಾಗಿ ಬೇರೆ ಯಾವುದೆ ರಾಷ್ಟ್ರೀಕೃತ ಬ್ಯಾಂಕ್ ಇಲ್ಲದೆ ಇದೇ ಶಾಖೆಯ ಸಂಪೂರ್ಣ ಅವಲಂಬಿಸಿದ್ದಾರೆ. ಪ್ರಸ್ತುತ ಮುಂಗಾರು ಹಂಗಾಮು ಆರಂಭವಾಗುತ್ತಿದ್ದು, ರೈತರು ಬಿತ್ತನೆ ಬೀಜ, ಗೊಬ್ಬರ ಹಾಗೂ ಇತರ ಕೃಷಿ ಕಾರ್ಯಗಳಿಗಾಗಿ ಸಾಲ ಸೌಲಭ್ಯ ಪಡೆಯಲು ಮತ್ತು ಹಣದ ವಹಿವಾಟು ನಡೆಸಲು ಪ್ರತಿದಿನ ಬ್ಯಾಂಕಿಗೆ ಅಲೆಯುತ್ತಿದ್ದಾರೆ ಎಂದು ಕೊಂಡಗೂಳಿ ಗ್ರಾಮದ ಬಾಬು ನದಾಫ, ಶೀವು ಕೊಳ್ಳಾರಿ, ಕನಕರೆಡ್ಡಿ ಮಲ್ಲಾಬಾದಿ ಹೇಳುತ್ತಾರೆ.

ಸಿಬ್ಬಂದಿ ಕೊರತೆ ಸರಿಪಡಿಸುವಂತೆ ವಿಜಯಪುರದ ಪ್ರಾದೇಶಿಕ ಕಚೇರಿ ಹಾಗೂ ಕೇಂದ್ರ ಕಚೇರಿಗಳಿಗೆ ಈಗಾಗಲೇ ಹಲವು ಬಾರಿ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಗಮನಹರಿಸಿ, ಈ ಶಾಖೆಗೆ ಅಗತ್ಯವಿರುವ ಸಿಬ್ಬಂದಿಗಳನ್ನು ನಿಯೋಜಿಸದಿದ್ದರೆ ಮುಂಬರುವ ದಿನಗಳಲ್ಲಿ ಗ್ರಾಹಕರು ಹಾಗೂ ರೈತರು ಒಗೂಡಿ ಬ್ಯಾಂಕ್ ಎದುರು ತೀವ್ರ ಪ್ರತಿಭಟನೆ ನಡೆಸುವುದಾಗಿ ಪ್ರಭು ಡಿಗ್ಗಾವಿ, ಕಾಶಿಲಿಂಗ ಸಿಂದಗೇರಿ, ಮೈಬುಬ ಖಾಜಿ, ತಿಪ್ಪಣ್ಣ ಹೆಬ್ಬಾಳ, ಉದಯ ಕೊಂಡಗೂಳಿಕರ, ಗೌಡು ಗೊಬ್ಬೂರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಿರುಸುದ್ದಿ

ಅಧ್ಯಕ್ಷರಾಗಿ ಚನ್ನಪ್ಪ ಮಳಗಿ ಅವಿರೋಧ ಆಯ್ಕೆ

ಕೊಪ್ಪಳ: ಗಂಗಾವತಿ ತಾಲೂಕು ಒಕ್ಕಲುತನ ಹುಟ್ಟುವಳಿ ಸಹಕಾರಿ ಸಂಘಕ್ಕೆ ಅಧ್ಯಕ್ಷರಾಗಿ ಚನ್ನಪ್ಪ ಮಳಗಿ, ಉಪಾಧ್ಯಕ್ಷ ರಾಗಿ ಕನಕಪ್ಪ ಕನಕಗಿರಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಚಂದ್ರಶೇಖರ ಅವರು ಘೋಷಣೆ ಮಾಡಿದರು. ಮಾಜಿ ಶಾಸಕ ಪರಣ್ಣ ಮುನವಳ್ಳಿ, ಬಸವರಾಜ ಧಡೆಸೂಗೂರು, ಜಿ.ವೀರಪ್ಪ, ಮಾಜಿ ಸಂಸದ ಎಸ್. ಶಿವರಾಮಗೌಡ, ಪ್ರಮುಖರಾದ ಜೋಗದ ನಾರಯಣಪ್ಪ ನಾಯಕ, ಹೊಸಳ್ಳಿ ಶಂಕರಗೌಡ್ರು, ಚಂದ್ರಶೇಖರ ಅಕ್ಕಿ, ಯಾದವ ವಕೀಲರು, ಹನುಮಂತಪ್ಪ ನಾಯಕ, ಶಿವಪ್ಪ ಮಾದಿಗ, ಹನುಮಂತಪ್ಪ ಕೆಸರಟ್ಟಿ ಹಾಗೂ ಸದರಿ ಸಂಸ್ಥೆಯ ನೂತನ ನಿರ್ದೇಶಕ ಚಂದ್ರಶೇಖರ ಅಂಗಡಿ ಯರಡೋಣ ಉಪಸ್ಥಿತರಿದ್ದರು.

ಜಿಲ್ಲಾ ಸಂಚಾಲಕರಾಗಿ ಅವಿರೋಧವಾಗಿ ಆಯ್ಕೆ

ಮುನಿರಾಬಾದ್: ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಬೆಂಗಳೂರು ಕೊಪ್ಪಳ ಜಿಲ್ಲೆ ಉಪನ್ಯಾಸಕರ ಸಂಘ ಕೊಪ್ಪಳ ಘಟಕದಲ್ಲಿ 2026-31ಅವಧಿಗೆ ನಡೆದ ಉಪನ್ಯಾಸಕರ ಚುನಾವಣೆಯಲ್ಲಿ ವಿಜಯನಗರ ಸಂಯುಕ್ತ ಪದವಿ ಪೂರ್ವ ಕಾಲೇಜಿನ ದೈಹಿಕ ಶಿಕ್ಷಣ ಉಪನ್ಯಾಸಕರಾದ ತಿರುಪತಿ ನಾಯಕ ಪಿಲಿಗುಂಡ ಅವರು ಜಿಲ್ಲಾ ಸಂಚಾಲಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಬಸವರಾಜ್ ಪ್ರಾಚಾರ್ಯರು ಹಾಗೂ ಸಿಬ್ಬಂದಿ ಶೆಟ್ರ ಚನ್ನಬಸಪ್ಪ, ಅಂಬಳಿ ವೀರೇಂದ್ರ, ಹನುಮೇಶ, ಭಾರತಿ, ಜ್ಯೋತಿ, ಅನುಪಮ, ಮಂಜು ಹಾಗೂ ಬಂದುಗಳಾದ, ವಿಜೆಯಂದ್ರ ಹುಲಿ ನಾಯಕ ತಶೀಲ್ದಾರರು ಯಾದಗಿರಿ, ವಿರೂಪಾಕ್ಷಿ ಮೇಟಿ ಪಾಟೀಲ್ ಪ್ರಾಚಾರ್ಯರು ಎಸ್ಆರ್‌ಕೆ ಶಿಕ್ಷಣ ಮಹಾವಿದ್ಯಾಲಯ ರಾಯಚೂರು ಸಂಜೀವ್ ತೋಟಗಂಟಿ ಮಾಜಿ ಸೈನಿಕರು ಹುಲಿಗಿ,ಹನುಮಂತರಾಯ ನಾಯಕ ಪಿಲಿಗುಂಡ ರಾಜ್ಯ ಉಪಾಧ್ಯಕ್ಷರು ಕರ್ನಾಟಕ ರಾಜ್ಯ ಕೃಷಿ ಸಂರಕ್ಷಣಾ ಸಂಘ ಬೆಂಗಳೂರು, ಅಮರೇಶ ಕುಪಗಲ್ ಕೆ.ಇರಬಗೇರಾ, ಮಲ್ಲು ಮೇಟಿ ಪಾಟೀಲ್ ಜಾಗಟಗಲ್, ಗಂಗಪ್ಪ ನಾಯಕ ಕೋರವಿಗೌಡ್ರು ಬುದ್ದಿನ್ನಿ, ನಾಗರಾಜ್ ನಾಯಕ ತಿಮ್ಮಾಪುರುಪೇಟೆ, ರವಿ ನಾಯಕ ಹಟ್ಟಿ ಹಾರ್ಲಾಪುರು ಪ್ರಕಾಶ್ ಹರ್ಲಾಪುರು, ನಾಗರಾಜ ಮಹಮ್ಮದ್ ನಗರ, ಮಂಜುನಾಥ ಹುಲಿಗಿ, ಹುಲುಗಪ್ಪ ಬಾಳೆಕಾಯಿ, ರಮೇಶ್ ನಾಯಕ ಕೆಇಬಿ ಲಿಂಗಪೂರು, ವಿನಾಯಕ ನೀರಾವರಿ ಇಲಾಖೆ ಮುನಿರಾಬಾದ್, ಪ್ರಕಾಶ್ ಜಾನು ಮುನಿರಾಬಾದ್, ರಾಜಾಹುಸೇನ್ ಜವಳಿ ಹುಲಿಗಿ,ಮಾರುತೇಶ್ ಹುಲಿಗಿ ಅಮೀರ್ ಪಾಷಾ ಅಭಿನಂದನೆ ಸಲ್ಲಿಸಿದರು.

ದಲಿತರಿಗೆ ಅಧಿಕಾರ ನೀಡದೆ ದ್ರೋಹ ಬಗೆದ ಕಾಂಗ್ರೆಸ್

ಕಲಬುರಗಿ: ಕಾಂಗ್ರೆಸ್‌ಗೆ ಅಧಿಕಾರಕ್ಕೆ ಬರಲು ದಲಿತರ ಮತಗಳು ಬೇಕು.ಆದರೆ, ಮುಖ್ಯಮಂತ್ರಿ ಸ್ಥಾನ ನೀಡುವ ಸಂದರ್ಭ ಬಂದಾಗ ಮಾತ್ರ ದಲಿತ ನಾಯಕರನ್ನು ಕಡೆಗಣಿಸಿ ದಲಿತ ಸಮುದಾಯಕ್ಕೆ ಕಾಂಗ್ರೆಸ್ ನಿರಂತರ ದ್ರೋಹ ಮಾಡುತ್ತಿದೆ ಎಂದು ಬಿಜೆಪಿ ಯುವ ಮೋರ್ಚಾ ನಾಯಕ,ದಲಿತ ಚಳವಳಿ ಸಂಚಾಲಕ ಶಿವ ಅಷ್ಠಗಿ ಆರೋಪಿಸಿದರು.



1980ರಲ್ಲಿ ಅಂದಿನ ಪ್ರಭಾವಿ ದಲಿತ ನಾಯಕ ಬಿ. ಬಸಲಿಂಗಪ್ಪ ಅವರಿಗೆ ಕೊನೆಯ ಘಳಿಗೆಯಲ್ಲಿ ಮುಖ್ಯಮಂತ್ರಿ ಹುದ್ದೆ ತಪ್ಪಿಸಿ ಅನ್ಯಾಯ,1999ರಲ್ಲಿ ಐದು ವರ್ಷಗಳ ಕಾಲ ವಿರೋಧ ಪಕ್ಷದ ನಾಯಕರಾಗಿ ಸಮರ್ಥವಾಗಿ ಕಾರ್ಯನಿರ್ವಹಿಸಿ ಪಕ್ಷವನ್ನು ಮುನ್ನಡೆಸಿದ್ದ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕಡೆಗಣಿಸಿ, ಕೇವಲ ನಾಲ್ಕು ತಿಂಗಳ ಹಿಂದೆ ಕೆಪಿಸಿಸಿ ಅಧ್ಯಕ್ಷರಾಗಿದ್ದ ಮತ್ತೊಬ್ಬರನ್ನು ಮುಖ್ಯಮಂತ್ರಿ ಮಾಡಿ ಮತ್ತೊಮ್ಮೆ ಅನ್ಯಾಯ ಮಾಡಿತು.2013ರಲ್ಲಿ ಕೆಪಿಸಿಸಿ ಅಧ್ಯಕ್ಷರಾಗಿ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದ ಡಾ. ಜಿ. ಪರಮೇಶ್ವರ್ ಅವರನ್ನು ರಾಜಕೀಯ ಕುತಂತ್ರದಿಂದ ಸೋಲಿಸಿ ಮುಖ್ಯಮಂತ್ರಿ ಹುದ್ದೆಯಿಂದ ದೂರವಿರಿಸಿ ದಲಿತ ಸಮುದಾಯವನ್ನು ವಂಚಿಸಿದೆ ಎಂದು ಅಷ್ಠಗಿ ಆರೋಪಿಸಿದರು.

ಕಾಂಗ್ರೆಸ್ ದಲಿತರನ್ನು ಕೇವಲ ಮತಬ್ಯಾಂಕ್ ಆಗಿ ಬಳಸಿಕೊಳ್ಳುತ್ತಿದೆ. ಡಾ. ಅಂಬೇಡ್ಕರ್ ರವರು ಕಾಂಗ್ರೆಸ್‌ನ ಕುಟಿಲ ನೀತಿಯನ್ನು ಅರ್ಥ ಮಾಡಿಕೊಂಡೆ ದೂರವಿರಲು ಕರೆ ನೀಡಿದ್ದರು ಇದನ್ನು ದಲಿತ ಬಾಂಧವರು ಅರ್ಥಮಾಡಿಕೊಳ್ಳಬೇಕು ಎಂದರು.



ಕೊಪ್ಪಳ: ಗಂಗಾವತಿ ತಾಲೂಕು ಒಕ್ಕಲುತನ ಹುಟ್ಟುವಳಿ ಸಹಕಾರಿ ಸಂಘಕ್ಕೆ ಅಧ್ಯಕ್ಷರಾಗಿ ಚನ್ನಪ್ಪ ಮಳಗಿ, ಉಪಾಧ್ಯಕ್ಷ ರಾಗಿ ಕನಕಪ್ಪ ಕನಕಗಿರಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಚಂದ್ರಶೇಖರ ಅವರು ಘೋಷಣೆ ಮಾಡಿದರು.

ಡಿಕೆಶಿ ಮುಖ್ಯಮಂತ್ರಿ ಆಗಿ ಪದಗ್ರಹಣ: ಕಾರ್ಯಕರ್ತರ ಸಂಭ್ರಮಾಚರಣೆ

ಕುಷ್ಟಗಿ: ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅಧಿಕಾರ ಸ್ವೀಕರಿಸಿದ ಹಿನ್ನೆಲೆಯಲ್ಲಿ ಕುಷ್ಟಗಿ ಪಟ್ಟಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು. ಪಟ್ಟಣದ ಪ್ರಮುಖ ವೃತ್ತಗಳಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಸೇರಿ ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ಸಂತಸ ವ್ಯಕ್ತಪಡಿಸಿದರು.

ಡಿಕೆ ಶಿವಕುಮಾರ್ ಅವರ ನೇತೃತ್ವದಲ್ಲಿ ರಾಜ್ಯದ ಸಮಗ್ರ ಅಭಿವೃದ್ಧಿಗೆ ಹೊಸ ದಿಕ್ಕು ದೊರೆಯಲಿದೆ ಎಂದು ಕಾರ್ಯಕರ್ತರು ವಿಶ್ವಾಸ ವ್ಯಕ್ತಪಡಿಸಿದರು.

ಮಾತನಾಡಿದ ಕಾಂಗ್ರೆಸ್ ಮುಖಂಡರು, ಪಕ್ಷದ ಸಂಘಟನೆಯನ್ನು ಬಲಪಡಿಸುವಲ್ಲಿ ಡಿಕೆ ಶಿವಕುಮಾರ್ ಅವರ ಪಾತ್ರ ಮಹತ್ತರವಾಗಿದ್ದು, ಅವರ ನಾಯಕತ್ವದಲ್ಲಿ ರಾಜ್ಯದಲ್ಲಿ ಜನಪರ ಆಡಳಿತ ಮತ್ತಷ್ಟು ಬಲಗೊಳ್ಳಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿವಿಧ ಘಟಕಗಳ ಪದಾಧಿಕಾರಿಗಳು, ಮುಖಂಡರು, ಯುವ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಪಕ್ಷದ ಅಭಿಮಾನಿಗಳು ಭಾಗವಹಿಸಿ ಸಂಭ್ರಮವನ್ನು ಹಂಚಿಕೊಂಡರು. ಡಿಕೆ ಶಿವಕುಮಾರ್ ಅವರಿಗೆ ಶುಭಾಶಯಗಳನ್ನು ಕೋರಿ ಘೋಷಣೆಗಳನ್ನು ಕೂಗಿದರು. ಸಂಭ್ರಮಾಚರಣೆಯು ಕೆಲಕಾಲ ಪಟ್ಟಣದ ಪ್ರಮುಖ ಪ್ರದೇಶಗಳಲ್ಲಿ ಹಬ್ಬದ ವಾತಾವರಣವನ್ನು ಸೃಷ್ಟಿಸಿತು.



ಕುಷ್ಟಗಿ: ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅಧಿಕಾರ ಸ್ವೀಕರಿಸಿದ ಹಿನ್ನೆಲೆಯಲ್ಲಿ ಕುಷ್ಟಗಿ ಪಟ್ಟಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು. ಪಟ್ಟಣದ ಪ್ರಮುಖ ವೃತ್ತಗಳಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಸೇರಿ ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ಸಂತಸ ವ್ಯಕ್ತಪಡಿಸಿದರು.

ಹಣ್ಣುಗಳ ಖರೀದಿಗೆ ಗ್ರಾಹಕರ ಹಿಂದೇಟು
ಮಾರುಕಟ್ಟೆಗೆ ಮಾವಿನ ಹಣ್ಣಿನ ರಾಶಿ

ಶಿವಮೂರ್ತಿ ಇಟಗಿ

ದಿಗಂತ ವಿಶೇಷ

ಯಲಬುರ್ಗಾ: ಹಣ್ಣುಗಳ ರಾಜ ಮಾವು ಪಟ್ಟಣಕ್ಕೆ ತಡವಾಗಿ ಲಗ್ಗೆ ಇಟ್ಟಿದ್ದು, ಗ್ರಾಹಕರು ವಿವಿಧ ಜಾತಿಯ ಮಾವಿನ ಹಣ್ಣು ರುಚಿ ಸವಿಯಬಹುದು.

ಪಟ್ಟಣದ ಮಾರುಕಟ್ಟೆಯಲ್ಲಿ ಆಪುಸ್, ಮಲ್ಲಿಕಾ, ಮಲಗೋವಾ, ರಸಪುರಿ ಹಾಗೂ ಬಾದಾಮಿ ಹೀಗೆ ವಿವಿಧ ಜಾತಿಯ ಹಣ್ಣುಗಳನ್ನು ಸವಿಯುವ ಅವಕಾಶ ಸಾರ್ವಜನಿಕರಿಗೆ ದೊರೆತಿದೆ. ಬಾದಾಮಿ ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಅಕಾಲಿಕ ಮಳೆಯಿಂದಾಗಿ ಇಳುವರಿ ಮತ್ತು ಫಸಲು ತೀರಾ ಕಡಿಮೆ ಆಗಿದೆ ಆದರೆ ದರದಲ್ಲಿ ಯಾವುದೇ ವ್ಯತ್ಯಾಸವಾಗಿಲ್ಲ.

ವಿವಿಧ ಜಾತಿಯ ಹಣ್ಣುಗಳು: ಪಟ್ಟಣದ ಬಸ್ ನಿಲ್ದಾಣ ಹತ್ತಿರ, ಕನಕದಾಸ ವೃತ್ತ, ಖಾದಿಗ್ರಾಮೋದ್ಯೋಗ ಜಾಗ, ಅಂಬೇಡ್ಕರ್ ವೃತ್ತ, ವಿಜಯದುರ್ಗಾ ದೇವಸ್ಥಾನ, ಚನ್ನಮ್ಮ ವೃತ್ತದ ಕೂಟಗಳಲ್ಲಿ ವಿವಿಧ ಜಾತಿಯ ಮಾವಿನ ಹಣ್ಣುಗಳು ಜನರನ್ನು ಕೈ ಬಿಸಿ ಕರೆಯುತ್ತಿವೆ. ಮಲಗೋವಾ 1ಕೆಜಿಗೆ 70ರಿಂದ 80 ಕಲ್ಮಿ 90, ಆಪೋಸ್ 110, ಮಲ್ಲಿಕಾ ದರದಲ್ಲಿ ಲಭ್ಯವಿದೆ.

ತಾಲೂಕಿನಲ್ಲಿ ಹೆಚ್ಚು ಮಾವು: ಪಟ್ಟಣದ ಮಾರುಕಟ್ಟೆಗೆ ಗದಗ, ಹೊಸಪೇಟೆ, ಬಳ್ಳಾರಿ, ವಿಜಯಪೂರ, ಕೊಪ್ಪಳ ಸೇರಿದಂತೆ ಬೇರೆ ಜಿಲ್ಲೆಗಳಿಂದ ಹಣ್ಣುಗಳನ್ನು ತರಿಸಲಾಗುತ್ತಿದೆ. ಕಳೆದ ಮೂರ್‍ನಾಲ್ಕು ದಿನಗಳ ಹಿಂದೆ ಸುರಿದ ಮಳೆ,ಗಾಳಿಗೆ ಮಾವಿನ ಫಸಲು ಹಾನಿಯಾಗಿದ್ದು, ಇಳುವರಿಯೂ ಕಡಿಮೆ ಆಗಿದೆ. ತೋಟಗಾರಿಗೆ ಇಲಾಖೆ ಮಾಹಿತಿ ಪ್ರಕಾರ ತಾಲೂಕಿನಲ್ಲಿ ಸಾಕಷ್ಟು ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದೆ. ಜೊತೆಗೆ ಯಲಬುರ್ಗಾ ತಾಲೂಕಿನ ವಿವಿಧ ಗ್ರಾಮಗಳಲ್ಲಿಯೂ ಹೆಚ್ಚು ಮಾವು ಬೆಳೆಯಲಾಗುತ್ತಿರುವುದು ವಿಶೇಷ.

ತರಹೇವಾರಿ ಮಾವಿನ ಹಣ್ಣುಗಳು ಜನರನ್ನು ಆಕರ್ಷಿಸುತ್ತಿದ್ದರೂ ಗ್ರಾಹಕರು ಹಣ್ಣು ಖರೀದಿಸಲು ಹಿಂದೇಟು ಹಾಕುತ್ತಿದ್ದಾರೆ.ಕಾರಣ ಮಾವಿನ ಕಾಯಿ ಹಣ್ಣಾಗಿಸಲು ಕ್ಯಾಲ್ಸಿಯಂ, ಕಾರ್ಬೈಡ್, ರಸಾಯನಿಕ ಬಳಸುತ್ತಿರುವುದು.ಪುಡಿ ಮಾಡಿದ ಸುಣ್ಣಕಲ್ಲು ಇದ್ದಿಲು ಕಾಯಿಸಿ ತಯಾರಿಸಿದ ರಾಸಾಯನಿಕ ಇದು. ಮನುಷ್ಯನ ಆರೋಗ್ಯಕ್ಕೆ ಹಾನಿಕಾರ ಎಂಬುದು ತಜ್ಞರ ಹೇಳಿಕೆ.

ಮಾವಿನ ಕಾಯಿ ಹಣ್ಣು ಮಾಡಲು ಬತ್ತದ ಹುಲ್ಲು ಬಳಸಲಾಗುತ್ತದೆ.ಆದರೆ ಒಂದು ವಾರ ಬೇಕಾಗುತ್ತದೆ.ಆದರೆ ಮಾವು ಬೆಳೆಗಾರರು ಮತ್ತು ವ್ಯಾಪಾರಸ್ಥರು ಲಾಭದ ಆಸೆಗಾಗಿ ಅಡ್ಡ ದಾರಿ ಹಿಡಿದಿರುವುದರಿಂದ ಗ್ರಾಹಕರು ತೊಂದರೆ ಅನುಭವಿಸಬೇಕಿದೆ.

ಅಷ್ಟೇಲ್ಲ ರಾಸಾಯನಿಕ ಬಳಸಿದ ಹಣ್ಣು ತಿಂದರೆ ಮೂಗು, ಬಾಯಿ, ಗಂಟಲು ಕೆರತ, ಕೆಮ್ಮು, ದಮ್ಮು ಬರಲಿದೆ ಎಂಬುದು ಸಂಶೋಧನೆಯಿಂದ ಗೊತ್ತಾಗಿದೆ ಮುಖ್ಯ ವೈದ್ಯಾಧಿಕಾರಿ ಡಾ.ಕೃಷ್ಣ ಹೊಟ್ಟಿ ಹೇಳಿದರು.



ಮಳೆ, ಗಾಳಿಗೆ ಫಸಲು ನಾಶ

ಕಳೆದ ವರ್ಷ ಮಾರುಕಟ್ಟೆಗೆ ಮಾವಿನ ಹಣ್ಣು ಬೇಗ ಬಂದಿದ್ದರಿಂದ ವ್ಯಾಪಾರ ಚನ್ನಾಗಿತ್ತು. ಈ ಬಾರಿ ಉರಿಬಿಸಿಲು ಜೊತೆಗೆ ಹವಮಾನ ವ್ಯಪರಿತ್ಯದಿಂದ ಮಳೆ, ಗಾಳಿಗೆ ಫಸಲು ನಾಶವಾಗಿದೆ. ಬಿಸಿಲು ಹೆಚ್ಚು ಇರುವುದರಿಂದ ಜನರು ಮಾವಿನ ಹಣ್ಣನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀಧಿಸುತ್ತಿಲ್ಲ.ಇನ್ನೂ ಒಂದೆರೆಡು ದೊಡ್ಡ ಮಳೆ ಬಿದ್ದ ನಂತರವೇ ಹಣ್ಣು ತಿನ್ನುವುದು ರೂಢಿ ಎನ್ನುತ್ತಾರೆ ಶ್ಯಾಮೀದ್ ಆನೆಗುಂದಿ ಹಾಗೂ ಹನುಮಂತ ಹರಿಜನ ಹಣ್ಣಿನ ವ್ಯಾಪಾರಿಗಳು.

ಅಧ್ಯಕ್ಷರ, ಪಿಡಿಒ ಸಹಿ ನಕಲು ಮಾಡಿ ಹಣ ಡ್ರಾ: ಆರೋಪ

ಸಿಂಧನೂರು: ತಾಲೂಕಿನ ತಿಡಿಗೋಳ ಗ್ರಾಪಂ ಕಚೇರಿಯಲ್ಲಿನ ಚೆಕ್‌ಬುಕ್ ಕಳ್ಳತನ ಮಾಡಿ ಹಣ ಡ್ರಾ ಮಾಡಿರುವುದರ ಬಗ್ಗೆ ದೂರು ದಾಖಲಿಸಿಕೊಂಡು ತನಿಖೆ ಮಾಡುವಂತೆ ಪ್ರಸ್ತುತ ಇರುವ ಗ್ರಾಪಂ ಅಧ್ಯಕ್ಷರು ಹಾಗೂ ಪಿಡಿಒ ಅವರು ತುರ್ವಿಹಾಳ ಪೋಲಿಸ್ ಠಾಣೆಯ ಅಧಿಕಾರಿಗೆ ಮೌಖಿಕವಾಗಿ ಮತ್ತು ಬರಹ ರೂಪದಲ್ಲಿ ಪತ್ರ ಬರೆದು ದೂರು ದಾಖಲು ಮಾಡಲು ಮನವಿ ಮಾಡಿದ್ದಾರೆ.

ತಾಲೂಕಿನ ತಿಡಿಗೋಳ ಗ್ರಾಪಂ ಕಾರ್ಯಾಲಯದಲ್ಲಿನ ಶಾಸನ ಬದ್ಧ (ಗ್ರಾಪಂ ನಿಧಿ ತಿಡಿಗೋಳ)ಖಾತೆ ಸಂಖ್ಯೆ 10520100000273 ಇದ್ದು,ಇದು ಕರ್ನಾಟಕ ಗ್ರಾಮೀಣ ಬ್ಯಾಂಕ್ ಸಿಂಧನೂರು (ಎಪಿಎಂಸಿ ಯಾರ್ಡ್)ನಲ್ಲಿ ಇರುತ್ತದೆ. ಈ ಸದರಿ ಬ್ಯಾಂಕ್ ಖಾತೆಯ ಪಾಸ್ ಶೀಟ್ ಪರೀಶಿಲಿಸಲಾಗಿ 2025 ಡಿ.6ರಂದು ಚೆಕ್ ನಂ.314924 ಮೊತ್ತ 19800 ರೂ. ಇದು ವಾಸವಿ ಹೋಮ್ ಅಪ್ಲಾಯನ್ಸ್ ಇವರ ಹೆಸರಿನಲ್ಲಿ ಡ್ರಾ ಮಾಡಲಾಗಿರುತ್ತದೆ. ಹಾಗೂ 2025 ಡಿ.18ರಂದು ಚೆಕ್ ನಂ.314925 ಮೊತ್ತ 19800 ಇದು ದೇವಪ್ಪ ಇವರ ಹೆಸರಿನಲ್ಲಿ ಡ್ರಾ ಮಾಡಲಾಗಿದೆ. ಈ ಸದರಿ ಎರಡು ಚೆಕ್ ಗಳನ್ನು ಗ್ರಾಮ ಪಂಚಾಯತಿ ವತಿಯಿಂದ ನೀಡಿರುವುದಿಲ್ಲ,ಹಾಗಾಗಿ ಸದರಿ ಚೆಕ್ ಲೀಪ್ ಗಳನ್ನು ಖಾತೆ ಸಂಖ್ಯೆ 10520100000273 ಚೆಕ್‌ಬುಕ್ ಕಳ್ಳತನ ಮಾಡಿ ಗ್ರಾಪಂ ಅಧ್ಯಕ್ಷರ ಮತ್ತು ಪಿಡಿಒ ಅವರುಗಳ ಸಹಿಗಳನ್ನು ನಕಲು ಮಾಡಿ ಹಣ ಡ್ರಾ ಮಾಡಿದ್ದು, ಹಾಗಾಗಿ ಈ ವಿಷಯದ ಬಗ್ಗೆ ದೂರು ದಾಖಲಿಸಿಕೊಂಡು ಸಮಗ್ರ ತನಿಖೆ ಮಾಡುವಂತೆ ಮೌಖಿಕವಾಗಿ ಸಂಬಂಧಿಸಿದವರಿಗೆ ಮನವಿ ಮೂಲಕ ತಿಳಿಸಿದ್ದಾರೆ ಎಂದು ಸಂಬಂಧಿಸಿದ ಗ್ರಾಮ ಪಂಚಾಯಿತಿಯ ಪಿಡಿಒಗಳು ಸೇರಿದಂತೆ ಇನ್ನಿತರ ಮಾಹಿತಿ ಲಭ್ಯವಾಗಿದೆ.

> **ಎರಡೂ ಚೆಕ್‌ಗಳು ಅವ್ಯವಹಾರವಾಗಿದೆ ಎಂದು ದೂರು ಬಂದಿದ್ದು, ಇದರ ಬಗ್ಗೆ ವರದಿ ನೀಡುವಂತೆ ಸಂಬಂಧಿಸಿದ ಗ್ರಾಪಂ ಅಧಿಕಾರಿಗಳಿಗೆ ತಿಳಿಸಿದ್ದು, ವರದಿ ಬಂದ ನಂತರ ಈ ವಿಷಯದ ಕುರಿತು ತಿಳಿಸುವೆ.**
> ■ ಚಂದ್ರಶೇಖರ, ತಾಪಂ ಇಒ

ಇದು ನನ್ನ ಅವಧಿಯಲ್ಲಿ ಆಗಿದೆ ಅನ್ನುವಂತ ಮಾಹಿತಿ ಅಲ್ಲಿರುವಂಥ ಅಧಿಕಾರಿಗಳಿಂದ ಮತ್ತು ಸಿಬ್ಬಂದಿಗಳಿಂದ ನನಗೆ ಗೊತ್ತಾಗಿದ್ದು, ಇದರ ಬಗ್ಗೆ ನಾನು ತಿಳಿದುಕೊಂಡು ತಿಳಿಸುತ್ತೇನೆ ಎಂದು ಹಿಂದಿನ ಅವಧಿಯಲ್ಲಿ ಕಾರ್ಯನಿರ್ವಹಿಸಿದ ತಿಡಿಗೋಳ ಗ್ರಾಪಂ ಪಿಡಿಒ ಹುಚ್ಚಪ್ಪ ಹೇಳಿದರು.

ಪ್ರಸ್ತುತಕಾರ್ಯನಿರ್ವಹಿಸುತ್ತಿರುವಪಿಡಿಒ ಅವರು ಹಿಂದಿನ ಅವಧಿಯ ಪಿಡಿಒ ಹಾಗೂ ಪ್ರಸ್ತುತ ಅಧ್ಯಕ್ಷರು ಇರುವ ನಕಲು ಸಹಿ ಬಳಸಿ ಚೆಕ್ ಹಣ ದುರುಪಯೋಗ ಆಗಿದ್ದು ಇದರ ಬಗ್ಗೆ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ತಪ್ಪಿತಸ್ಥರ ವಿರುದ್ಧ ದೂರು ಸಲ್ಲಿಸಲಾಗುವುದು ಎಂದು ತಿಡಿಗೋಳ ಗ್ರಾಪಂ ಪಿಡಿಒ ಸಿದ್ದಪ್ಪ ಹೇಳಿದರು.

ದೇವರು ಸಮಾಜ ಸೇವೆ ಮಾಡುವ ಶಕ್ತಿ ನೀಡಲಿ

ಕುಕನೂರ: 30ರಿಂದ 40 ವರ್ಷಗಳ ಕಾಲ ತಾಲೂಕಿನ ಜನರ ಆಶೀರ್ವಾದ ಪಡೆದು ಅವರಿಗೆ ಮೋಸ ಮಾಡುತ್ತಿದ್ದಾರೆ. ಅಂತಹ ವ್ಯಕ್ತಿ ನಾನಲ್ಲ ಎಂದು ತಾಪಂ ಮಾಜಿ ಉಪಾಧ್ಯಕ್ಷರು ಕಳಕಪ್ಪ ಕಂಬಳಿ ಹೇಳಿದರು.

ಪಟ್ಟಣದ ಕಲ್ಲೇಶ್ವರ ನಗರದಲ್ಲಿ ಶರಣು ಕಾರ್ಯಾಲಯ ಉದ್ಘಾಟಿಸಿ ಮಾತನಾಡಿದ ಅವರು, ಈ ಹಿಂದೆ ತಾಲೂಕಿನಲ್ಲಿ 30 ರಿಂದ 40 ವರ್ಷಗಳ ಕಾಲ ಜನರ ಆಶೀರ್ವಾದ ಪಡೆದು ಜನರ ಏಳಿಗೆಯನ್ನು ಸಹಿಸಿದೆ ಕೇವಲ ತಾವು ಅಭಿವೃದ್ಧಿಯಾಗಿ ತಾಲೂಕಿನ ಜನರಿಗೆ ಮೋಸ ಮಾಡಿದ್ದಾರೆ ಅಂತ ವ್ಯಕ್ತಿ ನಾನಲ್ಲ, ನಿಮ್ಮ ಸೇವೆಯೇ ನನ್ನ ಸೇವೆ ಇದರಲ್ಲಿ ಯಾವುದೇ ಮುಲಾಜಿಲ್ಲ ಮತ್ತು ದ್ರೋಹ ಮಾಡುವುದನ್ನು ನನಗೆ ಕಲಿಸಿಲ್ಲ ಇನ್ನಷ್ಟು ಸಮಾಜ ಸೇವೆಯನ್ನು ಮಾಡುವಂತಹ ಶಕ್ತಿಯನ್ನು ಆ ದೇವರು ನನಗೆ ಕರುಣಿಸಲಿ ಎಂದು ಭಾವುಕರಾಗಿ ಹೇಳಿದರು

ನಂತರ ಪದ್ಮಶ್ರೀ ಪುರಸ್ಕೃತ ಮಂಜಮ್ಮ ಜೋಗತಿ ಮಾತನಾಡಿ, ಹಣವಿದ್ದವನು ಶ್ರೀಮಂತನಲ್ಲಾ, ತಾಯಿಯ ಹೃದಯ ಇದ್ದವನು ಶ್ರೀಮಂತ ಅಂತಹ ವ್ಯಕ್ತಿ ಕಳಕಪ್ಪ ಕಂಬಳಿ ಎಂದು ಹೇಳಿದರು.

ಸಾನಿಧ್ಯವಹಿಸಿದ್ದ ಚಿಕೆನ್ಕೊಪ್ಪದ ಚನ್ನವೀರ ಶರಣರು ಮಾತನಾಡಿ, ಶರಣು ಕಾರ್ಯಾಲಯ ಸಮಾಜಕ್ಕೆ ಒಂದು ಒಳ್ಳೆಯ ಕೊಡುಗೆ ನೀಡಲಿ ಮತ್ತು ಚಿಕ್ಕ ಸಮಯದಲ್ಲಿ ಅತ್ಯುತ್ತಮ ಸಾಧನೆ ಮಾಡಲಿದ್ದಾರೆ ಕಳಕಪ್ಪ ಕಂಬಳಿ ಅಂತವರ ಕಾರ್ಯ ಈ ಸಮಾಜಕ್ಕೆ ಬೇಕು ಅವರ ಕಾರ್ಯ ಹೀಗೆ ಮುಂದುವರಿಯಲಿ ಎಂದು ಹೇಳಿದರು. ದಿವ್ಯ ಸಾನಿಧ್ಯವನ್ನು ಮುಂಡರಗಿ ಅನ್ನದಾನೀಶ್ವರ ಮಠದ ಡಾ.ನಾಡೋಜ ಅನ್ನದಾನೀಶ್ವರ ಮಹಾಶಿವಯೋಗಿಗಳ, ಕುದರಿಮೋತಿಯ ವಿಜಯ ಮಹಾಂತೇಶ್ವರ ಮಹಾಸ್ವಾಮಿ, ದದೇಗಲ್ಲ ಸದ್ಗುರು ಆತ್ಮಾನಂದ ಭಾರತಿ ಸ್ವಾಮಿಗಳು, ಹಾಲವರ್ತಿಯ ಶಿವಸಿದ್ದೇಶ್ವರ ಸ್ವಾಮೀಜಿ, ಕೊಪ್ಪಳದ ಬಂಜಾರ ಸಮಾಜದ ಧರ್ಮಗುರುಗಳಾದ ಗುರು ಗೋಸಾವಿ ಬಾವ, ದೊಡ್ಡಯ್ಯ ಗುರುವಿನ್, ವೇ.ಮೂ.ಸಿದ್ದಿಂಗಯ್ಯ ಹಿರೇಮಠ್, ಈರಪ್ಪ ಕುಡಗುಂಟಿ, ಬಾಜಪ ನಗರ ಘಟಕದ ಅಧ್ಯಕ್ಷ ಬಸವರಾಜ್ ಹಾಳಕೇರಿ, ಕಾಂಗ್ರೆಸ್ ಮುಖಂಡ ರಹೇಮನ್ಸಾಬ್ ಮಕ್ಕಪ್ಪನವರ್, ಬಸವನಗೌಡ ತೊಂಡಿಹಾಳ, ಚಂದ್ರು ಬಗನಾಳ ಇತರರಿದ್ದರು.



ನೇತ್ರ, ದಂತ ತಪಾಸಣಾ ಶಿಬಿರಕ್ಕೆ ಉತ್ತಮ ಸ್ಪಂದನೆ

ಹನುಮಸಾಗರ: ಗ್ರಾಮೀಣ ಭಾಗದ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ಉದ್ದೇಶದಿಂದ ಹನುಮಸಾಗರ ಪಟ್ಟಣದ ಯಮುನಾ (ಅಕ್ಕಿ) ಆಸ್ಪತ್ರೆಯಲ್ಲಿ ಸೋಮವಾರ ಉಚಿತ ನೇತ್ರ ತಪಾಸಣೆ, ಶಸ್ತ್ರಚಿಕಿತ್ಸಾ ಆಯ್ಕೆ ಶಿಬಿರ ಹಾಗೂ ದಂತ (ಹಲ್ಲು) ತಪಾಸಣಾ ಶಿಬಿರವನ್ನು ಆಯೋಜಿಸಲಾಯಿತು.

ಹುಬ್ಬಳ್ಳಿಯ ಡಾ.ಎಂ.ಎಂ.ಜೋಷಿ ನೇತ್ರ ವಿಜ್ಞಾನ ಸಂಸ್ಥೆ ಹಾಗೂ ಯಮುನಾ (ಅಕ್ಕಿ) ಆಸ್ಪತ್ರೆಯ ಸಂಯುಕ್ತ ಆಶ್ರಯದಲ್ಲಿ ನಡೆದ ಈ ಶಿಬಿರವು ಆಸ್ಪತ್ರೆಯ ವಾರ್ಷಿಕೋತ್ಸವ ಮತ್ತು ಹಿರಿಯ ವೈದ್ಯ ಡಾ. ಬಸವರಾಜ ಅಕ್ಕಿ ಅವರ 50ನೇ ಜನ್ಮದಿನದ ಅಂಗವಾಗಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಮುಖಂಡ ಮಹಾಂತೇಶ ಅಗಸಿಮುಂದಿನ ಉದ್ಘಾಟಿಸಿದರು. ಆಸ್ಪತ್ರೆಯ ಮುಖ್ಯ ವೈದ್ಯ ಡಾ. ಬಸವರಾಜ ಅಕ್ಕಿ ಅಧ್ಯಕ್ಷತೆ ವಹಿಸಿದ್ದರು.

ನೇತ್ರ ತಪಾಸಣಾ ಶಿಬಿರದಲ್ಲಿ ಡಾ.ಎಂ.ಎಂ.ಜೋಷಿ ನೇತ್ರ ವಿಜ್ಞಾನ ಸಂಸ್ಥೆಯ ತಜ್ಞ ವೈದ್ಯರಾದ ಡಾ. ಅಂಕಿತ ಸಾತರ್ಕರ್, ಡಾ. ಉಮರ್ ಫಾರೂಕ್ ಹಾಗೂ ಆರ್ಗನೈಸರ್ ರಾಘವೇಂದ್ರ ನವಲಗುಂದ ನೇತೃತ್ವದಲ್ಲಿ ರೋಗಿಗಳ ಕಣ್ಣಿನ ತಪಾಸಣೆ ನಡೆಸಲಾಯಿತು. ಅಗತ್ಯವಿರುವವರಿಗೆ ಸೂಕ್ತ ಚಿಕಿತ್ಸೆ ಮತ್ತು ವೈದ್ಯಕೀಯ ಸಲಹೆ ನೀಡಲಾಯಿತು. ಶಸ್ತ್ರಚಿಕಿತ್ಸೆ ಅಗತ್ಯವಿರುವ ರೋಗಿಗಳನ್ನು ಗುರುತಿಸಿ ಮುಂದಿನ ಚಿಕಿತ್ಸೆಗೆ ಆಯ್ಕೆ ಮಾಡಲಾಯಿತು.



ಡಾ.ಬಸವರಾಜ ಅಕ್ಕಿ ಹಾಗೂ ಡಾ.ಶ್ರೀಕಾಂತ ಕೊಡತಿ ಮಾತನಾಡಿದರು.

ವಿಶ್ವನಾಥ ನಾಗೂರ, ವಿಶ್ವನಾಥ ಕನ್ನೂರ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ರುದ್ರಗೌಡ ಗೌಡಪ್ಪನವರ, ಚಂದಪ್ಪ ಹಕ್ಕಿ, ಡಾ. ಶ್ರೀಕಾಂತ ಕೊಡತಿ, ಮಂಜುನಾಥ ಕೊಡತಿ ಸೇರಿದಂತೆ ಹಲವರು ಉಪಸ್ಥಿತರಿದ್ದರು. ನಾಗರಾಜ ಹಕ್ಕಿ ಕಾರ್ಯಕ್ರಮ ನಿರೂಪಿಸಿದರು.ಶಿಬಿರದ ಯಶಸ್ಸಿಗೆ ಆಸ್ಪತ್ರೆಯ ವೈದ್ಯರು, ಸಿಬ್ಬಂದಿ ಹಾಗೂ ಸ್ವಯಂಸೇವಕರು ಸಹಕಾರ ನೀಡಿದರು.

ಬಸವನಗೌಡ ದದ್ದಲ್‌ಗೆ ಸಚಿವ ಸ್ಥಾನ ನೀಡಲು ಒತ್ತಾಯ

ಮಾನ್ವಿ: ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ ಎರಡು ಬಾರಿ ಶಾಸಕರಾಗಿ ಶ್ರೀವಾಲ್ಮೀಕಿ ಪರಿಶಿಷ್ಟ ವರ್ಗಗಳ ನಿಗಮ ಮಂಡಳಿಯ ರಾಜ್ಯಅಧ್ಯಕ್ಷರಾಗಿ ಉತ್ತಮ ಸೇವೆ ಸಲ್ಲಿಸುತ್ತಿರುವ ವಾಲ್ಮೀಕಿ ಸಮುದಾಯದ ಪ್ರಮುಖ ನಾಯಕರಾಗಿರುವ ಬಸವನಗೌಡ ದದ್ದಲ್ ಅವರಿಗೆ ರಾಜ್ಯದ ಡಿ.ಕೆ. ಶಿವಕುಮಾರ್ ನೇತೃತ್ವದ ಸರಕಾರದಲ್ಲಿ ಸಚಿವ ಸ್ಥಾನ ನೀಡುವ ಮೂಲಕ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಅವಕಾಶ ನೀಡಬೇಕು ಎಂದು ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ಕುರ್ಡಿ ಹೋಬಳಿ ಕಾಂಗ್ರೆಸ್ ಹಿರಿಯ ಮುಖಂಡರಾದ ಕೆ.ಷಣ್ಮುಖಪ್ಪ ವಲ್ಕಂದಿನ್ನಿ ಒತ್ತಾಯಿಸಿದರು.



ಪಟ್ಟಣದ ಪತ್ರಿಕಾ ಭವನದಲ್ಲಿ ಮಾತನಾಡಿ, ಕಾಂಗ್ರೆಸ್ ಮುಖಂಡರಾದ ವಿಶ್ವನಾಥ ರೆಡ್ಡಿ, ಪ್ರವೀಣಕುಮಾರ, ಮನೋಜಗೌಡ ಕುರ್ಡಿ, ಈರಣ್ಣ ನಾಯಕ, ಹರಿಶ್ಚಂದ್ರ ಗೋರ್ಕಲ್, ಜಂಬಣ್ಣ, ವಿರುಪನಗೌಡ, ದೇವರಾಜನಾಯಕ, ಕೃಷ್ಣನಾಯಕ ರಾಜೋಳ್ಳಿ, ಹನುಮೇಶ ಇದ್ದರು.

ಹಾವು ಕಡಿತ ನಿಯಂತ್ರಣ ಜಾಗೃತಿ ಕಾರ್ಯಕ್ರಮ

ಕೊಪ್ಪಳ: ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಇಲಾಖೆ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಘಟಕ ಹಾಗೂ ವೆಂಕಟಗಿರಿ ಪ್ರಾಥಮಿಕ ಆರೋಗ್ಯ ಕೇಂದ್ರ ಇವರ ಸಂಯುಕ್ತಾಶ್ರಯದಲ್ಲಿ ಇತ್ತೀಚೆಗೆ ವೆಂಕಟಗಿರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ 'ರಾಷ್ಟ್ರೀಯ ಹಾವು ಕಡಿತ ನಿಯಂತ್ರಣ ಜಾಗೃತಿ' ಕಾರ್ಯಕ್ರಮ ನಡೆಯಿತು.

ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ದೇವಮ್ಮ ಅವರು ಮಾತನಾಡಿ, ಹಾವು ಕಡಿತದಿಂದ ಉಂಟಾಗುವ ಮರಣವನ್ನು ನಿಯಂತ್ರಿಸುವ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಭಾರತ ಹಳ್ಳಿಗಳ ದೇಶ ಶೇ.70ಕ್ಕಿಂತಲೂ ಹೆಚ್ಚು ಜನರು ಕೃಷಿಯಲ್ಲಿ ಅವಲಂಬಿತರಾಗಿದ್ದಾರೆ. ಭಾರತದಲ್ಲಿ ಪ್ರಮುಖ 4 ವಿಷಕಾರಿ ಹಾವುಗಳಾದ ನಾಗರಹಾವು, ಕಟ್ಟಾವು, ಕೊಳಕುಮಂಡಲ ಹಾವು ಹಾಗೂ ಗರಗಸ ಮಂಡಲ ಹಾವು ಕಡಿತದಿಂದ ಉಂಟಾಗುವ ಸಾವುಗಳಲ್ಲಿ 90% ಅಧಿಕ ಸಾವುಗಳಿಗೆ ಕಾರಣವಾಗುತ್ತವೆ. ಈ 4 ಹಾವುಗಳ ಬಗ್ಗೆ ಎಚ್ಚರಿಗೆ ವಹಿಸಬೇಕು ನಾಗರಹಾವು ಬಿಟ್ಟು ಉಳಿತ 3 ವಿಷಕಾರಿ ಹಾವುಗಳು ರಾತ್ರಿವೇಳೆ ಹೆಚ್ಚು ಚಟುವಟಿಕೆಯಿಂದಿರುತ್ತವೆ.



ಹಾಗಾಗಿ ರಾತ್ರಿವೇಳೆ ಹೊರಗಡೆ ಹೋಗುವಾಗ ಟಾರ್ಚ್ ಬಳಸಬೇಕು. ಮನೆ ಅಂಗಳವನ್ನು ಇಲಿ ಹೆಗ್ಗನಗಳಂತಹ ಹಾವುಗಳು ತಿನ್ನುವ ಜೀವಿಗಳಿಂದ ಮುಕ್ತವಾಗಿಸಬೇಕು. ಮನೆಯಂಗಳ ಅಥವಾ ಹೊಲಗದ್ದೆಗಳಲ್ಲಿ ಸಾಮಾನ್ಯವಾಗಿ ತಿರುಗಾಡುವ ಸ್ಥಳಗಳಲ್ಲಿ ಗಿಡಗಂಟಿಗಳನ್ನು ಕಡಿದು ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದರು.

ಹಾವುಗಳಿರುವ ಸಾಧ್ಯತೆ ಹೆಚ್ಚಿರುವ ಸ್ಥಳಗಳಲ್ಲಿ ಕೆಲಸ ಮಾಡುವಾಗ ಶೂಗಳನ್ನು ಬಳಸುವುದು. ರಾತ್ರಿ ಮನೆಯ ಹೊರಗೆ ಹಾಗೂ ಹೊಲಗದ್ದೆಗಳಲ್ಲಿ ಮಲಗಬೇಕಾದಾಗ ನೆಲದಲ್ಲಿ ಮಲಗದೆ ಎತ್ತರ ಪ್ರದೇಶದ ಮಂಚ ಬಳಸುವುದು ಅಗತ್ಯವಾಗಿದೆ. ನೆಲದಲ್ಲಿ ಮಲಗಲೇ ಬೇಕೆಂದರೆ ಕಡ್ಡಾಯವಾಗಿ ಸೊಳ್ಳೆಪರದೆ ಬಳಸುವುದು ಹಾಗೂ ರೈತರು ಹೊಲದಲ್ಲಿ ದನ-ಕರಗಳಿಗೆ ಮೇವು ಹಾಗೂ ಹಸಿಹುಲ್ಲು ಕಿಳುವಾಗ ಕುಡುಗೋಲು ಬಳಸಬೇಕು. ಒಂದು ವೇಳೆ ಹಾವು ಕಚ್ಚಿದರೆ ತಕ್ಷಣ ಸಮೀಪದ ಸರ್ಕಾರಿ ಆಸ್ಪತ್ರೆಗೆ 40 ನಿಮಿಷದೊಳಗಾಗಿ ಹೋಗಿ ಚಿಕಿತ್ಸೆ ಪಡೆದುಕೊಳ್ಳಬೇಕು. ಹಾವು ಕಡೆದ ವ್ಯಕ್ತಿಯನ್ನು ಸಮಾದಾನ ಪಡಿಸಿ, ಗಾಬರಿ ಪಡಿಸಬೇಡಿ. ಹಾವಿನಿಂದ ನಿಧಾನವಾಗಿ ದೂರ ಸರಿಯಿರಿ. ರಕ್ತಬಂಧಕಪಟ್ಟಿ ಕಟ್ಟಬೇಡಿ. ಹಾವು ಕಡಿತಕ್ಕೊಳಗಾದ ವ್ಯಕ್ತಿಯನ್ನು ಎಡಭಾಗಕ್ಕೆ ಮಲಗಿಸಿ ಕಚ್ಚಿದ ಭಾಗವನ್ನು ಅಲುಗಾಡದಂತೆ ನೋಡಿಕೊಳ್ಳಿ. ಗಾಯವನ್ನು ಕತ್ತರಿಸಬೇಡಿ, ಏನನ್ನು ಹಚ್ಚಬೇಡಿ. ಹಾವು ಕಚ್ಚಿದ ವ್ಯಕ್ತಿಗೆ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಕೊಡಿಸಿ. ನಾಟಿ ಔಷಧ ಅಥವಾ ಅಸುರಕ್ಷಿತ ಚಿಕಿತ್ಸಾ ಪದ್ಧತಿಯನ್ನು ಅವಲಂಬಿಸಬೇಡಿ ಎಂದರು.

ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಸಂತೋಷ ಕುಮಾರ ಸೇರಿದಂತೆ ಶುಶ್ರೂಷಣಾಧಿಕಾರಿಗಳು, ಪ್ರಯೋಗಶಾಲಾ ತಂತ್ರಜ್ಞರು, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಗ್ರಾಮದ ನಾಗರಿಕರು, ಗರ್ಭಿಣಿ ಬಾಣಂತಿಯರು ಭಾಗವಹಿಸಿ, ಯಶಸ್ವಿಗೊಳಿಸಿದರು.

ಸಂಚಾರಿ ನಿಯಮ ಉಲ್ಲಂಘಿಸುವವರಿಗೆ ಕೊನೆಯ ಎಚ್ಚರಿಕೆ
10 ದಿನಗಳ ಬಳಿಕ ಭಾರೀ ದಂಡದ ಬಿಸಿ: ಕಮಿಷನರ್

ಕಲಬುರಗಿ: ನಗರದಲ್ಲಿ ಸಂಚಾರಿ ನಿಯಮ ಉಲ್ಲಂಘನೆ ತಡೆಗಟ್ಟಲು ಪೊಲೀಸ್ ಇಲಾಖೆ ಮತ್ತಷ್ಟು ಕಠಿಣ ಕ್ರಮಕ್ಕೆ ಮುಂದಾಗಿದ್ದು, ವಾಹನ ಸವಾರರು ನಿಯಮ ಪಾಲನೆಗೆ ತಾವಾಗಿಯೇ ಮುಂದಾಗಲು ಕೊನೆಯ ಅವಕಾಶವಾಗಿ 10 ದಿನಗಳ ಗಡುವು ನೀಡಲಾಗುತ್ತಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ತಿಳಿಸಿದ್ದಾರೆ.

ನಗರ ಪೊಲೀಸ್ ಆಯುಕ್ತಾಲಯದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂನ್ 1ರಿಂದ ಐಟಿಎಂಎಸ್ (ಇಂಟಿಗ್ರೇಟೆಡ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್) ಕ್ಯಾಮೆರಾಗಳ ಮೂಲಕ ನಗರ ಸಂಚಾರದ ಮೇಲೆ ನಿಗಾ ವಹಿಸಲಾಗುತ್ತಿದೆ. ಆದಾಗ್ಯೂ,ಸಂಚಾರಿ ನಿಯಮಗಳ ಉಲ್ಲಂಘನೆ ಪ್ರಕರಣಗಳು ಮುಂದುವರಿದಿರುವುದರಿಂದ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ 10 ದಿನಗಳ ಕಾಲಾವಕಾಶ ನೀಡಲಾಗಿದೆ ಎಂದು ಹೇಳಿದರು.

ಈ ಅವಧಿ ಪೂರ್ಣಗೊಂಡ ಬಳಿಕ ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ ವಿಶೇಷ ಕಾರ್ಯಾಚರಣೆ ಹಮ್ಮಿಕೊಳ್ಳಲಾಗುವುದು. ಸಂಚಾರ ಹಾಗೂ ಕಾನೂನು ಸುವ್ಯವಸ್ಥೆ ವಿಭಾಗದ ಪೊಲೀಸರು ಜಂಟಿಯಾಗಿ ನಗರಾದ್ಯಂತ ತಪಾಸಣೆ ನಡೆಸಿ ನಿಯಮ ಉಲ್ಲಂಘಕರ ವಿರುದ್ಧ ಕಾನೂನು ಕ್ರಮ ಜರುಗಿಸಲಿದ್ದಾರೆ ಎಂದು ತಿಳಿಸಿದರು.

> **ದಂಡ ವಿಧಿಸುವುದು ನಮ್ಮ ಉದ್ದೇಶವಲ್ಲ, ಪ್ರತಿಯೊಂದು ಅಪಘಾತದ ಹಿಂದೆ ಒಂದು ಕುಟುಂಬದ ನೋವು ಅಡಗಿರುತ್ತದೆ. ಸಾರ್ವಜನಿಕರ ಸುರಕ್ಷತೆ ಮತ್ತು ಸುಗಮ ಸಂಚಾರವೇ ಪೊಲೀಸ್ ಇಲಾಖೆಯ ಆದ್ಯತೆ. ವಾಹನ ಸವಾರರು ಮತ್ತು ಪಾಲಕರು ಜವಾಬ್ದಾರಿಯಿಂದ ವರ್ತಿಸಿ ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು.**
> ■ ಡಾ.ಶರಣಪ್ಪ ಎಸ್.ಡಿ., ನಗರ ಪೊಲೀಸ್ ಆಯುಕ್ತ

ಯಾವ ನಿಯಮ ಉಲ್ಲಂಘಿಸಿದರೆ ಎಷ್ಟು ದಂಡ: ಡ್ರಂಕ್-ಡ್ರೈವ 10,000 ರೂ. (6 ತಿಂಗಳು ಲೈಸೆನ್ಸ್ ರದ್ದು), 2ನೇ ಬಾರಿ ಉಲ್ಲಂಘನೆ-15,000 ರೂ. ಅಥವಾ 2 ವರ್ಷ ಜೈಲು, ಓವರ್ ಸ್ಪೀಡ್ -1000 ರೂ., ಸೀಟ್ ಬೆಲ್ಟ್ ಹಾಕಲಿಲ್ಲ-1000 ರೂ., ಹೆಲ್ಮೆಟ್ ಧರಿಸದಿದ್ದಲ್ಲಿ -1000 ರೂ., ಟ್ರಿಬಲ್ ರೈಡಿಂಗ್ -1000 ರೂ., ಮೊಬೈಲ್ ಫೋನ್ ಬಳಕೆ-1000 ರೂ. ಸಿಗ್ನಲ್ ಜಂಪ್ -1000 ರೂ. ದಂಡ ವಿಧಿಸಲಾಗುತ್ತದೆ.ಉಪ ಪೊಲೀಸ್ ಆಯುಕ್ತ ಶಾಲೂ ಮತ್ತು ಪ್ರವೀಣ್ ನಾಯಕ್ ಉಪಸ್ಥಿತರಿದ್ದರು.

25 ಸಾವಿರ ದಂಡ

ನಗರದಲ್ಲಿ ಕಳೆದ ಹತ್ತು ದಿನಗಳಲ್ಲಿ ಅಪ್ರಾಪ್ತ ವಯಸ್ಸಿನ 35 ಮಂದಿ ವಾಹನ ಚಾಲಕರ ವಿರುದ್ಧ ಪ್ರಕರಣ ದಾಖಲಿಸಿ ಒಟ್ಟು 8.75 ಲಕ್ಷ ದಂಡ ವಿಧಿಸಲಾಗಿದೆ. ಅಪ್ರಾಪ್ತರಿಗೆ ವಾಹನ ನೀಡಿದ ಪಾಲಕರ ವಿರುದ್ಧ ನ್ಯಾಯಾಲಯದ ಮೂಲಕ 25 ಸಾವಿರ ದಂಡ ವಿಧಿಸುವ ಜೊತೆಗೆ ವಾಹನದ ನೋಂದಣಿ ಪ್ರಮಾಣಪತ್ರ, ಪರ್ಮಿಟ್ ರದ್ದುಪಡಿಸುವ ಕ್ರಮ ಇದಲ್ಲದೆ, ನಿಯಮ ಉಲ್ಲಂಘಿಸಿದ ಅಪ್ರಾಪ್ತರಿಗೆ 25 ವರ್ಷ ವಯಸ್ಸಾಗುವವರೆಗೆ ಚಾಲನಾ ಪರವಾನಗಿ ನೀಡದಂತೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದರು.

ಕಿರುಸುದ್ದಿ

ಶ್ರೀಗಳ ಪಟ್ಟಾಧಿಕಾರ: ಪುರಾಣ ಪ್ರಾರಂಭೋತ್ಸವ



ಹುಣಸಗಿ: ತಾಲೂಕಿನ ಸಮೀಪದ ಬಲಶೆಟ್ಟಿಹಾಳ ಗ್ರಾಮದ ಶ್ರೀಗುರು ಬಸವಲಿಂಗ ಶಿವಯೋಗಿಗಳ ವಿರಕ್ತಮಠಕ್ಕೆ ಸಿದ್ದಲಿಂಗ ದೇವರ ನಿರಂಜನ ಚರಪಟ್ಟಾಧಿಕಾರ ಪ್ರಯುಕ್ತ ಜೂ.4ರಿಂದ 18ರ ವರೆಗೆ ನಿರಂತರ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಹಾಗೂ ಕಡಕೋಳ ಮಡಿವಾಳೇಶ್ವರರ ಪುರಾಣ ಹಮ್ಮಿಕೊಳ್ಳಲಾಗಿದೆ. ಅದರ ಪ್ರಯುಕ್ತ ಉದ್ಘಾಟನಾ ಸಮಾರಂಭ ಗುರುವಾರ ಸಂಜೆ 5ಕ್ಕೆ ಬಲಶೆಟ್ಟಿಹಾಳ ಗ್ರಾಮದ ಭವ್ಯ ವೇದಿಕೆಯಲ್ಲಿ ಜಾಲಹಳ್ಳಿಯ ಜಯಶಾಂತಲಿಂಗೇಶ್ವರ ಶಿವಾಚಾರ್ಯರು ಪೂಜ್ಯರು ದಿವ್ಯ ಸಾನಿಧ್ಯ ವಹಿಸಲಿದ್ದು, ಬೆಂಗಳೂರಿನ ಉದ್ಯಮಿ ಡಾ. ದಯಾನಂದ ಪಟ್ಟಣಶೆಟ್ಟಿ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಗ್ರಾಮದ ಶಾಂತಗೌಡ ಮಾಲಿಪಾಟೀಲ ಚನ್ನಪಟ್ಟಣ, ವಹಿಸಲಿದ್ದಾರೆ. ತಹಶೀಲ್ದಾರ್ ಎಂ.ಬಸವರಾಜ, ಕ್ಷೇತ್ರ ಶಿಕ್ಷಣಾಧಿಕಾರಿ ಲಿಂಗರಾಜ ಮೂಲಿಮನಿ, ಸಿಪಿಐ ರವಿಕುಮಾರ ಎಸ್.ಎನ್., ನಮ್ಮ ಕರ್ನಾಟಕ ಅಧ್ಯಕ್ಷ ಬಸವರಾಜ ಪಡುಕೋಟೆ, ಪಿಎಸ್ಐ ರಾಹುಲ್ ಪಾವಡೆ ಇತರೆ ಅಧಿಕಾರಿಗಳು, ಗ್ರಾಮದ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಶ್ರೀಮಠವು ಪ್ರಕಟಣೆಯಲ್ಲಿ ತಿಳಿಸಿದೆ.

ಆಧಾರ್ ಕಾರ್ಡ್ ಕೇಂದ್ರ ತೆರೆಯಿರಿ



ಕುರುಗೋಡು: ಕಂಪ್ಲಿ ಕ್ಷೇತ್ರದಲ್ಲಿ ಎಮ್ಮಿಗನೂರು ದೊಡ್ಡ ಗ್ರಾಮವು ಬಹು ಜನಸಂಖ್ಯೆ ಇದ್ದು, ಪ್ರಮುಖವಾಗಿ ಸರ್ಕಾರಿ ಶಾಲೆಗಳಿಗೆ ಶಿಕ್ಷಕರ ಭರ್ತಿ ಮಾಡಬೇಕು ಹಾಗೂ ಸಮುದಾಯ ಆಸ್ಪತ್ರೆ 30 ಹಾಸಿಗೆ ಮೇಲ್ದರ್ಜೆಗೆ ಏರಿಸಬೇಕು. ಆಧಾರ್ ಕಾರ್ಡ್ ಕೇಂದ್ರ ತೆರೆಯಬೇಕು. ಪಟ್ಟಣ ಪಂಚಾಯಿತಿ ಮಾಡಬೇಕು ಎಮ್ಮಿಗನೂರು ಯುವ ಮುಖಂಡ ಎಳ್ಳಾರ್ತಿ ರಾಘವೇಂದ್ರ ರೆಡ್ಡಿ ಆಗ್ರಹಿಸಿದ್ದಾರೆ.

ಬಿ.ನಾಗೇಂದ್ರಗೆ ಕೈ ತಪ್ಪಿದ ಸಚಿವ ಸ್ಥಾನ: ನಿರಾಸೆ

ಬಳ್ಳಾರಿ: ನೂತನ ಸರ್ಕಾರದಲ್ಲಿ ಮಾಜಿ ಸಚಿವ, ಗ್ರಾಮೀಣ ಶಾಸಕ ಬಿ.ನಾಗೇಂದ್ರ ಅವರು ಸಚಿವರಾಗಲಿದ್ದಾರೆ ಎನ್ನುವ ನಿರೀಕ್ಷೆಯಲ್ಲಿದ್ದ ಅವರ ಬೆಂಬಲಿಗರು, ಕಾರ್ಯಕರ್ತರಲ್ಲಿ ಈ ಬೆಳವಣಿಗೆ ನಿರಾಸೆಯನ್ನುಂಟು ಮಾಡಿದೆ. ಯಾವುದೇ ತಪ್ಪು ಮಾಡದಿದ್ದರೂ ಕೆಲವರು, ನಮ್ಮ ನಾಗೇಂದ್ರ ಅವರನ್ನು ರಾಜಕೀಯವಾಗಿ ಮುಗಿಸಲು ಮಾಡಿಸಿದ ಸಂಚು ಇದು, ವಾಲ್ಮೀಕಿ ಸಮಾಜದಲ್ಲಿ ದೊಡ್ಡ ನಾಯಕರಾಗಿ ಬೆಳೆದರೆ ನಮ್ಮ ಆಟ ನಡೆಯಲ್ಲ ಎಂದು ಕೆಲವರು ಉದ್ದೇಶ ಪೂರ್ವಕವಾಗಿ ನಾಗೇಂದ್ರ ಅವರನ್ನು ವಾಲ್ಮೀಕಿ ಅಭಿವೃದ್ಧಿ ನಿಗಮದ ಬಹುಕೋಟಿ ಹಗರಣದಲ್ಲಿ ಸಿಲೂಕಿಳಿಸಿದ್ದಾರೆ. ಎಲ್ಲ ಆರೋಪಗಳಿಂದ ಮುಕ್ತರಾಗಿ ಮತ್ತೆ ಜಿಲ್ಲಾ ಉಸ್ತುವಾರಿ ಸಚಿವರಾಗಿ ಜನಪರ ಆಡಳಿತ ನಡೆಸಲಿದ್ದಾರೆ ಎನ್ನುವ ನಂಬಿಕೆ, ವಿಶ್ವಾಸ ಅವರ ಬೆಂಬಲಿಗರಲ್ಲಿ, ಕಾರ್ಯಕರ್ತರಲ್ಲಿತ್ತು. ಸಿಬಿಐ ಅಧಿಕಾರಿಗಳು ಹಗರಣಕ್ಕೆ ಸಂಬಂಧಿಸಿ ಸಲ್ಲಿಸಿದ ಆರೋಪ ಪಟ್ಟಿಯಲ್ಲಿ ನಾಗೇಂದ್ರ ಅವರ ಹೆಸರನ್ನು ಉಲ್ಲೇಖಿಸಿರುವುದು ಬೆಂಬಲಿಗರಲ್ಲಿ ನಿರಾಸೆಯನ್ನುಂಟು ಮಾಡಿದೆ.

ಸಾಲ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ವಿಜಯನಗರ: ಹೊಸಪೇಟೆ ನಗರದ ಡೇ-ನಲ್ಮ್ ವಿಭಾಗದಿಂದ ಪ್ರಧಾನ ಮಂತ್ರಿಗಳ ಆತ್ಮ ನಿರ್ಭರ್ ನಿಧಿ ಯೋಜನೆಯಡಿ ಬೀದಿ ಬದಿ ವ್ಯಾಪಾರಿಗಳು ತಮ್ಮ ವ್ಯಾಪಾರವನ್ನು ವಿಸ್ತರಿಸಿಕೊಳ್ಳಲು ಬ್ಯಾಂಕ್‌ಗಳಲ್ಲಿ ಶೇ.7ರಷ್ಟು ಬಡ್ಡಿದರದಲ್ಲಿ ಕಿರು ಸಾಲ ಸೌಲಭ್ಯ ಕಲ್ಪಿಸಲಾಗಿದ್ದು, ಆಸಕ್ತ ವ್ಯಾಪಾರಿಗಳು ಅರ್ಜಿ ಸಲ್ಲಿಸಬಹುದು. ಹೊಸಪೇಟೆ ನಗರ ವ್ಯಾಪ್ತಿಯ ರಹವಾಸಿಗಳು ಮತ್ತು ನಗರಸಭೆ ವ್ಯಾಪ್ತಿಯಲ್ಲಿ ವ್ಯಾಪಾರ ಮಾಡುವ ಎಲ್ಲಾ ಬೀದಿ ಬದಿಯ ಸ್ಥಿರ ಸಂಚಾರಿ ವ್ಯಾಪಾರಿ, ಹಾಲು ಮಾರಾಟಗಾರರು, ಪತ್ರಿಕೆ ವಿತರಕರಿಗೂ ಆರ್ಥಿಕ ಭದ್ರತೆಗಾಗಿ 1ನೇ ಹಂತದಲ್ಲಿ ರೂ.15ಸಾವಿರ ಸಾಲ ನೀಡಿ 12 ಕಂತುಗಳಲ್ಲಿ ಮರುಪಾವತಿಸಬೇಕಾಗುತ್ತದೆ. ನಂತರ 2ನೇ ಹಂತದಲ್ಲಿ 25 ಸಾವಿರ ರೂ. ಸಾಲ ನೀಡಿ ಸದರಿ ಸಾಲವನ್ನು 18 ಕಂತುಗಳಲ್ಲಿ ಮರು ಪಾವತಿಸಿದಲ್ಲಿ 3ನೇ ಹಂತದಲ್ಲಿ ರೂ.50 ಸಾವಿರ ಸಾಲವನ್ನು 36 ಕಂತುಗಳಲ್ಲಿ ಮರುಪಾವತಿಸಲು ಅವಕಾಶವಿದೆ. ಜೂ.30ರ ಒಳಗಾಗಿ ಅರ್ಜಿ ಸಲ್ಲಿಸಬಹುದು ಎಂದು ನಗರಸಭೆ ಪೌರಾಯುಕ್ತ ಶಿವಕುಮಾರ್ ತಿಳಿಸಿದ್ದಾರೆ.



ಕುಷ್ಟಗಿ: ತಾಲೂಕಿನ ಗೊರೇಬಿಹಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಶಿಕ್ಷಕರನ್ನು ನಿಯೋಜಿಸಬೇಕು ಎಂದು ಗ್ರಾಮಸ್ಥರು ಡಿಡಿಪಿಐ ಇಲಾಖೆ ಶಾಲಾ ಶಿಕ್ಷಣ ಇಲಾಖೆ ಸಿಬ್ಬಂದಿಗೆ ಮಂಗಳವಾರ ಮನವಿ ಪತ್ರ ಸಲ್ಲಿಸಿದರು.

ನಾಟಕ ಮಾನವೀಯ ಪ್ರತಿಬಿಂಬದ ಪ್ರತೀಕ

ಬಳ್ಳಾರಿ: ಮನುಷ್ಯನಲ್ಲಿ ಮಾನವೀಯತೆ ತುಡಿತ ಹಾಗೂ ತಮ್ಮದೇ ಪ್ರತಿಬಿಂಬ ತೋರಿಸಿಕೊಡುವುದೇ ನಾಟಕ ಕಲೆಯ ವೈಶಿಷ್ಟ್ಯ ಎಂದು ಮೈಸೂರಿನ ರಂಗಭೂಮಿ ನಿರ್ದೇಶಕ ಡಾ.ಸಿ ಬಸವಲಿಂಗಯ್ಯ ಹೇಳಿದರು. ಇಲ್ಲಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಡಾ.ಬಿ.ಆರ್. ಅಂಬೇಡ್ಕರ್ ಸಭಾಭವನದಲ್ಲಿ ರಮಣಿಕ ಗುಪ್ತ ಅವರ ಸ್ಮರಣಾರ್ಥ ನಿಮಿತ್ತ ಆಯೋಜಿಸಿರುವ 10 ದಿನಗಳ ರಾಷ್ಟ್ರೀಯ ರಂಗಭೂಮಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದರು. ನಾಟಕಗಳ ಪಾತ್ರಗಳು ಮಾನವನ ಭಾವನೆಗಳೊಂದಿಗಿನ ಆಟವಾಗಿವೆ. ಸೃಜನಶೀಲವಾದ ಸುಳ್ಳುಗಳ ಮೂಲಕ ಪಾತ್ರಗಳಿಗೆ ಜೀವ ತುಂಬಿ ಮನೋಜ್ಞವಾಗಿ ಅಭಿನಯಿಸಿ ಮನಗೆಲ್ಲುವುದೇ ನಾಟಕಗಳ ಜೀವಾಳವಾಗಿದೆ ಎಂದು ಅಭಿಪ್ರಾಯಪಟ್ಟರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ದಿನಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಮಾತನಾಡಿ, ಪತ್ರಕರ್ತರೇ ನಿಜವಾದ ಪ್ರೇಕ್ಷಕರಂತಿದ್ದು, ಜಗತ್ತಿನಲ್ಲಿ ನಡೆಯುವ ಎಲ್ಲ ಪ್ರಹಸನಗಳಿಗೂ ಪುರಾವೆಯಾಗಿರುತ್ತಾರೆ. ನಾಡಿನಲ್ಲಿ ನಡೆಯುವ, ನಡೆಯುತ್ತಿರುವ ಚಳುವಳಿಗಳಿಗೆ ಶಕ್ತಿ ಕೊಟ್ಟಿದ್ದೆ ರಂಗಭೂಮಿ. ಆದರೆ ಇತ್ತೀಚಿನ ದಿನಗಳಲ್ಲಿ 'ಭೂಮಿ'ಗೆ ತಲೆದೋರಿರುವ ನೈಸರ್ಗಿಕ ಸಮಸ್ಯೆಗಳಂತೆ ರಂಗಭೂಮಿ ಕ್ಷೇತ್ರಕ್ಕೂ ಸಂಕಷ್ಟ ಎದುರಾಗಿದೆ ಎಂದು ಅಭಿಪ್ರಾಯಪಟ್ಟರು. ಅಧ್ಯಕ್ಷತೆ ವಹಿಸಿದ್ದ ವಿವಿಯ ಕುಲಪತಿ ಪ್ರೊ.ಎಂ ಮುನಿರಾಜು ಅವರು ಮಾತನಾಡಿದರು. ವಿಭಾಗದ ಮುಖ್ಯಸ್ಥ ಪ್ರೊ. ಶಾಂತಾನಾಯ್ಕ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿವಿಯ ಕುಲಸಚಿವ ಪ್ರೊ.ವಿ.ಲೋಕೇಶ್, ಕಲಾ ನಿಕಾಯದ ಡೀನ್ ಪ್ರೊ.ರಾಬರ್ಟ್ ಜೋಸ್ ಸೇರಿದಂತೆ ಇತರರಿದ್ದರು. ಡಾ.ಅಣ್ಣಾಜಿ ಕೃಷ್ಣಾರೆಡ್ಡಿ ನಿರೂಪಿಸಿದರು. ಡಾ.ಶಿವಪ್ರಸಾದ್ ವಂದಿಸಿದರು.



ಬಳ್ಳಾರಿ: ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಡಾ.ಬಿ.ಆರ್ ಅಂಬೇಡ್ಕರ್ ಸಭಾಭವನದಲ್ಲಿ ರಮಣಿಕ ಗುಪ್ತ ಅವರ ಸ್ಮರಣಾರ್ಥ ನಿಮಿತ್ತ ಆಯೋಜಿಸಿರುವ 10 ದಿನಗಳ ರಾಷ್ಟ್ರೀಯ ರಂಗಭೂಮಿ ಕಾರ್ಯಾಗಾರಕ್ಕೆ ಮೈಸೂರಿನ ರಂಗಭೂಮಿ ನಿರ್ದೇಶಕ ಡಾ.ಸಿ ಬಸವಲಿಂಗಯ್ಯ ಚಾಲನೆ ನೀಡಿದರು.

ತಾಪಂ ಸಾಮಾನ್ಯ ಸಭೆ | ಜಿಪಂ ಉಪ ಕಾರ್ಯದರ್ಶಿ ಸೂಚನೆ

ಡಿ ದರ್ಜೆ ನೌಕರರಿಗೆ ವೇತನ ನೀಡಿ

ಹಗರಿಬೊಮ್ಮನಹಳ್ಳಿ: ಆರೋಗ್ಯ ಇಲಾಖೆಯ ನಾಲ್ಕು ಜನ ಡಿ ದರ್ಜೆ ನೌಕರರಿಗೆ ವರ್ಷ ಕಳೆದರೂ ಸಂಬಳ ಇಲ್ಲ ಎಂದು ಹೇಳಲಾಗುತ್ತಿದೆ. ಇವರ ಜೀವನ ಹೇಗೆ ನಡೆಸಬೇಕು. ಈ ಬಗ್ಗೆ ಇಲಾಖೆಯ ಮುಖ್ಯಸ್ಥರಾದ ನೀವು ಕ್ರಮ ವಹಿಸಬೇಕಿತ್ತು. ನಿಮಗೆ ಗೊತ್ತಾಗದಿದ್ದರೆ ಹಿರಿಯ ಅಧಿಕಾರಿಗಳ ಸಲಹೆ ಪಡೆದುಕೊಂಡು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಿ ಎಂದು ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ತಿಮ್ಮಣ್ಣ ಅವರು ಟಿಎಚ್‌ಒಗೆ ಸೂಚಿಸಿದರು.

ಮಂಗಳವಾರ ಪಟ್ಟಣದ ತಾಲೂಕ ಪಂಚಾಯತಿ ಸಭಾಂಗಣದಲ್ಲಿ ಆಯೋಜಿಸಿದ್ದ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಅವರ ನೇತೃತ್ವದಲ್ಲಿ ನಡೆದ 2026-27ನೇ ವಿವಿಧ ಇಲಾಖೆಗಳ ಸಹಯೋಗದಲ್ಲಿ ಸಾಮಾನ್ಯ ಸಭೆಯನ್ನು ಆಯೋಜಿಸಲಾಗಿತ್ತು.

ಈ ವೇಳೆ ತಾಲೂಕ ವೈದ್ಯಾಧಿಕಾರಿ ಡಾ.ಪ್ರವೀಣ್‌ಕುಮಾರ್ ಮಾತನಾಡಿ, ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ಮಾಹಿತಿ ನೀಡಿದರು ಬೆಣಕಲ್ಲು, ಹನಸಿ, ಬಾಚಿಗೊಂಡನಹಳ್ಳಿ ಮತ್ತು ಕೋಗಳಿ ಪಿಎಚ್‌ಸಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುವ ನಾಲ್ಕು ಜನ ಡಿ ದರ್ಜೆ ನೌಕರರಿಗೆ ಎಂಟು ಲಕ್ಷ ವೇತನ ಬಾಕಿ ಇದೆ ಎಂದರು.



> ಎಂಟು ಇಲಾಖೆಗಳ ವೇತನ, ವೇತನೇತರ ವಿವಿಧ ಇಲಾಖಾವಾರು ಒಟ್ಟು 133 ಕೋಟಿ 49 ಲಕ್ಷ 71 ಸಾವಿರ ಮೊತ್ತ ತಾಪಂನಿಂದ ಅನುಮೋದನೆಗೊಂಡು ಜಿಪಂ ಅನುಮೋದನೆಗೆ ಕಳುಹಿಸಲಾಗುತ್ತದೆ. ಬಳಿಕ ಸರ್ಕಾರದಿಂದ ಇಲಾಖೆಗಳಿಗೆ ಹಣ ಬಿಡುಗಡೆಯಾಗುತ್ತದೆ. ಹೆಚ್ಚುವರಿ ಅನುದಾನದ ಅಗತ್ಯತೆ ಇದ್ದರೆ ಪ್ರತ್ಯೇಕ ಪ್ರಸ್ತಾವನೆ ಸಲ್ಲಿಸಬೇಕು.
> ■ ಪಲ್ಲಯ್ಯನ ಕೋಟೆ ವಿಶ್ವನಾಥ್, ತಾಪಂ ಇಒ

ಈ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ತಂದಿದ್ದೀರಾ ಎಂದು ತಾಪಂ ಇಒ ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಪತ್ರ ಬರೆದಿರುವುದಾಗಿ ತಿಳಿಸಿದರು.

ಪತ್ರ ಬರೆಯುವುದಷ್ಟೇ ಅಲ್ಲ ಈ ಬಗ್ಗೆ ಮೇಲಧಿಕಾರಿಗಳಿಗೆ ಪದೇ ಪದೆ ತಿಳಿಸಬೇಕಿತ್ತು. ಇದಕ್ಕೆ ಧ್ವನಿಗೂಡಿಸಿದ ಜಿಪಂ ಉಪ ಕಾರ್ಯದರ್ಶಿ ವರ್ಷವಿಡೀ ವೇತನ ಇಲ್ಲವೆಂದರೆ ತಪ್ಪು ಸಂದೇಶಗಳಿಗೆ ದಾರಿಯಾಗುವುದು ಬೇಡ ಈ ಬಗ್ಗೆ ಕೂಡಲೇ ಕ್ರಮ ವಹಿಸಿ ಎಂದರು.

ಸಮಾಜ ಕಲ್ಯಾಣ ಇಲಾಖೆಯ ಜಗದೀಶ್ ದಿಡಗೂರು ಮಾತನಾಡಿ, ಇಲಾಖೆಯಲ್ಲಿ 40 ಜನ ಹೊರಗುತ್ತಿಗೆ ನೌಕರರಿದ್ದು 60 ಲಕ್ಷ ವೇತನ ಪಾವತಿಸಲಾಗಿದೆ. ಸ್ವಚ್ಛತಾ ಸಾಮಗ್ರಿ ಲೇಖನ ಸಾಮಗ್ರಿ ಗಳಿಗೆ 11 ಲಕ್ಷ 86 ಸಾವಿರ, ಕಟ್ಟಡ ಬಾಡಿಗೆಗೆ 16 ಲಕ್ಷ 36, ಸಾವಿರ ನೀಡಲಾಗಿದೆ ಎಂದರು.

ಹಿಂದುಳಿದ ವರ್ಗಗಳ ಇಲಾಖೆಯ ಕಲ್ಯಾಣ ಅಧಿಕಾರಿ ಕೊಟ್ರೇಶ್ ನಾಯ್ಕ್ ಮಾತನಾಡಿ, 32.16 ಲಕ್ಷ ರೂ. ವೇತನ ಸಿಬ್ಬಂದಿಗೆ ನೀಡಲಾಗಿದೆ. 8.97 ಲಕ್ಷ ರೂ. ಸ್ಟೇಷನರಿ ಜೆರಾಕ್ಸ್ ವಿದ್ಯುತ್ ಬಿಲ್ ಕಟ್ಟಡ ಬಾಡಿಗೆ ಸೇರಿದಂತೆ ಇನ್ನಿತರ ಖರ್ಚು ವೆಚ್ಚಗಳನ್ನು ನಿಭಾಯಿಸಲಾಗಿದೆ ಡಾಟಾ ಆಪರೇಟರ್ ಮತ್ತು ಡಿ ಗ್ರೂಪ್ ನೌಕರರಿಗೆ ಸಂಬಳ ನಿಗದಿಯಾಗಿಲ್ಲ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಜಗದೀಶ್ ಮಾತನಾಡಿ, 111 ಕೋಟಿ 86ಲಕ್ಷ 8 ಸಾವಿರ ಅನುದಾನದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳ ಅನುದಾನಿತ ಶಾಲೆಗಳ ಮುಖ್ಯ ಶಿಕ್ಷಕರಿಗೆ ಸಹ ಶಿಕ್ಷಕರಿಗೆ ವೇತನ ಇನ್ನಿತರ ಖರ್ಚು ಹೆಚ್ಚು ನಿಭಾಯಿಸಲಾಗಿದೆ 2,39,000 ಹಣದ ಕೊರತೆ ಇದೆ ಎಂದರು.

ಉದ್ಯೋಗ ಖಾತ್ರಿಯ ಸಹಾಯಕ ನಿರ್ದೇಶಕರಮೇಶ್ ಮಹಾಲಿಂಗಪುರ, ಅಕ್ಷರ ದಾಸೋಹದ ಅಧಿಕಾರಿ ರಾಜ ಕುಮಾರ ನಾಯ್ಕ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಶೈಲಾ ಶಿಕ್ಷಣ ಇಲಾಖೆಯ ಎಂ.ಎಸ್.ಪ್ರಭಾಕರ, ತೋಟಗಾರಿಕೆ ಇಲಾಖೆಯ ವಿಜಯಕುಮಾರ್ ನೀಚನಹಳ್ಳಿ, ಕೃಷಿ ಇಲಾಖೆಯ ಎಂ.ಎಸ್.ಪಾಟೀಲ ಇತರರಿದ್ದರು.

ರೈತರ ಮಕ್ಕಳಲ್ಲಿ ಶಿಕ್ಷಣದ ಆಸಕ್ತಿ ಹೆಚ್ಚಿಸಿ

ಸಿರುಗುಪ್ಪ: ಗ್ರಾಮೀಣ ಭಾಗದ ರೈತರ ಮಕ್ಕಳಲ್ಲಿ ಶಿಕ್ಷಣದ ಆಸಕ್ತಿ ಹೆಚ್ಚಿಸಿ ಮತ್ತು ಸ್ಪರ್ಧಾತ್ಮಕ ಮನೋಭಾವ ಬೆಳೆಸುವ ಉದ್ದೇಶದಿಂದ ಶೈಕ್ಷಣಿಕ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕಾಗಿದೆ ಎಂದು ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಚೊಕ್ಕಬಸವನಗೌಡ ಹೇಳಿದರು.

ನಗರದ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಪ್ರೋತ್ಸಾಹ ಧನಸಹಾಯ ಕಾರ್ಯಕ್ರಮದಲ್ಲಿ ಮಾತನಾಡಿದರು.

ಶಿಕ್ಷಣ ಪಡೆದು ಸರ್ಕಾರಿ ಕೆಲಸದ ಕಡೆ ಮುಖ ಮಾಡದೇ ವ್ಯವಸಾಯದಲ್ಲಿ ಕಡಿಮೆ ಬಂಡವಾಳ ಹೂಡಿಕೆ ಮಾಡಿ ಹೆಚ್ಚು ಲಾಭವನ್ನು ಪಡೆದು ಸ್ವಯಂ ಉದ್ಯೋಗದೊಂದಿಗೆ ಪ್ರಗತಿಯನ್ನು ಸಾಧಿಸುವಂತ ಯುವಕರು ನೀವೂ ಆಗಬೇಕು. ಸಹಕಾರಿ ಬ್ಯಾಂಕುಗಳು ಸ್ವಂತ ಬಂಡವಾಳದಲ್ಲಿ ಹಣ ವಿನಿಮಯಗೊಳಿಸಿ ವ್ಯವಹಾರ ನಡೆಸಿದಾಗ ಪ್ರತಿಯೊಂದು ಸಹಕಾರಿ ಬ್ಯಾಂಕುಗಳು ಪ್ರಗತಿ ಹೊಂದಲು ಸಾಧ್ಯವಾಗುತ್ತದೆ ಎಂದರು.

ರೈತರು, ಗ್ರಾಹಕರ ಸಹಕಾರದಿಂದ ಈ ಆರ್ಥಿಕ ವರ್ಷದಲ್ಲಿ 2.40 ಕೋಟಿ ರೂ.ಗಳು ಲಾಭಾಂಶ ಹೊಂದಿದೆ ಎಂದರು. 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯ 120 ಅಧಿಕ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಪ್ರೋತ್ಸಾಹ ಧನಸಹಾಯ ಹಾಗೂ ಪ್ರಮಾಣ ಪತ್ರ ನೀಡಿ ಗೌರವಿಸಿದರು.

ವಯೋ ನಿವೃತ್ತ ಹೊಂದಿದ ತೆಕ್ಕಲಕೋಟೆ ಬಿಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ಮರೇಗೌಡ ಹಾಗೂ ವಿ.ಎನ್.ಎಸ್. ಕಾರ್ಯದರ್ಶಿ ಮಹಾಬಲೇಶ್ವರ ಅವರನ್ನು ಸನ್ಮಾನಿಸಿದರು.

ಹರಗಿನಡೋಣಿ ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕ ವೀರಭದ್ರಯ್ಯ ಸ್ವಾಮಿ, ಸಹಾಯಕ ಉಪನಿಬಂಧಕ ಜ್ಞಾನಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕರಿಬಸಪ್ಪ ಮಾತನಾಡಿದರು. ಪಿಕಾರ್ಡ್ ಬ್ಯಾಂಕ್ ಉಪಾಧ್ಯಕ್ಷ ಚಂದ್ರ ರೆಡ್ಡಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾಂಚರಯ್ಯ, ಬ್ಯಾಂಕ್ ವ್ಯವಸ್ಥಾಪಕ ತಿಪ್ಪಣ್ಣ ಎಸ್.ಬನಸೋಡಿ, ಸಾಹಿತಿ ಡಾ.ಪಿ.ದಿವಾಕರ ನಾರಾಯಣ ಹಾಗೂ ಬ್ಯಾಂಕ್ ನಿರ್ದೇಶಕರು ಮತ್ತು ಸಿಬ್ಬಂದಿ ಭಾಗವಹಿಸಿದ್ದರು.



ಹಾಲು ಸಂಗ್ರಹಣೆಯಲ್ಲಿ ದೇಶಕ್ಕೆ ಕರ್ನಾಟಕ 2ನೇ ಸ್ಥಾನ

ಬಳ್ಳಾರಿ: ಡೈರಿ ಉದ್ಯಮಕ್ಕೆ ಸಂಬಂಧಿಸಿದ ಉಪಕ್ರಮಗಳ ಬಗ್ಗೆ ಅರಿವು ಮೂಡಿಸುವುದು ಮತ್ತು ಬೆಂಬಲಿಸುವುದು 'ವಿಶ್ವ ಹಾಲು ದಿನ'ದ ಪ್ರಾಮುಖ್ಯತೆ ಆಗಿದೆ ಎಂದು ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಉಪಾಧ್ಯಕ್ಷ ಎನ್. ಸತ್ಯನಾರಾಯಣ ಹೇಳಿದರು.


ನಗರದ ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ (ಬಿ.ಎಂ.ಸಿ.ಆರ್.ಸಿ) ಬಿ.ಸಿ.ರಾಯ್ ಸಭಾಂಗಣದಲ್ಲಿ ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ವತಿಯಿಂದ ಸೋಮವಾರ 'ವಿಶ್ವ ಹಾಲು ದಿನಾಚರಣೆ' ನಿಮಿತ್ತ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಮಾತನಾಡಿದರು.

ಕೆಎಂಎಫ್ (ಕಹಾಮ) ಬೆಂಗಳೂರು ಉತ್ಪಾದನಾ ವಿಭಾಗದ ನಿರ್ದೇಶಕ ಬಿ.ಆರ್. ಪ್ರಭುಶಂಕರ ಅವರು ಮಾತನಾಡಿ, ಕರ್ನಾಟಕ ರಾಜ್ಯದಿಂದ ಪ್ರತಿದಿನ ಬರೋಬ್ಬರಿ ಒಂದು ಕೋಟಿ ಹನ್ನೊಂದು ಲಕ್ಷ ಲೀಟರ್ ಗುಣಮಟ್ಟದ ಹಾಲನ್ನು ಶೇಖರಿಸಿ ಗ್ರಾಹಕರಿಗೆ ಯಶಸ್ವಿಯಾಗಿ ಸರಬರಾಜು ಮಾಡಲಾಗುತ್ತಿದೆ. ಈ ಮೂಲಕ ಭಾರತದಲ್ಲಿಯೇ ಅತಿ ಹೆಚ್ಚು ಹಾಲು ಸಂಗ್ರಹಣೆ ಮಾಡುವ ಎರಡನೇ ದೊಡ್ಡ ರಾಜ್ಯವಾಗಿ ಕರ್ನಾಟಕ ಹೊರಹೊಮ್ಮಿದೆ ಎಂದು ತಿಳಿಸಿದರು.

ಒಕ್ಕೂಟದ ಪ್ರಭಾರ ವ್ಯವಸ್ಥಾಪಕ ಎಸ್. ವೆಂಕಟೇಶ ಗೌಡ, ಒಕ್ಕೂಟದ ನಿರ್ದೇಶಕ ಜಿ.ಕೃಷ್ಣರೆಡ್ಡಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಎಸ್.ಸುದರ್ಶನ ರೆಡ್ಡಿ ಅವರು ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಹತ್ವ ಹಾಗೂ ಸಮತೋಲಿತ ಆಹಾರದಲ್ಲಿರುವ ಪೋಷಕಾಂಶಗಳು ಆರೋಗ್ಯಕ್ಕೆ ಹೇಗೆ ಸಹಕಾರಿ ಎನ್ನುವ ಕುರಿತು ವಿವರಿಸಿದರು.

ಒಕ್ಕೂಟದ ಉಪ ವ್ಯವಸ್ಥಾಪಕ(ಗು.ನಿ) ಟಿ. ಮಲ್ಲಿಕಾರ್ಜುನ, ಮಾರುಕಟ್ಟೆ ಸಹಾಯಕರಾದ ಲೋಹಿತಕುಮಾರ, ಪ್ರಸನ್ನ ಕುಮಾರ, ಕೆಮಿಸ್ಟ್ ಕೆ.ಸರೋಜಾ, ಸಿ.ಎನ್.ಮಂಜುನಾಥ, ಬಾಬು, ಬಿ.ಎಂ.ಸಿ.ಆರ್.ಸಿ ಪ್ರಾಧ್ಯಾಪಕ ಡಾ.ರಮೇಶ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಉಪನ್ಯಾಸಕೀ ನಂದಿನಿ ಸ್ವಾಗತಿಸಿದರು. ಒಕ್ಕೂಟದ ಉಪ ವ್ಯವಸ್ಥಾಪಕ ಟಿ.ಮಲ್ಲಿಕಾರ್ಜುನ ವಂದಿಸಿದರು.



ಸಂಚಾರಿ ನಿಯಮ ಉಲ್ಲಂಘನೆ: 5.41 ಲಕ್ಷ ರೂ. ದಂಡ ವಸೂಲಿ

ಬಳ್ಳಾರಿ: ಜಿಲ್ಲಾ ಪೊಲೀಸ್ ಇಲಾಖೆ ಜೂ.1ರಿಂದ ಹೆಲ್ಮೆಟ್ ಕಡ್ಡಾಯಗೊಳಿಸಿದ್ದು, ಸಂಚಾರಿ ನಿಯಮ ಉಲ್ಲಂಘನೆ ಪ್ರಕರಣಕ್ಕೆ ಸಂಬಂಧಿಸಿ ಎರಡೇ ದಿನಗಳಲ್ಲಿ ಒಟ್ಟು 1,083 ಪ್ರಕರಣಗಳು ದಾಖಲಾಗಿದ್ದು, 5,41,500 ದಂಡ ಸಂಗ್ರಹವಾಗಿದೆ.

ನಗರ ಸೇರಿದಂತೆ ಜಿಲ್ಲೆಯಲ್ಲಿ ಸಂಚಾರಿ ನಿಯಮ ಉಲ್ಲಂಘಿಸುವವರ ವಿರುದ್ಧ ಜಿಲ್ಲಾ ಪೊಲೀಸ್ ಇಲಾಖೆ ಹದ್ದಿನ ಕಣ್ಣಿಟ್ಟಿದ್ದು, ಜೂ.1ಹಾಗೂ 2ರಂದು ಎರಡು ದಿನಗಳಲ್ಲಿ ಜಿಲ್ಲೆಯಾದ್ಯಂತ ನಡೆಸಿದ ವಿಶೇಷ ಕಾರ್ಯಾಚರಣೆಯಲ್ಲಿ 5.41 ಲಕ್ಷ ದಂಡ ಸಂಗ್ರಹವಾಗಿದೆ. ಎಸ್ಪಿ ಡಾ.ಸುಮನ್ ಡಿ.ಪೆನ್ನೇಕರ್ ಮಾತನಾಡಿ, ಬಳ್ಳಾರಿ ನಗರ ಪ್ರದೇಶದಲ್ಲೇ ಅತಿ ಹೆಚ್ಚು ಸಂಚಾರಿ ನಿಯಮ ಉಲ್ಲಂಘನೆಗಳ ಪ್ರಕರಣಗಳು ಕಂಡು ಬಂದಿವೆ. ನಗರದಲ್ಲಿ ಒಟ್ಟು 485 ಪ್ರಕರಣಗಳು ದಾಖಲಾಗಿವೆ. 2.42.500 ದಂಡದ ರೂಪದಲ್ಲಿ ಸಂಗ್ರಹವಾಗಿದೆ. ಅದೇ ರೀತಿ ಸಿರುಗುಪ್ಪ ಉಪ ವಿಭಾಗದ ವ್ಯಾಪ್ತಿಯಲ್ಲಿ 334 ಪ್ರಕರಣಗಳು ಪತ್ತೆಯಾಗಿದ್ದು, 1.67 ಲಕ್ಷರೂ.ದಂಡ ವಿಧಿಸಲಾಗಿದೆ. ತೋರಣಗಲ್ಲು ಉಪ ವಿಭಾಗದಲ್ಲಿ 264 ಪ್ರಕರಣಗಳು ದಾಖಲಾಗಿದ್ದು, ವಾಹನ ಸವಾರರಿಂದ 1.32.ಲಕ್ಷ ರೂ.ದಂಡ ಸಂಗ್ರಹಿಸಲಾಗಿದೆ ಎಂದು ತಿಳಿಸಿದ್ದಾರೆ.

ಅರಿವು ಮೂಡಿಸಿದ ಅಧಿಕಾರಿಗಳು: ನಗರದಲ್ಲಿ ಜೂ.1ರಿಂದ ಕಾರ್ಯಾಚರಣೆಗೆ ಇಳಿದ ಪೊಲೀಸ್ ಅಧಿಕಾರಿಗಳು ಹೆಲ್ಮೆಟ್ ಕುರಿತು ವಾಹನ ಸವಾರರಲ್ಲಿ ಜಾಗೃತಿ ಮೂಡಿಸಿದರು.ಕೆಲವರಿಗೆ ದಂಡ ವಿಧಿಸಿ ಬಿಸಿ ಮುಟ್ಟಿಸಿದರು.

ಪಿಎಸ್ಐ ಟಿ.ಮಹಾಂತೇಶ ಮಾತನಾಡಿ, ಹೆಲ್ಮೆಟ್ ಧರಿಸುವುದರಿಂದ ಎದುರಾಗುವ ಅನಾಹುತಗಳನ್ನು ತಪ್ಪಿಸಬಹುದು, ಜೀವ ಉಳಿಸಬಹುದು, ಹೆಲ್ಮೆಟ್ ಕಡ್ಡಾಯ ನಮಗಾಗಿ ಅಲ್ಲ, ನಿಮ್ಮೆಲ್ಲರ ಸುರಕ್ಷತೆಗಾಗಿ, ನಿಮ್ಮ ಕುಟುಂಬದವರಿಗಾಗಿ, ದಂಡ ಭರಿಸುವುದು, ವಿಧಿಸುವುದು ಎಲ್ಲದಕ್ಕೂ ಶಾಶ್ವತ ಮಾರ್ಗವಲ್ಲ, ಹೆಲ್ಮೆಟ್ ನಿಂದ ಆಗುವ ಅನುಕೂಲತೆಗಳು, ಅನಾಹುತಗಳ ಬಗ್ಗೆ ಜನರಲ್ಲಿ ಜಾಗೃತಿ ಬರಬೇಕು. ಸವಾರರು ತಪ್ಪದೇ ಎಲ್ಲರೂ ಹೆಲ್ಮೆಟ್ ಕಡ್ಡಾಯವಾಗಿ ಧರಿಸಬೇಕು, ಸಂಚಾರಿ ನಿಯಮಗಳನ್ನು ಪಾಲಿಸಬೇಕು ಎಂದರು. ಇದಕ್ಕೂ ಮುನ್ನ ಜನರಲ್ಲಿ ಜಾಗೃತಿ ಜಾಥಾ, ಅಭಿಯಾನ, ಬ್ಯಾನರ್ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

ಡಾ.ವಿಜಯೇಂದ್ರಾಚಾರ್ಯ ಬೀಳ್ಕೊಡುಗೆ ಸಮಾರಂಭ

ಕುರುಗೋಡು: ಸರ್ಕಾರಿ ನೌಕರರಾಗಿ ಸೇವೆ ಸಲ್ಲಿಸುವುದು ಸಾಮಾನ್ಯವಾದ ವಿಷಯವಲ್ಲ. ಈ ಹಿಂದಿನ ಕಾಲಘಟ್ಟದಲ್ಲಿ ಇಂತಹ ಅಧಿಕಾರಿ ನಿವೃತ್ತಿ ತುಂಬಲಾರದ ನಷ್ಟವಾಗಿದೆ ಎಂದು ಗ್ರಾಮದ ಹಿರಿಯ ಎನ್.ಸೂಗಪ್ಪ ತಿಳಿದರು.

ಸಮೀಪದ ಎಮ್ಮಿಗನೂರು ಗ್ರಾಮ ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಡಾ.ವಿಜಯೇಂದ್ರಾಚಾರ್ಯ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ಎಮ್ಮಿಗನೂರು ಸೇರಿದಂತೆ ಗ್ರಾಮೀಣ ಪ್ರದೇಶದಲ್ಲಿ ಹಿರಿಯ ವಯೋ ನಿವೃತ್ತಿ ಅಧಿಕಾರಿ ವೈದ್ಯಾಧಿಕಾರಿ ವಿಜಯೇಂದ್ರಾಚರ್ ಸರ್ಕಾರಿ ನೌಕರರಾಗಿ ಗ್ರಾಮೀಣ ಪ್ರದೇಶದಲ್ಲಿ ಸುಮಾರು ವರ್ಷಗಳ ಕಾಲ ಬಡ ಬಗ್ಗೆ ಜನಸಾಮಾನ್ಯರ ಆರೋಗ್ಯ ವರ್ಗದ ಹಿತಕ್ಕಾಗಿ ಹಗಲು ರಾತ್ರಿ ಎನ್ನದೆ ನಿರಂತರ ಸೇವೆ ಸಲ್ಲಿಸಿದ್ದಾರೆ. ಇಂತಹ ಅಧಿಕಾರಿಯನ್ನು ಪಡೆಯುವುದು ನಮ್ಮ ಪುಣ್ಯ ಭಾಗ್ಯ ಎಂದರು.

ಇಂದಿನವರೆಗೂ ಕೂಡ ಇವರು ತಮ್ಮ ಗುಣಾತ್ಮಕತೆಯನ್ನು ಹೀಗೆಯೇ ಕಾಪಾಡಿಕೊಂಡು ಬಂದಿರುವುದು ನಮ್ಮೆಲ್ಲರ ಹೆಮ್ಮೆ ಎಂದರು.

ನಂತರ ನಿವೃತ್ತ ಡಾ.ವಿಜಯೇಂದ್ರಾಚಾರ್ಯ ಸನ್ಮಾನ ಸ್ವೀಕರಿಸಿ ಮಾತನಾಡಿ, ಸುತ್ತಮುತ್ತಲಿನ ಹತ್ತಾರು ಹಳ್ಳಿಯ ಗ್ರಾಹಕರು ಇಂದಿನವರೆಗೂ ಸಹ ಸಹೋದರ ಸಮಾನತೆಯಿಂದ ಬಾಳುತ್ತಿದ್ದಾರೆ. ನಾನು ಅಧಿಕಾರದಲ್ಲಿದ್ದಾಗ ಅದೇನು ಉಪಕಾರ ಮಾಡಿದ್ದೇನು ಅದನ್ನು ಜನರೇ ನನಗೆ ಕಲ್ಪಿಸಿ ಕೊಟ್ಟಂತಹ ಋಣ ಎಂದರು.



ಈ ವೇಳೆ ಗ್ರಾಮದ ಪ್ರಮುಖರಾದ ಬಿ.ಮಹೇಶಗೌಡ, ನಗರೂರು ಸೂಗಪ್ಪ, ಬೇಟಿಗೇರಿ ಮಲ್ಲಿಕಾರ್ಜನ, ಪಗಟೂರು ನಾಗರಾಜ ಶೆಟ್ಟಿ, ಜಿ.ನಾಗಿರೆಡ್ಡಿ, ವೈ.ಅಶ್ವಥ್ ರೆಡ್ಡಿ, ವಿ.ಮಲ್ಲಿಕಾರ್ಜನ, ವಿ.ಎಂ.ವಿರೇಶ ಸ್ವಾಮಿ, ಜಗನ್ನಥರೆಡ್ಡಿ, ಎಚ್.ಜಡೇಶ, ಕೆ.ಘನಮಠ ಸ್ವಾಮಿ, ಕೆ.ಶಿವರಾಂ ರೆಡ್ಡಿ, ಸಿಬ್ಬಂದ್ದಿ, ನೂರಾರು ಜನರಿದ್ದರು.

'ಜಿಲ್ಲಾ ಸಲಹಾ ಸಮಿತಿ' ಪುನರ್ ರಚನೆ: ಡಿಎಚ್‌ಒ

ಬಳ್ಳಾರಿ: ಗರ್ಭಪೂರ್ವ ಮತ್ತು ಪ್ರಸವಪೂರ್ವ ಭ್ರೂಣಲಿಂಗ ಪತ್ತೆ ತಂತ್ರ ವಿಧಾನಗಳ (ಲಿಂಗ ಆಯ್ಕೆ ಮತ್ತು ನಿಷೇಧ) ಕಾಯ್ದೆ 1994 ರಡಿ ರಾಜ್ಯ ಸರ್ಕಾರವು ಮುಂದಿನ ಮೂರು ವರ್ಷಗಳ ಅವಧಿಗೆ 'ಜಿಲ್ಲಾ ಸಲಹಾ ಸಮಿತಿ' ಯನ್ನು ಪುನರ್ ರಚಿಸಿ ಆದೇಶಿಸಿದೆ ಎಂದು ಡಿಎಚ್‌ಒ ಡಾ.ರಮೇಶ್ ಬಾಬು ಹೇಳಿದರು.

ನಗರದ ಡಿ ಎಚ್ ಒ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಸಭೆಯಲ್ಲಿ ಮಾತನಾಡಿದರು.

ಜಿಲ್ಲೆಯಲ್ಲಿ ಕಾನೂನುಬಾಹಿರ ಭ್ರೂಣಲಿಂಗ ಪತ್ತೆ ಕಾರ್ಯಗಳಿಗೆ ಕಡಿವಾಣ ಹಾಕುವುದು, ಸ್ಕ್ಯಾನಿಂಗ್ ಕೇಂದ್ರಗಳ ಮೇಲೆ ನಿಗಾ ಇಡುವುದು ಮತ್ತು ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟುವ ನಿಟ್ಟಿನಲ್ಲಿ ಈ ಸಮಿತಿಯು ಜಿಲ್ಲಾ ಆರೋಗ್ಯ ಇಲಾಖೆಯೊಂದಿಗೆ ಮಹತ್ವದ ಪಾತ್ರ ವಹಿಸಲಿದೆ ಎಂದು ತಿಳಿಸಿದರು.



ಮೂರು ವರ್ಷಗಳ ಅವಧಿ: ಪುನರ್ ರಚನೆಗೊಂಡಿರುವ ಈ ಜಿಲ್ಲಾ ಸಲಹಾ ಸಮಿತಿಯು ಮುಂದಿನ 3 ವರ್ಷಗಳ ಅವಧಿಗೆ ಅಸ್ತಿತ್ವದಲ್ಲಿರಲಿದೆ. ಜಿಲ್ಲೆಯಲ್ಲಿರುವ ಎಲ್ಲಾ ಸ್ಕ್ಯಾನಿಂಗ್ ಸೆಂಟರ್‌ಗಳು, ಐವಿಎಫ್ ಕ್ಲಿನಿಕ್‌ಗಳು ಮತ್ತು ಆಸ್ಪತ್ರೆಗಳು ಪಿಸಿಪಿಎನ್‌ಡಿಟಿ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿವೆಯೇ ಎಂಬುದನ್ನು ಸಮಿತಿ ಪರಿಶೀಲಿಸಬೇಕು ಎಂದರು.

ಪಿಸಿಪಿಎನ್‌ಡಿಟಿ ಕಾಯ್ದೆಯ ಸೆಕ್ಷನ್ 17(6) ರ ಅನ್ವಯ ಹಾಗೂ ಸರ್ಕಾರದ ವಿವಿಧ ನಿರ್ದೇಶನಗಳನ್ವಯ ಅಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿ ಸೇರಿ ಒಟ್ಟು 8 ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದೆ ಎಂದರು.

ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ವೀರೇಂದ್ರ ಕುಮಾರ್, ಸ್ತ್ರೀರೋಗ ತಜ್ಞರಾದ ಡಾ.ಪ್ರಣೀತಾ ಅಜಯ್, ಮಕ್ಕಳ ತಜ್ಞ ಡಾ.ಯೋಗಾನಂದ ರೆಡ್ಡಿ.ವೈ.ಸಿ., ರೇಡಿಯಾಲಜಿಸ್ಟ್ ಡಾ.ಕೃಷ್ಣ ಮೂರ್ತಿ ಎನ್., ಕಾನೂನು ತಜ್ಞ ಮಂಜುನಾಥ ಪೂಜಾರ್, ರೆಡ್ ಕ್ರಾಸ್ ಸಂಸ್ಥೆಯ ಸಮಾಜ ಸೇವಕ ಎ.ಎಚ್.ಅಶೋಕಕುಮಾರ್ ಜೈನ್, ಪ್ರಭಾರ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಖುರ್ಷಿದ್ ಬೇಗಂ, ವಿಷಯ ನಿರ್ವಾಹಕ ಗೋಪಾಲ್ ಕೆ.ಹೆಚ್., ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಪ್ರಕಾಶ್ ಎಸ್. ಕರ್ಜಗಿ, ರೇಣುಕಾ ಜಡಗನ್ನನವರ್, ಆರೋಗ್ಯ ನಿರೀಕ್ಷಣಾಧಿಕಾರಿ ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.

ಗೊರೇಬಿಹಾಳ ಶಾಲೆಗೆ ಶಿಕ್ಷಕರನ್ನು ನಿಯೋಜಿಸಿ

ಕುಷ್ಟಗಿ: ತಾಲೂಕಿನ ಗೊರೇಬಿಹಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಶಿಕ್ಷಕರನ್ನು ನಿಯೋಜಿಸಬೇಕು ಎಂದು ಗ್ರಾಮಸ್ಥರು ಡಿಡಿಪಿಐ ಇಲಾಖೆ ಶಾಲಾ ಶಿಕ್ಷಣ ಇಲಾಖೆ ಸಿಬ್ಬಂದಿಗೆ ಮಂಗಳವಾರ ಮನವಿ ಪತ್ರ ಸಲ್ಲಿಸಿದರು. ಗ್ರಾಮದಲ್ಲಿ 1-8ನೇ ತರಗತಿವರಗೆ ಶಾಲೆ ನಡೆಯುತ್ತಿದ್ದು, ಸುಸಜ್ಜಿತವಾದ ಕಟ್ಟಡಗಳಿವೆ. ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ದೊರೆಯದೇ ತೊಂದರೆಯಾಗಿದೆ. 180ಕ್ಕೂ ಅಧಿಕ ವಿದ್ಯಾಥಿಗಳು ಕಲಿಕೆಯಲ್ಲಿ ತೊಡಗಿದ್ದಾರೆ. ವಿದ್ಯಾಭ್ಯಾಸಕ್ಕೆ ಖಾಯಂ ಶಿಕ್ಷಕರಿಲ್ಲದೇ ಮಕ್ಕಳು ಶಿಕ್ಷಣದಿಂದ ವಂಚಿತಗೊಂಡಿದ್ದಾರೆ. ಸರ್ಕಾರಿ ಶಾಲೆಯಲ್ಲಿ ವಿಷಯವಾರು ಶಿಕ್ಷಕರು ಅವಶ್ಯವಿದ್ದು ಶಾಲೆಗೆ 6 ಜನ ಶಿಕ್ಷಕರನ್ನು ನೇಮಿಸಬೇಕಿದೆ. ಪ್ರಸುತ್ತ ಶಾಲೆಯಲ್ಲಿ ಶಿಕ್ಷಕರಿಲ್ಲದೇ ತೀರಾ ತೊಂದೆಯಾಗಿದೆ. ಕೂಡಲೇ ಶಾಲೆಗೆ ಶಿಕ್ಷಕರನ್ನು ನಿಯೋಜಿಸಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ಶಾಲೆಗೆ ಬೀಗ ಜಡಿದು ಮಕ್ಕಳೊಂದಿಗೆ ಉಗ್ರವಾದ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಗ್ರಾಮಸ್ಥರು ಉಪ ನಿರ್ದೇಶಕರಿಗೆ ಮನವಿ ಮಾಡಿದ್ದಾರೆ. ಗ್ರಾಮಸ್ಥರಾದ ಮಡಿಯಪ್ಪನವರ್, ದೇವಪ್ಪ ಮೇಣಸಗಿ, ವಿರುಪಾಕ್ಷಗೌಡ ಗೌಡ್ರ, ಶರಣಪ್ಪ ಕುರಿ, ಶಿವಮೂರ್ತೆಯ್ಯ ಹಿರೇಮಠ ಶರಣಪ್ಪ ಪಿ.ಮಾಗಿ, ಪಾರಪ್ಪ, ಫಕೀರಗೌಡ ದೊಣ್ಣೆಗುಡ್ಡ, ರಾಜೇಶಖರಗೌಡ ಗೌಡ್ರ ಇದ್ದರು.

ಆನ್‌ಲೈನ್ ಮೂಲಕ ವಿದ್ಯುತ್ ಬಿಲ್ ಪಾವತಿಸಿ

ಹಗರಿಬೊಮ್ಮನಹಳ್ಳಿ: ಉಪವಿಭಾಗದ ಎಲ್ಲಾ ಶಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರಾಹಕರು 2026 ಜೂನ್ ತಿಂಗಳಿಂದ ವಿದ್ಯುತ್ ಬಿಲ್ ಬಾಕಿ ಮೊತ್ತವನ್ನು ಜೆಸ್ಕಾಂ ವೆಬ್‌ಸೈಟ್ Https\\gescom.Karnataka.Gov.in ಮೂಲಕವಾಗಲಿ ಅಥವಾ ಫೋನ್ ಪೇ, ಗೂಗಲ್ ಪೇ ಮುಖಾಂತರವಾಗಲಿ ವಿದ್ಯುತ್ ಬಾಕಿ ಬಿಲ್ ಪಾವತಿಸಲು ಹಗರಿಬೊಮ್ಮನಹಳ್ಳಿಯ ಜೆಸ್ಕಾಂ ಅಧಿಕಾರಿ ಕೆ.ನಾಗರಾಜ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆ.21ರಿಂದ ವಿಶೇಷ ಲೋಕ ಅದಾಲತ್

ಹಗರಿಬೊಮ್ಮನಹಳ್ಳಿ: ಸರ್ವೋಚ್ಚ ನ್ಯಾಯಾಲಯಗಳಲ್ಲಿ ವಿಚಾರಣೆಗೆ ಬಾಕಿ ಇರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಸ್ಥಳೀಯ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ಸುವರ್ಣ ಅವಕಾಶವನ್ನು ಆ.21ನೇ 22ನೇ ಹಾಗೂ 23ನೇ ತಾರೀಖಿನಂದು ನಡೆಯುವ ವಿಶೇಷ ಲೋಕ ಅದಾಲತ್ ನಲ್ಲಿ ಕಲ್ಪಿಸಲಾಗಿದ್ದು ಸರ್ವೋಚ್ಚ ನ್ಯಾಯಾಲಯಗಳಲ್ಲಿನ ಪ್ರಕರಣಗಳಿಗೆ ಸಂಬಂಧಿಸಿದ ಪಕ್ಷಗಾರರು ಸದುಪಯೋಗ ಪಡಿಸಿಕೊಳ್ಳಲು ತಿಳಿಸಲಾಗಿದೆ.

ಸರ್ವೋಚ್ಚ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಉಳಿದಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಬ್ಯಾಂಕಿಂಗ್, ವಿಮೆಗೆ ಸಂಬಂಧಿತ, ನಾಗರಿಕ ಕಾನೂನು, ಮೋಟಾರ್ ಅಪಘಾತ ಪರಿಹಾರ, ಗ್ರಾಮೀಣ ವ್ಯಾಜ್ಯಗಳು, ರೈತರ ಸಮಸ್ಯೆಗಳು, ಕ್ರಿಮಿನಲ್ ಪ್ರಕರಣಗಳು, ಕೌಟುಂಬಿಕ ವಿವಾದಗಳು, ಕಾಮಗಾರಿ ಮತ್ತು ಕೈಗಾರಿಕಾ ಕಾನೂನುಗಳು, ಭೂಸ್ವಾಧೀನಾ, ಪುನರ್ವಸತಿ, ಆಸ್ತಿ ತೆರಿಗೆ, ಬಾಡಿಗೆ ನಿಯಂತ್ರಣ ಹಾಗೂ ಸಾರ್ವಜನಿಕ ಆವರಣ ತೆರವು ಕಾಯ್ದೆ, ಸೇವಾ ಕಾನೂನು, ವರ್ಗಾವಣೆ ಅರ್ಜಿ ಮುಂತಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನಲ್ಲಿ ನಡೆಯುವ ಪ್ರಕರಣಗಳನ್ನು ಸ್ಥಳೀಯ ನ್ಯಾಯಾಲಯಗಳಲ್ಲಿ ಲೋಕ ಅದಾಲತ್ ನಲ್ಲಿ ಇತ್ಯರ್ಥ ಗೊಳಿಸಲಾಗುವುದು.



ಅದಾಲತ್‌ನಲ್ಲಿ ತರಬೇತಿ ಪಡೆದ ನ್ಯಾಯಾಂಗ ಅಧಿಕಾರಿಗಳು ಮಧ್ಯಸ್ಥಿಕೆ ದಾರರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯ ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ಪೂರ್ವ ಲೋಕ ಅದಾಲತ್ ನಡೆಸಲಾಗುತ್ತಿದೆ. ಪಕ್ಷಗಾರರ ನಡುವೆ ಸೌಹಾರ್ದಯುತ ಲಿಖಿತ ಇತ್ಯಾರ್ಥಕ್ಕೆ ಸಹಕಾರಿ ಆಗಲಿದೆ ಈ ಬಗ್ಗೆ ವಕೀಲರು ಮತ್ತು ಪಕ್ಷಗಾರರು ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ವೆಬ್ಸೈಟ್ ನಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತ ಮಾಹಿತಿಗಳನ್ನು ತಿಳಿಯಬಹುದು.

ಅದಾಲತ್‌ನಲ್ಲಿ ಯಾವುದೇ ರೀತಿಯ ಶುಲ್ಕ ಇರುವುದಿಲ್ಲ ಒಂದು ವೇಳೆ ಶುಲ್ಕ ಪಾವತಿಸಿದರೆ ಶುಲ್ಕ ವಾಪಸ್ ನೀಡಲಾಗುತ್ತದೆ. ಆಧಾಲತ್ ಆದೇಶ ಅಂತಿಮವಾಗಿರುತ್ತದೆ. ಇಲ್ಲಿ ಪ್ರಶ್ನಿಸುವ ಅವಕಾಶ ಇರುವುದಿಲ್ಲ, ಸುಲಭ ಮತ್ತು ಶೀಘ್ರ ಪ್ರಕರಣಗಳ ಇತ್ಯರ್ಥಕ್ಕೆ ಈ ವಿಶೇಷ ಲೋಕ ಅಧಾಲತ್ ಸದುಪಯೋಗ ಪಡಿಸಿಕೊಳ್ಳಲು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.